ಹೊಸಪೇಟೆ ಪರಿಸರದ ಕಬ್ಬಿಣದ ಕುಲುಮೆಗಳು

(ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸುತ್ತಿರುವ ಸಂಪ್ರಬಂಧ)

ಸಂಶೋಧನಾ ವಿದ್ಯಾರ್ಥಿ

ಲಕ್ಷ್ಮಣ ಎಲ್. ಬಿ.

ನೋಂದಣಿ ಸಂಖ್ಯೆ : ಕೆಯುಎಚ್/ ೦೦೫೨೨

ಮಾರ್ಗದರ್ಶಕರು

ಡಾ. ಸಿ.ಎಸ್. ವಾಸುದೇವನ್

ಸಹ ಪ್ರಾಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೩

ಹೊಸಪೇಟೆ ಪರಿಸರದ ಕಬ್ಬಿಣದ ಕುಲುಮೆಗಳು

(ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸುತ್ತಿರುವ ಸಂಪ್ರಬಂಧ)

ಸಂಶೋಧನಾ ವಿದ್ಯಾರ್ಥಿ

ಲಕ್ಷ್ಮಣ ಎಲ್. ಡಿ.

ನೋಂದಣಿ ಸಂಖ್ಯೆ : ಕೆಯುಎಚ್/೦೦೫೨೨

ಮಾರ್ಗದರ್ಶಕರು

ಡಾ. ಸಿ.ಎಸ್. ವಾಸುದೇವನ್

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೩

ದೃಢೀಕರಣ ಪತ್ರ

ಹೊಸಪೇಟೆ ಪರಿಸರದ ಕಬ್ಬಿಣದ ಕುಲುಮೆಗಳು ಎಂಬ ಸಂಪ್ರಬಂಧವನ್ನು ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ **ಲಕ್ಷ್ಮಣ ಎಲ್.ಡಿ.** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

C. S. Vasudevan

ದಿನಾಂಕ : 13.08.2013

ಸ್ಥಳ : ವಿದ್ಯಾರಣ್ಯ

(ಡಾ ಸಿ.ಎಸ್. ವಾಸುದೇವನ್)
ಸಹಪ್ರಾಧ್ಯಾಪಕರು ಹಾಗೂ ಮಾರ್ಗದರ್ಶಕರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪ್ರಮಾಣ ಪತ್ರ

ಹೊಸಪೇಟೆ ಪರಿಸರದ ಕಬ್ಬಿಣದ ಕುಲುಮೆಗಳು ಎಂಬ ಸಂಪ್ರಬಂಧವನ್ನು **ಡಾ ಸಿ.ಎಸ್. ವಾಸುದೇವನ್** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್ ಪದವಿಗಾಗಿ ಸಮಾಜ ವಿಜ್ಞಾನಗಳ ನಿಕಾಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ :

ಸ್ಥಳ : ವಿದ್ಯಾರಣ್ಯ

(ಲಕ್ಷ್ಮಣ ಎಲ್.ಡಿ.)
ಸಂಶೋಧನ ವಿದ್ಯಾರ್ಥಿ
ಪ್ರಾಚೀನ ಇತಿಹಾಸ ಮತ್ತು
ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಪ್ರಸ್ತಾವನೆ

ಮಾನವನು ಪ್ರಾಗೈತಿಹಾಸಿಕ ಕಾಲದಿಂದಲೂ ತನ್ನ ಬದುಕನ್ನು ಕಟ್ಟಿಕೊಳ್ಳುವುದಕ್ಕೆ ಪ್ರಯತ್ನಿಸುತ್ತಲೇ ಇದ್ದಾನೆ. ಹಳೆ ಶಿಲಾಯುಗ (೫ ಲಕ್ಷ ಅಥವಾ ಅದಕ್ಕೂ ಮುಂಚೆಯಿಂದ ೧೦,೦೦೦ ವರ್ಷಗಳವರೆಗೆ), ಮಧ್ಯ ಸೂಕ್ಷ್ಮ ಶಿಲಾಯುಗ (ಕ್ರಿ.ಪೂ. ೭೦೦೦ ರಿಂದ ೪೦೦೦ರವರೆಗೆ), ನೂತನ ಶಿಲಾಯುಗ ಮತ್ತು ಶಿಲಾ ತಾಮ್ರಯುಗ (ಕ್ರಿ.ಪೂ. ೨೨೦೦ ರಿಂದ ೮೦೦ರವರೆಗೆ) ಹಾಗೂ ಬೃಹತ್ ಶಿಲಾಯುಗ (ಕ್ರಿ.ಪೂ. ೧೨೦೦ ರಿಂದ ೨೦೦ರವರೆಗೆ)ದ ಸ್ತರಗಳನ್ನು ದಾಟಿ ಇಂದಿನ ಕಾಲದವರೆಗೂ ತನ್ನ ನಾಗರಿಕತೆಯನ್ನು ವಿಕಸಿಸುವುದಕ್ಕೆ ಶ್ರಮ ಹಾಕುತ್ತಲೇ ಇರುವನು ಎಂಬುದು ಸತ್ಯವೇ ಸರಿ. ಮೊದ-ಮೊದಲು ನಿಸರ್ಗ ನಿರ್ಮಿತವಾದ ಬೆಟ್ಟ-ಗುಡ್ಡ, ಗವಿ, ಕಲ್ಲು ಬಂಡೆ, ಹಳ್ಳ-ಕೊಳ್ಳ, ನದಿ-ತೊರೆ, ಕಾಡು-ಮೇಡು, ಮರ-ಗಿಡ, ಪೊಟರೆಯಲ್ಲಿ ಏಕಾಂಗಿಯಾಗಿ ವಾಸಿಸುತ್ತಿದ್ದ ಸಂಸ್ಕೃತಿಯು ಕ್ರಮೇಣವಾಗಿ ನಶಿಸುತ್ತಾ ಗುಂಪಾಗಿ ಒಂದು ಕಡೆ ನೆಲೆಯೂರಿ ವಾಸಿಸುವ ಸಂಸ್ಕೃತಿಯು ಗ್ರಾಮ, ಪಟ್ಟಣ ಮತ್ತು ನಗರ ಪ್ರದೇಶಗಳಲ್ಲಿ ಪ್ರಸರಿಸುತ್ತಾ ಹೋಯಿತು. ಈ ದಿಕ್ಕಿನಲ್ಲಿ ಜೀವನಕ್ಕೆ ಬೇಕಾದ ನಿತ್ಯೋಪಯೋಗಿ ವಸ್ತುಗಳ ಅನಿವಾರ್ಯತೆ ಕಂಡಾಗ, ತನಗೆ ಹೊಂದಿಕೊಳ್ಳುವಂತಹ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದನು. ಈ ರೀತಿಯ ನಾಗರಿಕತೆಯ ವಿಕಾಸದಲ್ಲಿ ಶಿಲೆ ಮತ್ತು ಲೋಹಗಳ ಬಳಕೆ ಪ್ರಮುಖ ಪಾತ್ರವಹಿಸುತ್ತವೆ. ಶಿಲೆ ಮತ್ತು ಲೋಹಗಳ ಬಳಕೆ ಮಾನವನ ಬೌದ್ಧಿಕ ವಿಕಾಸದ ಸಂಕೇತ. ಶಿಲಾಯುಗದಿಂದ ಪ್ರಾರಂಭವಾದ ನಾಗರಿಕತೆಯು ಲೋಹ ಯುಗವನ್ನು ತಲುಪುವಲ್ಲಿ ಸಾವಿರಾರು ವರ್ಷಗಳೇ ಉರುಳಿ ಹೋಗಿವೆ. ಪ್ರತಿಯೊಂದು ಹಂತವು ಆಯಾ ಲೋಹಗಳ ಹೆಸರಿನಿಂದಲೇ ನಮಗೆ ಪರಿಚಿತವಾಗಿರುವುದು ಸುಸ್ಪಷ್ಟ. ಪ್ರಕೃತಿಯ ಅಮೂಲ್ಯ ಕೊಡುಗೆಗಳಾದ ಲೋಹಗಳು ಪ್ರಾಚೀನ ಮಾನವನ ಸಾಮಾಜಿಕ ಬದಲಾವಣೆಗೆ ಕಾರಣವಾಗಿರುವುದು ಅಷ್ಟೇ ಸತ್ಯ.

ಮಧ್ಯ ಸೂಕ್ಷ್ಮ ಶಿಲಾಯುಗಕ್ಕಿಂತ ಮುಂಚೆ ಮಾನವನ ವಿಕಾಸವು ಮಂದಗತಿಯಿಂದ ಸಾಗುತ್ತಿತ್ತು. ಅದರೆ ಲೋಹಯುಗಕ್ಕೆ ಕಾಲಿಟ್ಟ ನಂತರ ವೇಗವಾಗಿ ಏರತೊಡಗಿತು. ಕಾರಣ ಲೋಹವು ಶಿಲೆಗಿಂತ ಗಡುಸು ಮತ್ತು ಲೋಹಗಳಿಂದ ಮಾಡಿದ ಉಪಕರಣಗಳು ಹರಿತವಾಗಿರುತ್ತಿದ್ದವು. ಮೊಂಡಾದ ಉಪಕರಣಗಳನ್ನು ಸಂಸ್ಕರಿಸಿ ಪುನಃ ಬಳಸಬಹುದು. ಹಾಗೆಯೇ ಮುಂದೆ ಲೋಹದ ಅಂಶವಿರುವ ಅದಿರಿನಿಂದ ಲೋಹವನ್ನು ಬೇರ್ಪಡಿಸುವ ವಿಧಾನವನ್ನು ಪತ್ತೆ ಹಚ್ಚಿದರು. ಲೋಹಗಳನ್ನು ಕರಗಿಸಿ ಮಿಶ್ರಲೋಹವನ್ನು ಮಾಡುವ ಕಲೆಯು ಕರಗತವಾಯಿತು. ಈ ದಿಶೆಯಲ್ಲಿ ಮಿಶ್ರಲೋಹವು ವಿಶೇಷವಾಗಿ ಗಡುಸಾಗಿರುತ್ತದೆಂದು ತಿಳಿಯಿತು. ತಾಮ್ರ ಮತ್ತು ಸತುವನ್ನು ಮಿಶ್ರಿಸಿ 'ಹಿತ್ತಾಳೆ'ಯನ್ನು ಹಾಗೂ ತಾಮ್ರ ಮತ್ತು ತವರವನ್ನು ಮಿಶ್ರಿಸಿ 'ಕಂಚು'ವೆಂಬ ಗಡುಸಾದ ಮಿಶ್ರ ಲೋಹವನ್ನು ಉತ್ಪಾದಿಸಿದರು.[೧] ಕಂಚಿನ ಲೋಹದ ಉಪಕರಣಗಳು ಬಳಕೆಯಿಂದ ಕೃಷಿ ಕ್ಷೇತ್ರದಲ್ಲಿ ಮಹತ್ವದ ಬದಲಾವಣೆ ಕಂಡಿತು.

ಮೊಟ್ಟ ಮೊದಲು ಕಬ್ಬಿಣದ ಬಳಕೆಯನ್ನು ಬೃಹತ್ ಶಿಲಾಯುಗದಲ್ಲಿ ಕಾಣುತ್ತೇವೆ. ಪ್ರಪಂಚದ ಎಲ್ಲ ರಾಷ್ಟ್ರಗಳಲ್ಲಿ ಕಬ್ಬಿಣದ ಬಳಕೆಯಾದಂತೆ, ನಮ್ಮ ದೇಶದಲ್ಲೂ ಕೂಡ ಬಳಕೆಯಾಗಿದೆ ಎಂಬುದನ್ನು ಪುರಾತತ್ವ ಸರ್ವೇಕ್ಷಣಾ ಇಲಾಖೆಯು ನಡೆಸಿದ ಉತ್ಖನನಗಳಿಂದ ತಿಳಿದುಬರುತ್ತದೆ. ಕಬ್ಬಿಣದ ಬಳಕೆಯು ಮೊದಲು ದಕ್ಷಿಣ ಭಾರತದಲ್ಲೇ ನಡೆಯುತ್ತಿತ್ತು ಎಂದು ಮಾರ್ಟಿಮರ್ ವ್ಹೀಲರ್‌ರವರ ಉತ್ಖನನಗಳಿಂದ ತಿಳಿಯಬಹುದು. ಕರ್ನಾಟಕದಲ್ಲೂ ಕೂಡ ಕಬ್ಬಿಣದ ಬಳಕೆಯಾಗಿರುವ ಹಲವು ನೆಲೆಗಳನ್ನು ವಿದ್ವಾಂಸರು ಪತ್ತೆ ಹಚ್ಚಿದ್ದಾರೆ.

ಹೊಸಪೇಟೆಯ ಸುತ್ತ ಮುತ್ತಲಿರುವ ಸಂಡೂರು ಮತ್ತು ಬಳ್ಳಾರಿಯ ಬೆಟ್ಟಗಳು ಹೇರಳವಾದ ಕಬ್ಬಿಣದ ಅದಿರನ್ನು ಹೊಂದಿವೆ. "ಈ ಪ್ರದೇಶದ ಹಿರೇಬೆಣಕಲ್ಲಿನ ಕಲ್ಗೋರಿಗಳಲ್ಲಿ ಕಂಡುಬಂದ ಕಬ್ಬಿಣದ ಉಪಕರಣ ಮತ್ತು ಆನೆಗುಂದಿಯಲ್ಲಿ ದೊರೆತ ಕಬ್ಬಿಣದ ಕಿಟ್ಟ ಇದಕ್ಕೆ ಉದಾಹರಣೆಯಾಗಿದೆ. ಕ್ರಿ.ಶ ೪ನೇ ಶತಮಾನದಲ್ಲಿ ಸಂಡೂರಿನಲ್ಲಿ ತಯಾರಿಸಿದ ಕಬ್ಬಿಣದ ಉಪಕರಣಗಳು ದೇಶದಲ್ಲೆಲ್ಲ ಹೆಸರುವಾಸಿಯಾಗಿವೆ. ಹಾಗೆಯೇ ಹೊಸಪೇಟೆ ತಾಲೂಕಿನ ಕೆ.ಗೊಲ್ಲರಹಳ್ಳಿ, ಚಿಲಕನಹಟ್ಟಿ ಮತ್ತು ಕಮಲಾಪುರಗಳಲ್ಲಿ ದೊರೆತ ಅವಶೇಷಗಳು ಕಬ್ಬಿಣದ ಉತ್ಪಾದನೆಯನ್ನು ನಡೆದು ಬಂದಿರುವುದನ್ನು ತಿಳಿಸುತ್ತವೆ. ಕೆ.ಗೊಲ್ಲರಹಳ್ಳಿಯಲ್ಲಿ ಕ್ರಿ.ಶ. ೧೪ರಿಂದ ೧೭ನೇ ಶತಮಾನದ ಪೂರ್ವದಲ್ಲಿ ನಡೆದ ಕಬ್ಬಿಣದ ಉತ್ಪಾದನೆಯಿಂದ ದೊಡ್ಡ ದಿಬ್ಬವೇ ಉಂಟಾಗಿದೆ".[೨]

ಹೀಗೆ ಕಬ್ಬಿಣದ ಉತ್ಪಾದನೆಯು ಸಾಗುತ್ತ ಬಂದಿರುವುದನ್ನು ಗಮನಿಸಬಹುದು. ಈ ನಿಟ್ಟಿನಲ್ಲಿ ಕಬ್ಬಿಣದ ಲೋಹಗಳ ಅದಿರನ್ನು ಕರಗಿಸಿ ಹೇಗೆ ಕಬ್ಬಿಣವನ್ನು ಉತ್ಪಾದಿಸಲಾಗುತ್ತಿತ್ತು? ಮತ್ತು ಅದಕ್ಕೆ ಯಾವ ಯಾವ ಮಾದರಿಯ ಕುಲುಮೆಗಳನ್ನು ರಚಿಸಿಕೊಂಡಿದ್ದರು? ಯಾವ ಯಾವ ಸಮುದಾಯಗಳು ಕಬ್ಬಿಣ ತಯಾರಿಕೆಯಲ್ಲಿ ತೊಡಗಿದ್ದವು ಮತ್ತು ಅವರ ಶ್ರಮ ಹೇಗಿತ್ತು? ಹಾಗೂ ಅವರ ನಂಬಿಕೆ ಮತ್ತು ಆಚರಣೆಗಳು ಮುಂತಾದ ವಿಷಯಗಳನ್ನು ಈ ನನ್ನ ಅಧ್ಯಯನದಲ್ಲಿ ತಿಳಿಸಲಾಗುವುದು.

೧.೧. ಅಧ್ಯಯನದ ಉದ್ದೇಶ

ಹೊಸಪೇಟೆ ನಗರವು ಬಳ್ಳಾರಿ ಜಿಲ್ಲೆಯ ಒಂದು ತಾಲೂಕು ಕೇಂದ್ರ ಸ್ಥಳವಾಗಿದ್ದು, ಇದು ವಿಜಯನಗರ ಕಾಲದ ಅರಸರ ತವರೂರು ಎಂದೇ ಪ್ರಸಿದ್ಧವಾಗಿದೆ. ಈ ಪ್ರದೇಶವು ಪ್ರಾಗೈತಿಹಾಸಿಕ ಕಾಲದಿಂದಲೂ ಹೇರಳವಾದ ನೈಸರ್ಗಿಕ ಸಂಪನ್ಮೂಲಗಳನ್ನು ಹೊಂದಿದ್ದು ಮಾನವನ ಚಟುವಟಿಕೆಗಳಿಗೆ ಮೂಲ ಸ್ಥಾನವಾಗಿದೆ. ಈ ಪ್ರದೇಶದಲ್ಲಿ ಕಬ್ಬಿಣ ಯುಗಕ್ಕೆ ಸೇರಿದ ಅನೇಕ ಕುರುಹು ಮತ್ತು ನೆಲೆಗಳು ದೊರೆತಿದ್ದರಿಂದ ಲೋಹಗಾರಿಕೆಯು ಪ್ರಾಗಿತಿಹಾಸ ಕಾಲದಿಂದ ನಡೆದದ್ದನ್ನು ಗಮನಿಸಬಹುದು. ಲೋಹಗಾರಿಕೆ ನಡೆಸುವ ಕೆಲವು ಸಮುದಾಯಗಳು ಪ್ರಾಯಶಃ ಪ್ರಾಚೀನ ಕಾಲದಿಂದ ಹಿಡಿದು ವಿಜಯನಗರ ಕಾಲದ ಅರಸುಮನೆತನಗಳಿಗೆ ಅವಶ್ಯಕವಾದ ಕಬ್ಬಿಣ ಮತ್ತು ಉಕ್ಕನ್ನು ತಯಾರಿಸಿ ಕೊಡುತ್ತಿದ್ದರೇನೊ?

ಈ ಒಂದು ನಟ್ಟಿನಲ್ಲಿ ಹೊಸಪೇಟೆ ಪರಿಸರದಲ್ಲಿ ನೆಲೆಸಿರುವ ಕಬ್ಬಿಣ ಮತ್ತು ಕಬ್ಬಿಣದ ಪರಿಕರಗಳು ತಯಾರಿಸುವ ಕೆಲವು ಸಮುದಾಯಗಳಾದ ವಿಶ್ವಕರ್ಮ, ಬಯಲುಗಮ್ಮಾರ, ಘಿಸಾಡಿಯಾ, ಮುಸ್ಲಿಂ, ಬೇಡನಾಯಕ, ಹರಿಜನ (ಆದಿ ದ್ರಾವಿಡ), ಬಂಜಾರ (ಲಂಬಾಣಿ) ಮತ್ತು ಗೊಲ್ಲ (ಯಾದವ) ತೀರ ಕೆಳಸ್ತರದಲ್ಲಿರುವ ಸಮುದಾಯಗಳಾಗಿದ್ದು, ತಮ್ಮ ಮೂಲ ವೃತ್ತಿಯನ್ನು ತಮ್ಮಲ್ಲಿಯೇ ಉಳಿಸಿಕೊಂಡಿದ್ದಾರೆ. ಆಧುನಕ ಕೈಗಾರಿಕೆಗಳ ಪ್ರವೇಶದಿಂದ ಕಂಗಾಲಾಗಿದ್ದರೂ ತಮ್ಮ ಮೂಲ ವೃತ್ತಿಯನ್ನು ಕಡೆಗಣಿಸದೆ ತಮ್ಮ ದಿನನಿತ್ಯದ ಬವಣೆಗಾಗಿ ಶ್ರಮಿಸುತ್ತಿದ್ದಾರೆ. ಈ ಸಮುದಾಯಗಳು ಆರ್ಥಿಕ ಅಭದ್ರತೆಯಿಂದ ಭಯಭೀತರಾಗಿ ಶ್ರಮಿಕ ವರ್ಗಗಳಾಗಿ, ಆಧುನಿಕ ಕೈಗಾರಿಕೆಗಳ ತಂತ್ರಗಾರಿಕೆ ಯಿಂದ ಪೈಪೋಟಿ ಎದುರಿಸುತ್ತಿದ್ದು ಅನಕ್ಷರತೆಯಿಂದ ಬಳಲುತ್ತಿದ್ದಾರೆ. ಕೆಲವು ಸಮುದಾಯಗಳು ನಗರ ಪ್ರದೇಶಗಳಲ್ಲಿ ನೆಲೆಯನ್ನು ಕಂಡುಕೊಂಡಿದ್ದರೂ ಅಂತಹ ಯಾವುದೇ ಬೆಳವಣಿಗೆಯನ್ನು ಕಂಡಿಲ್ಲ.

ಲೋಹಗಾರಿಕೆ ಮತ್ತು ಕಬ್ಬಿಣ ಉತ್ಪಾದಿಸುವವರ ಬಗೆಗಿನ ಅಧ್ಯಯನವು ಕರ್ನಾಟಕದಲ್ಲಿ ಇನ್ನೂ ಶೈಶವಾವಸ್ಥೆಯಲ್ಲಿದೆ ಎಂದು ಹೇಳಬಹುದು. ಈ ನಿಟ್ಟಿನಲ್ಲಿ ಹೊಸಪೇಟೆ ಪ್ರದೇಶವು ಲೋಹಗಾರಿಕೆ ಮತ್ತು ಕಬ್ಬಿಣ ತಯಾರಿಕೆ ಅಧ್ಯಯನಕ್ಕೆ ಹೆಚ್ಚು ಅನುಕೂಲಕರವುಳ್ಳದ್ದಾಗಿದ್ದರೂ ಸಹ ಇದನ್ನು ಕುರಿತು ಯಾವುದೇ ಗ್ರಂಥಗಳಾಗಲಿ, ಸಂಶೋಧನಾ ಬರಹಗಳಾಗಲಿ ದೊರಕುವುದಿಲ್ಲ. ಕೆಲವೇ ಕೆಲವು ಬೆರಳೆಣಿಕೆಯಷ್ಟು ಮಾತ್ರ ಲಭ್ಯವಿದೆ. ಹಿಂದಿನ ಕೆಲವು ಪ್ರಾಚೀನ ಇತಿಹಾಸ ತಜ್ಞರು ಗಣಿಗಾರಿಕೆ, ಲೋಹಗಾರಿಕೆ ಮತ್ತು ಕಬ್ಬಿಣ ತಯಾರಿಕೆಯ ತಂತ್ರಗಳ ಕುರಿತು ಹೆಚ್ಚಿನ ಆಸಕ್ತಿಯನ್ನು ಹೊಂದಿದ್ದಾರೆಯೇ ಹೊರತು ಕಬ್ಬಿಣದಂತಹ ಲೋಹ ತಯಾರಿಸುವ ಕುಲುಮೆಗಾರರ ಸಮುದಾಯದ ಕುರಿತು ಉಲ್ಲೇಖಿಸಿದ ದಾಖಲೆಗಳು ಎಲ್ಲಿಯೂ ಪ್ರಾಪ್ತವಾಗುವುದಿಲ್ಲ. ಈ ದಿಶೆಯಲ್ಲಿ ಜಾನ್ ಬ್ರೋವರ್‌ರವರು (Maker of World ೧೯೯೫) ಸ್ವಲ್ಪ ಮಟ್ಟಿನ ಯಶಸ್ಸನ್ನು ಸಾಧಿಸಿದ್ದರೂ ಸಹ ಅಧ್ಯಯನದ ಮಿತಿಯಿಂದಾಗಿ ಪೂರ್ಣ ಪ್ರಮಾಣದಲ್ಲಿ ಅಧ್ಯಯನ ನಡೆಸಲು ಸಾಧ್ಯವಾಗಿಲ್ಲ.

ಈ ಹೊಸಪೇಟೆ ಪರಿಸರದಲ್ಲಿ ಕಬ್ಬಿಣ ತಯಾರಿಸುವ ಕುಲುಮೆಗಾರರ ಕೆಲವು ಸಮುದಾಯಗಳಿವೆ ಎಂದು ತಿಳಿದು ಬರುತ್ತದೆ. ಹೆಚ್ಚಾಗಿ ಕೇವಲ ಒಂದು ಸಮುದಾಯದ ಹಿನ್ನಲೆಯಲ್ಲಿ ಅಧ್ಯಯನಗಳು ನಡೆದಿರುವುದು ಕಂಡುಬರುತ್ತದೆ. ಅದರೆ ಒಟ್ಟಾಗಿ ಕುಲುಮೆ ವೃತ್ತಿಯನ್ನು ನಡೆಸುತ್ತಿರುವ ಎಲ್ಲ ಸಮುದಾಯಗಳ ಕುರಿತು ಇಲ್ಲಿಯವರೆಗೂ ಯಾವುದೇ ರೀತಿಯ ಅಧ್ಯಯನಗಳು ನಡೆಯದಿರುವುದರಿಂದ ಅಂತಹ ಸಮುದಾಯಗಳ ಕುರಿತು ಅಧ್ಯಯನ ಮಾಡಲು ಇಲ್ಲಿ ಉದ್ದೇಶಿಸಲಾಗಿದೆ.

೧.೨. ಅಧ್ಯಯನದ ವ್ಯಾಪ್ತಿ

ಕಬ್ಬಿಣದ ಬಳಕೆಯು ಬೃಹತ್ ಶಿಲಾಯುಗದಲ್ಲಿ ಕಂಡಿತು ಎಂಬುದನ್ನು ತಿಳಿದಿದ್ದೇವೆ. ಯಾವುದೇ ಒಂದು ದೇಶದ ಇಲ್ಲವೆ ರಾಜ್ಯದ ಅಥವಾ ಪ್ರದೇಶದ ಪ್ರಾಚೀನತೆಯನ್ನು ತಿಳಿಯಬೇಕಾದರೆ ಆಯಾ ದೇಶದ ಇಲ್ಲವೆ ರಾಜ್ಯದ ಇಲ್ಲವೆ ಪ್ರದೇಶದ ಗ್ರಂಥಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಹಾಗಾಗಿ ಪ್ರಸ್ತುತ ಹೊಸಪೇಟೆ ಪರಿಸರದ ಕಬ್ಬಿಣದ ಕುಲುಮೆಗಳು ಎಂಬ ಅಧ್ಯಯನವು ಹೊಸಪೇಟೆ ಪರಿಸರದಲ್ಲಿ ದೊರೆಯುವ ಕಬ್ಬಿಣದ ಕುಲುಮೆಗಳ ವಿವಿಧ ಮಜಲುಗಳ ಕುರಿತು ಕೂಲಂಕಶವಾಗಿ ಪರಿಶೀಲಿಸಿದಾಗ, ಈ ಪರಿಸರದಲ್ಲಿರುವ ಲೋಹಗಳ ಗಣಿಗಾರಿಕೆ ಮತ್ತು ಕಬ್ಬಿಣ ತಯಾರಿಸುವಿಕೆಯ ಪ್ರಾಚೀನತೆಯನ್ನು ಕಂಡುಕೊಳ್ಳಬಹುದಾಗಿದೆ. ಈ ದಿಶೆಯಲ್ಲಿ ಹೊಸಪೇಟೆ ಪರಿಸರದ ಕಬ್ಬಿಣದ ಕುಲುಮೆಗಳ ಸಮುದಾಯಗಳ ಮೂಲತಃ ಕರ್ನಾಟಕದವರಾಗಿದ್ದು ಕಬ್ಬಿಣ ಮತ್ತು ಉಕ್ಕು ದೊರೆಯುವ ಬೆಟ್ಟ-ಗುಡ್ಡಗಳ ಅಂಚಿನಲ್ಲಿ ನೆಲೆಗಳನ್ನು ಕಂಡುಕೊಂಡಿದ್ದು ಹಾಗೆಯೇ ಇತರೆ ಕೆಲವು ಸಮುದಾಯಗಳು ಆಧುನಿಕ ಸಂಸ್ಕೃತಿಗೆ ಒಳಪಟ್ಟು ಪಟ್ಟಣ ಮತ್ತು ನಗರಗಳಲ್ಲಿ ನೆಲೆಯೂರಿದ್ದಾರೆ. ಹಾಗಾಗಿ ಪ್ರಸ್ತುತ ಅಧ್ಯಯನವು ಹೊಸಪೇಟೆ ತಾಲೂಕಿನ ಎಲ್ಲ ಗ್ರಾಮ, ಪಟ್ಟಣ ಮತ್ತು ನಗರ ಪ್ರದೇಶಗಳಲ್ಲಿ ಕಂಡು ಬರುವ ಕುಲುಮೆಗಳನ್ನೊಳಗೊಂಡಿದ್ದು ಮತ್ತು ಪ್ರಾಚೀನ ಅವಶೇಷಗಳ ಮಾಹಿತಿಯನ್ನು ಸಂಗ್ರಹಿಸಿ ಪ್ರಕಟಿತ ಮತ್ತು ಅಪ್ರಕಟಿತ ಮಾಹಿತಿಯೊಂದಿಗೆ ವಿವಿಧ ಆಯಾಮಗಳನ್ನು ಪುನರ್ರಚಿಸುವುದಾಗಿದೆ. ವಿಷಯ ವಿಶ್ಲೇಷಣೆ ದೃಷ್ಟಿಯಿಂದ ಪಕ್ಕದ ಬಳ್ಳಾರಿ ಮತ್ತು ಸಂಡೂರು ತಾಲೂಕಿನ ಕೆಲ ಪ್ರದೇಶಗಳಲ್ಲಿ ದೊರೆತ ಮಾಹಿತಿಯನ್ನು ನನ್ನ ಅಧ್ಯಯನದ ವ್ಯಾಪ್ತಿಗೆ ಸೇರಿಸಲಾಗಿದೆ.

೧.೩. ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನವು "ಹೊಸಪೇಟೆ ಪರಿಸರದ ಕಬ್ಬಿಣದ ಕುಲುಮೆಗಳು" ಎಂಬ ಸಂಶೋಧನಾ ಪ್ರಬಂಧಕ್ಕೆ ಅನುಕೂಲವಾಗುವಂತೆ ಇಲ್ಲಿ ಕೆಲವು ಅಧ್ಯಾಯಗಳನ್ನು ರಚಿಸಲಾಗಿದೆ.

ಮೊದಲನೆಯ ಅಧ್ಯಾಯವು "ಪ್ರಸ್ತಾವನೆ"ಯನ್ನು ಹೊಂದಿದ್ದು ಈ ಅಧ್ಯಾಯದಲ್ಲಿ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ ಹಾಗೂ ಅಧ್ಯಯನದ ಸಮೀಕ್ಷೆಯ ವಿಧಾನಗಳಿವೆ.

ಎರಡನೇಯ ಅಧ್ಯಾಯವು "ಲೋಹಗಳ ಪ್ರಾಚೀನತೆ" ಎಂದಿದ್ದು, ಲೋಹಗಳಿಗೆ ಸಂಬಂಧಿಸಿ ದಂತೆ ಪ್ರಾಗೈತಿಹಾಸಿಕ ಕಾಲದಿಂದ ಬಳಕೆಯಲ್ಲಿರುವ ತಾಮ್ರ, ಚಿನ್ನ, ಬೆಳ್ಳಿ, ಸೀಸ, ತವರ, ಕಂಚು, ಹಿತ್ತಾಳೆ ಮತ್ತು ಕಬ್ಬಿಣದ ಲೋಹಗಳವರೆಗಿನ ಪ್ರಾಚೀನತೆಯನ್ನು ತಿಳಿಸಲಾಗುತ್ತದೆ.

ಮೂರನೆಯ ಅಧ್ಯಾಯನಲ್ಲಿ "ಹೊಸಪೇಟೆ ಪರಿಸರದ ಕಬ್ಬಿಣದ ಕುಲುಮೆಗಳು" ಎಂದಿದ್ದು ಈ ಅಧ್ಯಾಯದಲ್ಲಿ ಹೊಸಪೇಟೆ ತಾಲೂಕಿನಲ್ಲಿ ಬರುವ ಎಲ್ಲಾ ಗ್ರಾಮ, ಪಟ್ಟಣ ಮತ್ತು ನಗರಗಳಲ್ಲಿ ದೊರೆತ ಕಬ್ಬಿಣದ ಕುಲುಮೆಗಳ ಕುರಿತು ಸಮಗ್ರವಾಗಿ ತಿಳಿಸಲಾಗುತ್ತದೆ.

ನಾಲ್ಕನೇ ಅಧ್ಯಾಯದಲ್ಲಿ "ಕುಲುಮೆ ನಡೆಸುವ ಸಮುದಾಯಗಳ ಆಚರಣೆಗಳು ಮತ್ತು ನಂಬಿಕೆಗಳು" ಎಂದಿದ್ದು ಈ ಅಧ್ಯಾಯದಲ್ಲಿ ಕಬ್ಬಿಣದ ಕುಲುಮೆಗಳ ಸಮುದಾಯಗಳು ಕುಲುಮೆ ವೃತ್ತಿಯಲ್ಲಿ ಅನುಸರಿಸುವ ಆಚರಣೆಗಳು ಮತ್ತು ನಂಬಿಕೆಗಳ ಕುರಿತು ಸಮಗ್ರವಾಗಿ ವಿವರಿಸಲಾಗುತ್ತದೆ.

ಕೊನೆಯ ಮತ್ತು ಐದನೆಯ ಅಧ್ಯಾಯವು "ಸಮಾರೋಪ ಮತ್ತು ಅನುಬಂಧ"ಗಳಿಂದ ಕೂಡಿದ್ದು, ಈ ಅಧ್ಯಾಯದಲ್ಲಿ ಹೊಸಪೇಟೆ ಪರಿಸರದ ಕಬ್ಬಿಣದ ಕುಲುಮೆಗಳ ಅಧ್ಯಯನದ ಮುಕ್ತಾಯವನ್ನು ತಿಳಿಸಲಾಗುತ್ತದೆ. ಅನುಬಂಧ ೧ ರಿಂದ ೮ರಲ್ಲಿ ಕುಲುಮೆಗಳ ವಿವರ ಮತ್ತು ವಂಶಾವಳಿ, ಒಂಭತ್ತರಲ್ಲಿ ಮುದ್ದೆ ಕಬ್ಬಿಣದ ಗಟ್ಟಿಯ ರಸಾಯನಿಕ ವರದಿಯಿದ್ದು, ಹತ್ತರಲ್ಲಿ ಪರಾಮರ್ಶನ ಗ್ರಂಥಗಳಿದ್ದು, ಹನ್ನೊಂದರಲ್ಲಿ ರೇಖಾಚಿತ್ರ ಮತ್ತು ಛಾಯಾ ಚಿತ್ರಗಳನ್ನು ತೋರಿಸಲಾಗುತ್ತದೆ.

೧.೪. ಅಧ್ಯಯನದ ಸಮೀಕ್ಷೆ

"ಹೊಸಪೇಟೆ ಪರಿಸರದ ಕಬ್ಬಿಣದ ಕುಲುಮೆಗಳು" ಅಧ್ಯಯನಕ್ಕೆ ಸಂಬಂಧಿಸಿದಂತೆ ದಿಲೀಪ ಕೆ. ಚಕ್ರವರ್ತಿರವರ **"Early use of Iron in India"** ಕೃತಿಯು ಪ್ರಾಗೈತಿಹಾಸಿಕ ಕಾಲದ ಕಬ್ಬಿಣದ ಬಳಕೆಯ ಕುರಿತು ಮಾಹಿತಿಯನ್ನು ಒದಗಿಸುತ್ತದೆ. ಚಟರ್ಜಿ ಎ.ಬಿ. ಮತ್ತು ಅಟ್ಟೇಕರ್‌ರವರ **"Antiquity of Iron Melting Practices in India"** ಕೃತಿಯು ಮಾಹಿತಿ ನೀಡುತ್ತದೆ. ಪ್ರಕಾಶ ಬಿ. ಮತ್ತು ತ್ರಿಪಾಠಿ ವಿ.ರವರ **"Iron Technology in Ancient India"** ಕೃತಿಯು ಪ್ರಾಗೈತಿಹಾಸಿಕ ಕಾಲದ ಕಬ್ಬಿಣದ ತಂತ್ರಗಾರಿಕೆ ಕುರಿತು ಮಾಹಿತಿಯನ್ನು ಒದಗಿಸುತ್ತದೆ. ಕೆ.ಟಿ.ಎಂ. ಹೆಗಡೆರವರ **"An Introduction to Ancient Indian Metallurgy"** ಕೃತಿಯು ಪ್ರಾಚೀನ ಕಾಲದ ಲೋಹ ವಿದ್ಯೆಯ ಬಗ್ಗೆ ತಿಳಿಸುತ್ತದೆ. ಫುಟ್ ಆರ್. ಬಿ.ರವರ **"Catalogue of Prehistoric Protohistoric Antiquities"** ಎಂಬ ಕೃತಿಯು ಕಬ್ಬಿಣದ ಕುರುಹುಗಳ ಕುರಿತು ಮಾಹಿತಿ ತಿಳಿಸುತ್ತದೆ. ಗುರುರಾಜರಾವ್ ರವರ **"Megalithic culture in South India"** ಕೃತಿಯ ಕಬ್ಬಿಣ ಸಂಸ್ಕೃತಿಯನ್ನು ಕುರಿತು ಬೆಳಕು ಚೆಲ್ಲುತ್ತದೆ. ಮುಧೋಳ ಎಂ.ಎಸ್. ಅವರ **"A Technical Study of Megalithic Metal Objects"** ಎನ್ನುವ ಕೃತಿಯು ಬೃಹತ್ ಶಿಲಾಯುಗದ ಲೋಹದ ವಸ್ತುಗಳ ಕುರಿತು ವಿಪುಲವಾದ ಮಾಹಿತಿಯನ್ನು ಒದಗಿಸುತ್ತದೆ. ಪ್ರೀಗ್ಯೂಸನ್ ಜೆ.ಈ. ಅವರ **"History of Chemistry in India"** ಕೃತಿಯು ಲೋಹಗಳ ರಸಾಯನಕತೆಯ ಕುರಿತು ವಿವರ ಒದಗಿಸುತ್ತದೆ. ಎಂ. ಭೋಸ್, ಸೇನ್ ಮತ್ತು ಸುಬ್ಬರಾಯಪ್ಪ ವಿ.ಎ. ಅವರ **"A Concise History of Science in India"** ಕೃತಿಯು ವಿಜ್ಞಾನದ ಕುರಿತು ಮಾಹಿತಿ ಚೆಲ್ಲುತ್ತದೆ. ಡಾ.ಜಿ.ರಾಧಕೃಷ್ಣರವರ **"ಭಾರತೀಯ ವಿಜ್ಞಾನದ ಹಾದಿ ಒಂದು ಅವಲೋಕನ"** ಎಂಬ ಕೃತಿಯು ವಿಜ್ಞಾನ ತಂತ್ರಗಾರಿಕೆ ಮೇಲೆ ಬೆಳಕು ಚೆಲ್ಲುತ್ತದೆ. ಕೆ. ನಾಗೇಶರಾವ್ ಮತ್ತು ಟಿ.ಆರ್. ಅನಂತರಾಮು ಅವರು ಬರೆದ **"ಪ್ರಾಚೀನ ಭಾರತದಲ್ಲಿ ಲೋಹ ತಂತ್ರಜ್ಞಾನ"** ಪುಸ್ತಕವು ಪ್ರಾಚೀನ ಲೋಹಗಳಾದ ತಾಮ್ರ, ಚಿನ್ನ, ಸೀಸ, ಬೆಳ್ಳಿ,

ತವರ, ಕಂಚು, ಹಿತ್ತಾಳೆ ಮತ್ತು ಕಬ್ಬಿಣದ ಕುರಿತು ವಿಪುಲ ಮಾಹಿತಿಯನ್ನು ಒದಗಿಸುತ್ತದೆ. ಅದೇ ರೀತಿ ಭೂವಿಜ್ಞಾನಿಯಾದ ಬಿ.ವಿ. ರಾಮಕೃಷ್ಣರವರ **"Iron ore of Mysore State"** ಎಂಬ ಕೃತಿಯು ಕಬ್ಬಿಣ ಅದಿರುಗಳ ಕುರಿತು ಉಪಯುಕ್ತ ಮಾಹಿತಿಯನ್ನು ಒದಗಿಸುತ್ತದೆ. ಬಿ.ಪಿ.ರಾಧಾಕೃಷ್ಣರವರ **"ಕರ್ನಾಟಕ ಖನಿಜ ಸಂಪತ್ತು"** ಕೃತಿಯು ಖನಿಜ ಅದಿರುಗಳ ಕುರಿತು ಮಾಹಿತಿ ಒದಗಿಸುತ್ತದೆ. ೧೯೬೩ರ ಸುಮಾರಿಗೆ ಲಿಯ್ ವಾ(Leavu) ಅವರ ಕಮ್ಮಾರ ಕುರಿತು ವಿವರಣಾತ್ಮಕ ಕೃತಿ ರಚಿಸಿದ್ದಾರೆ. ಹಾಲೆಂಡ್ ಮೂಲದ ಮಾನವಶಾಸ್ತ್ರಜ್ಞರಾದ ಜಾನ್ ಬ್ರೋವರ್‌ರವರ ೧೯೮೫ರ ಸುಮಾರಿಗೆ **"ದಕ್ಷಿಣ ಭಾತರದ (ಕರ್ನಾಟಕ) ಕುಶಲಕರ್ಮಿ ಪಾಂಚಾಲ"** ಸಮುದಾಯದ ಕುರಿತು ಅಧ್ಯಯನ ಕೈಗೊಂಡಿದ್ದಾರೆ.

ಆರ್.ಬಿ.ಕುಮಾರ್‌ರವರು **"ಕರ್ನಾಟಕದ ಮುದ್ದೆ ಕಂಬಾರರು"** ಎಂಬ ಸಂಶೋಧನಾ ಪ್ರಬಂಧವನ್ನು ರಚಿಸಿದ್ದಾರೆ. ಈ ಪ್ರಬಂಧದಲ್ಲಿ ಮುದ್ದೆ ಕಂಬಾರ ಸಮುದಾಯಕ್ಕೆ ಸಂಬಂಧಿಸಿದಂತೆ ಅವರ ಮೂಲ, ಆಚರಣೆ ಮತ್ತು ನಂಬಿಕೆಗಳು, ಜನಪದ ಸಾಹಿತ್ಯ, ಕಥೆ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಜೀವನದ ಬಗ್ಗೆ ತಿಳಿಸುತ್ತ, ಅವರ ಪಾರಂಪರಿಕ ವೃತ್ತಿ ಕಬ್ಬಿಣ ತಯಾರಿಸುವ ಕುಲುಮೆಗಳ ಉಪಕರಣ ಮತ್ತು ಸಲಕರಣೆಗಳ ಬಗ್ಗೆ ವಿಪುಲವಾದ ಮಾಹಿತಿಯನ್ನು ಒದಗಿಸುತ್ತಾರೆ. ಈ ಮಾಹಿತಿಗಳು ಅಧ್ಯಯನಕ್ಕೆ ಹೆಚ್ಚು ಉಪಯುಕ್ತವಾಗಿವೆ ಎಂದು ಹೇಳಬಹುದು

ಬಸವರಾಜ ಎಸ್. ಹೀರೆಮಠ ಮತ್ತು ಆಂಜಲಿ ಸಾಳೊಂಕಿರವರು **"ಘಿಸಾಡಿ"** ಸಮುದಾಯದ ಕುರಿತು ವಿವರವಾಗಿ ತಿಳಿಸಿದ್ದಾರೆ. ೧೯೬೬ರ ಸುಮಾರಿಗೆ ಪಿ.ಕೆ.ಮಿಶ್ರಾರವರು ಅಲೆಮಾರಿ ಪಂಗಡವಾದ **"ಗಡಾಲಿಯಾ ಲೋಹಾರ"**(ಕಮ್ಮಾರ) ಕುರಿತು ಸಂಶೋಧನಾ ಕೃತಿಯನ್ನು ರಚಿಸಿದ್ದಾರೆ. ಈ ಕೃತಿಯಿಂದ ಗಡಾಲಿಯಾ ಲೋಹಾರರ ಜೀವನ ಮತ್ತು ಆರ್ಥಿಕ ಸ್ಥಿತಿಗತಿಗಳ ಒಳನೋಟವನ್ನು ಅರಿಯಬಹುದು. ಸಯ್ಯಾದ್ ಅಬ್ದುಲ್ ಆಲಾ ಮೌದಾದಿರವರು **"ಇಸ್ಲಾಂ ಧರ್ಮ"**ದ ನಂಬಿಕೆ ಮತ್ತು ಆಚರಣೆಗಳ ಕುರಿತು ವಿವರವಾಗಿ ಚರ್ಚಿಸಿದ್ದಾರೆ. ಕೃಷ್ಣಮೂರ್ತಿ ಹನೂರುರವರು **"ಮ್ಯಾಸಬೇಡರ ಸಂಸ್ಕೃತಿ"** ಕೃತಿಯಲ್ಲಿ ಬೇಡರ ಮೂಲದ ಕುರಿತು ಚರ್ಚಿಸಿದ್ದಾರೆ. ಆರ್ಜುನ ಗೊಳಸಂಗಿರವರ **"ದಲಿತರ ಬದುಕು ಮತ್ತು ಸಂಸ್ಕೃತಿ"** ಪುಸ್ತಕದಲ್ಲಿ ದಲಿತರ ಉಪಜಾತಿ, ಕಸುಬು ಮತ್ತು ನಂಬಿಕೆ ಮತ್ತು ಆಚರಣೆಗಳ ಕುರಿತು ವಿವರವಾಗಿ ತಿಳಿಸಿದ್ದಾರೆ. ಖಂಡೋಬಾ ಪಿ.ಕೆ.ರವರು **"ಕರ್ನಾಟಕದ ಲಂಬಾಣಿಗಳು: ಒಂದು ಸಾಂಸ್ಕೃತಿಕ ಅಧ್ಯಯನ"** ಎನ್ನುವ ಕೃತಿಯನ್ನು ರಚಿಸಿ ಲಂಬಾಣಿ ಸಮುದಾಯದ ಕುರಿತು ಮಾಹಿತಿ ಒದಗಿಸಿದ್ದಾರೆ. ತೀ.ನಂ. ಶಂಕರನಾರಾಯಣರವರು **"ಕಾಡುಗೊಲ್ಲರ ಸಾಂಪ್ರದಾಯಗಳು ಮತ್ತು ಆಚರಣೆಗಳು"** ಎಂಬ ಕೃತಿಯು ಕಾಡುಗೊಲ್ಲರ ಮೂಲದ ಕುರಿತು ವಿವರಿಸುತ್ತದೆ.

ಈ ಮೇಲಿನ ಕೃತಿಗಳು ಪ್ರಸ್ತುತ ಅಧ್ಯಯನಕ್ಕಾಗಿ ವಿಪುಲವಾದ ಮಾಹಿತಿಯನ್ನು ಒದಗಿಸಿದ್ದರೂ ಕೂಡ ಇವುಗಳು ಕೇವಲ ಕೆಲವು ಸಂಗತಿಗಳ ಕುರಿತು ಇರುವ ಮಾಹಿತಿಗಳೇ ಹೊರತು ಪೂರ್ಣ ಪ್ರಮಾಣದ ಅಧ್ಯಯನಗಳಲ್ಲ ಎಂದು ಹೇಳಬಹುದು. ಬಹುತೇಕ ಅಧ್ಯಯನಗಳು ಕೇವಲ ಆರ್ಥಿಕ ಮತ್ತು ಅವುಗಳಿಗೆ ಸಂಬಂಧಿಸಿದ ಅಧ್ಯಯನಗಳಾಗಿದ್ದು ಚಿಕ್ಕ ಮತ್ತು ಬೃಹತ್ ಕೈಗಾರಿಕೆಗಳನ್ನು ಕುರಿತು ವಿವರಿಸುತ್ತವೆ. ಹಾಗೂ ಕೇವಲ ಒಂದು ಸಮುದಾಯವನ್ನು ಕುರಿತಂತೆ ಅಧ್ಯಯನಗಳೂ

ಹೆಚ್ಚಾಗಿ ನಡೆದಿವೆ. ಆದರೆ ಒಟ್ಟಾರೆ ಕಬ್ಬಿಣದ ಕುಲುಮೆ ಸಮುದಾಯಗಳ ಕುರಿತು ಹೆಚ್ಚಿನ ಅಧ್ಯಯನಗಳು ನಡೆಯದೇ ಇರುವುದಕ್ಕೆ ಕಾರಣ ಏನೆಂಬುದು ಯಕ್ಷ ಪ್ರಶ್ನೆಯಾಗಿಯೇ ಉಳಿದಿದೆ. ಹೀಗಾಗಿ ಹೊಸಪೇಟೆ ಪರಿಸರದ ಕಬ್ಬಿಣದ ಕುಲುಮೆಗಳ ಕುರಿತು ಸಮಗ್ರವಾದ ಅಧ್ಯಯನ ಮಾಡುವುದು ಈ ಪ್ರಬಂಧದ ಉದ್ದೇಶವಾಗಿದೆ.

೧.೫. ಅಧ್ಯಯನದ ವಿಧಾನ

ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ ಮತ್ತು ವಿಷಯ ನಿರೂಪಣೆಯಲ್ಲಿ ಹಲವು ವಿಧಾನಗಳನ್ನು ಅನುಸರಿಸಲಾಗಿದೆ. ಹೊಸಪೇಟೆ ಪರಿಸರದ ಕಬ್ಬಿಣದ ಕುಲುಮೆಗಳು ಅಧ್ಯಯನಕ್ಕೆ ಸಂಬಂಧಿಸಿದಂತೆ ಈಗಾಗಲೇ ಪ್ರಕಟವಾಗಿರುವ ಕೃತಿ, ಲೇಖನ ಮತ್ತು ಸಂಶೋಧನಾ ಪ್ರಬಂಧಗಳನ್ನು ಪರಿಶೀಲಿಸಿ ಒಟ್ಟಿಗೆ ಆಕಾರಾದಿಯಲ್ಲಿ ಆಕರ ಕೃತಿಗಳ ಪಟ್ಟಿಯನ್ನು ತಯಾರಿಸಲಾಯಿತು. ನಂತರ ಸರಿಯಾದ ಪ್ರಶ್ನಾವಳಿಯನ್ನು ರಚಿಸಿಕೊಂಡು ಹೊಸಪೇಟೆಯಲ್ಲಿ ಬರುವ ಎಲ್ಲ ಗ್ರಾಮ, ಪಟ್ಟಣ ಮತ್ತು ನಗರ ಗಳಲ್ಲಿ ಭೇಟಿ ನೀಡಿ ಅವರ ಕುಲುಮೆಗಳ ವಿವರ ಮತ್ತು ಪಾರಂಪರಿಕ ವೃತ್ತಿಯಲ್ಲಿ ಬಳಸುವ ಉಪಕರಣಗಳು ಮತ್ತು ಸಲಕರಣೆಗಳು, ಮುದ್ದೆ ಕಬ್ಬಿಣ ತಯಾರಿಸುವಿಕೆ, ಕಬ್ಬಿಣ ತಯಾರಿಕೆಯಲ್ಲಿ ಬಳಸುವ ವಿಧಾನ, ಪರಿಕರಗಳನ್ನು ತಯಾರಿಸುವ ವಿಧಾನ ಮತ್ತು ಅಳತೆಯ ಜೊತೆಗೆ ರೇಖಾಚಿತ್ರ ಹಾಗೂ ಛಾಯಾಚಿತ್ರಗಳ ಸಹಿತ ಪೂರ್ಣ ವಿವರಣೆಯನ್ನು ಸಂಗ್ರಹಿಸಲಾಯಿತು. ನಂತರ ಕಾಲಾನುಕ್ರಮದಲ್ಲಿ ಅವುಗಳನ್ನು ಹೊಂದಿಸಿ ಅವು ಒದಗಿಸುವ ಮಾಹಿತಿಯನ್ನು ವಿಮರ್ಶಾತ್ಮಕವಾಗಿ ಅಧ್ಯಯನ ಮಾಡಿ ಆಯಾ ವಿಷಯವನ್ನು ಪ್ರತ್ಯೇಕವಾದ ಪಟ್ಟಿಕೆಗಳಲ್ಲಿ ದಾಖಲಿಸಿಕೊಳ್ಳಲಾಗಿದೆ.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದ ಪ್ರತಿಯೊಂದು ಕಬ್ಬಿಣದ ಕುಲುಮೆಗಳನ್ನು ಅಧ್ಯಯನ ಮಾಡಿ ಅವುಗಳ ವಿನ್ಯಾಸ ಮತ್ತು ಮಾದರಿಗಳನ್ನು ಗುರುತಿಸಿ ಅವುಗಳ ಗುಣಲಕ್ಷಣಗಳನ್ನು ತಿಳಿದು ಅವುಗಳ ವಿವರಣೆಗಳನ್ನು ಚರ್ಚಿಸಿದಾಗ ಆದಿಮ ತಿದಿ ಕುಲುಮೆಗಳಿಂದ ಹಿಡಿದು ಕಬ್ಬಿಣದ ಸರಕುಗಳು ಉತ್ಪಾದಿಸುವವರೆಗಿನ ವಿವಿಧ ಉಪಕರಣಗಳ ಮತ್ತು ಸಲಕರಣೆಗಳ ಲಕ್ಷಣಗಳನ್ನು ಪರಿಶೀಲಿಸಲಾಗಿದೆ. ಕುಲುಮೆಗಳಲ್ಲಿ ಕಂಡುಬಂದ ಉಪಕರಣಗಳ ಶೈಲಿ, ಪ್ರಾಚೀನತೆ, ಕಾಲಮಾನ ಮತ್ತು ಲಕ್ಷಣಗಳ ಹಿನ್ನೆಲೆಯಲ್ಲಿ ಗಮನಿಸಿ ವಿಶ್ಲೇಷಿಸಲಾಗಿದೆ.

ಅಧ್ಯಯನಕ್ಕೆ ಸಂಬಂಧಿಸಿದಂತೆ ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಮಾಹಿತಿಯ ಮೂಲ ಮತ್ತು ಪೂರಕ ಆಕರಗಳನ್ನು ಸಂಗ್ರಹಿಸಿ ದಾಖಲೀಕರಣ ಮುಂತಾದ ವಿಧಾನಗಳನ್ನು ಅನುಸರಿಸಿ ಸಂಗ್ರಹಿಸಿದ ಮಾಹಿತಿಯನ್ನು ಹೊಂದಿಸಿಕೊಂಡು ಪ್ರಸ್ತುತ ಈ ಸಂಶೋಧನಾ ಪ್ರಬಂಧವನ್ನು ವ್ಯವಸ್ಥಿತವಾದ ರೀತಿಯಲ್ಲಿ ವಿನ್ಯಾಸಗೊಳಿಸಲಾಗಿದೆ. ವಿಷಯ ನಿರೂಪಿಸುವಾಗ ಪೂರಕವಾಗಿ ನಕ್ಷೆಗಳು ರೇಖಾಚಿತ್ರಗಳು ಮತ್ತು ಛಾಯಾಚಿತ್ರಗಳನ್ನು ಕೊಡಲಾಗಿದೆ.

ಅಡಿಟಿಪ್ಪಣಿಗಳು

೧. ಸರ್ವೋತ್ತಮ ಅಂಬೇಕರ್, ಸಂಕ್ಷಿಪ್ತ ರಸಾಯನ ವಿಜ್ಞಾನ ಚರಿತ್ರೆ, ಪು.೧

೨. ವಾಸುದೇವ ಬಡಿಗೇರ, ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ ಭಾಗ–೧, ಪು.೧೪

ಅಧ್ಯಾಯ ೨

ಲೋಹಗಳ ಪ್ರಾಚೀನತೆ

ಅಧ್ಯಾಯ ಎರಡು
ಲೋಹಗಳ ಪ್ರಾಚೀನತೆ

ಪೀಠಿಕೆ

ಮಾನವನು ಭೂಮಿಯ ಮೇಲೆ ವಾಸಿಸಲು ಪ್ರಾರಂಭಿಸಿ ಕನಿಷ್ಠ ಸುಮಾರು ೨,೫೦,೦೦೦ ವರ್ಷಗಳು ಸಂದಿವೆ. ಮೊಟ್ಟ ಮೊದಲು ಅವನು ಪ್ರಕೃತಿಯಲ್ಲಿ ದೊರೆಯುವ ವಸ್ತುಗಳನ್ನು ಯಥಾಸ್ಥಿತಿಯಲ್ಲಿಯೇ ತನ್ನ ಸಾಧನ ಸಲಕರಣೆಗಳಾಗಿ ಉಪಯೋಗಿಸುತ್ತಿದ್ದ. ತದನಂತರ ಕಲ್ಲಿನ ಆಯುಧಗಳನ್ನು ಬಳಸಲು ಪ್ರಾರಂಭಿಸಿದ. ಸಾವಿರಾರು ವರ್ಷಗಳು ಉರುಳಿದ ನಂತರ ಅವನಿಗೆ ಲೋಹದ ವಸ್ತುಗಳನ್ನು ಬಳಸುವ ಮನೋಸ್ಥಿತಿ ಉಂಟಾಯಿತೇನೋ! ಹಾಗಾಗಿ "ಮಾನವ ಪತ್ತೆ ಹಚ್ಚಿದ ಮೊದಲ ಲೋಹಗಳು ಎಂದರೆ ತಾಮ್ರ ಮತ್ತು ಚಿನ್ನ. ಏಕೆಂದರೆ ಇವು ಕೆಲವು ಸಲ ಯಾವುದೇ ಪದಾರ್ಥದೊಂದಿಗೆ ಸಂಯೋಗಗೊಳ್ಳದೆ ಮೂಲ ಸ್ಥಿತಿಯಲ್ಲೇ ದೊರೆಯುತ್ತವೆ. ಹಾಗಾಗಿ ಕೇವಲ ಕಲ್ಲನ್ನೇ ನೋಡುತ್ತಿದ್ದ ಮನುಷ್ಯ ಕೆಂಪು ಬಣ್ಣದ ತಾಮ್ರ ಮತ್ತು ಹಳದಿ ಬಣ್ಣದ ಚಿನ್ನದ ಕಡೆ ಆಕರ್ಷಿತನಾದದ್ದು ಸಹಜವೇ ಸರಿ".[೧] ಲೋಹಗಳಲ್ಲಿ ಕಬ್ಬಿಣ, ತವರ, ಬೆಳ್ಳಿ, ಪ್ಲಾಟಿನಂ, ತಾಮ್ರ, ಸೀಸ, ಪಾದರಸ, ಅಲ್ಯುಮಿನಿಯಂ ಮತ್ತು ಯೋರೇನಿಯಂ ಬಹಳ ಪ್ರಸಿದ್ಧವಾದವು. ಎರಡು ಇಲ್ಲವೆ ಹೆಚ್ಚು ಲೋಹಗಳು ರಸಾಯನಕ ಕ್ರಿಯೆಗೊಳಗಾಗದೇ ಬೆರೆತು ಒಂದಾದಾಗ ಮಿಶ್ರಲೋಹ ಉಂಟಾಗುತ್ತದೆ. ಕಂಚು ಮತ್ತು ಹಿತ್ತಾಳೆ ಇವುಗಳು ಬಹಳ ಹಿಂದಿನಿಂದಲೂ ಬಳಕೆಯಲ್ಲಿರುವ ಪ್ರಸಿದ್ಧವಾದ ಮಿಶ್ರಲೋಹಗಳು ತಾಮ್ರ ಮತ್ತು ಸತು ಸೇರಿದಾಗ ಹಿತ್ತಾಳೆ. ತಾಮ್ರ ಮತ್ತು ತವರಗಳ ಮಿಶ್ರಣವೇ ಕಂಚು.[೨]

ಕ್ರಿ.ಪೂ. ೩೦೦೦ ರಿಂದ ೧೫೩೦ರಲ್ಲಿ ಉಗಮವಾದ ಹರಪ್ಪ ಮತ್ತು ಸಿಂಧೂ ಕಣಿವೆಯ ನಾಗರಿಕತೆಯು ಲೋಹ ಬಳಕೆಯ ವಿಕಾಸವನ್ನೇ ಸಾರುತ್ತದೆ.[೩] ಭಾರತೀಯರಿಗೆ ಲೋಹವಿದ್ಯೆಯೂ ಜ್ಞಾನವು ವೇದಪೂರ್ವ ಕಾಲದಲ್ಲಿ (ಕ್ರಿ.ಪೂ. ೪೦೦೦ ರಿಂದ ೩೦೦೦) ತಿಳಿದಿತ್ತು ಎಂಬುದು ಮೊಹೆಂಜೊದಾರೋಗಳಲ್ಲಿ ಮಾಡಿದ ಉತ್ಖನನಗಳಿಂದ ಸಾಬೀತಾಗಿದೆ. ಚಿನ್ನ, ಬೆಳ್ಳಿ ಮತ್ತು ತಾಮ್ರ

ಇವು ಹೇರಳವಾಗಿ ಲಭ್ಯವಿದ್ದವು ಎಂಬುದು ಅಲ್ಲಿ ದೊರೆತ ಆಭರಣ ಹಾಗೂ ಅಲಂಕಾರಿಕ ಪಾತ್ರೆಗಳಿಂದ ತಿಳಿದುಬರುತ್ತದೆ. ತಾಮ್ರದ ಜೊತೆಗೆ ಸತುವನ್ನು ಬೆರೆಸಿ ಕಂಚನ್ನು ತಯಾರಿಸಿ ಅದರಿಂದ ಹದನವಾದ ಆಯುಧಗಳನ್ನು ತಯಾರಿಸುತ್ತಿದ್ದರು. ಅಲ್ಲಿ ದೊರೆತ ವಸ್ತುಗಳಲ್ಲಿ ತಾಮ್ರದ ಜೊತೆಗೆ ನಿಕ್ಕಲ್ ಮತ್ತು ಆರ್ಸೆನಿಕ್ ಲೋಹಗಳು ಇದ್ದದ್ದು ಕಂಡುಬಂದಿದೆ".[೪]

"ಕಂಚು ಲೋಹವನ್ನು ಕ್ರಿಪೂ. ೧೩೦೦ರಲ್ಲಿ, ಕಬ್ಬಿಣವನ್ನು ಕ್ರಿಪೂ. ೫೦೦ ಮತ್ತು ಪಾದರಸವನ್ನು ಕ್ರಿಪೂ. ೧೫೦ರಲ್ಲಿಯೇ ಚೀನಿಯರು ತಿಳಿದುಕೊಂಡಿದ್ದರು ಮತ್ತು ದಕ್ಷ ತಿದಿ ತಯಾರಿಸುವುದರಲ್ಲಿ ಪ್ರವೀಣರಾಗಿದ್ದರು. ಹೀಗಾಗಿ ಎರಕ ಹೊಯ್ದು, ತೋಪು ಮತ್ತು ತುಪಾಕಿ ಮುಂತಾದ ಯುದ್ಧೋಪಕರಣ ಗಳನ್ನು ಪಾಶ್ಚಾತ್ಯ ದೇಶಗಳಿಗಿಂತ ಮೊದಲೇ ಬಳಸುತ್ತಿದ್ದರು ಎಂಬುದು ಕ್ರಿಪೂ. ೨೦೦ರಿಂದ ಕ್ರಿ.ಶ. ೨೨೦ರ ವರ್ಷಗಳಲ್ಲಿ ಆಳಿದ ಹಾನ್ ರಾಜಮನೆತನದ ಇತಿಹಾಸದಿಂದ ತಿಳಿದುಬರುತ್ತದೆ. ಕ್ರಿ.ಶ. ೬ನೇ ಶತಮಾನದ ವೇಳೆಗೆ ಚೀನಾದ ಪಿಂಗಾಣಿ ಪಾತ್ರೆಗಳು ಜಗತ್ಪ್ರಸಿದ್ಧವಾಗಿದ್ದವು".[೫]

ಕರ್ನಾಟಕ ಪ್ರದೇಶದಲ್ಲಿನ ಬ್ರಹ್ಮಗಿರಿ, ಮಸ್ಕಿ, ಸಂಗನಕಲ್ಲು, ತೆಕ್ಕಲಕೋಟೆ, ಇನಾಂಗಾವ್, ಮತ್ತಿತರ ಪರಿಸರದಲ್ಲಿ ಕೈಗೊಂಡಿರುವ ಹಲವಾರು ಉತ್ಖನನಗಳಿಂದ ಈ ಪ್ರದೇಶಗಳಲ್ಲಿ ಲೋಹಗಳ ಬಳಕೆ ಪ್ರಾಗಿತಿಹಾಸಿಕ ಕಾಲದಿಂದಲೂ ಬಳಕೆಯಲ್ಲಿತ್ತು ಎಂದು ತಿಳಿಯುತ್ತೇವೆ. ಹಾಗೆಯೇ ಬಳ್ಳಾರಿ ಯಲ್ಲಿನ ಕುಡಿತಿನ, ಸಂಗನಕಲ್ಲು, ಕುರೆಕುಪ್ಪ, ಕೋದಾಳು, ತೋರಣಗಲ್ಲು, ಮಲ್ಲಾಪುರ, ಮಾದರಹಳ್ಳಿ, ಯಶವಂತಪುರ, ರಾಂಪುರ, ಮಾಡಲಗೇರಿ, ಕಕ್ಕಾಬೇವಿನಹಳ್ಳಿ, ಕಪ್ಪಗಲ್ಲು, ಬೆಳಗಲ್ಲು, ಹಳಕುಂದಿ, ಹಳೆನೆಲ್ಲುಡಿ, ಹೊಸಪೇಟೆ ತಾಲೂಕಿನ ಗಾದಿಗನೂರು, ಭುವನಹಳ್ಳಿ, ಕಾಕುಬಾಳು, ಕಾರಿಗನೂರು, ಇಂಗಳಗಿ, ರಾಜಾಪುರ, ತಿಮ್ಮಲಾಪುರ, ಡಣಾಪುರ, ಅಪ್ಪಲಾಪುರ, ಅಯ್ಯನಹಳ್ಳಿ, ಹಂಪಿ ಮತ್ತು ವೆಂಕಟಾಪುರ ಇತ್ಯಾದಿ ಪ್ರದೇಶಗಳಲ್ಲಿ ನಡೆಸಿದ ಉತ್ಖನನಗಳಿಂದ ಲೋಹದ ವಸ್ತುಗಳನ್ನು ಬಳಸಿರುವ ಕುರುಹುಗಳನ್ನು ವಿದ್ವಾಂಸರು ಪತ್ತೆ ಹಚ್ಚಿದ್ದಾರೆ.

೨.೧. ತಾಮ್ರ (Copper)

ಮಾನವನು ಭೂಮಿಯ ಮೇಲೆ ಕಂಡುಹಿಡಿದ ಮೊದಲ ಲೋಹ ತಾಮ್ರವಾಗಿದೆ. ಮಾನವನ ಸಾಂಸ್ಕೃತಿಕ ಬೆಳವಣಿಗೆ ಘಟ್ಟದಲ್ಲಿ ಅದಿರಿನ ಸಂಸ್ಕರಣೆಯಿಂದ ಪಡೆದ ಲೋಹವೇ ತಾಮ್ರ. "ಪ್ರಾಯಶಃ ಶಿಲಾಯುಗದ ಕೊನೆಯ ಘಟ್ಟದಲ್ಲಿ ಅಂದರೆ ಕ್ರಿಪೂ. ಸುಮಾರು ೫೦೦೦ ದಿಂದ ೩೦೦೦ ವರ್ಷಗಳಲ್ಲಿ ತಾಮ್ರದ ಅದಿರು ಅವನಿಗೆ ಪರಿಚಯವಾಗಿರಬಹುದು. ಈ ಲೋಹವನ್ನು ಅದಿರಿನಿಂದ ಸಂಸ್ಕರಿಸಿ ತನಗೆ ಬೇಕಾದ ದಿನಬಳಕೆಯ ಆಯುಧಗಳನ್ನು ತಯಾರಿಸಲು ಆನಂತರ ೨೦೦೦ ವರ್ಷಗಳ ಕಾಲ ತೆಗೆದುಕೊಂಡಿರಬಹುದು. ಆದರೆ ಜಗತ್ತಿನ ಎಲ್ಲೆಡೆಯಲ್ಲಿಯೂ ತಾಮ್ರದ ಬಳಕೆ ಒಂದೇ ಕಾಲದಲ್ಲಾಯಿತು ಎಂಬುದಕ್ಕೆ ಸ್ಪಷ್ಟವಾದ ಆಧಾರಗಳಿಲ್ಲ. ಯಾವ ಭಾಗಗಳಲ್ಲಿ ಉತ್ಖನನ ಮಾಡಲಾಗಿದೆಯೋ ಹಾಗೂ ಅಲ್ಲಿ ದೊರೆತ ತಾಮ್ರದ ಕುಶಲ ವಸ್ತುಗಳು ಮತ್ತು ಪುರಾವೆಗಳನ್ನಾಧರಿಸಿ ತಾಮ್ರಯುಗದ ಕಾಲವನ್ನು ಒಂದೊಂದು ದೇಶಗಳಲ್ಲಿ ಒಂದೊಂದು ರೀತಿಯಾಗಿ ಗುರುತಿಸಿದ್ದಾರೆ. ಉದಾಹರಣೆಗೆ, ಈಜಿಪ್ಟ್‌ನಲ್ಲಿ ತಾಮ್ರಯುಗವು ಕ್ರಿಪೂ. ೫೦೦೦ ವರ್ಷಗಳ

ಹಿಂದಕ್ಕೆ ಹೋದರೆ ಭಾರತದಲ್ಲಿ ಕ್ರಿಪೂ. ೨೫೦೦ ವರ್ಷಗಳ ಹಿಂದೆಯೇ ತಾಮ್ರಯುಗ ಕಾಣಿಸಿತ್ತೆಂದು ಊಹಿಸಲಾಗಿದೆ".[೬]

ಈ ಯುಗದ ಜನರ ಜೀವನದಲ್ಲಿ ಕಾಣುವ ಖಚಿತ ಬೆಳವಣಿಗೆಯೆಂದರೆ ಶಿಲಾಯುಧಗಳ ಜೊತೆಗೆ ತಾಮ್ರ ಇಲ್ಲವೆ ಕಂಚಿನ ಉಪಕರಣಗಳ ನಿರ್ಮಾಣ. ಅದ್ದರಿಂದ ಈ ಸಂಸ್ಕತಿಯನ್ನು 'ಶಿಲಾ ತಾಮ್ರಯುಗ ಸಂಸ್ಕೃತಿ'ವೆಂದು ಕರೆಯಲಾಯಿತು.[೭] ಈ ಲೋಹ ಪ್ರಾಚೀನ ಕಾಲದಲ್ಲಿ ಮೆಡಿಟೇರಿಯನ್ ಸಮುದ್ರದ ದ್ವೀಪವಾದ ಸೈಪ್ರೆಸ್‌ನಲ್ಲಿ ಪ್ರಮುಖವಾಗಿ ದೊರೆಯುತ್ತಿದ್ದುದರಿಂದ ಇದಕ್ಕೆ 'ಸಿಪ್ರಿಯನ್ ಲೋಹ' ಎಂದು ಹೆಸರಿತ್ತು. ಇದರ ರಸಾಯನಿಕ ಸಂಕೇತವಾದ 'Cu' ಹಾಗೂ ಹೆಸರು 'ಕಾಪರ್' ಸಿಪ್ರಿಯನ್ ಲೋಹದ ರೋಮನ್ ರೂಪವಾಗಿದೆ. ಬೇರೆ ಲೋಹಗಳೊಂದಿಗೆ ಸುಲಭವಾಗಿ ಬೆರೆಯುವುದರಿಂದ ಹಿತ್ತಾಳೆ, ಕಂಚು, ಮುಂತಾದ ಉಪಯುಕ್ತ ಮಿಶ್ರ ಲೋಹಗಳ ತಯಾರಿಕೆಯಲ್ಲಿ ಪ್ರಮುಖ ಲೋಹವಾಗಿದೆ.[೮] ತಾಮ್ರವು ೧೦೮೪° ಸೆ. ಉಷ್ಣತೆಯಲ್ಲಿ ಕರಗುತಿದ್ದರೂ, ಅದರ ಧ್ರುವೀಕರಣ ಸುಲಭವಾಗಲು ಇನ್ನೂ ೨೦° ಸೆ. ಹೆಚ್ಚು ಶಾಖವನ್ನು ಉಣಿಸುತ್ತಿದ್ದರು.[೯] ತಾಮ್ರವು ಕುದಿಯಲು ೨೫೬೨ ಸೆ. ಶಾಖವನ್ನುಣಿಸಬೇಕು.[೧೦]

"ಒಂದು ಊಹೆಯ ಪ್ರಕಾರ ನೀಲ ಬಂಡೆಗಳಿಗಿರುವ (Malachite org) ಆರಣ್ಯ ಪ್ರದೇಶದಲ್ಲಿನ ಕಾಡಿಗೆ ಬೆಂಕಿ ತಗುಲಿದಾಗ, ಉಳಿದ ಬೂದಿಯಲ್ಲಿ ಕಂಡ ಹೂಳೆಯುವ ತಾಮ್ರದ ಪುಟ್ಟ ಪುಟ್ಟ ಗುಂಡುಮಣಿಗಳು ಪದೇ ಪದೇ ಪುರ್ನವರ್ತಿ ಆಗುವುದನ್ನು ಗುರುತಿಸಿದ ಯಾವನೋ ಒಬ್ಬ ವ್ಯಕ್ತಿಗೆ ನೀಲಿಬಣ್ಣದ ಕಟ್ಟಿಗೆಯ ಊರಿಯಲ್ಲಿ ಸುಟ್ಟರೆ ತಾಮ್ರವನ್ನು ಪಡೆಯಬಹುದು ಎಂದು ತಿಳಿದಿರಬೇಕು. ಈ ಸಂಶೋಧನೆ ಸುಮಾರು ಕ್ರಿ.ಪೂ. ೪೦೦೦ ವರ್ಷಗಳ ಹಿಂದೆ ಆಗಿರಬಹುದು. ಕಾರಣ ಕ್ರಿ.ಪೂ. ೩೦೦೦ ವರ್ಷಗಳ ಹಿಂದೆ ತಾಮ್ರದಿಂದ ತಯಾರಿಸಿದ ಹೋರಿಯ ಮುಖವನ್ನು ಮತ್ತು ಚಿನ್ನದ ಕೊಂಬನ್ನು ಬ್ರಿಟಿಷ್ ವಸ್ತು ಸಂಗ್ರಹಾಲಯದಲ್ಲಿ ಇಂದಿಗೂ ನೋಡಬಹುದು".[೧೧] ತಾಮ್ರವನ್ನು ವ್ಯಾಪಕವಾಗಿ ಬಳಕೆಗೆ ತಂದ ಕಾಲ ಕ್ರಿ.ಪೂ. ೪೦೦೦ ದಿಂದ ಕ್ರಿ.ಪೂ. ೨೫೦೦ ವರ್ಷಗಳು. ಈ ಕಾಲಘಟ್ಟವನ್ನು ಚಾಲ್ಕೋಲಿಥಿಕ್ ಯುಗ (Chalcolithic period) ಎಂದು ಗುರುತಿಸಿದ್ದಾರೆ.[೧೨] ಈ ಯುಗದ ವೈಶಿಷ್ಟ್ಯವೆಂದರೆ ನವಶಿಲಾಯುಗದ ಮಾನವ ಶಿಲೆ ಮತ್ತು ಲೋಹ ಎರಡನ್ನು ಬಳಸುತ್ತಿದ್ದುದು.[೧೩] ಹಿಂದೆ ತಾಮ್ರವು ಎಲ್ಲಿ ಬೇಕಾದಲ್ಲಿ ಹೇರಳವಾಗಿ ದೊರೆಯುತ್ತಿರಲಿಲ್ಲ. ಈಗಲೂ ಅಷ್ಟೇ. ಈ ಕಾರಣದಿಂದಾಗಿ ತಾಮ್ರಯುಗ ಪ್ರವೇಶಿಸಿದರೂ ಶಿಲಾಯುಧಗಳನ್ನು ಅದು ಸಂಪೂರ್ಣವಾಗಿ ಸ್ಥಳಾಂತರಗೊಳಿಸಲಿಲ್ಲ. ತಾಮ್ರವನ್ನು ಅದಿರಿನಂದ ಸಂಸ್ಕರಿಸಿ ಲೋಹವನ್ನು ಮಾಡುವ ಕಲೆಯು ಪ್ರಯತ್ನ ಹರಪ್ಪ ಯುಗದಲ್ಲಿ ಕ್ರಿ.ಪೂ. ೨೩೦೦ ರಿಂದ ೧೭೫೦ ಪರಿಪೂರ್ಣ ಯಶಸ್ಸನ್ನು ಪಡೆಯಿತೆನ್ನಬಹುದು.[೧೪]

"ಹಿಂದೆ ಪ್ರಾಚೀನ ಬುದ್ಧವಿಹಾರಗಳನ್ನು ಪ್ರಾಚ್ಯ ಸಂಶೋಧಕರು ಪರಿಶೀಲಿಸುತ್ತಿದ್ದಾಗ ಸುಲ್ತಾನಗಂಜ್ ಮತ್ತು ಬಾಗಲ್ಪುರ (ಬಿಹಾರ ರಾಜ್ಯ) ಎಂಬ ಭಾಗಗಳಲ್ಲಿ ಒಂದು ವಿರಳವಾದ ತಾಮ್ರದ ತೆಳುವಾದ ಪದರಿನ ಪಾರದರ್ಶಕತೆಯನ್ನು ಹೊಂದಿದ ಅದ್ಭುತ ಭಗವಾನ್ ಬುದ್ಧನ ಮೂರ್ತಿ ಪತ್ತೆಯಾಗಿದೆ.

ಇದರ ಜೊತೆಯಲ್ಲಿಯೇ ಎರಡನೆಯ ಚಂದ್ರಗುಪ್ತನ ಕಾಲದ ನಾಣ್ಯವೊಂದು ದೊರೆತಿದೆ. ಈ ವಿಗ್ರಹವು ಈಗ ಬರ್ಮಿಂಗ್‌ಹ್ಯಾಮ್ ವಸ್ತು ಸಂಗ್ರಹಾಲಯದಲ್ಲಿದೆ. ಇದನ್ನೆಲ್ಲ ವೀಕ್ಷಿಸಿದರೆ ನಮ್ಮ ಪ್ರಾಚೀನರು ಅಷ್ಟೊಂದು ಉದ್ದವಾದ ಲೋಹ ಪ್ರತಿಮೆಗಳನ್ನು ಮಾಡುವುದರಲ್ಲಿ ಕೌಶಲ್ಯತೆಯನ್ನು ಹೊಂದಿದ್ದರು ಎನ್ನುವುದು ಸುಸ್ಪಷ್ಟ".[೧೫]

"ದಕ್ಷಿಣ ಭಾರತದಲ್ಲಿ ಅತ್ಯಂತ ಗಮನಾರ್ಹವಾದ ಉಪಕರಣವೆಂದರೆ ರಾಯಚೂರು ಹತ್ತಿರ ಕಲ್ಲೂರು ಗ್ರಾಮದ ಬಳಿ ದೊರೆತ ತಾಮ್ರದ ಉದ್ದನೆಯ ಖಡ್ಗಗಳು ಮತ್ತು ಭೀಮಾ ನದಿಯ ಉಗಮ ಪ್ರದೇಶದವಾದ ಚಂದೋಳಿ ಗ್ರಾಮದಲ್ಲಿ ಇದೇ ರೀತಿಯ ಸಣ್ಣ ಮಾದರಿಯ ಕಠಾರಿಯಂಥ ಉಪಕರಣ ಹಾಗೂ ಬ್ರಹ್ಮಗಿರಿಯಲ್ಲಿ ಒಂದು ಚಿಕ್ಕ ಚಾಕು ದೊರೆತಿದೆ. ನೂತನ ಶಿಲಾ ಮತ್ತು ಶಿಲಾ ತಾಮ್ರಯುಗಕ್ಕೆ ಸೇರಿದ ಕೊಕ್ಕೆ ಕತ್ತಿ, ಇಬ್ಭಾಗ ಕೊಡಲಿ, ಬಾಗು ಮುಳ್ಳಿನ ಈಡಿಗಾಳ, ಅಷ್ಟಾಕಾರದ ಮನುಷ್ಯಾಕೃತಿ ಮೊದಲಾದ ತಾಮ್ರ ಉಪಕರಣಗಳು (Copper hoards) ಗಂಗಾ ಯಮುನಾ ಬಯಲು ಪ್ರದೇಶದ ವಿವಿಧ ಸ್ಥಳಗಳಲ್ಲಿ ಕಂಡುಬಂದಿವೆ. ಇಂತ ಉಪಕರಣಗಳು ಓರಿಸ್ಸಾದಿಂದ ಷರೋಜದವರೆಗೂ ಮತ್ತು ವಾಯುವ್ಯದಲ್ಲಿ ಪಾಕಿಸ್ತಾನ ಹಾಗೂ ದಕ್ಷಿಣದಲ್ಲಿ ಕಲ್ಲೂರಿನವರೆಗೂ ದೊರೆತಿವೆ".[೧೬] ಇದರಿಂದ ತಾಮ್ರದ ಸಂಪರ್ಕ ಮಾರ್ಗ ಮತ್ತು ಅವುಗಳ ಬಳಕೆಯು ಏಕಕಾಲದಲ್ಲಿ ನಡೆದಿರಬೇಕು ಎಂದು ತಿಳಿಯಬಹುದು.

ಬಳ್ಳಾರಿ ಜಿಲ್ಲೆಯ ಪ್ರಾಗಿತಿಹಾಸಿಕ ನೆಲೆಗಳಾದ ಕಪ್ಪಗಲ್ಲು, ಸಂಗನಕಲ್ಲು ಮತ್ತು ತೆಕ್ಕಲಕೋಟೆಗಳಲ್ಲಿ ಕೈಗೊಂಡ ಉತ್ಖನನದಿಂದ ಅಂದಿನ ಜನರು ತಾಮ್ರದ ಬಳಕೆ ಮತ್ತು ಅವುಗಳ ವಿಶೇಷತೆಯ ಕುರಿತು ಸ್ಪಷ್ಟ ಚಿತ್ರಣ ದೊರಕಿದೆ. ಆ ನೆಲೆಗಳಲ್ಲಿ ನವ-ತಾಮ್ರಶಿಲಾಯುಗದ ಸ್ತರಗಳಲ್ಲಿ ತಾಮ್ರದಿಂದ ಮಾಡಿದ ಮಣಿಗಳು, ತಾಮ್ರದ ಬಳೆ ಮತ್ತು ಉಂಗುರ ಮೊದಲಾದ ಅಲಂಕರಣ ವಸ್ತುಗಳು ದೊರೆತಿವೆ. ಈ ನೆಲೆಯಲ್ಲಿ ದೊರೆತಿರುವ ವಸ್ತುಗಳು ಮತ್ತು ಇಂದಿನ ಬಳ್ಳಾರಿ ನಗರದ ದಕ್ಷಿಣಕ್ಕಿರುವ ಗುಡ್ಡಸಾಲುಗಳಲ್ಲಿ (ತಾಮ್ರಬೆಟ್ಟ ಎಂದು ಕರೆಯುತ್ತಾರೆ) ಮತ್ತು ಹರಪನಹಳ್ಳಿ-ನಂದಿಬೇವೂರು ನಡುವೆ ೨ ಕಿ.ಮೀ ದೂರದಲ್ಲಿರುವ ಬೆಣಚುಕಲ್ಲಿನ ಶಿಲೆಗಳಲ್ಲಿ ಕಂಡುಬಂದಿರುಬದ ತಾಮ್ರದ ಅಂಶವನ್ನು ನೋಡಿದರೆ ಪ್ರಾಯಶಃ ಪ್ರಾಗಿತಿಹಾಸ ಕಾಲದಿಂದಲೂ ತಾಮ್ರವನ್ನು ಬಳಕೆ ಮಾಡುತ್ತಿದ್ದರು ಎಂದು ಅನಸುತ್ತದೆ.[೧೭] ತಾಮ್ರದ ಅದಿರಿನ ಖನಿಜ ಮೇಲೆ ಹಸಿರು ಬಣ್ಣದ ಕಲೆಗಳಿಂದ ತಾಮ್ರದ ಅದಿರನ್ನು ಗುರುತಿಸಲಾಗುತ್ತದೆ. ಬಳ್ಳಾರಿ ಜಿಲ್ಲೆಯಲ್ಲಿರುವ ನೆಲೆಗಳು ಹೊಸಪೇಟೆ ತಾಲೂಕಿನ ಹತ್ತಿರದ ನೆಲೆಗಳಾಗಿವೆ. ಅದರೆ ತಾಲೂಕಿನ ಯಾವುದೇ ಪ್ರದೇಶದಲ್ಲಿ ತಾಮ್ರದ ಆಯುಧೋಪಕರಣಗಳು ಇದುವರೆಗೂ ದೊರೆತಿಲ್ಲ.[೧೮] ತಾಮ್ರದ ಖನಿಜವನ್ನು ಹೊಂದಿದ ಅದಿರುಗಳು ಹೊಸಪೇಟೆಗೆ ಹೊಂದಿಕೊಂಡಂತೆ ಚಿನ್ನಾಪುರ, ರಾಮಘಡ ಮತ್ತು ತಾಮ್ರ ಪರ್ವತ ಪ್ರದೇಶಗಳಲ್ಲಿ ದೊರಕುತ್ತವೆ.[೧೯]

೨.೨. ಚಿನ್ನ (Gold)

ಚಿನ್ನ ಎಂದಾಕ್ಷಣ ಪ್ರತಿಯೊಬ್ಬ ಮನುಷ್ಯನಿಗೂ ಕೂಡ ಏನೋ ಒಂದು ಕುತೂಹಲ ಮತ್ತು ಆಕರ್ಷಣೆ. ಚಿನ್ನವನ್ನು ಇಷ್ಟಪಡದ ಯಾವ ವ್ಯಕ್ತಿಯೂ ಕೂಡ ಈ ಭೂಮಿಯ ಮೇಲೆ

ಇರಲಾರನು. ಈ ಚಿನ್ನವು ಪ್ರಾಚೀನ ಕಾಲದಿಂದ ಹಿಡಿದು ಇಂದಿನ ಸಮಾಜದಲ್ಲಿ ಬಡವ–ಶ್ರೀಮಂತ ಎಂಬ ಭೇದ ಭಾವವನ್ನು ಸೃಷ್ಟಿಸಿ, ಯುದ್ಧ ಮಾಡುವ ಮಟ್ಟಕ್ಕೆ ಪ್ರತೀತಿ ಪಡೆದಿದೆ ಎಂದರೆ ತಪ್ಪಾಗಲಾರದು. "ಈಜಿಪ್ಟ್‌ನ ದೊರೆಗಳು ಚಿನ್ನದ ಗಣಿಯಲ್ಲಿ ನುಬಿಯವರನ್ನು ಗುಲಾಮರನ್ನಾಗಿ ದುಡಿಸಿದರು. ಸ್ಪೇನಿನ ಚಿನ್ನದ ದಾಹಕ್ಕೆ ಬಲಿಯಾಗಿ ದಕ್ಷಿಣ ಅಮೇರಿಕಾದ ಇಂಕಾ ಬುಡಕಟ್ಟು ಬುಡಮೇಲಾಯಿತು. ಪರಕೀಯರು ಭಾರತದ ಮೇಲೆ ದಂಡೆತ್ತಿ ಬಂದು ದೋಚಿದ್ದು ಚಿನ್ನದ ಭಂಡಾರವನ್ನೇ. ಒಡವೆ ವಸ್ತುವಾಗಿ, ಸರ್ಕಾರದ ಅಧಿಕೃತ ನಾಣ್ಯವಾಗಿ ಮತ್ತು ಚಿನ್ನ ತಿಜೋರಿಯಲ್ಲಿ ಗಟ್ಟಿಯಾಗಿ ಬೇರೂರಿವುದಕ್ಕೆ ಸುಧೀರ್ಘ ಇತಿಹಾಸವಿದೆ. ಒಂದು ಅಂದಾಜಿನ ಪ್ರಕಾರ, ಭಾರತದಲ್ಲಿ ಖಾಸಗಿ ಚಿನ್ನದ ದಾಸ್ತಾನು ೫೦೦೦ ಟನ್ ಎಂದು ತಿಳಿದು ಬಂದಿದೆ. ಒಂದು ಸೆಂ.ಮೀ. ದಪ್ಪದ ಚಿನ್ನದ ಹಾಳೆಯಿಂದ ಒಂದು ಲಕ್ಷ ತೆಳು ರೇಕುಗಳನ್ನು ಕೂಡ ಮಾಡಬಹುದು."[೨೦] ಚಿನ್ನವು ಮಾನವನ ಜೀವನದುದ್ದಕ್ಕೂ ಅಮೂಲ್ಯವಾದ ಮತ್ತು ಉನ್ನತ ಸ್ಥಾನವನ್ನು ಅಲಂಕರಿಸಿದೆ.

ಚಿನ್ನವು ಒಂದು ಮೂಲಧಾತು. ರಸಾಯನಶಾಸ್ತ್ರದಲ್ಲಿ ಇದರ ಚಿಹ್ನೆ "Au" (ಲ್ಯಾಟಿನ್ ಭಾಷೆಯ ಹೊಳೆಯುವ ಪ್ರಭಾತ ಎಂಬರ್ಥ ಕೊಡುವ "ಆರಮ್" ಎಂಬ ಪದದಿಂದ ಆರಿಸಿಕೊಳ್ಳಲಾಗಿದೆ) ಆಗಿದೆ. ಚಿನ್ನವು ಕ್ರಿಪೂ. ೬೦೦೦ ವರ್ಷ ಪೂರ್ವದಲ್ಲಿಯೇ ಕಂಡುಬಂದಿದೆ.[೨೧] ಚಿನ್ನವು ಆಕರ್ಷಿಸುವ, ಮನಸ್ಸನ್ನು ಸೂರೆಗೊಳ್ಳುವ ಕಾಂತಿಯುತ ಹಳದಿ ಬಣ್ಣದ್ದಾಗಿದೆ. ಎಷ್ಟೋ ವರ್ಷಗಳ ಕಾಲ ಮಳೆ ಗಾಳಿಗೆ ಒಡ್ಡಿದರೂ ತುಕ್ಕು ಹಿಡಿಯದ ಅನನ್ಯ ಗುಣ ಚಿನ್ನಕ್ಕಿದೆ. ಈ ಲೋಹಕ್ಕೆ ತಂತುಗುಣವಿದೆ. ಚಿನ್ನವನ್ನು ಕರಗಿಸಲು ೧೦೬೪.೧೮° ಸೆ. ಮತ್ತು ಕುದಿಯಲು ೨೮೫೬° ಸೆ. ತಾಪ ಉಣಿಸಬೇಕು.[೨೨] ರಾಜದ್ರವದ (೧ ಭಾಗ ಪ್ರಬಲ ನೈಟ್ರಿಕ್ ಆಮ್ಲ, ೩ ಭಾಗ ಪ್ರಬಲ ಹೈಡ್ರೋಕ್ಲೋರಿಕ್ ಆಮ್ಲ) ಹೊರತು ಉಳಿದ ಯಾವ ದ್ರವಕ್ಕೂ ಚಿನ್ನವನ್ನು ಕರಗಿಸುವ ಸಾಮರ್ಥ್ಯವಿಲ್ಲ.[೨೩]

ಚಿನ್ನವು ಶಿಲೆಯಲ್ಲಿ ಮೂಲರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಚಿನ್ನದ ಹಿರಿಯ ಗುಣವೆಂದರೆ ಅದಿರಿನಿಂದ ಸುಲಭವಾಗಿ ಬೇರ್ಪಡಿಸಬಹುದು. ಚಿನ್ನವು ಭೂಮಿಯಲ್ಲಿ ಎರಡು ವಿಧಗಳಲ್ಲಿ ದೊರೆಯುತ್ತದೆ. ಒಂದು ಸ್ವಾಭಾವಿಕವಾಗಿ ದೊರೆಯುವ ಚಿನ್ನವಾದರೆ ಮತ್ತೊಂದು ನದಿಪಾತ್ರಗಳಲ್ಲಿ ದೊರೆಯುವ ಮೆಕ್ಕಲುಚಿನ್ನ. ಸಾಮಾನ್ಯವಾಗಿ, ಸಹಜವಾಗಿ ದೊರೆಯುವ ಚಿನ್ನ ಅತ್ಯಂತ ಸಣ್ಣ ಎಳೆಗಳಾಗಿ ಬೆಣಚು ಮತ್ತು ಅಗ್ನಿಶಿಲೆಗಳಲ್ಲಿ ಕಾಣಿಸಿಕೊಳ್ಳುತ್ತದೆ. ಚಿನ್ನ ಬೆರೆತಿರುವ ಶಿಲೆ ಮಳೆಗಾಳಿಗಳ ಹಾವಳಿಗೆ ಸಿಕ್ಕಿ ಅದರಲ್ಲಿರುವ ಚಿನ್ನ ಮೂಲಶಿಲೆಯಿಂದ ಬೇರ್ಪಟ್ಟು ನದಿ ನೀರಿನಲ್ಲಿ ಬಹುದೂರ ಸಾಗಿ, ಎಲ್ಲಿ ನೀರಿನ ವೇಗ ಕಡಿಮೆಯಾಗುತ್ತದೋ, ಅಲ್ಲಿ ಮೆಕ್ಕಲುಮಣ್ಣಿನಲ್ಲಿ ಸಣ್ಣ ಕಣಗಳಾಗಿ ಸಂಗ್ರಹವಾಗುತ್ತದೆ. ಈ ಚಿನ್ನವನ್ನು ಮೆಕ್ಕಲು ಚಿನ್ನ ಎನ್ನುತ್ತಾರೆ.[೨೪]

"ಇತ್ತೀಚೆಗೆ ಸೌದಿ ಅರೇಬಿಯಾದಲ್ಲಿರುವ ಒಂದು ಪುರಾತನ ಚಿನ್ನದ ಗಣಿಯೊಂದನ್ನು ಅಮೇರಿಕಾದ ಭೂಸರ್ವೇಕ್ಷಣಾ ಸಂಸ್ಥೆ ಪತ್ತೆ ಮಾಡಿದೆ. ಈ ಗಣಿಯು ೩೦೦೦ ವರ್ಷಗಳಷ್ಟು ಹಿಂದಿನದೆಂದು ಅಲ್ಲಿನ ಪುರಾತತ್ವ ಇಲಾಖೆಯು ಕಾಲನಿರ್ಣಯ ಮಾಡಿದೆ. ಆದರೆ ನಮ್ಮ ಕರ್ನಾಟಕದ ಚಿನ್ನದ ಗಣಿಗಳಾದ ಹಟ್ಟಿ ಚಿನ್ನದ ಗಣಿಗಳು, ಕೋಲಾರದ ಚಿನ್ನದ ಗಣಿಗಳಲ್ಲದೆ

ಸುಮಾರು ನೂರಕ್ಕಿಂತ ಹೆಚ್ಚು ನಾಡಿನಾದ್ಯಂತ ಹಂಚಿಕೆಯಾಗಿವೆ. ಕ್ರಿ.ಶ. ೧೯೦೬ರಲ್ಲಿ ಮೆಕ್‌ಲಾರೆನ್ ರಾಯಚೂರು ಪ್ರದೇಶವನ್ನು ಸಮೀಕ್ಷೆ ಮಾಡುವಾಗ ಸುಮಾರು ೩೦೦ ಪ್ರಾಚೀನ ಚಿನ್ನದ ಗಣಿಗಳು ಪತ್ತೆಯಾದವು. ಹಟ್ಟಿ ಚಿನ್ನದ ಗಣಿಗಳಲ್ಲಿ ಚಿನ್ನಾಭರಿತ ಬೆಣಚುಕಲ್ಲಿನ ಸಿರವನ್ನು ಪ್ರಾಚೀನವರು ೬೪೦ ಅಡಿಯವರೆಗೆ ಗಣಿ ಮಾಡಿದ್ದಾರೆ. ಹಟ್ಟಿಯ ಚಿನ್ನದ ಗಣಿಗಳಲ್ಲಿ ಬಳಸಿದ್ದ ಕಬ್ಬಿಣದ ಬಾಣಲೆ, ಕಲ್ಲಿನ ಪೀಠ ಮತ್ತು ನೀರೆತ್ತಲು ಬಳಸುತ್ತಿದ್ದ ಮಡಕೆಯ ಚೂರುಗಳನ್ನು ಗುರುತಿಸಿಸಲಾಗಿದೆ.[೨೫] ಪ್ರಖ್ಯಾತ ಪ್ರಾಚ್ಯ ಸಂಶೋಧಕ ಆಲ್ವಿನ್ ಅವರು ಈ ಪುರಾವೆಗಳನ್ನಾಧರಿಸಿ ಪ್ರಾಯಶಃ ಇವು ಮೊದಲ ಶತಮಾನದ ಪೂರ್ವಭಾಗಕ್ಕೆ ಸೇರಿರಬಹುದೆಂದು ಅಭಿಪ್ರಾಯಪಟ್ಟಿದ್ದಾರೆ. ಇಂತದ್ದೇ ಕಬ್ಬಿಣದ ಬಾಣಲೆಗಳು ಕೋಲಾರದ ಪುರಾತನ ಚಿನ್ನದ ಗಣಿಯಲ್ಲೂ ಪತ್ತೆಯಾದ ವರದಿಗಳಿವೆ". ಈ ಪ್ರದೇಶಗಳಲ್ಲಿ ನಡೆದ ಉತ್ಖನನದಲ್ಲಿ ಚಿನ್ನದ ಅತ್ಯಮೂಲ್ಯ ಆಭರಣಗಳು ದೊರೆತಿವೆ. ಅಂತಹ ಆಭರಣಗಳಲ್ಲಿ ವಿವಿಧ ವಿನ್ಯಾಸದ ಕೊರಳಿನ ಸರಗಳು, ಕಿವಿಯೋಲೆಗಳು ಎದ್ದು ಕಾಣುತ್ತವೆ. "ಖ್ಯಾತ ಪುರಾತತ್ವ ಶಾಸ್ತ್ರಜ್ಞರ ರೀತ್ಯಾ ಕರ್ನಾಟಕದ ಹಟ್ಟಿ ಮತ್ತು ಕೋಲಾರದ ಚಿನ್ನದ ಜಾಡಿನಂದ ಸಿಂಧೂನದಿ ನಾಗರಿಕತೆಗೆ ಚಿನ್ನ ಪೂರೈಕೆಯಾಗಿದೆ ಎಂಬ ಅಭಿಪ್ರಾಯವಿದೆ. ಆಭರಣಗಳಲ್ಲಿರುವ ಚಿನ್ನ ಮತ್ತು ಕರ್ನಾಟಕದಲ್ಲಿ ಸದ್ಯದಲ್ಲಿ ದೊರೆಯುತ್ತಿರುವ ಚಿನ್ನ ಎರಡೂ ಬೆಳ್ಳಿ ಮಿಶ್ರಿತ. ಇಂಥ ಚಿನ್ನಕ್ಕೆ 'ಎಲೆಕ್ಟ್ರಮ್' ಎಂಬ ಹೆಸರಿನಿಂದ ಕರೆಯುತ್ತಾರೆ".[೨೬] ಬಳ್ಳಾರಿ ಜಿಲ್ಲೆಯ ತೆಕ್ಕಲಕೋಟೆಯ ಬಳಿ ತಾಮ್ರಯುಗದ ಕಾಲದ ನೆಲೆಯಲ್ಲಿ ಕಂಡುಬಂದಿರುವ ಚಿನ್ನವೇ ಅತ್ಯಂತ ಪುರಾತನ ಚಿನ್ನದ ಆಭರಣವಾಗಿದೆ. ಇದು ಕ್ರಿಪೂ. ಸರಿಸುಮಾರು ೨೦೦೦ ವರ್ಷಗಳ ಚಿನ್ನದ ಇತಿಹಾಸವನ್ನು ಸಾರುತ್ತದೆ".[೨೭] ಬಳ್ಳಾರಿ ಜಿಲ್ಲೆಗಳಲ್ಲಿನ ಶೃಂಗಮರಡಿ, ಬೆಟಗೇರಿ, ತಾರಾನಗರ ಮತ್ತು ಕಂಚೂರು ಪ್ರದೇಶಗಳಲ್ಲಿ ಚಿನ್ನ ಸಿಗುವ ಅದಿರಿನ ಖನಿಜಗಳಿವೆ ಎಂಬುದನ್ನು ಅರಿಯಬಹುದು.[೨೮] ಹೊಸಪೇಟೆಯ ಅತ್ಯಂತ ಸಮೀಪದ ನೆಲೆಗಳಾದ ಸಂಗನಕಲ್ಲು ಮತ್ತು ತೆಕ್ಕಲಕೋಟೆಯಲ್ಲಿ ನಡೆದ ಉತ್ಖನನದಲ್ಲಿ ನವ ತಾಮ್ರಶಿಲಾಯುಗದ ಸ್ತರಗಳಲ್ಲಿ ಚಿನ್ನದ ಕರ್ಣಾಭರಣ ಮೊದಲಾದ ಅಲಂಕರಣ ವಸ್ತುಗಳು ದೊರೆತಿವೆ.[೨೯] ಹಾಗೇಯೆ ಹೊಸಪೇಟೆ ಪ್ರದೇಶದಲ್ಲಿ ವಿಜಯನಗರ ಸಾಮ್ರಾಜ್ಯ ಕಾಲಕ್ಕೆ ಚಿನ್ನದ ಬಳಕೆ ಯಥೇಚ್ಛವಾಗಿತ್ತು ಎಂದು ಇತಿಹಾಸದ ಪುಟಗಳಿಂದ ಅರಿಯಬಹುದಾಗಿದೆ.

"ಭಾರತದ ಸಿಂಧೂ ಪ್ರದೇಶದ ಸ್ವಲ್ಪ ಭಾಗವು ಪರ್ಷಿಯಾದ ದೊರೆ ಡೇರಿಯಸ್‌ನ (ಕ್ರಿಪೂ. ೫೨೨ ರಿಂದ ೪೮೬) ಆಡಳಿತಕ್ಕೆ ಸೇರಿತ್ತು. ಇತರ ದೇಶಗಳು ಬೆಳ್ಳಿಯಲ್ಲಿ ಅವನಿಗೆ ಪೊಗದಿ ನೀಡಿದರೆ, ಭಾರತ ಮಾತ್ರ ಚಿನ್ನದ ದೂಳಿನಲ್ಲಿ ಪೊಗದಿ ಕೊಡುತ್ತಿತ್ತಂತೆ. ಭಾರತದಿಂದ ಪ್ರತಿ ವರ್ಷವೂ ಅವನ ಭಂಡಾರಕ್ಕೆ ೩೬೦ ಟ್ಯಾಲೆಂಟ್ ಚಿನ್ನ ಸೇರ್ಪಡೆಯಾಗುತ್ತಿತ್ತು. ಈ ಅಂಶವನ್ನು ಚರಿತ್ರೆಯ ಪಿತಾಮಹನೆಂದು ಕರೆಯಿಸಿಕೊಂಡಿರುವ ಹಿರೊಡೋಟಸ್ (ಕ್ರಿಪೂ. ೪೮೪) ಉಲ್ಲೇಖಿಸಿದ್ದಾನೆ".[೩೦]

ಇಂದು ತಂತ್ರಜ್ಞಾನಗಳಿಂದ ವಿನೂತನ ಮಾದರಿಯ ಚಿನ್ನವನ್ನು ತಯಾರಿಸಲಾಗುತ್ತಿದ್ದರೂ ಪ್ರಾಚೀನರು ಅನುಸರಿಸಿದ ಮಾರ್ಗವನ್ನು ಇವತ್ತಿಗೂ ಬಳಸಿ ಚಿನ್ನವನ್ನು ಪಡೆಯುತ್ತಿದ್ದೇವೆ ಎಂಬುದು ಸುಸ್ಪಷ್ಟ.

೨.೩. ಸೀಸ (Lead)

ಸೀಸವು ಒಂದು ಮೃದು ಲೋಹವಾಗಿದ್ದು, ನೀಲ ಬೂದು ಮಿಶ್ರಿತ ಬಣ್ಣದಲ್ಲಿ ಕಂಡು ಬರುತ್ತದೆ. ಈ ಲೋಹವನ್ನು ಉಗುರಿನಿಂದ ಗೀರಬಾರದು. ನಾಗತಾರಾಶುದ್ಧಿಕರವೆಂದೂ ಸೀಸವನ್ನು ಪ್ರಾಚೀನರು ಕರೆದಿದ್ದಾರೆ.[೩೧] ಗಾಳಿಗೆ ಒಡ್ಡಿದಾಗ ಅದರ ಬಣ್ಣವು ಬದಲಾಗುತ್ತ ಹೋಗುತ್ತದೆ ಮತ್ತು ತುಕ್ಕು ಹಿಡಿಯುವುದಿಲ್ಲ.[೩೨] ಸೀಸದ ಅದಿರು 'ಗೆಲಿನ'ವಾಗಿದೆ. ಈ ಅದಿರಿನಿಂದ ಸೀಸವನ್ನು ಪಡೆಯಬಹುದು. ಸೀಸವನ್ನು ಗೆಲಿನ ಅದಿರಿನಿಂದ ಸಂಸ್ಕರಿಸಿದಾಗ ಇತರ ಉಪ ಉತ್ಪನ್ನಗಳನ್ನು ಪಡೆಯಬಹುದಾಗಿದೆ. "ಸೀಸದಿಂದ ಉಂಟಾಗುವ ಮಿಶ್ರಲೋಹವು ಗಡುಸು ಹೊಂದಿರುತ್ತದೆ. ಸೀಸವು ಕೇವಲ ನೈಟ್ರಿಕ್ ಆಮ್ಲದಲ್ಲಿ ಮಾತ್ರ ಕರಗುವ ಸಾಮರ್ಥ್ಯವನ್ನು ಪಡೆದಿದೆ. ಸೀಸವನ್ನು ಅದಿರಿನಿಂದ ಸಂಸ್ಕರಿಸದೇ ಮೂಲ ಸೀಸವನ್ನು ಪಡೆಯಲು ಸಾಧ್ಯವಿಲ್ಲ. ಹಾಗಾಗಿ ಸೀಸದ ಸಂಸ್ಕರಣೆ ಬಗ್ಗೆ ವಿಪುಲವಾದ ಅನುಭವವು ನಮ್ಮ ಪ್ರಾಚೀನರಿಗೆ ತಿಳಿದಿತ್ತು ಎನ್ನುವುದು ಸುಸ್ಪಷ್ಟ".[೩೩] ಸೀಸವು ಕರಗಲು ೩೨೭.೪೬° ಸೆ. ಶಾಖವನ್ನು ಉಣಿಸಬೇಕು. ಸೀಸದ ರಸಾಯನಕ ಸಂಕೇತವು 'Pb' ಆಗಿದೆ. ಲ್ಯಾಟಿನ್‌ನಲ್ಲಿ 'ಪ್ಲಂಬಲಮ್' ಎಂದು ಹೆಸರು. ಸೀಸದಿಂದ ಬೆಳ್ಳಿಯನ್ನು ಪಡೆಯಬಹುದು.[೩೪] ಸೀಸವು ಸಹಜವಾಗಿ ಸತು, ಬೆಳ್ಳಿ(ಹೆಚ್ಚು) ಮತ್ತು ತಾಮ್ರದ ಅದಿರಿನಲ್ಲಿ ಸಿಗುತ್ತದೆ ಮತ್ತು ಈ ಲೋಹದ ಜೊತೆ ಸಂಸ್ಕರಿಸಿ ಸೀಸವನ್ನು ತೆಗೆಯಬಹುದಾಗಿದೆ.

ಸೀಸವು ಮಧ್ಯ ಪ್ರಾಚ್ಯದಲ್ಲಿ ಕ್ರಿ.ಪೂ. ೭೦೦೦ ವರ್ಷಗಳಲ್ಲಿ ಬಳಕೆಯಾಗಿರುವುದು ಕಂಡುಬಂದಿದೆ. ರೋಮನ್ ಯುಗದಲ್ಲಿ ಸೀಸದ ಉತ್ಪಾದನೆ ಹೇರಳವಾಗಿತ್ತು ಎಂದು ತಿಳಿದುಬರುತ್ತದೆ. ಸೀಸವನ್ನು ಗೆಲಿನ ಅದಿರಿನಿಂದ ಸಂಸ್ಕರಿಸುವುದು ಸುಲಭವಾಗಿದೆ ಮತ್ತು ಕರಗಿಸುವುದು ಸಹ ಸುಲಭ. ಸೀಸವು ವಿಷಕರವಾಗಿದ್ದು ಎಂಬುದನ್ನು ಪ್ರಾಚೀನ ರೋಮ್, ಗ್ರೀಸ್ ಮತ್ತು ಚೀನಯರಿಂದ ವರದಿಯಾಗಿ ರುವುದನ್ನು ನೋಡಬಹುದು. ಇತ್ತೀಚಿನ ದಿನಗಳಲ್ಲಿ ಟರ್ಕಿಯಲ್ಲಿನ ಕ್ಯಾಟಲಯ್ಯುಕ್ ಪ್ರದೇಶದಲ್ಲಿ ಕಂಡುಬಂದ ಕ್ರಿ.ಪೂ. ೬೪೦೦ರ 'ಬಿಡ'ನಲ್ಲಿ ಸೀಸದ ಲೋಹದ ಅಂಶವಿರುವುದು ವರದಿಯಾಗಿದೆ. ಕಂಚುಯುಗಕ್ಕಿಂತ ಮೊದಲು ಸೀಸವನ್ನು ಆಂಟಿಮನ ಮತ್ತು ಆರ್ಸೆನಿಕ್ ಜೊತೆಯಲ್ಲಿ ಬಳಸುತ್ತಿದ್ದರು.[೩೫] ರಾಜಸ್ಥಾನದ ಸವರ ಗ್ರಾಮದ ಬಳಿ ಬಿಟ್ಟುಹೋಗಿರುವ ಕಟ್ಟಡಗಳ ಕುಶಲತೆಯಿಂದ ಸೀಸದ ಬಳಕೆ ಯನ್ನು ಕಾಣಬಹುದು.[೩೬] ತಾಲೂಕಿನ ಮೆಟ್ರಿಯಲ್ಲಿ ಹಿಂದೆ ೬ ಟನ್ ಗೆಲಿನ ಅದಿರಿನಲ್ಲಿ ಖನಿಜ ಅಂಶ ಇರುವುದು ವರದಿಯಾಗಿತ್ತು. ಅದರೆ ಈಗ ಸಿಗುವುದಿಲ್ಲ.[೩೭] ಮತ್ತೆ ಕರ್ನಾಟಕದ ಯಾವುದೇ ಪ್ರದೇಶದಲ್ಲಿ ಸೀಸವನ್ನು ಬಳಕೆ ಮಾಡಿದ ಪುರಾವೆಗಳು ಇನ್ನೂವರೆಗೂ ದೊರೆತಿಲ್ಲ ಎಂದು ಹೇಳಬಹುದು.

೨.೪. ಬೆಳ್ಳಿ (Silver)

ಬೆಳ್ಳಿಯು ಒಂದು ಮೂಲವಸ್ತು ಮತ್ತು ಮೃದುವಾದ ಅತ್ಯಂತ ಹೊಳಪುಳ್ಳ ಲೋಹವಾಗಿದೆ. ಇದು ಸ್ವಾಭಾವಿಕವಾಗಿ ಮೂಲರೂಪದಲ್ಲಿ ದೊರೆಯುತ್ತದೆ. ಇದು ಲೋಹಗಳಾದ ಚಿನ್ನ, ಸೀಸ, ತಾಮ್ರ ಮತ್ತು ಸತುವನ್ನು ಸಂಸ್ಕರಿಸಿದಾಗ ಉಪಉತ್ಪನ್ನವಾಗಿ ದೊರೆಯುತ್ತದೆ. ಸಲ್ಫೈಡ್ ರೂಪದಲ್ಲಿ

ದೊರೆಯುವ ಬೆಳ್ಳಿ ಸೀಸದ ಅದಿರಾದ ಗೆಲಿನದಲ್ಲಿ ಲಭ್ಯ. ಪ್ರಾಚೀನರಿಗೆ ನಿಸರ್ಗದಲ್ಲಿ ದೊರೆಯುವ ಅದಿರಿನಿಂದ ಬೆಳ್ಳಿಯನ್ನು ಪಡೆಯುವ ವಿಧಾನದ ಮತ್ತು ಗುಣಗಳ ಬಗ್ಗೆ ಸ್ಪಷ್ಟವಾಗಿ ತಿಳಿದಿತ್ತು ಎಂದು ಹೇಳಬಹುದು.[೩೮]

ಬೆಳ್ಳಿಯು ಒಂದು ರಸಾಯನಿಕ ವಸ್ತು. ಇದರ ಸಂಕೇತ 'Ag' (ಗ್ರೀಕ್‌ನಲ್ಲಿ arguros, ಲ್ಯಾಟಿನ್‌ನಲ್ಲಿ argentum, ಇಂಡೋ ಯೂರೋಪಿನಲ್ಲಿ arg –ಬೂದಿ ಅಥವಾ ಹೊಳಪುಳ್ಳ ಎಂದರ್ಥ) ಈ ಲೋಹವನ್ನು ಕಾಯಿಸುವುದಕ್ಕೆ ೯೬೧.೭೮° ಸೆ. ಶಾಖವನ್ನುಣಿಸಬೇಕು. ಈ ಲೋಹವನ್ನು ಕ್ರಿಪೂ. ೫೦೦೦ ವರ್ಷಗಳ ಪೂರ್ವದಲ್ಲಿ ಬೆಳಕಿಗೆ ಬಂದಿರಬೇಕೆಂದು ಅಂದಾಜಿಸಲಾಗಿದೆ. ಈ ಲೋಹವನ್ನು ಪ್ರಾಚೀನರು ಆಭರಣ ಮತ್ತು ನಾಣ್ಯಗಳಲ್ಲಿ ಬಳಸಿದ್ದನ್ನು ಅರಿಯಬಹುದು. ಬೆಳ್ಳಿಯು ನೈಟ್ರಿಕ್ ಆ್ಯಸಿಡ್‌ನಲ್ಲಿ ಬೇಗನೆ ಕರಗುವ ಸಾಮರ್ಥ್ಯವನ್ನು ಹೊಂದಿದೆ.[೩೯]

ಬೆಳ್ಳಿಯು ಸಹಜವಾಗಿ ಧಾತುರೂಪದಲ್ಲಿ ದೊರೆಯುವುದಕ್ಕಿಂತ ಹೆಚ್ಚಾಗಿ ಸಂಯುಕ್ತ ರೂಪದಲ್ಲಿ ಕಾಣಿಸಿಕೊಂಡಿದೆ. ಕೋಲಾರ ಹಟ್ಟಿ ಚಿನ್ನದ ಗಣಿಗಳಲ್ಲಿ ಚಿನ್ನದ ಜೊತೆ ಸ್ವಲ್ಪ ಪ್ರಮಾಣದ ಬೆಳ್ಳಿ ದೊರೆತಿದೆ. ಇದನ್ನು ಎಲೆಕ್ಟ್ರಮ್ ಎಂದು ಕರೆಯುವುದುಂಟು.[೪೦] ಸೀಸವನ್ನು ಅದಿರಿನಿಂದ ಸಂಸ್ಕರಿಸಿದ ಹೊರತು ಬೆಳ್ಳಿಯ ಉತ್ಪಾದನೆ ಸಾಧ್ಯವಿರಲಿಲ್ಲ ಎಂದ ಮೇಲೆ ಸೀಸದ ಸಂಸ್ಕರಣೆಯ ಬಗ್ಗೆ ನಮ್ಮ ಪ್ರಾಚೀನರಿಗೆ ಸಾಕಷ್ಟು ಅನುಭವವಿತ್ತು ಎಂದು ಹೇಳಬಹುದು.[೪೧]

ಪ್ರಾಯಶಃ ಕ್ರಿಪೂ. ೨೦೦೦ ವರ್ಷಗಳ ಹಿಂದೆ ಏಷ್ಯಾ ಮೈನರ್‌ನಲ್ಲಿದ್ದ ಚಾಲಿಬಿಯರ ಪೋಂಟಸ್‌ನ ಬುಡಕಟ್ಟು ಜನಾಂಗ ಬೆಳ್ಳಿ ತಂತ್ರಜ್ಞಾನದಲ್ಲಿ ಪರಿಣಿತಿ ಹೊಂದಿದ್ದರೆಂಬುದಕ್ಕೆ ಪುರಾತತ್ವ ಶೋಧನೆಗಳಿಂದ ಪುರಾವೆಗಳು ಲಭ್ಯವಿವೆ. ನಮ್ಮ ಪ್ರಾಚೀನರಿಗೆ ಸೀಸದ ಅದಿರಿನಿಂದ ಬೆಳ್ಳಿ ಪಡೆಯುವ ಪ್ರಕ್ರಿಯೆ ಕರಗತವಾಗಿತ್ತು.[೪೨] ಲೇಡಿಯನ್ಸ್‌ನಲ್ಲಿ ಕ್ರಿಪೂ. ೭೦೦ರಲ್ಲಿ ಎಲೆಕ್ಟ್ರಂ ರೂಪದ ಬೆಳ್ಳಿಯ ನಾಣ್ಯವನ್ನು ವಾಣಿಜ್ಯ ವ್ಯವಹಾರದಲ್ಲಿ ಚಲಾವಣೆಯಾಗಿರುವುದನ್ನು ತಿಳಿಯಬಹುದು. ತದನಂತರ ಸಂಪೂರ್ಣ ಬೆಳ್ಳಿಯ ನಾಣ್ಯದ ಚಲಾವಣೆ ಆಗಿರುವುದು ಕಂಡುಬರುತ್ತದೆ. ಕ್ರಿಪೂ. ೪೮೫ರಲ್ಲಿ ಬೋರಿಯನ್‌ನಲ್ಲಿ ಬೆಳ್ಳಿಯ ಗಣಿಗಾರಿಕೆ ನಡೆದಿದೆ ಎಂದು ತಿಳಿದುಬರುತ್ತದೆ. ಪ್ರಾಚೀನ ಗ್ರೀಸ್ ಮತ್ತು ರೋಮ್‌ನಲ್ಲಿ ಬೆಳ್ಳಿಯನ್ನು ಗಾಯವಾಸಿ ಮಾಡುವುದಕ್ಕೆ ಬಳಕೆಯಾಗಿರುವ ಪುರಾವೆಗಳು ದೊರಕಿವೆ.[೪೩] ಹೀಗೆ ಮಾನವನ ನಾಗರಿಕತೆಯುದ್ದಕ್ಕೂ ಬೆಳ್ಳಿಯನ್ನು ಬಳಸಿದ್ದನ್ನು ಅರಿಯಬಹುದಾಗಿದೆ.

"ಮೊಹೆಂಜೋದಾರೋ ಮತ್ತು ಹರಪ್ಪ ನಾಗರಿಕತೆಯ ಅನೇಕ ಬೆಳ್ಳಿಯ ನಾಣ್ಯಗಳು ದೊರೆತಿವೆ. ಜೊತೆಗೆ ಆಗಿನ ಬೆಳ್ಳಿಯ ಕಲಾಕೃತಿಗಳೂ ಇವೆ. ಸಿಂಧೂ ನದಿ ನಾಗರಿಕತೆಗೆ ಬೆಳ್ಳಿ ಆಗಲೇ ಪರಿಚಯವಾಗಿತ್ತು. ಮೊಹೆಂಜೋದಾರೋ ಬೆಳ್ಳಿ ಕಲಾಕೃತಿಗಳಲ್ಲಿ ಶೇ. ೯೪.೫೨ ರಿಂದ ೯೫.೫೨ ಭಾಗ ಬೆಳ್ಳಿ, ಶೇ. ೦.೪೨ ರಿಂದ ೧.೪೦ ಭಾಗ ಸೀಸವಿರುವುದು ವಿಶ್ಲೇಷಣೆಯಿಂದ ತಿಳಿದು ಬಂದಿದೆ". ಪ್ರಾಚೀನ ತಂತ್ರಜ್ಞಾನದ ಬಗ್ಗೆ ವಿವರಿಸುತ್ತ ಹೆಸರಾಂತ ಲೋಹಶಾಸ್ತ್ರಜ್ಞ ಮೋರ್ಬ್ಸ್ ಹೀಗೆ ಹೇಳುತ್ತಾನೆ. "ಚಿನ್ನದಿಂದ ಬೆಳ್ಳಿ ಹಾಗೂ ಇತರ ಅಶುದ್ಧ ವಸ್ತುಗಳನ್ನು ತೆಗೆಯುವ ಕಲೆ

ಕ್ರಿ.ಪೂ. ೨೦೦೦ ವರ್ಷಗಳಿಗಿಂತ ಹಿಂದೆಯೇ ರೂಢಿಯಲ್ಲಿತ್ತೆಂದು ತೋರುತ್ತದೆ. ಆದರೆ ಅನಂತರದ ಶತಮಾನದಲ್ಲಿ ಈ ವಿಧಾನ ಬಳಕೆಗೆ ಬರುವುದು ಏಕೋ ತುಂಬಾ ವಿರಳವಾಯಿತು." ಇಂದೂ ರಾಜಸ್ಥಾನದ ಜಾವರ್ ಗಣಿಗಳಲ್ಲಿ ಸೀಸ ಸತುವಿನ ಅದಿರಿನಲ್ಲಿ ಉಪಉತ್ಪನ್ನವಾಗಿ ಮಾತ್ರ ಬೆಳ್ಳಿ ದೂರೆಯುತ್ತದೆ. ಬೆಳ್ಳಿಯ ದಾಸ್ತಾನಿಗೆ ಇದೇ ಮೂಲ. ಕರ್ನಾಟಕದ ಕೋಲಾರ ಹಟ್ಟಿಯನ್ನು ಬಿಟ್ಟರೆ ಬೇರೆ ಯಾವುದೇ ಸ್ಥಳಗಳಲ್ಲಿ ದೊರೆತಿಲ್ಲ ಎಂದು ತಿಳಿಯುತ್ತದೆ.[೪೪] ಬಳ್ಳಾರಿ ಹಾಗೂ ಹೊಸಪೇಟೆ ಪ್ರದೇಶದಲ್ಲಿ ಕೂಡ ಅಂತಹ ಯಾವುದೇ ಕುರುಹುಗಳು ದೊರೆತಿಲ್ಲ. ಬೆಳ್ಳಿಯು ಮಾನವನ ನಾಗರಿಕತೆಯ ಮೇಲೆ ಹೆಚ್ಚು ಪ್ರಭಾವವನ್ನು ಬೀರಿದೆ.

೨.೫. ತವರ (Tin)

ತವರವು ಒಂದು ಲೋಹವಾಗಿದ್ದು, ಇದು ಕೂಡ ಪ್ರಾಗಿತಿಹಾಸಿಕ ಕಾಲದಿಂದಲೂ ಬಳಕೆಯಾಗಿರುವಂತಹ ಲೋಹವಾಗಿದೆ. ತವರದ ಅದಿರು ಬಳಕೆಯು ಪ್ರಾಚೀನರ ಗಮನಕ್ಕೆ ಹಿಂದಯೇ ಬಂದಿತ್ತು. ಆದರೆ ಒಂದು ಪ್ರತ್ಯೇಕ ಲೋಹ ಎಂದು ಗುರುತಿಸುವುದಕ್ಕೆ ಸಾಕಷ್ಟು ಕಾಲ ಹಿಡಿಯಿತು ಎಂದು ಹೇಳಬಹುದು. ತವರವು ಒಂದು ರಸಾಯನಕ ವಸ್ತುವಾಗಿದ್ದು ಇದರ ಸಂಕೇತ 'Sn' ಆಗಿದೆ. ಇದನ್ನು ಲ್ಯಾಟಿನ್ ಭಾಷೆಯಲ್ಲಿ 'ಸ್ಟಾನಮ್' ಎಂತಲೂ ಹೆಸರು. ಈ ಲೋಹವನ್ನು ಸರಿಸುಮಾರು ಕ್ರಿ.ಪೂ. ೩೫೦೦ ವರ್ಷಗಳಲ್ಲಿ ಕಂಡು ಬಂದಿದೆ ಎಂದು ಹೇಳಬಹುದು. ಇದರ ಕರಗುವ ಬಿಂದು ಮಾತ್ರ ೨೩೧.೯೩° ಸೆ. ಅದರೆ ಕುದಿಯುವ ಬಿಂದು ೨೬೦೨° ಸೆಂ. ಆಗಿದೆ. ತವರನ್ನು ತುಕ್ಕು ಹಿಡಿಯುವುದನ್ನು ತಡೆಯಲು ಬಳಸಲಾಗುತ್ತದೆ. ಇದನ್ನು ಕ್ರಿ.ಪೂ. ೩೦೦೦ ವರ್ಷಗಳಿಂದ ಹೇರಳವಾಗಿ ಬಳಸುತ್ತಿರುವುದನ್ನು ತಿಳಿಯಬಹುದು. ತವರ ಮತ್ತು ತಾಮ್ರದ ಮಿಶ್ರಣವೇ ಕಂಚು ಆಗಿದೆ. ಕ್ರಿ.ಪೂ. ೬೦೦ ವರ್ಷಗಳ ನಂತರದಿಂದ ಪೂರ್ಣ ಪ್ರಮಾಣದ ತವರವನ್ನು ತಯಾರಿಸಲಾಯಿತು ಎಂದು ತಿಳಿದುಬರುತ್ತದೆ.[೪೫]

ತವರದ ವಿಶೇಷ ಗುಣವೆಂದರೆ ಇದು ಬಿಳಿ ಹೊಳಪಿನ ಲೋಹ. ನಸು ನೀಲಿ ಬಣ್ಣದ ಛಾಯೆ ಈ ಲೋಹದ ವೈಶಿಷ್ಟ್ಯವಾಗಿದೆ. ಚಾಕುವಿನಿಂದ ಕತ್ತರಿಸಬಹುದು. ಆದರೆ ಸೀಸಕ್ಕಿಂತ ಸ್ವಲ್ಪ ಗಡುಸು. ತಂತಿಯಂತೆ ಈ ಲೋಹವನ್ನು ಎಳೆಯಬಹುದು. ತವರದ ಚೂರನ್ನು ಬಗ್ಗಿಸಿದಾಗ ಕಿರಿಕಿರಿ ಎಂದು ಕಿರುಗುಟ್ಟುತ್ತದೆ. ಮತ್ತೊಂದು ವಿಶೇಷವೆಂದರೆ ಈ ಲೋಹದ ದ್ರವನ ಬಿಂದು ಅತ್ಯಂತ ಕಡಿಮೆ ಮಟ್ಟದ್ದಾಗಿದ್ದರಿಂದ ಮಿಶ್ರಲೋಹ ತಯಾರಿಕೆಗೆ ಇದು ತುಂಬಾ ಸೂಕ್ತವಾದ ಲೋಹ. ನಷ್ಟವಾಗುವುದಿಲ್ಲ ಮತ್ತು ತುಕ್ಕು ಹಿಡಿಯುವುದಿಲ್ಲ. ಪ್ರಕೃತಿಯಲ್ಲಿ ಶುದ್ಧ ಧಾತುವಿನ ರೂಪದ ತವರ ದೊರೆಯುವುದಿಲ್ಲ. ಆಕ್ಸೈಡ್ ರೂಪದಲ್ಲಿ ಮಾತ್ರ ಇದು ಲಭ್ಯ. ತವರವ ಮುಖ್ಯ ಅದಿರು ಕ್ಯಾಸಿಟರೈಡ್ ಆಗಿದೆ.[೪೬]

ಪ್ರಾಚೀನ ಕಾಲದಲ್ಲಿ ಗ್ರೀಕರು ತವರವನ್ನು ಹೊಲಸು ಬೆಳ್ಳಿ ಎಂದು ಕರೆದರೆ ರೋಮನ್ನರು ಅದು ಒಂದು ಬಗೆಯ ಸೀಸವೆಂದು ಭಾವಿಸಿದ್ದರು. ಬಿಹಾರದ ಗುಡ್ಡಗಾಡಿನ ಜನ ತವರವನ್ನು ಬೆಳ್ಳಿ ಎಂದು ತಿಳಿದು ತವರದ ಗಣಿಗಾರಿಕೆಯನ್ನು ವ್ಯಾಪಕವಾಗಿ ಕೈಗೊಂಡಿದ್ದನ್ನು ಅಲ್ಲಿನ ಭೂ

ಶೋಧನೆಗಳು ತಿಳಿಸುತ್ತವೆ. ಕ್ರಿ.ಶ. ೧೮೪೫ರಲ್ಲಿ ಬ್ರಿಟಿಷ್ ಭೂವಿಜ್ಞಾನಿ ಮ್ಯಾಕ್ ಕ್ಲಲ್ಯಾಂಡ್‌ರವರು ಬಿಹಾರದ ಹಜಾರಿಬಾಗ್ ಜಿಲ್ಲೆಯ ನುರಾಂಗೊ ಎಂಬ ಪ್ರದೇಶಕ್ಕೆ ಭೂಸಮೀಕ್ಷೆ ಮಾಡಲು ಹೋದಾಗ ಕೋಲ್ ಎಂಬ ಗುಡ್ಡಗಾಡಿನ ಜನ ತವರದ ನಿಕ್ಷೇಪವನ್ನು ಗಣಿ ಮಾಡುತ್ತಿದ್ದುದಾಗಿ ವರದಿ ಮಾಡಿದ್ದಾನೆ. ಅದಿರನ್ನು ಕರಗಿಸಿದಾಗ ಅದು ಬಿಳಿದ್ರವ ರೂಪಕ್ಕೆ ಬಂದುದರಿಂದ ಬೆಳ್ಳಿಯೆಂದು ಗುಡ್ಡಗಾಡಿನ ಜನ ಭ್ರಮಿಸುತ್ತಿದ್ದರು. ಪ್ರಾಚೀನ ಭಾರತದಲ್ಲಿ ಮಲಯ ಪ್ರಾಂತ್ಯವು ತವರಕ್ಕೆ ಹೆಸರಾಗಿದ್ದ ಬಗ್ಗೆ ಉಲ್ಲೇಖವಿದೆ. ಹರಪ್ಪ ಮತ್ತು ಮೊಹೆಂಜೋದಾರೋ ನಾಗರಿಕತೆಯ ಕಂಚಿನ ಪ್ರತಿಮೆಗಳ ರಸಾಯನಿಕ ವಿಶ್ಲೇಷಣೆ ಮಾಡಿದಾಗ ೦.೭ ರಿಂದ ೭.೦ವರೆಗೂ ತವರಾಂಶವಿರುವುದು ಸ್ಪಷ್ಟವಾಗಿದೆ ಎಂದ ಮೇಲೆ ತವರದ ಮಿಶ್ರಣ ಆಕಸ್ಮಿಕವಲ್ಲವೆಂಬುದು ಸ್ಪಷ್ಟವಾಗುತ್ತದೆ. ಮಂದಿರಗಳಲ್ಲಿರುವ ಘಂಟೆಗಳಲ್ಲಿ ಮಧುರ ನಿನಾದ ಬರಲೆಂದು ತಾಮ್ರದ ಜೊತೆಗೆ ಶೇ. ೨೦ರಷ್ಟು ಭಾಗ ತವರವನ್ನು ಬೆರೆಸಿರುವುದು ಎಲ್ಲೆಡೆಯೂ ಕಂಡು ಬಂದಿದೆ.[೪೭]

ಕರ್ನಾಟಕದ ಗುಲ್ಬರ್ಗ ಜಿಲ್ಲೆಯ ಮಂಗ್ಳೂರು ಪ್ರದೇಶದಲ್ಲಿ ಶಿಲಾವಯದಲ್ಲಿನ ಪೆಗ್ಮಟೈಟ್ ಅದಿರಿನಲ್ಲಿ ತವರದ ಅಂಶ ಸುಮಾರು ೧೦೦೦ppm (ದಶಲಕ್ಷದಲ್ಲಿ ೫೦೦ ರ ಭಾಗ) ಸಿಕ್ಕಿದೆ.[೪೮] ತವರದ ಯಾವುದೇ ನಿಕ್ಷೇಪಗಳಾಗಲಿ, ಅದರ ಬಳಕೆಯಾಗಲಿ ನಮ್ಮ ಪ್ರಾಚೀನರಿಗೆ ಕಂಡುಬಂದಂತೆ ತೋರುವುದಿಲ್ಲ. ಹಾಗಾಗಿ ತವರಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳಾಗಲಿ ಮತ್ತು ಪುರಾವೆಗಳಾಗಲಿ ದೊರಕಿರುವುದಿಲ್ಲ ಎಂದು ಅರಿಯಬಹುದು. ಹಾಗೇಯೆ ಹೊಸಪೇಟೆ ಪರಿಸರದಲ್ಲಿ ಸಹ ತವರ ಕುರಿತು ಮಾಹಿತಿ ದೊರೆತಿಲ್ಲ ಎಂದು ಹೇಳಬಹುದು.

೨.೭. ಕಂಚು (Bronze)

ಮಾನವನ ನಾಗರಿಕತೆಯ ವಿಕಾಸದ ಮಜಲುಗಳನ್ನು ಶಿಲಾಯುಗ, ಕಂಚುಯುಗ ಮತ್ತು ಕಬ್ಬಿಣಯುಗ ಎಂದು ಗುರುತಿಸಲಾಗಿದೆ. ಕಂಚು ಒಂದು ಮಿಶ್ರಲೋಹವಾಗಿದೆ. "ಇದು ಮೂಲತಃ ತಾಮ್ರವನ್ನು ಹೊಂದಿದ್ದು, ಇದಕ್ಕೆ ತವರವನ್ನು ಮುಖ್ಯ ಘಟಕವಾಗಿ ಸೇರಿಸಲಾಗುತ್ತದೆ. ಆದರೆ ಕೆಲವೊಮ್ಮೆ ರಂಜಕ, ಅಲ್ಯುಮಿನಿಯಂ ಅಥವಾ ಸಿಲಿಕಾನ್ ಮೊದಲಾದ ಇತರ ಲೋಹಗಳನ್ನು ಸೇರಿಸಲಾಗುತ್ತದೆ. ಇದು ಗಟ್ಟಿಯಾಗಿದ್ದು ಸುಲಭವಾಗಿ ಒಡೆಯುವುದಿಲ್ಲ"[೪೯] ಈ ಲೋಹವು ಪ್ರಾಚೀನತೆಯಲ್ಲಿ ಎಷ್ಟೊಂದು ಪ್ರತೀತಿ ಪಡೆದಿದೆ ಎಂದರೆ ಇದನ್ನು ಉಲ್ಲೇಖಿಸಿ ಕಂಚಿನಯುಗವನ್ನು ಹೆಸರಿಸಲಾಗಿದೆ.

ಕಂಚು ಪದವು ಇಟಾಲಿಯನ್ bronze ಮತ್ತು ಜರ್ಮನ್ brunst ಗೆ ಸಜಾತಿಯ ಪದವಾಗಿದೆ. ಬಹುಶಃ ಇದನ್ನು ಪರ್ಶಿಯನ್ ಪದ ಬಿರಿಂಜ್(ಕಂಚು)ನಿಂದ ಅಥವಾ ಬ್ರಿಂದಿಸಿ ನಗರದ (ಎಸ್.ಬ್ರುಂದುಸಿನಮ್ ಪ್ಲಿನ) ಲ್ಯಾಟಿನ್ ಹೆಸರಿನಿಂದ ಪಡೆದಿರಬಹುದು. ಕಂಚಿನ ಕರಗುವ ಬಿಂದು ಮಿಶ್ರಲೋಹದ ಘಟಕಗಳ ನಿಜವಾದ ಅನುಪಾತದ ಆಧಾರದಲ್ಲಿ ಬದಲಾಗುತ್ತದೆ ಹಾಗೂ ಇದು ಸುಮಾರು ೯೫೦° ಸೆ. ಆಗಿದೆ.[೫೦] "ತಾಮ್ರದ ಜೊತೆಗೆ ಮಿಶ್ರ ಲೋಹದ ತಯಾರಿಕೆಯೂ ಜೊತೆ ಜೊತೆಗೆ ಪ್ರಾರಂಭವಾಯಿತೆನ್ನಬಹುದು. ಈ ಮಿಶ್ರಲೋಹದ ಪ್ರಾರಂಭವೂ ಒಂದು ಅನಿರೀಕ್ಷಿತ

ಘಟನೆಯಿಂದ ಆಗಿರಲು ಸಾಧ್ಯ. ತಾಮ್ರದ ಅದಿರಿಗೆ ತವರದ ಅದಿರು ಯಾವುದೋ ಪ್ರಮಾದದಿಂದ ಬೆರೆತಿರಬಹುದು. ಅವುಗಳಿಂದ ಬಂದ ಲೋಹವು ತಾಮ್ರಕ್ಕಿಂತ ಗಡುಸಾಗಿತ್ತೆಂದುದು ಮಾತ್ರ ಅವರಿಗೆ ಥಟ್ಟನೆ ಹೊಳೆದಿತ್ತು. ಹೀಗೆ ಬಂದ ಲೋಹದಲ್ಲಿ ತವರದ ಅಂಶ ಕಡಿಮೆಯಾಗಿ ಸಂಯೋಜನೆಯಲ್ಲಿ ಏರು ಪೇರು ಆಗಿರಬೇಕು. ಪ್ರಾರಂಭಿಕ ಹಂತದಲ್ಲಿ ಆದ ಈ ಪ್ರಮಾದವನ್ನು ಅವರು ಬಹುಬೇಗ ಅರಿತರು. ತವರಿನ ಅದಿರಿನ ಬದಲಾಗಿ ತವರನ್ನು ನಿರ್ದಿಷ್ಟ ಪ್ರಮಾಣದಲ್ಲಿ ಉಪಯೋಗಿಸಿ ಮಿಶ್ರಲೋಹವನ್ನು ಪಡೆದರು. ಹೀಗೆ ಜನಿಸಿದ ಲೋಹವೇ ಕಂಚು".[೫೧]

ಈಜಿಪ್ಟ್‌ನ ಪಿರಮಿಡ್ಡುಗಳಲ್ಲಿ ದೊರತಿರುವ ಕಂಚಿನ ವಸ್ತುಗಳನ್ನಾಧರಿಸಿ ಆ ದೇಶದಲ್ಲಿ ಕಂಚಿನ ಬಳಕೆ ಕ್ರಿ.ಪೂ. ೩೭೦೦ ವರ್ಷಗಳ ಹಿಂದೆಯೇ ರೂಢಿಗೆ ಬಂದಿರಬಹುದೆಂದು ಅಂದಾಜು ಮಾಡಿದ್ದಾರೆ.[೫೨] ಪ್ರಾಚೀನರು ಕಂಚನ್ನು ಕೊಡಲಿ, ಕತ್ತಿ, ಚಾಕು, ಬಾಣದ ತುದಿ, ಈಟಿ ಮತ್ತು ಕುಡುಗೋಲು ಮುಂತಾದ ಆಯುಧಗಳನ್ನು ಮಾಡಲು ಹೆಚ್ಚು ಬಳಸುತ್ತಿದ್ದರು. ನೂತನ ಶಿಲಾಯುಗದ ಒಂದು ಘಟ್ಟದಿಂದ ತಾಮ್ರದ ಜೊತೆಗೆ ಕಂಚಿನ ಉಪಕರಣಗಳ ಬಳಕೆ ಆರಂಭವಾಗಿದ್ದು ಈ ಹಂತದ ಜನರ ಜೀವನದಲ್ಲಿ ಖಚಿತ ಬೆಳವಣಿಗೆ ಎಂದು ಹೇಳಬಹುದು. ಈ ಸಂಸ್ಕೃತಿಯನ್ನು ಶಿಲಾ–ತಾಮ್ರ ಸಂಸ್ಕೃತಿ ಎಂದು ಕರೆಯುತ್ತಾರೆ.[೫೩] ಪ್ರಾಚ್ಯ ಸಂಶೋಧನೆಯಿಂದ ಸಿಂಧೂ ಕಣಿವೆಯ ನಾಗರಿಕೆತೆಯಲ್ಲಿ ಬಳಸಿದ್ದ ಅನೇಕ ತಾಮ್ರ ಮತ್ತು ಕಂಚಿನ ಪದಾರ್ಥಗಳು ಬೆಳಕಿಗೆ ಬಂದಿವೆ. ವಿಶೇಷವಾಗಿ "ನೃತ್ಯ ಭಂಗಿಯಲ್ಲಿರುವ ಚಿಕ್ಕದಾದ ಬಾಲಕಿಯ ಮೂರ್ತಿ ಕಂಚಿನಂದ ಮಾಡಲಾಗಿದೆ. ಈ ಮೂರ್ತಿಯನ್ನು "ಲಾಸ್ಡ ವ್ಯಾಕ್ಸ್" ಎಂದರೆ ಕರಗಿ ಹೋದ ಮೇಣ ತಂತ್ರಜ್ಞಾನದಿಂದ ತಯಾರಿಸಲಾಗಿದೆ. ಈ ತಂತ್ರಜ್ಞಾನವನ್ನು ಸುಮೇರಿಯನ್ನರು ಕ್ರಿ.ಪೂ. ೩೦೦೦ ವರ್ಷಗಳ ಹಿಂದೆಯೇ ಅಭಿವೃದ್ಧಿ ಪಡಿಸಿದ್ದಾರೆಂದು ಪ್ರಾಚ್ಯ ಸಂಶೋದಕರು ಭಾವಿಸಿದ್ದಾರೆ. ಈಜಿಪ್ಟಿಯನ್ನರು ಕ್ರಿ.ಪೂ. ಸುಮಾರು ೨೫೦೦ ವರ್ಷಗಳ ಹಿಂದೆಯೇ ಈ ತಂತ್ರಜ್ಞಾನವನ್ನು ಸಾಧಿಸಿದ್ದರು".[೫೪]

ಕ್ರಿ.ಪೂ. ೨೦೦೦ರ ಸುಮಾರಿಗೆ ಕಂಚಿನ ಭಲ್ಲೆ, ಥಾಲು, ಫಾರೊ ಚಿಲಕತ್ತುಗಳು ಬಳಕೆಯಲ್ಲಿದ್ದವು. ಕ್ರಿ.ಪೂ. ೩೦೦೦ ಸುಮಾರಿಗೆ ಈಜಿಪ್ಟ್ ದೇಶದಲ್ಲಿ ಆಳಿಹೋದ ಫಾರೊ ಇಟೇಟಿ (Pharaoh Iteti) ಎಂಬ ಅರಸನ ಗೋರಿಯಲ್ಲಿ ಹಲವಾರು ಕಂಚಿನ ಉಪಕರಣಗಳು ದೊರತಿವೆ ಎಂದು ತಿಳಿದು ಬರುತ್ತದೆ.[೫೫]

ಭಾರತದಲ್ಲಿ ದೊರೆತ ಅಸಾಮಾನ್ಯ ವಿಗ್ರಹ ಶಿವನಟರಾಜನದು. ಇದು ಕಂಚಿನಂದ ಮಾಡಿದ್ದು ಚೋಳರ ಕಾಲಕ್ಕೆ ಸೇರಿದ್ದಾಗಿದೆ.[೫೬] ಭಾರತದಲ್ಲಿ ಕಂಚಿನಯುಗ ಕ್ರಿ.ಪೂ. ೨೦೦೦ ದಿಂದ ಕ್ರಿ.ಪೂ. ೧೫೦೦ರವರೆಗೆ ವಿಸ್ತರಿಸಿದ್ದನ್ನು ಸಿಂಧೂ ನದಿಯ ನಾಗರಿಕತೆಯ ಬಗ್ಗೆ ವಿಶೇಷ ಪರಿಶ್ರಮ ಹಾಕಿರುವ ಮಾರ್ಟಿಮರ್ ವ್ಹೀಲರ್ ಖಚಿತಪಡಿಸಿದ್ದಾರೆ. ಬಳ್ಳಾರಿ ಜಿಲ್ಲೆಯ ಕುಡಿತಿನ, ಕಪ್ಪಗಲ್ಲು, ಸಂಗನಕಲ್ಲು, ಗಾದಿಗನೂರು ಮತ್ತು ತೆಕ್ಕಲಕೋಟೆ ಪ್ರದೇಶಗಳಲ್ಲಿ ಸಂಶೋಧನೆಗೊಂಡು ಹಲವಾರು ಅಂಶಗಳು ವರದಿಯಾಗಿವೆ. ಈ ಪ್ರದೇಶಗಳಲ್ಲಿ ಕಡಿಮೆ ಪ್ರಮಾಣದಲ್ಲಿ ಕಂಡುಬಂದಿರುವ ಈ ಆಯುಧಗಳಲ್ಲಿ ತಾಮ್ರ ಅಥವಾ ಕಂಚಿನ ಚಪ್ಪಟೆ ಕೊಡಲಿ ಕೃಷ್ಣಾನದಿ ಪ್ರದೇಶದ ಕೆಲವು ನೆಲೆಗಳಲ್ಲಿ ದೊರೆತಿವೆ.

ಆದರೆ ಹೊಸಪೇಟೆ ತಾಲೂಕಿನ ಯಾವುದೇ ಪ್ರದೇಶದಲ್ಲಿ ಕಂಚಿನ ಆಯುಧಗಳು ದೊರೆತಿಲ್ಲ ಎಂದು ಹೇಳಬಹುದು.[೫೭]

೨.೭. ಹಿತ್ತಾಳೆ (Brass)

ಮಾನವನು ನಾಗರಿಕತೆಯ ವಿಕಾಸದಲ್ಲೇ ತಾಮ್ರ, ಕಂಚು ಮತ್ತು ಹಿತ್ತಾಳೆ ಹೆಚ್ಚು ವಿಶೇಷತೆಯನ್ನು ಪಡೆದುಕೊಂಡಿವೆ. ತಾಮ್ರದ ಜೊತೆ ಜೊತೆಗೆ ಕಂಚು ಮತ್ತು ಹಿತ್ತಾಳೆಯ ಮಿಶ್ರಲೋಹದ ಉತ್ಪಾದನೆ ಪ್ರಾರಂಭವಾಗಿರಬೇಕು. ಹಿತ್ತಾಳೆಯು ಹೆಚ್ಚಾಗಿ ಆಭರಣ ಮತ್ತು ಬಳಕೆ ವಸ್ತುಗಳನ್ನು ತಯಾರಿಸುವುದಕ್ಕೆ ಬಳಕೆಯಾಗಿದೆ. ಹಿತ್ತಾಳೆಯು ಒಂದು ಮಿಶ್ರಲೋಹವಾಗಿದ್ದು, ಯಾವುದೇ ಪ್ರಮಾಣದಲ್ಲಿ ತಾಮ್ರ ಮತ್ತು ಸತುಗಳನ್ನು ಸೇರಿಸಿ ತಯಾರಿಸಿದ ಮಿಶ್ರಲೋಹವಾಗಿದೆ. ಹಿತ್ತಾಳೆಯು ಒಂದು ಬದಲಿಯಾಗ ಬಹುದಾದ ಮಿಶ್ರಲೋಹವಾಗಿದೆ. ಹಿತ್ತಾಳೆಯು ಸರಿಸುಮಾರು ಚಿನ್ನ ಮತ್ತು ಸ್ವರ್ಣವನ್ನು ಹೋಲು ವಂತಹ ಮಂದಗೊಳಿಸಿದ ಹಳದಿ ಬಣ್ಣವನ್ನು ಹೊಂದಿರುತ್ತದೆ. ಹಿತ್ತಾಳೆಯು ಸಂಯೋಜನೆಯ ಮೇಲೆ ಆಧಾರಿತವಾಗಿ ಇದರ ಕರಗುವ ಬಿಂದು ೯೦೦° ರಿಂದ ೯೪೦° ಸೆ. ಆಗಿದೆ.[೫೮]

ನಮ್ಮ ಪ್ರಾಚೀನ ಲೋಹತಂತ್ರಜ್ಞರ ಇನ್ನೊಂದು ಮಹತ್ವದ ಸಾಧನೆಯೆಂದರೆ ತಾಮ್ರ ಮತ್ತು ಸತು ಬೆರೆತಿರುವ ಮಿಶ್ರಲೋಹದ ತಯಾರಿಕೆ. ಈ ಮಿಶ್ರಲೋಹವೇ ಹಿತ್ತಾಳೆ. (ಶೇ. ೧೦–೧೨ ಭಾಗ ಸತು). ಹಿತ್ತಾಳೆಯನ್ನು ಮಿಶ್ರಲೋಹವಾಗಿ ಪಡೆದವರಲ್ಲಿ ನಮ್ಮ ಪೂರ್ವಿಕರೇ ಮೊದಲಿಗರು. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಈ ಲೋಹವನ್ನು ಗುರುತಿಸಿದ್ದು ೬ ಶತಮಾನಗಳ ನಂತರವೆ.[೫೮] ಕ್ಯಾಲಿಮನ್ ಎಂಬ ಖನಿಜವನ್ನು ಬಳಸಿ ಸತು ತಯಾರಿಸಿ ತಾಮ್ರಕ್ಕೆ ಮಿಶ್ರಣ ಮಾಡಿ ಮಿಶ್ರಲೋಹವನ್ನು ಪಡೆದದ್ದು ಒಂದು ಮಹತ್ವ ಪೂರ್ಣ ಘಟನೆ. ಇದು ಲೋಹ ವಿಜ್ಞಾನದ ತಿರುವು ಎನ್ನಬಹುದು.[೫೯]

ಕ್ರಿ.ಪೂ. ೩೦೦೦ ವರ್ಷಗಳಲ್ಲಿ ತಾಮ್ರ ಮತ್ತು ಸತುಗಳನ್ನು ಬೆರೆಸಿ ಹಿತ್ತಾಳೆ ಮಿಶ್ರಲೋಹ ಪಶ್ಚಿಮ ಏಷ್ಯ ಮತ್ತು ಪೌರಸ್ತ್ಯ ಮೆಡಿಟೇರಿಯನ್ ಪ್ರದೇಶಗಳಲ್ಲಿ ಕಂಡುಬಂದಿದೆ. ಮತ್ತು ಕ್ರಿ.ಪೂ. ೩೦೦೦ ವರ್ಷಗಳ ಪೂರ್ವದಲ್ಲಿ ಪೂರ್ವಭಾರತ, ಉಜ್ಜೇಕಿಸ್ತಾನ, ಇರಾನ್, ಸಿರಿಯಾ, ಇರಾಕ್ ಹಾಗೂ ಇಸ್ರೇಲ್ ಪ್ರದೇಶಗಳಲ್ಲಿ ಕಂಡುಬಂದಿದೆ. ತಾಮ್ರ ಸತು ಮಿಶ್ರಲೋಹಗಳ ಕುರಿತು ಚೀನ ದೇಶವು ಕ್ರಿ.ಪೂ. ೫೦೦೦ ವರ್ಷಗಳ ಪೂರ್ವದಲ್ಲಿಯೇ ಮಾಹಿತಿ ಹೊಂದಿತ್ತು ಎಂದು ತಿಳಿಯುತ್ತದೆ. ಕ್ರಿ.ಪೂ. ೮ ರಿಂದ ೭ನೇ ಶತಮಾನದ ವೇಳೆಯ ಆಸ್ಸೀರಿಯದ ಶಾಸನ ಲಿಪಿಗಳುಳ್ಳ ಜೇಡಿ ಫಲಕಗಳು ಪರ್ವತ ಪ್ರದೇಶಗಳಲ್ಲಿನ ತಾಮ್ರದ ವಿಪರೀತ ಬಳಕೆಯ ಕುರಿತು ನಮೂದಿಸಿರುವುದು ಬಹುಶಃ ನೈಸರ್ಗಿಕ ಹಿತ್ತಾಳೆಯ ಬಗ್ಗೆಯಾಗಿರಬಹುದು. ಓರೆಯ್‌ಚಾಲ್ಕೂಸ್ ಈ ಪದವು ಪ್ರಾಚೀನ ಗ್ರೀಕ್ ಭಾಷಾಂತರವಾಗಿದ್ದು, ಲ್ಯಾಟಿನ್‌ನಲ್ಲಿನ 'ಚಿನ್ನ ಅಥವಾ ಸ್ವರ್ಣ ವರ್ಣದ ತಾಮ್ರ' ಬರುವಂತಹ "ಜಾರಿ ಚಾಲ್ಕಮ್" ಎಂಬ ಪದ ಬಳಕೆ ಆರಂಭವಾಗಿದ್ದುದು, ನಂತರ ಹಿತ್ತಾಳೆಗೆ ಸಮಾನಕ ಪದವೇ ಆಗಿ ಹೋಯಿತು.[೬೦]

ಕ್ರಿ.ಪೂ. ೧ನೇ ಶತಮಾನದ ವೇಳೆಗಾಗಲೇ ನಾಣ್ಯಗಳನ್ನು ಟಂಕಿಸಲು ಅಗತ್ಯ ಪ್ರಮಾಣದ ಹಿತ್ತಾಳೆಯು ಲಭ್ಯವಿರುತ್ತಿತ್ತು ಮತ್ತು ಕ್ರಿ.ಪೂ. ೨೩ರ ಅವಧಿಯ ಅಗಸ್ಟನ ನಾಣ್ಯ ಪದ್ಧತಿಯ

ಸುಧಾರಣೆಯ ನಂತರವೂ ಲಭ್ಯವಿದ್ದು, ರೋಮನ್ ನಾಣ್ಯಗಳನ್ನು ಉತ್ಪಾದಿಸಲು ಕೂಡ ಬಳಸಲಾಗುತ್ತಿತ್ತು". ಮಧ್ಯಯುಗದ ಅವಧಿಯಲ್ಲಿ ಕೂಡ ಹಿತ್ತಾಳೆಯ ಬಳಕೆಯಾಗಿದೆ.[೬೧] ಹೊಸಪೇಟೆ ತಾಲೂಕಿನ ವಿಜಯನಗರ ಅರಸರ ಕಾಲದವರೆಗೆ ಹಿತ್ತಾಳೆಯ ಕೆಲವು ಪಾತ್ರೆ ಮತ್ತು ವಿಗ್ರಹಗಳನ್ನು ಮಾಡಲು ಬಳಸಿರಬೇಕು ಎಂಬುದನ್ನು ವ್ಯಕ್ತಪಡಿಸಬಹುದು. ಆದರೆ ಹಿತ್ತಾಳೆ ಉತ್ಪಾದನೆ ಮಾಡುವ ಯಾವುದೇ ಸ್ಥಳ ಇಲ್ಲ ಎಂದು ಹೇಳಬಹುದು.

ಪ್ರಸಿದ್ಧ ಚೀನಾದ ರಾಯಭಾರಿ ಹ್ಯೂಯನತ್ಸಾಂಗ್ಸರವರು "ಬಿಹಾರದ ನಲಂದದ ಹತ್ತಿರ ಇರುವ ೨೪ ಮೀಟರ್ ಎತ್ತರದ ಹಿತ್ತಾಳೆಯ ಬುದ್ಧನ ಮೂರ್ತಿಯನ್ನು ವರ್ಣಿಸುತ್ತಾ ಇದು ೭ನೇ ಶತಮಾನದಲ್ಲಿ ತಯಾರಿಸಲಾಗಿತ್ತು. ಕಾಲಾಂತರದಲ್ಲಿ ಆ ಮೂರ್ತಿಯು ಕಣ್ಮರೆಯಾಗಿದೆ. ಕಾರಣ ಈ ಮೂರ್ತಿಯ ಕುರಿತು ಅನಂತರದಲ್ಲಿ ಉಲ್ಲೇಖವಿರುವ ಪುರಾವೆಗಳಿಲ್ಲ ಎಂದು ತಿಳಿದು ಬರುತ್ತದೆ". ಕರ್ನಾಟಕದ ಬಿಜಾಪುರದಲ್ಲಿ ಇವತ್ತಿಗೂ ವೀಕ್ಷಿಸಬಹುದಾದ ಕಂಚು ಅಥವಾ ಹಿತ್ತಾಳೆಯಿಂದ ತಯಾರಿಸಿದ "ಮಲಿಕ ಇ ಮೈದಾನ" ತೋಪು ಮೊಘಲರು ತಯಾರಿಸಿದ ಅತ್ಯಂತ ದೊಡ್ಡ ತೋಪು ಆಗಿದೆ. ಆ ಕಾಲದಲ್ಲಿ ಭಾರತೀಯರಿಗೆ ಮಿಶ್ರಲೋಹದ ಕೌಶಲ್ಯದ ಕುರಿತು ಇರುವ ಕಲೆ ಮತ್ತು ತಂತ್ರಜ್ಞಾನವನ್ನು ತಿಳಿಸುತ್ತದೆ.[೬೨]

೨.೮. ಕಬ್ಬಿಣ

ಮಾನವನ ನಾಗರಿಕತೆಯ ವಿಕಾಸದಲ್ಲಿ ಶಿಲಾ ತಾಮ್ರಯುಗ ಮತ್ತು ಕಂಚಿನಯುಗ ಮುಗಿದ ಮೇಲೆ ಬರುವುದೇ ಕಬ್ಬಿಣಯುಗ. ಮಾನವನ ಅತ್ಯಂತ ಮಹತ್ವದ ಬೆಳವಣಿಗೆಯನ್ನು ಬೃಹತ್ ಶಿಲಾಯುಗದಲ್ಲಿ ಕಾಣುತ್ತೇವೆ. ಮಾನವನು ಮೊಟ್ಟ ಮೊದಲ ಕಬ್ಬಿಣವನ್ನು ಈ ಯುಗದಲ್ಲಿ ಬಳಸಿರುವುದು ತಿಳಿದುಬರುತ್ತದೆ. ಈ ಯುಗದಲ್ಲಿ ಮಾನವನು ಶಿಲೆ ಮತ್ತು ಎಲ್ಲ ಇನ್ನಿತರ ಲೋಹಗಳ ಜೊತೆಗೆ ಕಬ್ಬಿಣವನ್ನು ಬಳಸಲು ಪ್ರಾರಂಭಿಸುತ್ತಾನೆ. ಪ್ರಪಂಚದಲ್ಲಿನ ಎಲ್ಲ ಕಡೆಯಲ್ಲೂ ಅನೇಕ ಉತ್ಖನನಗಳನ್ನು ನಡೆಸಿ ಕಬ್ಬಿಣದ ವಸ್ತುಗಳನ್ನು ಅಗೆದು ತೆಗೆದಿದ್ದಾರೆ. ಕಬ್ಬಿಣಯುಗವು ಜಗತ್ತಿನಾದ್ಯಂತ ವೇಗವಾಗಿ ಬೆಳೆಯಿತು ಎಂಬುದನ್ನು ಪುರಾತತ್ವ ಶೋಧನೆಗಳಿಂದ ತಿಳಿಯಬಹುದು. ಈ ಯುಗದಲ್ಲಿ ಕಬ್ಬಿಣದ ಆಯುಧಗಳನ್ನು ಮತ್ತು ಸಮಾಧಿಗಳ ರಚನೆಗೆ ದೊಡ್ಡ ಕಲ್ಲುಗಳನ್ನು ಬಳಸಿರುವುದರಿಂದ ಈ ಕಾಲದ ಸಂಸ್ಕೃತಿಯನ್ನು ಕಬ್ಬಿಣಯುಗ ಅಥವಾ ಬೃಹತ್ ಶಿಲಾಸಂಸ್ಕೃತಿ ಎಂದು ಕರೆಯಲಾಯಿತು. ಈ ಯುಗಕ್ಕೆ ಸಂಬಂಧಿಸಿದಂತೆ ಕಬ್ಬಿಣದ ಉತ್ಪಾದನೆಯ ಕಾಲನಿರ್ಣಯದಲ್ಲಿ ಭಿನ್ನಾಭಿಪ್ರಾಯಗಳಿವೆ.[೬೩] ಕ್ರಿ.ಪೂ. ೨೦೦೦ ದಿಂದ ಕ್ರಿ.ಪೂ. ೧೨೦೦ ವರ್ಷದ ಕಾಲಾವಧಿಯಲ್ಲಿ ಬಳಸಿದ ವಿವಿಧ ರೀತಿಯ ಕಬ್ಬಿಣದ ವಸ್ತುಗಳು ದೊರೆತಿವೆ. ಕ್ರಿ.ಪೂ. ೧೮೦೦ ರಿಂದ ೧೨೦೦ ವರ್ಷಗಳ ನಡುವಿನ ಏಷ್ಯಾ ಮೈನರ್‌ನಲ್ಲಿ ಈ ತಂತ್ರಜ್ಞಾನ ಸಾಕಷ್ಟು ಅಭಿವೃದ್ಧಿಯಾಗಿತ್ತು. ಅದು ಹಿಟೈಟ್ ಜನಾಂಗದ ಕುಲ ಕಸುಬಾಗಿ ವ್ಯಾಪಕವಾಗಿ ಹರಡಿತ್ತು. ರಾಜರಿಗೆ ಕಬ್ಬಿಣದ ಚಾಕು ಮುಂತಾದ ಆಯುಧಗಳನ್ನು ಉಡುಗೆರೊಯಾಗಿ ಕೊಡುತ್ತಿದ್ದರು.[೬೪] ಕಬ್ಬಿಣವು ಭೂಮಿಯ ಪ್ರಮಾಣದ ಶೇ.೫ ರಷ್ಟು ಭಾಗವನ್ನು ಹೊಂದಿದೆ. ಮಾನವನ ಮೊಟ್ಟ ಮೊದಲ ಕಬ್ಬಿಣದ ಬಳಕೆಯು ನೈಋತ್ಯ ಅಥವಾ ದಕ್ಷಿಣ ಮಧ್ಯ

ಏಷ್ಯದ ಕಾಕಸ್ ಪ್ರಾಂತ್ಯದಲ್ಲಿ ಕ್ರಿಪೂ. ೨೦೦೦ದಲ್ಲಿಯೇ ನಡೆದಿತ್ತು ಎಂದು ಗುರುತಿಸಲಾಗಿದೆ.[೬೫] ಭಾರತದಲ್ಲಿ ಕಬ್ಬಿಣದ ಬಳಕೆಯು ಕ್ರಿಪೂ. ೧೨೦೦ರ ಹೊತ್ತಿಗೆ ಆಗಿರುವುದಕ್ಕೆ ಸಾಕಷ್ಟು ಆಧಾರಗಳಿವೆ ಮತ್ತು ಕರ್ನಾಟಕದಲ್ಲಿ ಈ ಸಂಸ್ಕೃತಿಯು ಕ್ರಿಪೂ. ೧೦೦೦ ದಿಂದ ೩೦೦ ವರ್ಷಗಳು ಎಂದು ನಿರ್ಧರಿಸಲಾಗಿದೆ.[೬೬]

ಪ್ರಾಗೈತಿಹಾಸಿಕ ಹಿನ್ನೆಲೆ

"ಪ್ರಾಚೀನ ಮಾನವನು ಕೆಲವು ಸಲ ಚಳಿಗಾಲದಲ್ಲಿ ಬೆಂಕಿ ಹಾಕಿ ಮೈಚಳಿಯನ್ನು ಕಾಸುತ್ತಿರುವಾಗ ಆಕಸ್ಮಾತಾಗಿ ಗಾಳಿಯನ್ನು ಬೆಂಕಿಯ ಕೆಂಡದಲ್ಲಿ ಊದಿದಾಗ ಅಧಿಕ ಶಾಖದಲ್ಲಿ ಉರಿಯುತ್ತದೆ ಎಂದು ತಿಳಿದುಕೊಂಡ ಮೇಲೆ ಒಂದು ಸರಳವಾದ ಸಲಕರಣೆಗಳನ್ನು ಸೃಷ್ಟಿಸಿದ. ಇದೇ ಇಂದು ನಾವು ಕರೆಯುವ ಊದು ಕುಲುಮೆ. ಆದರೆ ಅವನ ಉಪಕರಣ ನೀರಿನಲ್ಲಿ ಬೆಳೆಯುವ ಸಸ್ಯಗಳ ಉದ್ದನೆಯ ಪೊಳ್ಳು ಕಾಂಡವಾಗಿತ್ತು. ಆ ಕಾಂಡದ ಒಂದು ತುದಿಗೆ ಮಣ್ಣನ್ನು ಬೇಯಿಸಿ ಮಾಡಿದ ಕೊಳವೆಯನ್ನು ಜೋಡಿಸುತ್ತಿದ್ದ. ಆ ಭಾಗವನ್ನು ಬೆಂಕಿಯಲ್ಲಿಟ್ಟು ಬಾಯಿಂದ ಊದುತ್ತಿದ್ದ. ಇದರಿಂದ ಕೇವಲ ಸ್ವಲ್ಪ ಪ್ರಮಾಣದ ಇದ್ದಲಿನ ಕೆಂಡವನ್ನು ಮತ್ತು ಅಧಿಕ ಶಾಖವನ್ನು ಕೊಡುವಂತೆ ಮಾಡಲು ಸಾಧ್ಯವಿತ್ತು. ಹೀಗಾಗಿ ಕ್ರಿಪೂ. ೨೦೦೦ರವರೆಗೆ ಕಬ್ಬಿಣದ ಬಳಕೆ ವ್ಯಾಪಕವಾಗಿರಲಿಲ್ಲ. ತಂದನಂತರ ಅಧಿಕ ಪ್ರಮಾಣದ ಇದ್ದಿಲನ್ನು ಬಳಸಿ ಹಚ್ಚಿನ ಶಾಖ ಪಡೆಯಲು ಆಡಿನ ಚರ್ಮ ದಿಂದ ತಯಾರಿಸಿದ ತಿದಿಯನ್ನು ಈಜಿಪ್ಟನವರು ಕಂಡು ಹಿಡಿದರು. ಅದರಿಗಾಗಿ ಕ್ರಿಪೂ. ೧೫೦೦ ವೇಳೆಗೆ ಕಬ್ಬಿಣ ಧಾರಾಳವಾಗಿ ಸಿಗುವಂತಾಯಿತು".[೬೭]

ಕ್ರಿಪೂ. ಸುಮಾರು ೧೨೦೦ರಲ್ಲಿ ಹಿಟ್ಟೈಟ್ ಜನಾಂಗದ ಕುಲಕಸುಬಾಗಿ ವ್ಯಾಪಕವಾಗಿ ಹರಡಿತ್ತು. ಆ ವೇಳೆಗಾಗಲೇ ಭಾರತದಲ್ಲೂ ಕಬ್ಬಿಣ ಲೋಹದ ತಂತ್ರಜ್ಞಾನ ಉಗಮಿಸಿರುವುದಕ್ಕೆ ಆಧಾರಗಳಿವೆ. ತಾಮ್ರ ಯುಗದಲ್ಲಿ ಬಳಸಿದ ತಂತ್ರಗಳು ಕಬ್ಬಿಣ ಉತ್ಪಾದನೆಗೆ ಮತ್ತು ಇತರ ಕ್ರಿಯೆಗಳಿಗೆ ಹೆಚ್ಚು ನೆರವಾಯಿತು ಎಂದು ಹೇಳುವುದು ಸೂಕ್ತ. ನಮ್ಮ ಪ್ರಾಚೀನರು ಸುಮಾರು ೩೦೦ ವರ್ಷಗಳ ಕಾಲ ನಿರಂತರ ಪ್ರಯೋಗಗಳನ್ನು ಮಾಡುತ್ತಲೇ ಯಶಸ್ವಿಯಾದರು ಎಂದು ತಿಳಿಯುತ್ತದೆ. ಏಕೆಂದರೆ ಕಬ್ಬಿಣವು ಸರಳ ಲೋಹವಲ್ಲ ಮತ್ತು ಕಬ್ಬಿಣವನ್ನು ಅದಿರಿನಿಂದ ಸಂಸ್ಕರಿಸುವುದು ಜಟಿಲ ಕೆಲಸವಾಗಿತ್ತು ಆದರೂ ಕೂಡ, ಪ್ರಾಚೀನ ಕಾಲದಲ್ಲಿ ಕಬ್ಬಿಣ ಲೋಹ ತಂತ್ರಜ್ಞಾನದಲ್ಲಿ ಭಾರತವು ಇತರ ದೇಶ ಗಳಿಗಿಂತ ಮುಂಚೂಣಿಯಲ್ಲಿತ್ತು ಎನ್ನುವುದಕ್ಕೆ ಅನೇಕ ಸಾಕ್ಷಿ ಮತ್ತು ಪುರಾವೆಗಳಿವೆ.[೬೮]

ಕಬ್ಬಿಣದ ಬಳಕೆಯು ಯುರೋಪ್ ರಾಷ್ಟ್ರಗಳಲ್ಲಿ ಕ್ರಿಪೂ. ೧೩೦೦ರಲ್ಲಿ ಬಂದರೆ ಚೀನಾದಲ್ಲಿ ಕ್ರಿಪೂ. ೫೦೦ರಲ್ಲಿ ಕಂಡುಬರುತ್ತದೆ. ಮತ್ತು ಕ್ರಿಪೂ. ೬೦೦ ವೇಳೆಗಾಗಲೇ ಸುಭಿಯಾ ಹಾಗೂ ದಕ್ಷಿಣ ಸಹರಾದ ಆಗ್ನೇಯ ದಿಕ್ಕಿನ ಮೂಲಕ ಈಜಿಪ್ಟ್‌ನಲ್ಲಿ ಬಳಕೆಯಾಗಿರುವುದು ತಿಳಿದುಬರುತ್ತದೆ. ನೈಜಿರಿಯಾದಲ್ಲಿ ಕ್ರಿಪೂ. ೩೦೦ ವೇಳೆಗೆ ಬೆಳಕಿಗೆ ಬಂದಿದೆ. ಪ್ರಾಚೀನ ಕಾಲದಲ್ಲಿ ಗಡುಸು ನಿವಾರಕ ಉಕ್ಕನ್ನು ಕ್ರಿಪೂ. ೧೨೦೦ರಲ್ಲಿಯೇ ಉತ್ಪಾದಿಸುತ್ತಿದ್ದರು ಎಂದು ತಿಳಿದುಬರುತ್ತದೆ.[೬೯] ಬ್ರಿಟಿಷ್ ಐಲ್ಯಾಂಡಿನ ಜರ್ಸಿ ಪ್ರದೇಶದ ರೈತನ ಹೊಲದ ಆಳದಲ್ಲಿ ಇದ್ದ ಕ್ರಿಪೂ. ೧ನೇ ಶತಮಾನದ

ನಾಣ್ಯವನ್ನು ಇತ್ತೀಚೆಗೆ ಮೂರು ಅಡಿ ಆಳದ ಮರದ ಪೊಟರೆಯಿಂದ ಅಗೆದು ತೆಗೆದಿದ್ದಾರೆ. ಪ್ರಾಚೀನ ಕಾಲದ ಕಬ್ಬಿಣದ ಗಟ್ಟಿಯ ದಕ್ಷಿಣ ಓಡಿಯದಲ್ಲಿ ಇತ್ತೀಚೆಗೆ ದೊರೆತಿದೆ. ಅದು ಕ್ರಿ.ಪೂ. ೭೦೯ ರಿಂದ ೭೮೩ರ ವರ್ಷಗಳ ನಡುವಿನದು ಎಂದು ಅರಿಜೋನ ವಿಶ್ವವಿದ್ಯಾಲಯದ ಪ್ರಯೋಗದಿಂದ ಇಂಗಾಲ ೧೪ ಕಾಲನಿರ್ಣಯ ಮೂಲಕ ತಿಳಿದುಬಂದಿದೆ.[೨೦]

"ಪುರಾತತ್ವ ಶಾಸ್ತ್ರಜ್ಞರಾದ ರಾಕೇಶ ತಿವಾರಿಯು ಇತ್ತೀಚೆಗೆ ನಡೆಸಿದ ಉತ್ಖನನದಿಂದ ಕಬ್ಬಿಣದ ಉತ್ಪಾದನೆಯು ಭಾರತದಲ್ಲಿ ಕ್ರಿ.ಪೂ. ೧೮೦೦ರ ಪೂರ್ವದಿಂದಲೇ ನಡೆಯುತ್ತಿತ್ತು ಎಂದು ವರದಿ ಮಾಡಿದ್ದಾರೆ. ಭಾರತದ ಉತ್ತರಪ್ರದೇಶದಲ್ಲಿರುವ ಮಲ್ಹಾರ್, ದಾದಪುರ, ರಾಜಾ ನಲಾ ಕಾ ತಿಲಾ ಮತ್ತು ಲಾವೂರದೇವಾ ಪ್ರದೇಶಗಳು ಕ್ರಿ.ಪೂ. ೧೮೦೦ ರಿಂದ ೧೨೦೦ರ ನಡುವೆ ಕಬ್ಬಿಣವನ್ನು ಬಳಸಿವೆ ಎಂದು ತಿಳಿಸಿದ್ದಾರೆ. ಚಕ್ರಬಾರ್ತಿಯವರ ಪ್ರಕಾರ ದೇಶದಲ್ಲಿ ೬ ಪ್ರದೇಶಗಳು ಕಬ್ಬಿಣ ಬಳಸಿದ ಕೇಂದ್ರಗಳಿವೆ ಎಂದು ಹೇಳಿದ್ದಾರೆ. ಬಲೂಚಿಸ್ತಾನ, ವಾಯುವ್ಯ ದಿಕ್ಕು, ಇಂಡೋ ಗಂಗಾ ನದಿಯ ತೀರ ಮತ್ತು ಗಂಗಾ ನದಿಯ ಮೇಲ್ಭಾಗದ ಸರೋವರ, ಪೂರ್ವಭಾರತ, ಮಾಳ್ವಾ ಮತ್ತು ಮಧ್ಯ ಭಾರತದ ಬಿರಾರ್ ಹಾಗೂ ಬೃಹತ್ ಶಿಲಾಸಂಸ್ಕೃತಿಯ ದಕ್ಷಿಣ ಭಾರತ ಎಂದು ಗುರುತಿಸಿದ್ದಾರೆ. ಪ್ರಾಚ್ಯವಸ್ತು ಸಂಶೋಧಕ ತಿವಾರಿಯವರ ಪ್ರಕಾರ ಭಾರತದ ಮಧ್ಯ ಗಂಗಾ ನದಿಯ ಬಯಲು ಪ್ರದೇಶ ಮತ್ತು ಪೂರ್ವ ವಿಂಧ್ಯಾ ಪ್ರದೇಶಗಳಲ್ಲಿ ಕ್ರಿ.ಪೂ. ೨೦೦೦ ವರ್ಷಗಳಲ್ಲಿ ಪ್ರಚಲಿತವಾಗಿ ಬಳಸುತ್ತಿದ್ದರು ಎಂದು ಹೇಳಿದ್ದಾರೆ. ಪ್ರಾಚೀನ ಕಬ್ಬಿಣ ಉತ್ಪಾದನೆಯು ಭಾರತದಲ್ಲಿ ಕ್ರಿ.ಪೂ. ೧೩೦೦ ರಿಂದ ೧೦೦೦ದಲ್ಲಿ ದಕ್ಷಿಣ ಮಧ್ಯಭಾರತದಲ್ಲಿ ನಡೆಯುತ್ತಿತ್ತು ಎಂದು ತಿಳಿದು ಬರುತ್ತದೆ".[೨೧]

ನಮ್ಮ ದೇಶದ ಹೃದಯ ಭಾಗವಾದ ದೆಹಲಿಯ ಕುತಬ್ ಮಿನಾರ್ ಒಂದು ವಿಶ್ವವಿಖ್ಯಾತ ಭವ್ಯ ಸ್ಮಾರಕ. ದೆಹಲಿಯನ್ನು ಆಳಿದ ಗುಲಾಮಿ ಸಂತತಿಯ ಪ್ರಥಮ ದೊರೆ ಕುತಬ್ ಉದ್ದೀನ್ ಐಬಿಕ್ ಈ ಸ್ಮಾರಕ ನಿರ್ಮಾಣವನ್ನು ಕ್ರಿ.ಶ. ೧೧೯೯ರಲ್ಲಿ ಕೈಗೊಂಡ. ಈ ಸ್ಮಾರಕ ಎದುರಿಗೆ ದೆಹಲಿಯ ಸ್ತಂಭ ಎಂದೇ ಹೆಸರಾದ ಕಬ್ಬಿಣದ ಕಂಬವಿದೆ. ಈ ಕಂಬಕ್ಕೆ ಕುತುಬ್ ಮಿನಾರ್‌ನಷ್ಟೆ ಪ್ರಖ್ಯಾತಿಯನ್ನು ಗಳಿಸಿದೆ. ದೆಹಲಿಯ ಕಂಬದ ಎತ್ತರ ೭.೫ ಮೀಟರ್, ತಳದಲ್ಲಿ ೦.೪೧ ಮೀಟರ ಹಾಗೂ ತುದಿಯಲ್ಲಿ ೦.೩ ಮೀ. ವ್ಯಾಸವುಳ್ಳದಾಗಿದೆ. ಸುಮಾರು ೬ ಟನ್ ತೂಕವಿದ್ದು ಇದರ ತಳ ಒಂದೂವರೆ ಮೀಟರ್ ಸುತ್ತಳತೆಯನ್ನು ಹೊಂದಿದೆ. ತುದಿ ಕಿರಿದಾಗಿದೆ. ಸುಮಾರು ೨೦೦ ಘನ ಕಬ್ಬಿಣದ ಬಳೆಗಳಿಂದ ಬೆಸುಗೆಗೊಂಡು ಈ ಕಂಬ ಕ್ರಿ.ಶ. ೪ನೇ ಶತಮಾನದಲ್ಲಿ ತಯಾರಾಯಿತೆಂದು ತಿಳಿದು ಬರುತ್ತದೆ. ಪ್ರಾಯಶಃ ಈ ಕಂಬವನ್ನು ರಚಿತವಾದ ವಿಷ್ಣುಪಾದದಲ್ಲಿ ಅಂದರೆ ಈಗಿನ ಮಥುರಾದಲ್ಲಿ ತಯಾರಿಸಿ, ಅನಂತರ ಎರಡನೆ ಅನಂಗಪಾದ ಎಂಬ ದೊರೆ ಕ್ರಿ.ಶ. ೧೦೫೦ರಲ್ಲಿ ದೆಹಲಿಗೆ ವರ್ಗಾಯಿಸಿರಬಹುದೆಂದು ಇತಿಹಾಸಕಾರರು ಅಭಿಪ್ರಾಯಪಡುತ್ತಾರೆ. ಅಂದರೆ ಮಥುರಾ ಪ್ರದೇಶದಲ್ಲಿ ಕಬ್ಬಿಣದ ತಯಾರಿಕೆಯ ತಂತ್ರಗಾರಿಕೆ ಆಗಲೇ ಬೇರೂರಿತ್ತು ಎಂದು ವ್ಯಕ್ತವಾಗುತ್ತದೆ. ಇದು ಭಾರತೀಯರ ಜ್ಞಾನವನ್ನು ಪ್ರತಿನಿಧಿಸುವುದರ ಜೊತೆಗೆ ಜಗತ್ತನ್ನೇ ಕಣ್ಣು ಕುಕ್ಕಿಸುವಂತೆ

ಮಾಡಿದೆ.[೨೨] ಈ ಸ್ಥಂಭವನ್ನು ಬೀಡು ಕಬ್ಬಿಣದಿಂದ ಮಾಡಲಾಗಿದೆ ಎಂದು Journal of Iron and steel Industries (೧೯೧೨) ಎಂಬ ಪತ್ರಿಕೆಯಲ್ಲಿ ಹ್ಯಾಡ್ ಪೀಲ್ಡ್ ಪ್ರಕಟಿಸಿದ ರಸಾಯನಿಕ ವಿಶ್ಲೇಷಣೆ ಸಾರುತ್ತದೆ. (Fe. 99.72%, C-0.008%, Si-0.046%, P-0.114%, Mn-0.00%) ಮ್ಯಾಂಗನೇಸ್ ಇಲ್ಲದೇ ಇರುವುದು ಒಂದು ವಿಶೇಷ ಮತ್ತು ಗಂಧಕದ ಪ್ರಮಾಣ ಅತ್ಯಲ್ಪವಿರುವುದರಿಂದ ಇದ್ದಲನ್ನು ಊರುವಲನ್ನಾಗಿ ಬಳಸಿರಬಹುದೆಂದು ತಿಳಿಯುತ್ತದೆ. ಹಾಗೇಯೆ 'Treatise on Chemistry' ಎಂಬ ಪುಸ್ತಕದಲ್ಲಿ ಇಂಗ್ಲೆಂಡಿನ ರೋಸ್ಕ ಮತ್ತು ಸ್ಕೊರ್ಲೆಮರ್ ರವರು (೧೯೦೭) ಹೀಗೇ ಬರೆದಿದ್ದಾರೆ. "ನಮ್ಮಲ್ಲಿರುವ ಅತಿದೊಡ್ಡ ಊಗಿ ಬಂಡಿಯನ್ನು ಸುತ್ತಿಗೆ ಉಪಯೋಗಿಸಿ ಬಡಿದು ಇಂದಿಗೂ ಸಹಿತ ನಮಗೆ ಮಾಡಲು ಅಸಾಧ್ಯವಾದ ಇಂಥ ಬೃಹತ್ ಕಬ್ಬಿಣದ ಸ್ತಂಭವನ್ನು ಕೇವಲ ಕೈಸುತ್ತಿಗೆಯಿಂದ ಬಡಿದು ೧೫೦೦ ವರ್ಷಗಳಷ್ಟು ಹಿಂದೆಯೇ ಹೇಗೆ ಮಾಡಿರಬಹುದು ಎಂಬುದು ನಮ್ಮ ಬುದ್ಧಿಗೆ ಮೀರಿದ್ದಾಗಿದೆ".[೨೩] ಕ್ರಿ.ಪೂ. ೪ನೇ ಶತಮಾನದಲ್ಲಿ ರಚಿಸಿದ ಸಮುದ್ರಗುಪ್ತನ 'ಅಲಹಾಬಾದ್ ಸ್ತಂಭ ಶಾಸನ' ಶತಮಾನಗಳು ಉರುಳಿದರೂ ತುಕ್ಕು ಹಿಡಿಯದೆ ನಿಂತಿದೆ ಎಂದರೆ ಪ್ರಾಚೀನ ಜನರ ಜ್ಞಾನವು ಒಂದು ವಿಸ್ಮಯವೇ ಸರಿ. ಮತ್ತೆ ಇಂದೂರಿನ ಬಳಿ ಧಾರ್ ಎಂಬಲ್ಲಿ ಮತ್ತೊಂದು ಪ್ರಖ್ಯಾತ ಕಬ್ಬಿಣ ಕಂಬವಿದ್ದು ಮೂಲ ಕಂಬ ಮೂರು ತುಕಡಿಗಳಾಗಿ ಮುರಿದಿದೆ. ಇದರ ಒಟ್ಟು ಉದ್ದ ೧೨೨೭ ಸೆಂ.ಮೀ. ಇದೆ. ಪ್ರಾಯಶಃ ಕ್ರಿ.ಶ. ೩೨೦ ರಿಂದ ೪೮೦ರ ಅವಧಿಯಲ್ಲಿ ಇದನ್ನು ತಯಾರಿಸಿರಬಹುದೆಂದು ಇತಿಹಾಸಕಾರರು ಊಹಿಸಿದ್ದಾರೆ. ಹಾಗೇಯೆ ಓರಿಸ್ಸಾದ ಕೋನಾರ್ಕ್ ಸೂರ್ಯ ದೇವಾಲಯದಲ್ಲಿ ೨೯ ಕಬ್ಬಿದ ತೊಲೆಗಳು ಮತ್ತು ಜಂತಿಗಳು ಇವೆ. ಈ ದೇವಾಲಯವನ್ನು ಕ್ರಿ.ಶ. ೧೩೦೦ರಲ್ಲಿ ಕಟ್ಟಲಾಗಿದೆ. ಪೂರಿಯ ಗುಂಡಿಚೋರು ದೇವಾಲಯದಲ್ಲೂ ಬೇರೆ ಬೇರೆ ಉದ್ದದ ೨೩೯ ಕಬ್ಬಿಣದ ತೊಲೆಗಳಿವೆ. ಇದು ಸಹ ಕ್ರಿ.ಶ. ೧೨ನೇ ಶತಮಾನದ ದೇವಾಲಯವಾಗಿದೆ.[೨೪]

ಈಜಿಪ್ಟ್‌ನಲ್ಲಿ ಸಮಾಧಿ ಹಾಗೂ ದೇವಾಲಯಗಳ ಕೆತ್ತನೆಗೆ ಬೇಕಾದ ಕಬ್ಬಿಣದ ಸಲಕರಣೆಗಳನ್ನು ಭಾರತದಿಂದಲೇ ತರಿಸಿಕೊಂಡು ಬಳಸಿಕೊಳ್ಳುತ್ತಿದ್ದರೆಂದು ತಿಳಿದುಬರುತ್ತದೆ. ಕ್ರಿ.ಪೂ. ೪೦೦ರಲ್ಲಿ ಅಲೆಕ್ಸಾಂಡರ್ ನಮ್ಮ ದೇಶದ ಮೇಲೆ ದಂಡೆತ್ತಿ ಬಂದಾಗ ಅವನು ಕಪ್ಪು ಕಾಣಿಕೆಯನ್ನು ಬಯಸದೇ ನಮ್ಮಲ್ಲಿದ್ದ ಉತ್ಕೃಷ್ಟ

ಕಬ್ಬಿಣವನ್ನು ಬಯಸಿದ. ಅದು ಪುರೂರವ ೩೦ ಪೌಂಡ್ (೧೩.೬೦ ಕೆ.ಗ್ರಾಂ) ಕಬ್ಬಿಣದ ಉಂಡೆಯಾಗಿತ್ತು. ಆ ಹೊತ್ತಿಗಾಗಲೇ ಭಾರತದ ಕಬ್ಬಿಣದ ಸಲಕರಣೆಗಳು ಮತ್ತು ಯುದ್ಧೋಪಕರಣಗಳು ಉತ್ಕೃಷ್ಟ ಗುಣಮಟ್ಟದ ಕಬ್ಬಿಣದಿಂದ ತಯಾರಾಗುತ್ತಿದ್ದವು ಎಂಬುದು ಸುಸ್ಪಷ್ಟ.[೨೫] ಇವೆಲ್ಲವನ್ನು ವೀಕ್ಷಿಸಿದರೆ, ಭಾರತದಲ್ಲಿರುವಂತಹ ಉತ್ಕೃಷ್ಟ ಲೋಹ ಸಂಸ್ಕೃತಿಯು ಮತ್ತೆ ಯಾವುದೇ ದೇಶದಲ್ಲಿರಲಿಲ್ಲ ಎಂದು ವ್ಯಕ್ತವಾಗುತ್ತದೆ.

ಕರ್ನಾಟಕದಲ್ಲಿ ಕಬ್ಬಿಣಯುಗದ ಕಾಲವನ್ನು ಸುಮಾರು ಕ್ರಿ.ಪೂ. ೧೦೦೦ ದಿಂದ ಕ್ರಿ.ಪೂ. ೩೦೦ ವರ್ಷಗಳು ಎಂದು ನಿರ್ಧರಿಸಲಾಗಿದೆ. ಈ ಕಾಲದಲ್ಲಿ ಪ್ರಾಚೀನರು ಆಯುಧೋಪಕರಣಗಳನ್ನು

ಇಟ್ಟು ಸಮಾಧಿ ಮಾಡುತ್ತಿದ್ದರು ಮತ್ತು ಕ್ರಿಪೂ. ೨ನೇ ಶತಮಾನದಿಂದ ಕ್ರಿ.ಶ. ೧ನೇ ಶತಮಾನದ ಮಧ್ಯ ಭಾಗದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿತ್ತು ಎಂದು ಸಹ ಗುರುತಿಸುತ್ತಾರೆ.[೭೬] ಕರ್ನಾಟಕದ ಬ್ರಹ್ಮಗಿರಿ, ಚಂದ್ರವಳ್ಳಿ, ಜಾಡಿಗನಹಳ್ಳಿ, ಟಿ.ನರಸೀಪುರ, ಹಳ್ಳೂರು (ಧಾರಾವಾಡ ಜಿಲ್ಲೆ), ಮಸ್ಕಿ, ತೀರದಳ್ಳಿ, ಹಾಲಿಂಗಳ್ಳಿ (ವಿಜಾಪುರ ಜಿಲ್ಲೆ), ಹಣ್ಣೂರು ಮತ್ತು ಕೊಪ್ಪಳಗಳು ಮಹತ್ವದ ನೆಲೆಗಳು ಎಂದು ಗುರುತಿಸಲಾಗಿದೆ. ಕ್ರಿ.ಶ. ೧೮೫೧ ರಿಂದ ಇಲ್ಲಿಯವರೆಗೆ ನಡೆದ ಉತ್ಖನನಗಳಿಂದ ಈ ನೆಲೆಗಳು ತುಂಬಾ ಮಾಹತ್ವದ್ದಾಗಿವೆ. ಮಾಡೂವ್ಸ್ ಟೇಲರ್, ಎಂ.ಹೆಚ್. ಕೃಷ್ಣ, ಮಾರ್ಟಿಮರ್ ವ್ಹೀಲರ್, ಎಂ.ಎಸ್. ನಾಗರಾಜರಾವ್, ಅ. ಸುಂದರ ಮತ್ತು ಆ. ಗೋಪಾಲರವರು ಈ ನೆಲೆಗಳಲ್ಲಿ ಕೃಷಿ ಮಾಡಿ ಮಹತ್ವದ ಅವಶೇಷಗಳನ್ನು ಪತ್ತೆ ಹಚ್ಚಿದ್ದಾರೆ ಎಂಬುದನ್ನು ಮರೆಯುವಂತಿಲ್ಲ. ಬ್ರಹ್ಮಗಿರಿಯಲ್ಲಿ ಉತ್ಖನನ ಕೈಗೊಂಡ ಮಾರ್ಟಿಮರ್ ವ್ಹೀಲರ್ ಉತ್ತರ ಭಾರತದಲ್ಲಿ ಬಳಕೆಯಲ್ಲಿರುವ ಮೊದಲೇ ದಕ್ಷಿಣ ಭಾರತದಲ್ಲಿ ಕಬ್ಬಿಣದ ಉತ್ಪಾದನೆ ನಡೆಯುತ್ತಿತ್ತೆಂದು ಹೇಳಿದ್ದಾರೆ.[೭೭] ಇದನ್ನು ನೋಡಿದರೆ ಕರ್ನಾಟಕ ಕಬ್ಬಿಣ ಬಳಕೆಯ ಕಾಲನಿರ್ಣಯದಲ್ಲಿ ಭಿನ್ನಾಭಿಪ್ರಾಯಗಳು ಕಂಡುಬರುವುದು ವ್ಯಕ್ತವಾಗುತ್ತದೆ.

ಬಳ್ಳಾರಿ ಪ್ರದೇಶಕ್ಕೆ ಅಂಟಿಕೊಂಡಂತೆ ಹೊಸಪೇಟೆ ಮತ್ತು ಸಂಡೂರು ಬೆಟ್ಟಗಳು ವಿಪುಲವಾದ ಕಬ್ಬಿಣದ ಅದಿರನ್ನು ಹೊಂದಿವೆ. ಈ ಸ್ಥಳಗಳಲ್ಲಿ ಬೃಹತ್ ಶಿಲಾಯುಗದ ಹಂತದಿಂದಲೇ ಕಬ್ಬಿಣದ ಬಳಕೆ ಆರಂಭವಾದಂತೆ ತೋರುತ್ತದೆ. ಹಿರೇಬೆಣಕಲ್ಲಿನ ಕಲ್ಗೋರಿಗಳಲ್ಲಿ ಕಂಡು ಬಂದ ಕಬ್ಬಿಣದ ಉಪಕರಣ ಮತ್ತು ಆನೆಗುಂದಿಯಲ್ಲಿ ದೊರೆತ ಕಬ್ಬಿಣದ ಕಿಟ್ಟ ಇದಕ್ಕೆ ಮತ್ತಷ್ಟು ಪ್ರೇರಣೆ ನೀಡುತ್ತದೆ. ಸಂಡೂರು ಪ್ರದೇಶದಲ್ಲಿ ಉತ್ಪಾದನೆಯಾಗುತ್ತಿದ್ದ ಕಬ್ಬಿಣ ಮತ್ತು ಅದರ ಉಪಕರಣಗಳು ಕ್ರಿ.ಶ. ೪ನೇ ಶತಮಾನದ ವೇಳೆಗೆ ದೇಶದಲ್ಲೆಲ್ಲ ಹೆಸರು ಪಡೆದಿರಬೇಕು. ಹೀಗಾಗಿ 'ಕಾರ್ತಿಕೇಯವನ ಶಸ್ತ್ರಾಸ್ತ್ರ ನಿರ್ಮಾಣ' ಕಾರ್ಯದಲ್ಲಿ ಪ್ರಮುಖವಾಗಿದ್ದು, ರಾಮಾಯಣ ಮಹಾಕಾವ್ಯದಲ್ಲಿ ಉಲ್ಲೇಖವಾದಂತೆ ತೋರುತ್ತದೆ. ಅಲ್ಲದೆ, ನಂತರದ ಕುಡಿತಿನ ಶಾಸನಗಳು ಇದಕ್ಕೆ ಪುರಾವೆ ನೀಡುತ್ತವೆ. ಕೆ.ಗೊಲ್ಲರಹಳ್ಳಿ ಮತ್ತು ನಂದಿಬಂಡೆಗಳಲ್ಲಿ ದೊರೆತ ಅವಶೇಷಗಳು ನರಂತರವಾಗಿ ಕಬ್ಬಿಣದ ಉತ್ಪಾದನೆ ನಡೆದು ಬಂದಿರುವುದನ್ನು ಸೂಚಿಸುತ್ತವೆ. ಕೆ.ಗೊಲ್ಲರಹಳ್ಳಿಯಲ್ಲಿ ಕ್ರಿ.ಶ. ೧೪ ರಿಂದ ೧೭ನೇ ಶತಮಾನ ಇಲ್ಲವೇ ಅದಕ್ಕೂ ಪೂರ್ವದಲ್ಲಿ ನಡೆದ ಕಬ್ಬಿಣದ ಉತ್ಪಾದನೆಯಿಂದ ದೊಡ್ಡ ದಿಬ್ಬವೇ ಉಂಟಾಗಿದೆ. ನಂದಿಬಂಡೆಯಲ್ಲಿ ಕಬ್ಬಿಣದ ಅದಿರನ್ನು ಕರಗಿಸಿ ಲೋಹದ ರಸವನ್ನು ಸಂಗ್ರಹಿಸುತ್ತಿದ್ದ ಬಟ್ಟಲುಗಳು ಮತ್ತು ಕುಲುಮೆ ಅವಶೇಷಗಳು ಕಂಡುಬಂದಿವೆ.[೭೮] ಹೊಸಪೇಟೆ ತಾಲೂಕಿನ ಕೆ.ಗೊಲ್ಲರಹಳ್ಳಿ, ಚಿಲಕನಹಟ್ಟಿ ಮತ್ತು ಕಮಲಾಪುರದಲ್ಲಿ ಕಾಣುವ ಕಿಟ್ಟದ ದಿಬ್ಬಗಳು ಇಂದು ಒಂದೆರಡು ಎಕರೆಯಷ್ಟು ಸ್ಥಳವನ್ನು ಅಕ್ರಮಿಸಿಕೊಡಿವೆ. ಕೆ.ಗೊಲ್ಲರಹಳ್ಳಿ ಮತ್ತು ಕಮಲಾಪುರದ ಕಾಳಮ್ಮ ದೇವಸ್ತಾನದ ಎದುರು ನೆಟ್ಟಿರುವ ಸುಮಾರು ೪.೫ ಮೀಟರ್ ಕಬ್ಬಿಣದ ಉದ್ದನೆಯ ದೀಪ ಸ್ಥಂಭವು ಕಬ್ಬಿಣದ ಉತ್ಪಾದನೆ ನಡೆಯುತ್ತ ಬಂದಿರುವುದು ಕಂಡುಬರುತ್ತದೆ.

ಪೌರಾಣಿಕ ಹಿನ್ನೆಲೆ

ಕಬ್ಬಿಣದ ಬಳಕೆಯ ಕುರಿತು ವೇದಗಳಾದ ಯಜುರ್ವೇದ ಮತ್ತು ಅಥರ್ವವೇದದಲ್ಲಿ ಅನೇಕ ವಸ್ತುಗಳನ್ನು ಮತ್ತು ಹೆಸರುಗಳನ್ನು ಹೆಸರಿಸಲಾಗಿದೆ. ಋಗ್ವೇದದಲ್ಲಿ ಬರುವ 'ಆಯಸ್' ಎಂಬ ಪದವು ಕಬ್ಬಿಣವನ್ನು ಕುರಿತದ್ದೇ ಎಂದು ತಜ್ಞರು ಭಾವಿಸಿದ್ದಾರೆ. ಚರಿತ್ರೆಕಾರ ಹೀರ್ಸ್‌ರ ಪ್ರಕಾರ ಭಾರತದ ಕಬ್ಬಿಣ ಲೋಹ ತಂತ್ರಜ್ಞಾನದ ಕುರಿತು ಅತ್ಯಂತ ಮೆಚ್ಚುಗೆಯ ಮಾತುಗಳನ್ನು ಹೇಳಿದ್ದಾನೆ. "ಭಾರತದಲ್ಲಿ ಕಬ್ಬಿಣದ ತಂತ್ರಜ್ಞಾನ ತನ್ನ ಸ್ವತಂತ್ರ ಬೆಳವಣಿಗೆಷ್ಟೇ ಅಲ್ಲ, ಪ್ರಾಚೀನತೆಯ ದೃಷ್ಟಿಯಿಂದಲೂ ಅಷ್ಟೇ ವಿಸ್ಮಯ ತರುತ್ತದೆ" ಲೋಹಗಳನ್ನು ವಿಶೇಷವಾಗಿ ಕಬ್ಬಿಣದಂತ ಲೋಹಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡಿ ಬೇರ ಬೇರೆ ರೀತಿಯಾಗಿ ವಿಭಜಿಸಿರುವುದನ್ನು ವಾಗ್ಭಟಾಚಾರ್ಯನ ರಸರತ್ನ ಸಮುಚ್ಚಯ ಗ್ರಂಥದಲ್ಲಿ ಕಾಣಬಹುದು. ಈ ರೀತಿಯ ಕಬ್ಬಿಣವನ್ನು ವರ್ಗೀಕರಣ ಮಾಡುವ ಬೆಳವಣಿಗೆ ಪಾಶ್ಚಿಮಾತ್ಯರಿಗೆ ೧೮ನೇ ಶತಮಾನದ ಕೊನೆಯಲ್ಲಿ ಸಾಧ್ಯವಾಯಿತು. ಹೆಸರಾಂತ ಲೋಹ ವಿಜ್ಞಾನಿ ಎಲ್.ಇ.ಸ್ಯಾಮುಯೆಲ್ ಅವರ ಅಭಿಪ್ರಾಯದಂತೆ ರಿಯಾಮರ್ (೧೭೨೨) ಎಂಬ ತಜ್ಞ ವರ್ಗೀಕರಣ ಮಾಡಿದರು. ಇದು ಪ್ರಾಚೀನ ಭಾರತೀಯರಿಗೆ ಕೀರ್ತಿ ಸಲ್ಲುತ್ತದೆ. ರಸರತ್ನ ಸಮುಚ್ಚಯ ಗ್ರಂಥವು ಕಬ್ಬಿಣದ ವಿವಿಧ ರೀತಿಯ ವರ್ಗೀಕರಣ ಮತ್ತು ಗುಣಲಕ್ಷಣಗಳನ್ನು ವಿವರಿಸುತ್ತದೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಕಬ್ಬಿಣದ ಅದಿರು ಸಿಂಧುವಾದ ವರ್ಣದಲ್ಲಿರುತ್ತದೆ ಎಂದು ಹೇಳಲಾಗಿದೆ.[೩೯]

ಕ್ರಿ.ಶ. ೧೧ನೇ ಶತಮಾನದ ನಂತರದ ದಿನಗಳಲ್ಲಿ ಮಾಧವಾಚಾರ್ಯನ ಸರ್ವದರ್ಶನ ಸಂಗ್ರಹದ ರಸೇಶ್ವರ ದರ್ಶನ ಅಧ್ಯಯನದಲ್ಲಿ ರಸಾಯನಶಾಸ್ತ್ರಕ್ಕೆ ಪ್ರಯೋಗದಲ್ಲಿ ಬೇಕಾಗುವ ವಸ್ತುಗಳ ಪಟ್ಟಿಯನ್ನು ಹೆಸರಿಸುವಾಗ ಎಲ್ಲ ಲೋಹಗಳಂತೆ ಕಬ್ಬಿಣದ ಲೋಹ ಮತ್ತು ಅದರ ಉಪಕರಣಗಳ ಬಗ್ಗೆ ಕೂಲಂಕಷವಾಗಿ ವಿವರಿಸಿದ್ದಾನೆ.[೪೦] ಹೀಗೆ ಕಬ್ಬಿಣದ ಬಳಕೆ ಮತ್ತು ಉತ್ಪಾದನೆ ಕುರಿತು ಪೌರಾಣಿಕವಾಗಿ ವಿಪುಲವಾದ ಮಾಹಿತಿಯನ್ನು ಪಡೆಯಬಹುದು.

ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತಗಳಲ್ಲೂ ಲೋಹಗಳ ವರ್ಣನೆ ಇದ್ದು, ಬಾಣ, ಸಲಾಕೆಗಳೆಲ್ಲವೂ ಕಬ್ಬಿಣದ್ದೇ ಎಂದು ತಿಳಿಯುತ್ತದೆ. ಕ್ರಿ.ಶ. ೧ನೇ ಶತಮಾನದಲ್ಲಿ ರಚಿತವಾಗಿದೆ ಎನ್ನಲಾದ ಚರಕ ಸಂಹಿತೆ ವೈದ್ಯಕೀಯ ಗ್ರಂಥದಲ್ಲಿ ಲೋಹ ಖನಿಜಗಳ ಬಗ್ಗೆ ವಿವರಿಸುವಾಗ ಕಬ್ಬಿಣದ ಕುರಿತು ವಿವರವಾದ ಮಾಹಿತಿಗಳಿವೆ. ೪ನೇ ಶತಮಾನದಲ್ಲಿ ರಚಿತವಾದ ಸುಶ್ರುತ ಸಂಹಿತೆ ಯಲ್ಲೂ ಕಬ್ಬಿಣ ಲೋಹದ ಬಗ್ಗೆ ಸುದೀರ್ಘ ಮಾಹಿತಿ ಇದೆ. ಸುಶ್ರುತ ಸಂಹಿತೆಯಿಂದ ಹಿಡಿದು ಕ್ರಿ.ಪೂ. ೪೦೦ ವರ್ಷದ ಹಿಂದೆಯೇ ನಮ್ಮ ಪೂರ್ವಿಕರು ಲೋಹದ ಉಪಕರಣಗಳನ್ನು ಶಸ್ತ್ರಚಿಕಿತ್ಸೆಗೆ ಬಳಸುತ್ತಿದ್ದರೆಂದು ತಿಳಿದು ಬರುತ್ತದೆ. ಚರಕ ಸಂಹಿತೆಯ ಶ್ಲೋಕದಲ್ಲಿ ವೈದ್ಯ ಶಸ್ತ್ರಕ್ರಿಯೆಯಲ್ಲಿ ಲೋಹಗಳನ್ನು ಯಾವ ರೀತಿಯಲ್ಲಿ ಬಳಸಬೇಕು ಎನ್ನುವ ಕುರಿತು ಸ್ಪಷ್ಟವಾದ ಮಾಹಿತಿ ನೀಡಿದ್ದಾರೆ ಎಂದು ತಿಳಿದು ಬರುತ್ತದೆ.[೪೧]

ಕಬ್ಬಿಣದ ಪ್ರಕಾರಗಳು

ಕಬ್ಬಿಣವನ್ನು ತಯಾರಿಸುವ ಕಲೆಯು ಪ್ರಾಚೀನ ಕಾಲದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿತ್ತು ಎಂದು ತಿಳಿದಿದ್ದೇವೆ. ಹಾಗೇಯೆ ರಸರತ್ನಸಮುಚ್ಚಯದಲ್ಲಿ ಕೂಡ ಲೋಹಗಳನ್ನು ವರ್ಗೀಕರಣ ಮಾಡಿ, ಅವುಗಳ ಹೆಸರನ್ನು ಹೆಸರಿಸಲಾಗಿದೆ.

ಮುಂಡಂ ತೀಕ್ಷ್ಣಂಚ ಕುರಿತಂಚ ತ್ರಿಪ್ರಕಾರಮಯ ಸ್ಮೃತಮ್।
ಮೃದು ಕುಂಠಂ ತ್ರಿವಿಧಂ ಮುಂಡ ಮಾಚ್ಯತೆ॥

ಖರಂ ಸಾರಂಚ ಹೃನ್ನಾಲಂ ತಾರಾಪಟ್ಟಂಚ ವಾಜಿರಮ್।
ಕಾಲ ಲೋಹಾಭಿದಾನಂಚ ಷಟ್ ವಿಧಂ ತೀಕ್ಷ್ಣ ಮುಚ್ಯತೆ॥

ಭ್ರಮಕಂ ಚುಂಬಕಂ ಚೈವ ಕರ್ಷಕಂ ದ್ರಾವಕಂ ತಥಾ।
ಏವಂ ಚತುರ್ವಿಧಂ ಕಾಂಡಂ ಕಾರಿತಂಚ ಪಂಚಮಮ್॥

ಲೋಹಗಳಲ್ಲಿ ಮೂರು ವಿಧಗಳಿವೆ. ಮುಂಡ ಲೋಹ, ತೀಕ್ಷ್ಣ ಲೋಹ ಮತ್ತು ಕಾಂತ ಲೋಹ ಆಗಿದೆ. ಮುಂಡ ಲೋಹದಲ್ಲಿ ಮೂರು ಪ್ರಕಾರಗಳು–ಮೃದು ಮುಂಡ, ಕುರಮುಂಡ ಮತ್ತು ಕಡಾರ ಮುಂಡ ಆಗಿವೆ. ತೀಕ್ಷ್ಣ ಲೋಹದಲ್ಲಿ ಆರು ಪ್ರಕಾರಗಳು–ಖರತೀಕ್ಷ್ಣ, ಸಾರತೀಕ್ಷ್ಣ, ಹೃನ್ನಾಲತೀಕ್ಷ್ಣ, ತಾರಾಮಟ್ಟತೀಕ್ಷ್ಣ, ವಾಜಿರ ತೀಕ್ಷ್ಣ ಮತ್ತು ಕಾಲಲೋಹ ತೀಕ್ಷ್ಣ. ಕಾಂತಲೋಹಗಳಲ್ಲಿ ಒಟ್ಟು ಐದು ಪ್ರಕಾರಗಳು–ಭ್ರಮಕ ಕಾಂತ, ಚುಂಬಕ ಕಾಂತ, ಕರ್ಷಕ ಕಾಂತ, ದ್ರಾವಕ ಕಾಂತ ಮತ್ತು ರೋಮ ಕಾಂತ ಆಗಿವೆ. ಮೃದುಮುಂಡ ಲೋಹ ಕಾಸಿದಾಗ ಬೇಗ ಕರಗುತ್ತದೆ ಹಾಗೂ ಪೆಟ್ಟು ಕೊಟ್ಟಾಗ ಒಡೆಯುವುದಿಲ್ಲ ಅಲ್ಲದೆ ಬಡಿದಾಗ ಕರ್ಷಕರವಾಗಿ ಹರಡಿಕೊಳ್ಳುತ್ತದೆ. ಆಧುನಿಕ ಪರಿಭಾಷೆಯಲ್ಲಿ ಮೃದು ಮುಂಡಲೋಹವನ್ನು 'ಗ್ರೇ ಐರನ್' ಅಥವಾ ಎರಕ ಹೊಯ್ದ ಮೃದು ಕಬ್ಬಿಣವೆನ್ನಬಹುದು. ಈ ಲೋಹವು ಕನಿಷ್ಠ ಉಷ್ಣತೆಯಲ್ಲಿ ಕರಗುತ್ತದೆ. ಕುರಮುಂಡಲೋಹ ಸುತ್ತಿಗೆಯಿಂದ ಹೊಡೆದಾಗ ಭಂಗುರವಾಗುವುದು. ಕಡಾರಮುಂಡ ಲೋಹವು ಒಡೆದ ಚೂರು ಕೃಷ್ಣವರ್ಣವಾಗಿರುತ್ತದೆ. ಕುರಮುಂಡ ಲೋಹ 'ಮಾಟಲ್ಡ್ ಐರನ್ ಅಥವಾ ಬಣ್ಣಬಣ್ಣದ ಎರಕ ಹೊಯ್ದ ಕಬ್ಬಿಣವಾಗಿದೆ. ಕಡಾರ ಕಬ್ಬಿಣವನ್ನು ವೈಟ್ ಕಾಸ್ಟ್ ಐರನ್ ಅಥವಾ ಹೊಯ್ದ ಬಿಳಿಕಬ್ಬಿಣವೆಂದು ವರ್ಗೀಕರಿಸಬಹುದು. ಖರತೀಕ್ಷ್ಣ ಲೋಹದ ಅಲಗು ಹರಿತವಾಗಿದ್ದು ಬಗ್ಗಿಸಿದರೆ ಮುರಿಯುವುದಿಲ್ಲ ಮತ್ತು ತುಂಡಾದ ಭಾಗವು ಬಿಳುಪಾಗಿ ಹೊಳೆಯುತ್ತದೆ. ಸಾರತೀಕ್ಷ್ಣ ಲೋಹವು ಬಲಪ್ರಯೋಗ ಮಾಡಿದಾಗ ನಾರಿನಂತಹ ರಚನೆಯುಳ್ಳದ್ದು ಆಗಿರುತ್ತದೆ. ಹೃನ್ನಾಲ ತೀಕ್ಷ್ಣ ಲೋಹವು ಗಡುಸಾಗಿದ್ದು ತಿಳಿಗಪ್ಪು ಬಣ್ಣದ, ಒಡೆದ ಭಾಗ ಔಡಲ ಜೀಜದಂತೆ ಕಾಣುವ ನಾರಿನಂತಹ ರಚನೆ ಕಂಡು ಬರುತ್ತದೆ. ವಾಜೀರ ತೀಕ್ಷ್ಣ ಲೋಹವು ಉಷ್ಣ ಸಂಸ್ಕರಣೆಗೆ ಯೋಗ್ಯವಾದ ಮತ್ತು ಉಷ್ಣಸಂಸ್ಕರಣೆಯ ನಂತರ ಶ್ಯಾಮಲ ವರ್ಣ ತಳೆಯುವ ಹರಿತವಾದ ಮೊನೆಯುಳ್ಳದ್ದಾಗಿರುತ್ತದೆ. ಕಾಲ ಲೋಹ ತೀಕ್ಷ್ಣವು ಲೋಹದ ಆಘಾತದಿಂದ ಒಡೆಯದ ಮತ್ತು ಉಷ್ಣ ಸಂಸ್ಕರಣೆಯ ನಂತರ ನೀಲವರ್ಣ ತಳೆಯುವ ಕಾಂತಿಯುತವಾದದ್ದು ಆಗಿದೆ. ಕಾಂತಲೋಹವನ್ನು ಮೃದುಕಾಂತತ್ವ

ಲೋಹ(ಮ್ಯಾಗ್ನಾಟಿಕಲ್ ಸಾಫ್ಟ್) ಎಂದು ಹೆಸರು. ತೀಕ್ಷ್ಣ ಲೋಹ ವೆಂದರೆ ಹೆಚ್ಚಿನ ಗಟ್ಟಿನ ಇಂಗಾಸಜ ಅಂಶವಿರುವ ಉಕ್ಕು (ಹೈ ಕಾರ್ಬನ್ ಸ್ಟೀಲ್) ಎಂದೂ ಕರೆಯುತ್ತಾರೆ. ಮೃದು ಕಟಾರ ಕುಂಡಗಳನ್ನು ಎರಕ ಹೊಯ್ದ ಕಬ್ಬಿಣವೆಂದೂ (ಕಾಸ್ಟ್ ಎರನ್) ಈಗ ನಾವು ಗುರುತಿಸಬಹುದು.[೮೨]

ವಿವಿಧ ಕಾಂತಲೋಹ ಗುಣಗಳನ್ನು ರಸರತ್ನಸಮುಚ್ಚಯ ಹೀಗೆ ಪ್ರತಿಪಾದಿಸುತ್ತದೆ.

ಭ್ರಾಮಯೇಲ್ಲೋ ಹಜಾತಂ ಯಾತ್ತತ್ಕಾಂತಂ ಭ್ರಾಮಕಂ ಮತಮ್।
ಚುಂಬಯೋ ಚ್ಚುಂಬಕಂ ಕಾಂತ ಕರ್ಷಯೋತ್ಕರ್ಷಕಂ ತಥಾ॥

ಸಾಕ್ಷಾದ್ಯವಯೋಲ್ಲೋಹಂ ತತ್ಕಾಂತಂ ದ್ರಾವಕಂ ಮತಮ್।
ತದ್ರೋಮಕಾತಂ ಸ್ಫುಟಿತಾದ್ಯತೋ ರೋಮೋದ್ಗಮೋ ಭವೇತ್॥

ಚತುಷ್ಪಂಚ ಮುಖಂ ಶ್ರೇಷ್ಟ ಮುತ್ತಮಮ್ ಸರ್ವತೋಮುಖಮ್।
ಭ್ರಾಮಕಂ ಚುಂಬಕಂ ಚೈವ ವ್ಯಾಧಿನಾಶೇ ಪ್ರಶಸ್ಯತೇ॥

ಯಾವ ಕಾಂತ ಲೋಹವು ಅದರ ಹತ್ತಿರಕ್ಕೆ ತಂದ ಲೋಹದ ಚೂರುಗಳಲ್ಲಿ ಅಲ್ಪಸ್ವಲ್ಪ ಚಂಚಲತೆಯನ್ನುಂಟು ಮಾಡಿ, ತಿರುಗಿಸುವುದೋ ಅದಕ್ಕೆ ಭ್ರಾಮಕ ಕಾಂತ ಲೋಹವೆಂದೂ ಹೆಸರು. ಚುಂಬಕ ಕಾಂತ ಲೋಹದ ಹತ್ತಿರಕ್ಕೆ ಬಂದ ಚಿಕ್ಕ ಲೋಹ ಚೂರ್ಣಗಳು ಅದಕ್ಕೆ ಅಂಟಿ ಕೊಳ್ಳುವವು. ಕರ್ಷಕ ಕಾಂತಲೋಹವು ಲೋಹ ಚೂರ್ಣಗಳನ್ನು ತಳೆಯುತ್ತದೆ. ದ್ರಾವಕ ಕಾಂತ ಲೋಹವು ದೂರದಿಂದಲೇ ಲೋಹ ಚೂರ್ಣಗಳನ್ನು ತನ್ನೆಡೆಗೆ ಸೆಳೆದುಕೊಳ್ಳುತ್ತದೆ. (ಅಥವಾ ದೂರ ಓಡಿಸುತ್ತದೆ). ರೋಮಕಾಂತ ಲೋಹವು ಒಡೆಯುವುದರಿಂದ ಅದರ ಚಿಕ್ಕ ಚಿಕ್ಕ ಕಣಗಳು ರೋಮದಂತೆ ಎದ್ದು ನಿಲ್ಲುತ್ತವೆ. ಯಾವ ಕಾಂತ ಲೋಹವು ನಾಲ್ಕು ಅಥವಾ ಐದು ಮುಖಗಳು ಹೊಂದಿರುವುದೋ ಅದು ಶ್ರೇಷ್ಟವಾಗಿರುತ್ತದೆ. ಎಲ್ಲ ದಿಶೆಗಳಲ್ಲಿಯೂ ಮುಖಗಳುಳ್ಳ ಕಾಂತಲೋಹವು ಅತ್ಯಂತ ಉತ್ತಮವಾಗಿದೆ. ಭ್ರಾಮಕ ಮತ್ತು ಚುಂಬಕ ಕಾಂತ ಲೋಹಗಳು ವ್ಯಾಧಿ ನಾಶಮಾಡುವುದರಲ್ಲೂ ಸಮರ್ಥವಾಗಿವೆ.[೮೩] ಹೀಗೆ ಕಬ್ಬಿಣ ಲೋಹದ ಕುರಿತು ಪೌರಾಣಿಕ ಹಿನ್ನಲೆಯಲ್ಲಿ ಗುರುತಿಸಬಹುದಾಗಿದೆ.

ಅಡಿಟಿಪ್ಪಣಿಗಳು

೧. ಸರ್ವೋತ್ತಮ ಅಂಬೇಕರ್, ಸಂಕ್ಷಿಪ್ತ ರಸಾಯನ ವಿಜ್ಞಾನ ಚರಿತ್ರೆ, ಪು.೧

೨. ವೆಂಕಟೇಶಮೂರ್ತಿ ಎಸ್., ರಸಾಯನ ಶಾಸ್ತ್ರ, ಪು.೮೧

೩. ನಾಗೇಶರಾವ್ ಕೆ. ಮತ್ತು ಅನಂತರಾಮು ಟಿ.ಆರ್., ಪ್ರಾಚೀನ ಭಾರತದಲ್ಲಿ ಲೋಹ ತಂತ್ರಜ್ಞಾನ, ಪು.೨-೩

೪. ಸರ್ವೋತ್ತಮ ಅಂಬೇಕರ್, ಪೂರ್ವೋಕ್ತ, ಪು.೩

೫. ಅದೇ, ಪು.೧೬

೬. ನಾಗೇಶರಾವ್ ಕೆ. ಮತ್ತು ಅನಂತರಾಮು ಟಿ.ಆರ್., ಪೂರ್ವೋಕ್ತ, ಪು.೧೯

೭. ವಾಸುದೇವ ಬಡಿಗೇರ, ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ ಭಾಗ–೧, ಪು.೯

8. http://en.wikipedia.org/wiki/copper

೯. ನಾಗೇಶರಾವ್ ಕೆ. ಮತ್ತು ಅನಂತರಾಮು ಟಿ.ಆರ್., ಪೂರ್ವೋಕ್ತ, ಪು.೨೧

10. http://en.wikipedia.org/wiki/copper

೧೧. ಸರ್ವೋತ್ತಮ ಅಂಬೇಕರ್, ಪೂರ್ವೋಕ್ತ, ಪು.೩

೧೨. ನಾಗೇಶರಾವ್ ಕೆ. ಮತ್ತು ಅನಂತರಾಮು ಟಿ.ಆರ್., ಪೂರ್ವೋಕ್ತ, ಪು.೧೯

೧೩. ವಾಸುದೇವ ಬಡಿಗೇರ, ಪೂರ್ವೋಕ್ತ, ಪು.೯

೧೪. ನಾಗೇಶರಾವ್ ಕೆ. ಮತ್ತು ಅನಂತರಾಮು ಟಿ.ಆರ್., ಪೂರ್ವೋಕ್ತ, ಪು.೨೦

೧೫. ಅದೇ, ಪು.೨೫–೨೬

೧೬. ವಾಸುದೇವ ಬಡಿಗೇರ, ಪೂರ್ವೋಕ್ತ, ಪು.೧೦

೧೭. ರಾಧಾಕೃಷ್ಣ ಬಿ.ಪಿ., ಕರ್ನಾಟಕದ ಖನಿಜ ಸಂಪತ್ತು, ಪು.೨೩೪

೧೮. ಮಹದೇವ ಸಿ., ಸುಬ್ಬಣ್ಣ ರೈ ಮತ್ತು ಮಾಧವ ಪೆರಾಜೆ, ಹೊಸಪೇಟೆ ತಾಲೂಕು ದರ್ಶನ, ಪು.೯

೧೯. ವಾಸುದೇವ ಬಡಿಗೇರ, ಪೂರ್ವೋಕ್ತ, ಪು.೮

೨೦. ನಾಗೇಶರಾವ್ ಕೆ. ಮತ್ತು ಅನಂತರಾಮು ಟಿ.ಆರ್., ಪೂರ್ವೋಕ್ತ, ಪು.೨೫–೨೬

೨೧. ಅದೇ, ಪು.೧

೨೨. ಎಲೆನ್. ಡಬ್ಲ್ಯೂ, ಕ್ರ್ಯಾಂಬ್, ಸಂಕ್ಷಿಪ್ತ ಲೋಹಗಳ ಚರಿತ್ರೆ.

23. http//en.wikipedia.org.wiki/gold

೨೪. ನಾಗೇಶರಾವ್ ಕೆ. ಮತ್ತು ಅನಂತರಾಮು ಟಿ.ಆರ್., ಪೂರ್ವೋಕ್ತ, ಪು.೨

೨೫. ಅದೇ, ಪು.೨

೨೬. ರಾಧಾಕೃಷ್ಣ ಬಿ.ಪಿ., ಪೂರ್ವೋಕ್ತ, ಪು.೧೫೩

೨೭. ನಾಗೇಶರಾವ್ ಕೆ. ಮತ್ತು ಅನಂತರಾಮು ಟಿ.ಆರ್., ಪೂರ್ವೋಕ್ತ, ಪು.೪

೨೮. ಅದೇ, ಪು.೫

೨೯. ವಾಸುದೇವ ಬಡಿಗೇರ, ಪೂರ್ವೋಕ್ತ, ಪು.೪

೩೦. ಮಹದೇವ ಸಿ., ಸುಬ್ಬಣ್ಣ ರೈ ಮತ್ತು ಮಾಧವ ಪೆರಾಜೆ, ಪೂರ್ವೋಕ್ತ, ಪು.೯

೩೧. ನಾಗೇಶರಾವ್ ಕೆ. ಮತ್ತು ಅನಂತರಾಮು ಟಿ.ಆರ್., ಪೂರ್ವೋಕ್ತ, ಪು.೫

೩೨. ಅದೇ, ಪು.೧೧

33. http://en.wikipedia.org/wiki/lead

೩೪. ನಾಗೇಶರಾವ್ ಕೆ. ಮತ್ತು ಅನಂತರಾಮು ಟಿ.ಆರ್., ಪೂರ್ವೋಕ್ತ, ಪು.೧೩-೧೪

35. http://en.wikipedia.org/wiki/load

೩೬. ಅದೇ,

೩೭. ರಾಧಾಕೃಷ್ಣ ಬಿ.ಪಿ., ಪೂರ್ವೋಕ್ತ, ಪು.೩೪೬

೩೮. ನಾಗೇಶರಾವ್ ಕೆ. ಮತ್ತು ಅನಂತರಾಮು ಟಿ.ಆರ್., ಪೂರ್ವೋಕ್ತ, ಪು.೧೫

39. http://en.wikipedia.org/wiki/silver

೪೦. ರಾಧಾಕೃಷ್ಣ ಬಿ.ಪಿ., ಪೂರ್ವೋಕ್ತ, ಪು.೧೫೩

೪೧. ನಾಗೇಶರಾವ್ ಕೆ. ಮತ್ತು ಅನಂತರಾಮು ಟಿ.ಆರ್., ಪೂರ್ವೋಕ್ತ, ಪು.೧೪-೧೫

೪೨. ಅದೇ, ಪು.೧೬

43. http://en.wikipedia.org/wiki/silver

೪೪. ನಾಗೇಶರಾವ್ ಕೆ. ಮತ್ತು ಅನಂತರಾಮು ಟಿ.ಆರ್, ಪೂರ್ವೋಕ್ತ, ಪು.೧೪-೧೬

45. http://en.wikipedia.org/wiki/Tin

೪೬. ನಾಗೇಶರಾವ್ ಕೆ. ಮತ್ತು ಅನಂತರಾಮು ಟಿ.ಆರ್., ಪೂರ್ವೋಕ್ತ, ಪು.೨೮-೨೯

೪೭. ಅದೇ, ಪು.೨೭-೩೦

೪೮. ರಾಧಾಕೃಷ್ಣ ಬಿ.ಪಿ., ಪೂರ್ವೋಕ್ತ, ಪು.೨೧೪

49. http://en.wikipedia.org/wiki/Bronze

೫೦. ಅದೇ

೫೧. ನಾಗೇಶರಾವ್ ಕೆ. ಮತ್ತು ಅನಂತರಾಮು ಟಿ.ಆರ್., ಪೂರ್ವೋಕ್ತ, ಪು.೨೧

೫೨. ಅದೇ, ಪು.೧೯

೫೩. ವಾಸುದೇವ ಬಡಿಗೇರ, ಪೂರ್ವೋಕ್ತ, ಪು.೯

೫೪. ನಾಗೇಶರಾವ್ ಕೆ. ಮತ್ತು ಅನಂತರಾಮು ಟಿ.ಆರ್., ಪೂರ್ವೋಕ್ತ, ಪು.೨೨-೨೬

೫೫. ಸರ್ವೋತ್ತಮ ಅಂಬೇಕರ್, ಪೂರ್ವೋಕ್ತ, ಪು.೩

೫೬. ನಾಗೇಶರಾವ್ ಕೆ. ಮತ್ತು ಅನಂತರಾಮು ಟಿ.ಆರ್., ಪೂರ್ವೋಕ್ತ, ಪು.೨೨-೨೬

೫೭. ವಾಸುದೇವ ಬಡಿಗೇರ, ಪೂರ್ವೋಕ್ತ, ಪು.೯

58. http://en.wikipedia.org/wiki/Brass

೫೯. ಅದೇ

೬೦. ಅದೇ

೬೧. ಅದೇ

೬೨. ಸರ್ವೋತ್ತಮ ಅಂಬೇಕರ್, ಪೂರ್ವೋಕ್ತ, ಪು.೨೪

೬೩. ವಾಸುದೇವ ಬಡಿಗೇರ, ಪೂರ್ವೋಕ್ತ, ಪು.೧೪

೬೪. ನಾಗೇಶರಾವ್ ಕೆ. ಮತ್ತು ಅನಂತರಾಮು ಟಿ.ಆರ್., ಪೂರ್ವೋಕ್ತ, ಪು.೪೧

೬೫. ಸ್ಪೂರ್ಲ ಮತ್ತು ಜೊಸೆಫ್ ಎಸ್., ಸಂಕ್ಷಿಪ್ತ ಕಬ್ಬಿಣ ಚರಿತ್ರೆ ಮತ್ತು ಉಕ್ಕು ಉತ್ಪಾದನೆ,

೬೬. ಮಹದೇವ ಸಿ., ಸುಬ್ಬಣ್ಣ ರೈ ಮತ್ತು ಮಾಧವ ಪೆರಾಜೆ, ಪೂರ್ವೋಕ್ತ, ಪು.೧೦

೬೭. ಸರ್ವೋತ್ತಮ ಅಂಬೇಕರ್, ಪೂರ್ವೋಕ್ತ, ಪು.೪

೬೮. ನಾಗೇಶರಾವ್ ಕೆ. ಮತ್ತು ಅನಂತರಾಮು ಟಿ.ಆರ್., ಪೂರ್ವೋಕ್ತ, ಪು.೪೧–೪೨

69. http://weber.ucsd.edu/-dkjordan/arch/metallurgy/html/iron

70. http://www.archealogyheld work.com/forums/viewtopic

71. Tiwari, R., The Origins of Iron-Working in India: New Evidence From the Central Ganga Plain and the Eastern Vindhyas, Antiquity 77 (2003): Page. 536–545

72. Balasubramaniam, R., Delhi Iron Pillar – New Insights

೭೩. ಸರ್ವೋತ್ತಮ ಅಂಬೇಕರ, ಪೂರ್ವೋಕ್ತ, ಪು.೨೩

೭೪. ನಾಗೇಶರಾವ್ ಕೆ. ಮತ್ತು ಅನಂತರಾಮು ಟಿ.ಆರ್., ಪೂರ್ವೋಕ್ತ, ಪು.೪೪

೭೫. ಅದೇ, ಪು.೪೫

೭೬. ಮಹದೇವ ಸಿ., ಸುಬ್ಬಣ್ಣ ರೈ ಮತ್ತು ಮಾಧವ ಪೆರಾಜೆ, ಪೂರ್ವೋಕ್ತ, ಪು.೧೦–೧೧

೭೭. ವಾಸುದೇವ ಬಡಿಗೇರ, ಪೂರ್ವೋಕ್ತ, ಪು.೧೪

೭೮. ಅದೇ, ಪು.೧೪

೭೯. ನಾಗೇಶರಾವ್ ಕೆ. ಮತ್ತು ಅನಂತರಾಮು ಟಿ.ಆರ್., ಪೂರ್ವೋಕ್ತ, ಪು.೪೫

೮೦. ರಾಮಕೃಷ್ಣ ಜಿ., ಭಾರತೀಯ ವಿಜ್ಞಾನದ ಹಾದಿ, ಪು.೨೦೮–೨೦೯

೮೧. ನಾಗೇಶರಾವ್ ಕೆ. ಮತ್ತು ಅನಂತರಾಮು ಟಿ.ಆರ್., ಪೂರ್ವೋಕ್ತ, ಪು.೩

೮೨. ಅದೇ, ಪು.೪೬–೪೭

೮೩. ಅದೇ, ಪು.೪೭

ಅಧ್ಯಾಯ ೩

ಹೊಸಪೇಟೆ ಪರಿಸರದ ಕಬ್ಬಿಣದ ಕುಲುಮೆಗಳು

ಭೌಗೋಳಿಕ ಲಕ್ಷಣ

ಖನಿಜ ಸಂಪತ್ತು

ಕುಲುಮೆಗಳ ಹುಟ್ಟು ಮತ್ತು ವಿಕಾಸ

ಪ್ರಾಚೀನ ಕುಲುಮೆಗಳ ರಚನೆ ಮತ್ತು ವಿನ್ಯಾಸ

ಪ್ರಾಚೀನ ಕುಲುಮೆಯ ಸ್ವರೂಪ

ಪ್ರಾಚೀನ ಕುಲುಮೆಯಿಂದ ಕಬ್ಬಿಣ ಪಡೆಯುವ ವಿಧಾನ

ಪ್ರಾಚೀನ ಕಾಲದ ಕಬ್ಬಿಣದ ಉತ್ಪಾದನೆಗೆ ಬಳಸುವ ಸಾಮಾಗ್ರಿಗಳು

೩.೧. ವಿಶ್ವಕರ್ಮರ ಕಬ್ಬಿಣದ ಕುಲುಮೆಗಳು

೩.೨. ಬಯಲುಗಮ್ಮಾರರ ಕಬ್ಬಿಣದ ಕುಲುಮೆಗಳು

೩.೩. ಘಿಸಾಡಿಯರ ಕಬ್ಬಿಣದ ಕುಲುಮೆಗಳು

೩.೪. ಮುಸ್ಲಿಂರ ಕಬ್ಬಿಣದ ಕುಲುಮೆಗಳು

೩.೫. ಬೇಡ ನಾಯಕಯರ ಕಬ್ಬಿಣದ ಕುಲುಮೆಗಳು

೩.೬. ಹರಿಜನರ ಕಬ್ಬಿಣದ ಕುಲುಮೆಗಳು

೩.೭. ಬಂಜಾರ (ಲಂಬಾಣಿ)ರ ಕಬ್ಬಿಣದ ಕುಲುಮೆಗಳು

೩.೮. ಗೊಲ್ಲ (ಯಾದವ)ರ ಕಬ್ಬಿಣದ ಕುಲುಮೆಗಳು

ಅಧ್ಯಾಯ ಮೂರು

ಹೊಸಪೇಟೆ ಪರಿಸರದ ಕಬ್ಬಿಣದ ಕುಲುಮೆಗಳು

ಪೀಠಿಕೆ

ಹೊಸಪೇಟೆ ಪ್ರದೇಶವು ಪ್ರಾಗೈತಿಹಾಸಿಕ ಕಾಲದಿಂದಲೂ ಜನವಸತಿ ಇರುವ ಸ್ಥಳವಾಗಿದೆ. ತಾಲೂಕಿನಲ್ಲಿರುವ ಗಾದಿಗನೂರು ಮತ್ತು ಕುರೆಕುಪ್ಪ ಸ್ಥಳಗಳಲ್ಲಿ ಹಳೆಶಿಲಾಯುಗದ ಶಿಲೆಗಳಿಂದ ಮಾಡಿದ ಕೆಲ ಆಯುಧಗಳು ಮತ್ತು ಕಮಲಾಪುರದ ಕೆರೆಗೆ ಹರಿದು ಬರುವ ಹಳ್ಳದಲ್ಲೂ ಹಳೆಶಿಲಾಯುಗಕ್ಕೆ ಸೇರಿದ ಅವಶೇಷಗಳನ್ನು ಗುರುತಿಸಲಾಗಿದೆ. ಹಂಪೆಯ ಕೆಲ ನಿವೇಶನಗಳಲ್ಲಿ ಚಕ್ಕೆಕಲ್ಲಿನ ಆಯುಧಗಳು ದೊರೆತಿದ್ದು ಇವು ಪ್ರಾಗೈತಿಹಾಸಿಕ ಕಾಲದ ಆಯುಧಗಳಾಗಿವೆ ಮತ್ತು ಕೆಲವು ಇತಿಹಾಸಕಾಲಿನ ಸೇರಿದವು. ಅದೇ ರೀತಿ ಹಂಪೆಯ ಸುತ್ತಮುತ್ತ ಸೂಕ್ಷ್ಮಶಿಲಾಯಗದ ಕೆಲ ಅವಶೇಷಗಳು ದೊರೆಕಿದ್ದು ಈ ಸಂಸ್ಕೃತಿಯ ಕಾಲವು ಕ್ರಿ.ಪೂ. ೧೨೦೦೦ ರಿಂದ ಕ್ರಿ.ಪೂ. ೮೦೦೦ ವರ್ಷಗಳು ಎಂದು ನಿರ್ಧರಿಸಲಾಗಿದೆ. ಮತ್ತೆ ಇದೇ ಹಂಪೆಯ ಭಾಗದಲ್ಲಿ ನವಶಿಲಾಯುಗಕ್ಕೆ ಸೇರಿದ ಶಿಲಾಯುಧಗಳು ದೊರಕಿದೆ. ಹೊಸಪೇಟೆ ಪ್ರದೇಶದಲ್ಲಿ ನವಶಿಲಾಯುಗ ಕಾಲಕ್ಕೆ ಜನರು ಹೆಚ್ಚಾಗಿ ವಾಸಿಸುತ್ತಿದ್ದರು ಎಂದು ತಿಳಿದುಬಂದಿದೆ. ಬ್ರೂಸಫುಟನು ತಾಲೂಕಿನ ಗಾದಿಗನೂರು ಬೆಟ್ಟ ಪ್ರದೇಶದಲ್ಲಿ ನಯಮಾಡಿದ ಉಳಿಯಂತಹ ಶಿಲಾಯುಧಗಳು, ಮಡಿಕೆ ಚೂರುಗಳು ಹಾಗೂ ಕುಲುಮೆಯಲ್ಲಿ ಕರಗದೆ ಇರುವ ಕಿಟ್ಟವನ್ನು ಪತ್ತೆ ಹಚ್ಚಿ ಇದೊಂದು ನವಶಿಲಾಯುಗದ ನೆಲೆ ಎಂದು ಗುರುತಿಸಿದ್ದಾನೆ.[೧] ತಾಲೂಕಿನ ನಂಬಾಪುರ ಹತ್ತಿರ ನವಶಿಲಾಯುಗದ ಬೂದಿದಿಬ್ಬವು ದೊರೆತಿರುವುಧನ್ನು ಗಮನಸಬಹುದು. ನವಶಿಲಾಯುಗದ ಕಾಲವನ್ನು ಕ್ರಿ.ಪೂ. ೨೫೦೦೦ ರಿಂದ ೧೦೦೦ ವರ್ಷಗಳು ಎಂದು ನಿರ್ಧರಿಸಲಾಗಿದೆ. ಬೃಹತ್ ಶಿಲಾಯುಗ ಅಥವಾ ಕಬ್ಬಿಣಯುಗದ ಅವಶೇಷಗಳು ತಾಲೂಕಿನ್ಯಾದಂತ ಕಂಡುಬಂದಿದೆ. ಕೊಂಡನಾಯಕನ ಹಳ್ಳಿಯಲ್ಲಿ ಬೃಹತ್ ಶಿಲಾಗೋರಿ ದೊರೆಕಿದೆ. ಈ ಸಂಸ್ಕೃತಿಯ ಕಾಲವನ್ನು ಕ್ರಿ.ಪೂ. ೧೦೦೦ ರಿಂದ ಕ್ರಿ.ಪೂ. ೩೦೦ ವರ್ಷಗಳು ಎಂದು ನಿರ್ಧರಿಸಲಾಗಿದೆ. ನಂತರ ಇತಿಹಾಸ ಕಾಲದ ಹಲವಾರು ಮನಮೋಹಕ ವಾಸ್ತುಶಿಲ್ಪದಿಂದ

ಕೂಡಿದ ಸ್ಥಳಗಳನ್ನು ತಾಲೂಕಿನಲ್ಲಿ ಕಾಣಬಹುದು. ಹಾಗೇಯೆ ಹೊಸಪೇಟೆ ತಾಲೂಕು ಕಬ್ಬಿಣ ಉತ್ಪಾದನೆಗೆ ವಿಪುಲವಾದ ಸಂಪನ್ಮೂಲಗಳನ್ನು ಒದಗಿಸುತ್ತದೆ.

ಭೌಗೋಳಿಕ ಲಕ್ಷಣ

ಹೊಸಪೇಟೆ ತಾಲೂಕು ಪ್ರದೇಶವು ೧೫°.೧೬' ಉತ್ತರ ಅಕ್ಷಾಂಶ ಮತ್ತು ೭೬°.೨೬' ಪೂರ್ವ ರೇಖಾಂಶಗಳು ನಡುವೆ ಇದೆ. ಇದು ಬಳ್ಳಾರಿ ಜಿಲ್ಲೆಯಲ್ಲಿಯೇ ಪ್ರಮುಖ ತಾಲೂಕು ಕೇಂದ್ರ ಹಾಗೂ ಉಪವಿಭಾಗವಾಗಿದೆ. ಈ ಪ್ರದೇಶದಲ್ಲಿ ಗಮನಸಬೇಕಾದ ಪ್ರಮುಖ ಅಂಶಗಳೆಂದರೆ, ಜಿಲ್ಲೆಯಲ್ಲಿಯೇ ಹೆಚ್ಚು ನೀರಾವರಿ ಪ್ರದೇಶವನ್ನು ಹೊಂದಿದ್ದು ಮಧ್ಯಮ ಗಾತ್ರದ ಕಬ್ಬಿಣ ಮತ್ತು ಉಕ್ಕು ಉದ್ಯಮಗಳನ್ನು ಹಾಗೂ ಗಣಿಗಾರಿಕೆಯನ್ನು ಹೊಂದಿದೆ. ತಾಲೂಕಿನ ಪೂರ್ವ ಭಾಗದ ಗ್ರಾಮಗಳು ಹೆಚ್ಚು ನೀರಾವರಿ ಪ್ರದೇಶಗಳಾಗಿವೆ. ಈ ಭಾಗದಲ್ಲಿ ವಾಣಿಜ್ಯ ಬೆಳೆಗಳು ಅಧಿಕವಾಗಿ ಬೆಳೆಯಲಾಗುತ್ತದೆ. ಹಾಗಾಗಿ ಮಾರುಕಟ್ಟೆ ವ್ಯವಹಾರಗಳು ಬೆಳೆದಿವೆ. ನೀರಾವರಿ ಪ್ರದೇಶವು ಕೆಲವೇ ಗ್ರಾಮಗಳಿಗೆ ಸೀಮಿತವಾಗಿದೆ. ಉತ್ತರ ಭಾಗದಲ್ಲಿ ಹರಿಯುತ್ತಿರುವ ತುಂಗಭದ್ರಾ ನದಿಯು ನೀರಾವರಿಯ ಪ್ರಮುಖ ಮೂಲವಾಗಿದೆ.

ಹೊಸಪೇಟೆ ತಾಲೂಕು ಪ್ರದೇಶವನ್ನು ಭೌಗೋಳಿಕವಾಗಿ ಎರಡು ಭಾಗಗಳಾಗಿ ವಿಂಗಡಿಸಬಹುದು. ತಾಲೂಕಿನ ಹೆಚ್ಚು ವಿಶಾಲವಾಗಿರುವ ಭಾಗವನ್ನು ಈಶಾನ್ಯದಲ್ಲಿ ಸಿರುಗುಪ್ಪ, ಪೂರ್ವದಲ್ಲಿ ಬಳ್ಳಾರಿ, ದಕ್ಷಿಣದಲ್ಲಿ ಸಂಡೂರು ಹಾಗೂ ಉತ್ತರದಲ್ಲಿ ಕೊಪ್ಪಳ ಜಿಲ್ಲೆ ಪ್ರದೇಶಗಳು ಸುತ್ತುವರಿದಿವೆ. ನೈರುತ್ಯಕ್ಕಿರುವ ತಾಲೂಕಿನ ಮತ್ತೊಂದು ಭಾಗ ಪೂರ್ವದಲ್ಲಿ ಸಂಡೂರು, ದಕ್ಷಿಣದಲ್ಲಿ ಕೂಡ್ಲಿಗಿ, ಪಶ್ಚಿಮದಲ್ಲಿ ಹಗರಿಬೊಮ್ಮನಹಳ್ಳಿ ಮತ್ತು ಉತ್ತರದಲ್ಲಿ ತುಂಗಭದ್ರಾ ಜಲಾಶಯದ ಹಿನ್ನೀರಿನ ಪ್ರದೇಶಗಳಿಂದ ಸುತ್ತುವರಿದಿದೆ. ಹೊಸಪೇಟೆ ಉಪವಿಭಾಗವು ೮೯೮.೮ ಚ.ಕಿ.ಮೀ. ವಿಸ್ತೀರ್ಣವನ್ನು ಹೊಂದಿದೆ. ಮತ್ತು ಜನವಸತಿಯುಳ್ಳ ಒಟ್ಟು ೭೫ ಗ್ರಾಮಗಳನ್ನು ಹೊಂದಿದೆ. ಹಳೆಯ ಊರುಗಳೆಂದು ಕರೆಯಲಾಗುವ ಜನವಸತಿ ಇಲ್ಲದ ಬೇಚರಕ್ ಗ್ರಾಮಗಳೂ ಇವೆ. ಒಟ್ಟು ೮೨ಕ್ಕೂ ಹೆಚ್ಚು ಗ್ರಾಮ ಗಳಾಗುತ್ತವೆ.[೨]

ಒಟ್ಟು ೮೨ ಗ್ರಾಮಗಳನ್ನು ಮರಿಯಮ್ಮನಹಳ್ಳಿ, ಹೊಸಪೇಟೆ, ಕಮಲಾಪುರ ಮತ್ತು ಕಂಪ್ಲಿ ಎಂಬ ನಾಲ್ಕು ಹೋಬಳಿಗಳಡಿಯಲ್ಲಿ ವಿಂಗಡಿಸಲಾಗಿದೆ. ಜಿಲ್ಲೆಯ ಪೂರ್ವ ಭಾಗದ ಪ್ರಮುಖ ತಾಲೂಕು ಕೇಂದ್ರ ಹಾಗೂ ಅಭಿವೃದ್ಧಿ ಹೊಂದಿದ ಪ್ರದೇಶವಾಗಿದೆ. ಕೃಷಿ ಮತ್ತು ಕೈಗಾರಿಕೆ ವಲಯದಲ್ಲಿ ಹೊಸಪೇಟೆ ತಾಲೂಕು ಪ್ರಗತಿಪಥದಲ್ಲಿದೆ.

ಹೊಸಪೇಟೆ ಪ್ರದೇಶವು ೧.೦೪, ೯೭೨ ಹೆಕ್ಟೇರ ಅರಣ್ಯ ಪ್ರದೇಶವನ್ನು ಹೊಂದಿದೆ. ತುಂಗಭದ್ರಾ ನದಿ ಮತ್ತು ಕೆರೆಗಳನ್ನು ಬಳಸಿಕೊಂಡು ಮತ್ತು ಮಳೆಯಾಶ್ರಿತ ನೀರಿನಿಂದ ಭತ್ತ, ಕಬ್ಬು, ಹತ್ತಿ, ಬಾಳೆಯಂತಹ ವಾಣಿಜ್ಯ ಬೆಳೆಗಳನ್ನು ಬೆಳೆಯಲಾಗುತ್ತದೆ. ಈ ಪ್ರದೇಶದ ವಾಯುಗುಣವು ಉಷ್ಣಾಂಶವು ಸರಾಸರಿ ೧೬.೨° ಸೆಂ. ರಿಂದ ೪೩.೯° ಸೆಂ. ನವರೆಗೆ ಇರುತ್ತದೆ. ಮಳೆಯ ವಾರ್ಷಿಕ ಸರಾಸರಿ ೫೭೪.೯ ಮಿ.ಮೀ. ಇರುತ್ತದೆ.[೩]

ಹೊಸಪೇಟೆ ಪ್ರದೇಶವು ಪುರಾಣ ಕಾಲದಿಂದ ಇಂದಿನವರೆಗೂ ಹಲವು ಉಲ್ಲೇಖಾರ್ಹ ವೈಶಿಷ್ಟ್ಯಗಳನ್ನು ಹೊಂದಿದೆ. ವಿಜಯನಗರ ಕಾಲದಲ್ಲಿ ಮಾತ್ರವಲ್ಲದೆ, ಪ್ರಾಗೈತಿಹಾಸಿಕ ಕಾಲದಲ್ಲಿಯೂ ಇತರ ಪ್ರಪಂಚದೊಡನೆ ನಾಗರಿಕತೆಯ ಕೊಂಡಿಗಳನ್ನು ಬೆಸೆದುಕೊಂಡಿದೆ. ಆಧುನಿಕ ಕಾಲಮಾನದಲ್ಲಿ ಹಂಪಿಯ ಐತಿಹಾಸಿಕ ಕಾರಣಗಳಿಗಾಗಿ ಇಂದು ಪ್ರವಾಸಿ ತಾಣವಾಗಿ ಪ್ರಾಮುಖ್ಯತೆಯನ್ನು ಪಡೆದುಕೊಂಡಿದ್ದು, ದೇಶ ವಿದೇಶಗಳ ಪ್ರವಾಸಿಗರು ಇಲ್ಲಿ ಸದಾ ತುಂಬಿರುತ್ತಾರೆ. ಪಕ್ಕದಲ್ಲಿ ಹರಿಯುವ ತುಂಗಭದ್ರಾ ನದಿಗೆ ಅಡ್ಡಲಾಗಿ ಕಟ್ಟಿರುವ ಮನಮೋಹಕ ಅಣೆಕಟ್ಟು ಮತ್ತು ಸುತ್ತಮುತ್ತಲಿನ ಲೋಹದ ಅದುರಿನ ಸಾಲು ಸಾಲು ಗುಡ್ಡಗಳು, ಸದಾ ಹಚ್ಚ ಹಸಿರಿನಿಂದ ಕೂಡಿರುವ ಕಬ್ಬು, ಬಾಳೆಯ ತೋಟಗಳು ವಿಜಯನಗರದ ಪ್ರಾಚೀನ ವೈಭವದ ಮತ್ತು ಭವ್ಯ ನಾಗರಿಕತೆಯ ಉತ್ತುಂಗದ ಸ್ಥಿತಿಯನ್ನು ತೋರಿಸುತ್ತದೆ. ಮರೆಯಲಾಗದ ಸಾಮ್ರಾಜ್ಯದಲ್ಲಿನ ಉಳಿದಿರುವ ಮತ್ತು ಕಣ್ಣು ಕೋರೈಸುವ ಅವಶೇಷಗಳು, ಸಾಂಸ್ಕೃತಿಕ, ಐತಿಹಾಸಿಕ ಮತ್ತು ಧಾರ್ಮಿಕ ಕ್ಷೇತ್ರಗಳು, ಜನಪದ ಕಲೆಗಳ ಆಗರಗಳು ಇವೆಲ್ಲಾ ಈ ತಾಲೂಕು ಇನ್ನು ಗಟ್ಟಿಮುಟ್ಟಾದ ಮೂಲ ಸ್ಥಿತಿಯನ್ನು ಹಾಗೇ ಉಳಿಸಿಕೊಂಡಿವೆ ಎಂಬುದನ್ನು ಸಾಬೀತುಪಡಿಸುತ್ತವೆ.

ಖನಿಜ ಸಂಪತ್ತು

ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕು ಪ್ರದೇಶವು ಸಂಪದ್ಭರಿತವಾದ ಭೂಸಂಪತ್ತನ್ನು ಹೊಂದಿದೆ. ತಾಲೂಕಿನ ಒಟ್ಟು ಶೇ. ೮೦ರಷ್ಟು ನೀರಾವರಿ ಪ್ರದೇಶವನ್ನು ಹೊಂದಿದ್ದು ಮೂಲತಃ ಕೃಷಿ ಪ್ರಧಾನ ತಾಲೂಕಾಗಿದೆ. ಈ ತಾಲೂಕಿನಲ್ಲಿ ಅತಿಮುಖ್ಯವಾದ ಖನಿಜವೆಂದರೆ ಕಬ್ಬಿಣದ ಅದಿರು. ಇಲ್ಲಿ ದೊರೆಯುವ ವಿವಿಧ ಬಗೆಯ ಅದಿರುಗಳನ್ನು ಸಂಡೂರು, ನಂದಿಹಳ್ಳಿ, ಹೊಸಪೇಟೆ ಸುತ್ತಮುತ್ತ ಕಾಣುತ್ತೇವೆ. ಮ್ಯಾಂಗನೀಸ್ ಅದಿರನ್ನು ಸಂಡೂರಿನ ದೇವಗಿರಿ, ಸುಬ್ರಾಯನಹಳ್ಳಿ ಮತ್ತು ರಾಮಘಡದಲ್ಲಿ ದೊರೆಯುತ್ತದೆ. ತಾಮ್ರವು ರಾಮಘಡ, ಹರಪನಹಳ್ಳಿ, ತಾಮ್ರಪರ್ವತ ಮತ್ತು ಚಿನ್ನಾಪುರದಲ್ಲಿ ಸಿಗುತ್ತದೆ. ಸತುವು ಮಟ್ರಿಯಲ್ಲಿ ದೊರೆಯುತ್ತದೆ. ಮ್ಯಾಗ್ನಾಸೈಟ್ ತೋರಣಗಲ್ಲನಲ್ಲಿ ಸಿಗುತ್ತದೆ. ಜಿಪ್ಸಮ್ ತಾಳೂರು, ಉತ್ತನೂರು, ಹಿರೇಹಡಗಲಿ ಮತ್ತು ಚಿನ್ನಹಳ್ಳಿಗಳಲ್ಲಿ ಸಿಗುತ್ತದೆ. ಜೇಡಿಮಣ್ಣು ತೋರಣಗಲ್ಲು, ಮೆಟ್ರಿ, ಉಬ್ಬದಗಂಡಿ, ದೇವಲಾಪುರ ಮತ್ತು ಮಲ್ಲಪ್ಪನಗುಡ್ಡದಲ್ಲಿ ದೊರೆಯುತ್ತದೆ. ಬಳಪದ ಕಲ್ಲು ಅರಸಾಪುರ ಮತ್ತು ನೀಲಗುಂದಗಳಲ್ಲಿ ದೊರೆಯುತ್ತದೆ. ಹಳದಿ ಓಕರ್ ತುಮರಿ, ರಾಮಘಡ ಮತ್ತು ಬಲದಗುಡ್ಡಗಳಲ್ಲಿ ದೊರೆಯುತ್ತದೆ. ರೆಡ್ ಓಕರ್ ನಾಗಲಾಪುರ, ಜಂಬುನಾಥನಹಳ್ಳಿ, ವ್ಯಾಸನಕೆರೆ ಮತ್ತು ಕರಡಿಕೊಳ್ಳಗಳಲ್ಲಿ ಸಿಗುತ್ತದೆ. ಬೆಣಚುಕಲ್ಲು ನಾಗಲಾಪುರ, ರಾಜಾಪುರ, ಗಾದಿಗನೂರು ಮತ್ತು ಅಂಕಮನಾಳಗಳಲ್ಲಿ ಕಂಡು ಬರುತ್ತದೆ. ವಜ್ರ ದೇವಗೊಂಡನಹಳ್ಳಿಯಲ್ಲಿ ಸಿಗುತ್ತದೆ. ಬೆಸಾಲ್ಟ್ ಶಿಲೆಯು ತಿಮ್ಮಾಪುರದಲ್ಲಿ ಕಂಡುಬರುತ್ತದೆ. ಮರಳು ಮಿಶ್ರಿತ ಕೆಂಪುಮಣ್ಣು ತುಂಗಭದ್ರಾ ಹಗರಿ ನದಿ ಪ್ರದೇಶಗಳಲ್ಲಿ ಕಂಡುಬರುತ್ತದೆ.[೪]

ತಾಲೂಕಿನ ಕೆ.ಗೊಲ್ಲರಹಳ್ಳಿ, ಚಿಲಕನಹಟ್ಟಿ ಮತ್ತು ಮರಿಯಮ್ಮನಹಳ್ಳಿ ಗ್ರಾಮಗಳು ಮರಿಯಮ್ಮನಹಳ್ಳಿ ಹೋಬಳಿಯ ಕಬ್ಬಿಣ ಕುಲುವೆಯ ನೆಲೆಗಳಾದರೆ ಬುಕ್ಕಸಾಗರ, ಕಮಲಾಪುರ, ಶೀತಾರಾಮ

ತಾಂಡ ನಲ್ಲಾಪುರ, ಗಾದಿಗನೂರು, ಧರ್ಮಸಾಗರ, ಬೈಲುವದ್ದಿಗೇರೆ, ಗುಂಡ್ಲಬೈಲುವದ್ದಿಗೇರೆ, ಕಾಕುಬಾಳು, ಪಾಪಿನಾಯಕನ ಹಳ್ಳಿ ಮತ್ತು ವಡ್ಡರಳ್ಳಿಯು ಕಮಲಾಪುರ ಹೋಬಳಿಯ ಕಬ್ಬಿಣ ಕಲುಮೆಗಳಿಗೆ ನೆಲೆಗಳಾಗಿವೆ. ಹಾಗೇಯೆ ಉಪ್ಪಾರಳ್ಳಿ, ದೇವಲಾಪುರ, ಮೆಟ್ರಿ, ಸುಗ್ಗೇನಹಳ್ಳಿ, ಜವುಕು, ಸಣಾಪುರ, ಕಂಪ್ಲಿ, ನಂ.೧೦ ಮುದ್ಲಾಪುರ ಮತ್ತು ರಾಮಸಾಗರವು ಕಂಪ್ಲಿ ಹೋಬಳಿಯ ಕಬ್ಬಿಣ ಕುಲುಮೆಗಳಿಗೆ ನೆಲೆಗಳಾಗಿವೆ. ಹೊಸಪೇಟೆ ನಗರವು ಹೊಸಪೇಟೆ ಹೋಬಳಿಯ ಕಬ್ಬಿಣದ ಕುಲುಮೆಗಳಿಗೆ ಕೇಂದ್ರಸ್ಥಳವಾಗಿದೆ. ಹೀಗೆ ಹೊಸಪೇಟೆ ತಾಲೂಕು ಎಲ್ಲೆಡೆಯಿಂದಲೂ ವಿಪುಲವಾದ ಖನಿಜ ಸಂಪತ್ತನ್ನು ಹೊಂದಿದೆ ಎಂದು ತಿಳಿದು ಬರುತ್ತದೆ.

ಕುಲುಮೆಗಳ ಹುಟ್ಟು ಮತ್ತು ವಿಕಾಸ

ಪೀಠಿಕೆ

ಕಬ್ಬಿಣವು ಕ್ರಿಪೂ. ೫೦೦೦ ವರ್ಷಗಳ ಪೂರ್ವದಲ್ಲಿ ಕಂಡುಬಂದಿತು ಎಂಬುದನ್ನು ತಿಳಿದಿದ್ದೇವೆ.[೫] ಇದು ತಾಮ್ರ ಲೋಹ ಬಳಕೆಗೆ ಬಂದ ಕಾಲದಲ್ಲಿಯೇ ಕಾಣಿಸಿರಬೇಕು ಎಂದು ಅನಸುತ್ತದೆ. ಆದರೆ ತಾಮ್ರವನ್ನು ಕಬ್ಬಿಣಕ್ಕಿಂತ ಹೆಚ್ಚಾಗಿ ಬಳಿಸಿರುವುದು ಕಂಡು ಬರುತ್ತದೆ. ಕಾರಣ ತಾಮ್ರವು ಕಬ್ಬಿಣಕ್ಕಿಂತ ಕಡಿಮೆ ಉಷ್ಣತೆಯಲ್ಲಿ ಕರಗುತ್ತದೆ ಮತ್ತು ಸುಲಭವಾಗಿ ವಸ್ತುಗಳನ್ನು ತಯಾರಿಸಬಹುದು. ಆದರೆ ಕಬ್ಬಿಣದ ಕರಗುವ ಬಿಂದು ೧೫೩೫° ಸೆ. ಆಗಿದ್ದು ಸುಲಭವಾಗಿ ಕರಗವುದಿಲ್ಲದಿರುವುದೇ ಕಾರಣವಾಗಿರಬಹುದು. ಹಾಗಾಗಿ ಇದರ ಬಳಕೆ ತಡವಾಗಿ ಬೆಳಕಿಗೆ ಬಂದಿರುವ ಸಾಧ್ಯತೆ ಇದೆ. ತಾಮ್ರ ಉತ್ಪಾದನೆಯಲ್ಲಿ ಬಳಸುವ ತಂತ್ರಜ್ಞಾನವನ್ನೇ ಕಬ್ಬಿಣದ ಉತ್ಪಾದನೆಗೆ ಬಳಸುತ್ತಿದ್ದರು ಎಂದು ಅರಿಯಬಹುದಾಗಿದೆ.

ಹುಟ್ಟು ಮತ್ತು ವಿಕಾಸ

ಮಾನವನ ಪ್ರಾಚೀನ ನಾಗರಿಕತೆಯ ಬೆಳವಣಿಗೆಯ ಘಟ್ಟದಲ್ಲಿ ಲೋಹಗಳನ್ನು ಗುರುತಿಸಿದ್ದು ಒಂದು ಮಹತ್ವಪೂರ್ಣ ಘಟನೆಯಾಗಿದೆ. ಹಾಗೇಯೆ ಅದು ಸಂಭವಿಸಿದ್ದು ಒಂದು ಆಕಸ್ಮಿಕ ಘಟನೆಯಾಗಿರಬೇಕು. "ಶಿಲಾಯುಗದ ಮಾನವ ಬೇಟೆಯಾಡಲು ಗುಡ್ಡಗಾಡುಗಳಿಗೆ ಹೋಗುವುದು ಅನಿವಾರ್ಯವಾಗಿತ್ತು. ಎಷ್ಟೋ ಸಮಯದಲ್ಲಿ ರಾತ್ರಿ ವೇಳೆ ಅಲ್ಲೇ ಉಳಿದುಕೊಳ್ಳಬೇಕಾಗುತ್ತಿತ್ತು. ಆಗ ಸುತ್ತಮುತ್ತಲ ಮಣ್ಣನ್ನು ನೆಲಸಮ ಮಾಡಿ ಮಣ್ಣಿನಿಂದಲೇ ಎಲ್ಲೆಕಟ್ಟು ನಿರ್ಮಿಸಿ ವಿಶ್ರಮಿಸುತ್ತಿದ್ದ. ಜೊತೆಗೆ ಚಳಿಯಿಂದ ಮತ್ತು ಪ್ರಾಣಿಗಳಿಂದ ರಕ್ಷಿಸಿಕೊಳ್ಳಲು ಗೋಡೆಗಳನ್ನು ಕಟ್ಟಿ, ಗೋಡೆಯ ಮೇಲೆ ಮರದ ತುಂಡುಗಳನ್ನಿಟ್ಟು ಬೆಂಕಿ ಹತ್ತಿಸುತ್ತಿದ್ದ. ಇಂತಹ ಒಂದು ಸಂದರ್ಭದಲ್ಲಿ ಬೆಳಗಾದಾಗ ಸುಟ್ಟ ಮರದ ಬೂದಿಯ ಮಧ್ಯೆ ಹೊಳೆಯುವ ಸಣ್ಣ ಮಣಿಗಳನ್ನು ಕಂಡಿರಬೇಕು. ಈ ಪ್ರಕ್ರಿಯೆ ಅನೇಕ ದಿನಗಳವರೆಗೆ ಪುನರಾವರ್ತನೆಯಾಗುತ್ತಿದ್ದುದು ಅವನಿಗೆ ಕುತೂಹಲ ಕೆರಳಿಸಿರಬೇಕು. ಈ ಕುತೂಹಲವೇ ಮುಂದೆ ಮಣ್ಣನ್ನು ಸಂಗ್ರಹಿಸಲು ಅವನನ್ನು ಪ್ರೇರೆಪಿಸಿತು. ಸಂಗ್ರಹಿಸಿದ ಮಣ್ಣನ್ನು ಇದ್ದಿಲಿನಿಂದ ಕಾವು ಕೊಟ್ಟು, ಅಧಿಕ ಉಷ್ಣತೆ ನೀಡಿ ಪುನಃ ಪುನಃ ಲೋಹದ ಮಣಿಗಳನ್ನು ಪಡೆದಿರಬೇಕು. ಇದು ಲೋಹಯುಗಕ್ಕೆ ನಾಂದಿಯಾಯಿತು".[೬] ಮುಂದೆ ನೆಲದಲ್ಲಿ ಗುಳಿ(ಕುಣಿ) ಮಾಡಿ ತಿದಿಯೊತ್ತಿ ಕುಲುಮೆಯಲ್ಲಿ ಕಬ್ಬಿಣವನ್ನು ಸಂಸ್ಕರಿಸುವ ಕಲೆಯನ್ನು ಕರಗತ ಮಾಡಿಕೊಂಡಿರಬೇಕು.

ಗುಳಿ ತೊಡಿ ಲೋಹದ ಅದಿರಿನಿಂದ ಲೋಹವನ್ನು ಸಂಸ್ಕರಿಸುವ ಕಲೆಯು ಹರಪ್ಪ ಯುಗದಲ್ಲಿ (ಕ್ರಿ.ಪೂ. ೨೩೦೦ ರಿಂದ ೧೭೫೦) ಪರಿಪೂರ್ಣ ಯಶಸ್ಸನ್ನು ಪಡೆಯಿತು ಎನ್ನಬಹುದು. ನೆಲದಲ್ಲಿ ಇದ್ದ ಒಲೆ ಕುಲುಮೆಯಾಗಿ ಬದಲಾವಣೆಯಾಯಿತು. ಊದು ಕೊಳವೆಗಳ ಸ್ಥಾನದಲ್ಲಿ ತಿದಿ ಬಂದು ಕುಲುಮೆಗಳ ರೂಪ–ರೇಷೆಗಳು ಹೆಚ್ಚು ಅಭಿವೃದ್ಧಿ ಕಂಡವು. ಕುಲುಮೆಗೆ ತಿದಿಗಳನ್ನು ಜೋಡಿಸಿ ಒಂದೇ ಸಮನೆ ಒತ್ತುತ್ತಿದ್ದಾಗ ಅದರಿಂದ ಬರುತ್ತಿದ್ದ ಗಾಳಿಯ ಒತ್ತಡದಿಂದಾಗಿ ಕುಲುಮೆಯಲ್ಲಿ ಅಧಿಕ ಶಾಖ ಬರಲು ಪ್ರೇರಕವಾಗುತ್ತಿತ್ತು. ಅದಿರಿನಿಂದ ಲೋಹವನ್ನು ಬೇರ್ಪಡಿಸುವ ಮೂಲ ತಂತ್ರಜ್ಞಾನ ಇದರಿಂದ ಹುಟ್ಟಿಕೊಂಡಿತು ಎಂದು ಹೇಳಬಹುದು. ಇದೇ ಜ್ಞಾನ ಲೋಹವಿದ್ಯೆಯ ಹುಟ್ಟಿಗೆ ಮೂಲ ಮಂತ್ರಲಾಯಿತು. ಪ್ರಾಚೀನರು ಹೀಗೆ ಪಡೆದ ಕಬ್ಬಿಣದಿಂದ ನಿತ್ಯ ಬಳಕೆಗೆ ಬೇಕಾಗುವ ಸಾಮಗ್ರಿಗಳನ್ನಾಗಿ ಬದಲಾಯಿಸಿದರು. ಆದರೆ ಕುಲುಮೆಗಳನ್ನು ನಡೆಸುತ್ತಿದ್ದ ವಿಚಾರವಾಗಿ ಸ್ಪಷ್ಟ ದಾಖಲೆಗಳು ನಮಗೆ ದೊರೆಯುವುದಿಲ್ಲ. ಆದರೆ ಲಭ್ಯವಿರುವ ಕೆಲವು ಅವಶೇಷಗಳ ಆಧಾರದ ಮೇಲೆ ಕಬ್ಬಿಣವನ್ನು ಉತ್ಪತ್ತಿ ಮಾಡುತ್ತಿದ್ದ ವಿಧಾನಗಳನ್ನು ಊಹಿಸಿಕೊಳ್ಳವುದು ಅಂತಹ ಕಠಿಣ ಎನಿಸುವುದಿಲ್ಲ.

ಪ್ರಾಚೀನ ಕುಲುಮೆಗಳ ರಚನೆ ಮತ್ತು ವಿನ್ಯಾಸ

ಪೂರ್ವದಲ್ಲಿ ಸಾಮಾನ್ಯವಾಗಿ ೩ ರಿಂದ ೪ ಅಡಿ ವ್ಯಾಸದ ಅಷ್ಟೇ ಎತ್ತರವಿದ್ದ ಕುಲುಮೆಗಳು ಆಗ ಜನಪ್ರಿಯವಾಗಿ ಬಳಕೆಯಲ್ಲಿದ್ದವು. ಜೇಡಿ ಮಣ್ಣಿನ ಕೊಳವೆಗಳನ್ನು ಮಾಡಿ ಅದಕ್ಕೆ ತಿದಿಗಳನ್ನು ಜೋಡಿಸುತ್ತಿದ್ದರು. ಸಹಜವಾಗಿ ೪ ರಿಂದ ೫ ಘಂಟೆಗಳ ಕಾಲ ಕುಲುಮೆಗಳು ಕೆಲಸ ಮಾಡುತ್ತಿದ್ದವು. ತಿದಿಯಲ್ಲಿ ಒತ್ತಿದ ಗಾಳಿ ಕಬ್ಬಿಣ ಕರಗಲು ಬೇಕಾದ ಉಷ್ಣತೆಯನ್ನು ಕಾಯ್ದುಕೊಳ್ಳಲು ನೆರವಾಗುತ್ತಿತ್ತು. ಇದ್ದಿಲನ್ನೇ ಶಾಖದ ಮೂಲವಾಗಿ ಬಳಸುತ್ತಿದ್ದರು. ಅದಿರಿಗೆ ಸ್ರಾವಕವಾಗಿ(ಫ್ಲಕ್ಸ್) ಯಾವುದೇ ರಸಾಯನಿಕ ವಸ್ತುವನ್ನು ಬಳಸುತ್ತಿರಲಿಲ್ಲ. ಈ ಕಾರಣದಿಂದಾಗಿ ಕಿಟ್ಟದ ಜೊತೆಗೆ ಲೋಹವು ಸ್ವಲ್ಪ ಪ್ರಮಾಣದಲ್ಲಿ ನಷ್ಟವಾಗಿ ಹೋಗುತ್ತಿತ್ತು. ಅಪೇಕ್ಷಿತ ಉಷ್ಣತೆಗಿಂತ ಸ್ವಲ್ಪ ಉಷ್ಣತೆ ಏರಿದರೂ ಕಬ್ಬಿಣ ಕರಗಿ ದ್ರವವಾಗಿ ಹರಿದು ಹೋಗುತ್ತಿತ್ತು. ಹೀಗಾಗಿ ಅಪೇಕ್ಷಿತ ಮಟ್ಟವನ್ನು ಉಳಿಸಿಕೊಳ್ಳಬೇಕಾದ ತಂತ್ರ ಕೌಶಲ್ಯವನ್ನು ಸಾಧಿಸಲೇ ಬೇಕಾದ ಅನಿವಾರ್ಯತೆ ಇತ್ತು. ಕೆಂಪಗೆ ಕಾದ ಮೃದು ಉಂಡೆಯನ್ನು ಇಕ್ಕಳದಲ್ಲಿ ತೆಗೆದು ಚೆನ್ನಾಗಿ ಬಡಿದು ಅದರಲ್ಲಿ ಬೆರೆತಿದ್ದ ಕಿಟ್ಟವನ್ನು ಬೇರ್ಪಡಿಸುತ್ತಿದ್ದರು. ಹೀಗೆ ತೆಗೆದ ಶುದ್ಧ ಕಬ್ಬಿಣವನ್ನು ಬೇಕಾದ ಆಕಾರಕ್ಕೆ ಬಡಿದು ಉಪಕರಣಗಳನ್ನು ತಯಾರಿಸುತ್ತಿದ್ದರು. ಕಬ್ಬಿಣವು ಸಿಲಿಕೇಟ್ ರೂಪದಲ್ಲಿ ಕೆನೆಗಟ್ಟುತ್ತಿದ್ದ ಕಿಟ್ಟವನ್ನು ಹೊರ ಹರಿಯುವಂತೆ ಮಾಡಲು ಕುಲುಮೆಯಲ್ಲಿ ತೂತು ಮಾಡುತ್ತಿದ್ದರು. ಕಿಟ್ಟ ಇನ್ನೂ ಉಳಿದಿದ್ದರೆ ಮರಳನ್ನು ಬೆರೆಸಿ ಅದನ್ನು ಬೇರ್ಪಡಿಸುವ ತಂತ್ರವನ್ನು ರೂಢಿಸಿಕೊಂಡಿದ್ದರು.[೭]

ಕಬ್ಬಿಣಕ್ಕೆ ಅಪೇಕ್ಷಿತ ಪ್ರಮಾಣದಲ್ಲಿ ಇಂಗಾಲವನ್ನು ಸಂಯೋಜನೆ ಮಾಡಿದರೆ ಅದು 'ಉಕ್ಕು' ಆಗಿ ಪರಿವರ್ತನೆಯಾಗುತ್ತದೆ. ಉಕ್ಕಿನಲ್ಲಿ ಇಂಗಾಲದ ಪ್ರಮಾಣ ಶೇ. ೦.೧೫ ರಿಂದ ೧.೭ ಭಾಗದವರೆಗೂ ಇರಬಹುದು. ಇಂಗಾಲದ ಸಂಯೋಜನೆಗೆ ನಮ್ಮ ಪ್ರಾಚೀನರು ಎರಡು ವಿಧಾನಗಳನ್ನು ಅನುಸರಿ

ಸುತ್ತಿದ್ದರು. ಒಂದು ಸಿಮೆಂಟೇಶನ್ ಇಲ್ಲವೆ ಬಂಧಕ ವಿಧಾನ ಇನ್ನೊಂದು ಕ್ರುಸಿಬಲ್ ಅಂದರೆ ಮೂಸೆಯ ವಿಧಾನ. ಮೂಸೆಯ ವಿಧಾನದಲ್ಲಿ ಪಡೆದ ಉಕ್ಕನ್ನು ಈಗ "ವೂಡ್ಸ್" ಎನ್ನುತ್ತಾರೆ. ಇದು ಅಚ್ಚ ಕನ್ನಡ ಪದವಾದ 'ಉಕ್ಕು' ಎನ್ನುವುದರ ಅಪಭ್ರಂಶ. ಬಂಧಕ ವಿಧಾನದಲ್ಲಿ ಮೆದು ಕಬ್ಬಿಣದ ಗಟ್ಟಿಗಳನ್ನು ಇದ್ದಿಲಿನಿಂದ ಆವೃತ ಮಾಡಿ ಸುಮಾರು ೨ ವಾರಗಳ ಕಾಲ ಅಧಿಕ ಉಷ್ಣತೆಯಲ್ಲಿ ಕಾಸುವುದು ರೂಢಿಯಲ್ಲಿತ್ತು. ಇದ್ದಿಲಿನಿಂದ ಉತ್ಪಾದನೆಯಾದ ಇಂಗಾಲ ಕಬ್ಬಿಣದೊಳಗೆ ಸಾವಧಾನವಾಗಿ ಲೀನವಾಗುತ್ತದೆ. ಈ ಪ್ರಕ್ರಿಯೆಯನ್ನು ಇಂಗಾಲೀಕರಣ ಎನ್ನುತ್ತಾರೆ. ಇದು ಸಂಪೂರ್ಣವಾದ ನಂತರ ಕಬ್ಬಿಣ ಉಕ್ಕಾಗಿ ಪರಿವರ್ತನೆಯಾಗುತ್ತದೆ. ಈ ವಿಧಾನ ಬಳಸಿ ಉಕ್ಕು ತಯಾರಿಸಲು ದೀರ್ಘಕಾಲ ತೆಗೆದುಕೊಳ್ಳುತ್ತಿದ್ದುದರಿಂದ ಕ್ರಮೇಣ ಇದರ ಬಳಕೆ ತಪ್ಪಿತು.[೮]

ಮೂಸೆಯ ವಿಧಾನದಲ್ಲಿ ಮೆದು ಕಬ್ಬಿಣದ ಚೂರುಗಳನ್ನು ಮರದ ಚೆಕ್ಕೆಗಳಿಂದ ಆವೃತಗೊಳಿಸಿ ಮೂಸೆಯಲ್ಲಿ ಜೋಡಿಸುತ್ತಿದ್ದರು. ಚೆಕ್ಕೆಗಳು ಕಬ್ಬಿಣದ ತೂಕದ ಹತ್ತನೆಯ ಒಂದು ಭಾಗದಷ್ಟು ಇರಬೇಕು. ಅನಂತರ ಮೂಸೆಗಳನ್ನು ಜೇಡಿಮಣ್ಣಿನಿಂದ ಮುಚ್ಚಲಾಗುತ್ತಿತ್ತು. ೨೦ ರಿಂದ ೨೫ ಮೂಸೆಗಳನ್ನು ಕುಲುಮೆಗಳಲ್ಲಿ ಇಡುತ್ತಿದ್ದರು. ತಿದಿಯೊತ್ತಿ ಗಾಳಿ ಊದುತ್ತಿದ್ದರು. ಇದ್ದಿಲು ಬಳಸಿ ಕಾವು ಕೊಡುತ್ತಿದ್ದರು. ಈ ವಿಧಾನದಲ್ಲಿ ಸುಮಾರು ೧೫೫೦° ಸೆ. ವರೆಗೂ ಉಷ್ಣತೆ ಕೊಡಲು ಸಾಧ್ಯವಾಗುತ್ತಿತ್ತು. ಮೂಸೆಯ ವಿಧಾನದಿಂದ ದಕ್ಷಿಣ ಭಾರತದಲ್ಲಿ ಉಕ್ಕು ಉತ್ಪಾದನೆ ಮಾಡುತ್ತಿದ್ದ ಬಗೆಯನ್ನು ಬುಕಾನನ್ ಕಳೆದ ಶತಮಾನದಲ್ಲಿ ಅತ್ಯಂತ ಸ್ಪಷ್ಟವಾಗಿ ಚಿತ್ರಿಸಿದ್ದಾನೆ.[೯]

ರಸರತ್ನ ಸಮುಚ್ಛಯದಲ್ಲಿ ಲೋಹವನ್ನು ಕರಗಿಸಲು ಬಳಸುತ್ತಿದ್ದ ಮೂಸೆಯ ಬಗ್ಗೆ ವಿವರಣೆ ಇದೆ. "ಮೂಸೆಯನ್ನು ಮಣ್ಣಿನಿಂದ ತಯಾರಿಸಲಾಗಿತ್ತು. ಇದು ಹುತ್ತದ ಮಣ್ಣಾಗಿರಬಹುದು ಇಲ್ಲವೆ ಕಂಬಾರನು ಬಳಸುವ ಜೇಡಿ ಮಣ್ಣಾಗಿರಬಹುದು. ಹೊಟ್ಟಿನ ಬೂದಿ, ಇದ್ದಿಲು ಪುಡಿ, ಲದ್ದಿಯನ್ನು ಸಮಭಾಗದಲ್ಲಿ ಬೆರೆಸಿ ಮಣ್ಣಿನಲ್ಲಿ ಹಾಕಿ ಚೆನ್ನಾಗಿ ಕುಟ್ಟಿ ಹದಗೊಳಿಸುತ್ತಿದ್ದರು. ಲೋಹ ಕರಗಿಸಲು ಲಂಬಾಕಾರವಾಗಿ(ಮಾಗೋಸ್ತನ ಮೂಷ) ತಯಾರಿಸುತ್ತಿದ್ದರು" ಇದಕ್ಕೆ ಕಾವು ನೀಡಿದಾಗ ಸುಮಾರು ೧೧೦೦° ಸೆ. ಉಷ್ಣತೆಯಲ್ಲಿ ಹೊಟ್ಟಿನ ಬೂದಿಯು ಉರಿದು ಸಿಲಿಕಾನ್ ಡೈ ಆಕ್ಸೈಡ್ (Sio2) ಮತ್ತು ಇದ್ದಿಲಾಗುತ್ತಿತ್ತು. ಸಿಲಿಕಾನ್ ಡೈ ಆಕ್ಸೈಡ್ ಮೂಸೆಗೆ ಧೃಡತೆಯನ್ನು ಕೊಡುತ್ತಿತ್ತು. ಇದ್ದಿಲು ಗ್ರಾಫೈಟ್ ಆಗಿ ಪರಿವರ್ತನೆ ಹೊಂದುತ್ತಿತ್ತು. ಉಷ್ಣತೆ ಹೆಚ್ಚಿದಾಗ ಸಿಲಿಕಾನ್ ಡೈ ಆಕ್ಸೈಡ್ ಉಷ್ಣ ನಿರೋಧಕತೆ ತೋರುವ ಮುಲ್ಲೈಡ್ ಎಂಬ ಖನಿಜವಾಗಿ ಪರಿವರ್ತಿತವಾಗುತ್ತಿತ್ತು. ಗ್ರಾಫೈಟ್ ಕಣಗಳು ಮೂಸೆಯಲ್ಲಿ ಹರಡಿ ದ್ರವ ಲೋಹದ ಆಕ್ರಮಣದಿಂದಾಗುವ ಸವೆತವನ್ನು ಸ್ವಲ್ಪ ಮಟ್ಟಿಗೆ ತಡೆಯುತ್ತಿತ್ತು. ಮೂಸೆಯು ಉಕ್ಕಿನ ಅಪೇಕ್ಷಿತ ಲಕ್ಷಣಗಳನ್ನು ಕಾಯ್ದುಕೊಳ್ಳುವಲ್ಲಿ ಮಹತ್ತರ ಪಾತ್ರವಹಿಸುತ್ತದೆ. ಅಧಿಕ ಇಂಗಾಲ ಸಂಯೋಜಿತ ಕಬ್ಬಿಣವಾಗಬೇಕಾದರೆ ಮೂಸೆಯೊಳಗೆ ಪರಿವರ್ತಕ ಅನಿಲದ (ಕಾರ್ಬನ್ ಮೊನಾಕ್ಸೈಡ್) ವಾತಾವರಣವಿರಬೇಕು. ಮೂಸೆಯು ಈ ರಸಾಯನಿಕ ಕ್ರಿಯೆಯನ್ನು ನಿಯಂತ್ರಿಸಿ ಪರಿವರ್ತನೆಯಾದ ಉಕ್ಕನ್ನು ಕರಗಿಸುತ್ತದೆ. ಅಲ್ಲದೆ ಉಷ್ಣತೆಯನ್ನು ಸಹಿಸಿ ಕೊಳ್ಳುವ ಸಾಮರ್ಥ್ಯವು ಮೂಸೆಗಿರುತ್ತದೆ. ದ್ರವರೂಪದ ಲೋಹ ನಿಧಾನವಾಗಿ ತಂಪುಗೊಂಡಾಗ ನಿಶ್ಚಿತವಾದ ಸ್ಫಟಿಕಾಕೃತಿಯ ಮೂಸೆ ಉಕ್ಕು ರೂಪಗೊಳ್ಳುತ್ತದೆ.[೧೦]

ಕರ್ನಾಟಕದ ಅನೇಕ ಭಾಗಗಳಲ್ಲಿ ಹಿಂದೆ ಮೂಸೆ ಉಕ್ಕಿನ ಉತ್ಪಾದನೆ ನಡೆಯುತ್ತಿತ್ತು ಎನ್ನಲಾಗಿದೆ. ಈಗ ಅದರ ಪುರಾವೆಗಳು ಸ್ಪಷ್ಟವಾಗಿ ಉಳಿದಿರುವುದು ಕೆಲವು ಪ್ರದೇಶಗಳಲ್ಲಿ ಮಾತ್ರ. ಚಿತ್ರದುರ್ಗದ ಹೊಳಲ್ಕೆರೆ ತಾಲೂಕಿನ ಘಟ್ಟಿ ಹೊಸಹಳ್ಳಿ ಎಂಬುದು ಇಂಥ ಒಂದು ಕೇಂದ್ರವಾಗಿತ್ತು. ನೂರು ವರ್ಷಗಳ ಹಿಂದೆ ಇಲ್ಲಿ ಮೂಸೆ ಉಕ್ಕು ತಯಾರಿಕೆಯು ಒಂದು ಉದ್ಯಮವಾಗಿ ಮುಂಚೂಣಿಯಲ್ಲಿತ್ತು. ಆ ಕಾಲದಲ್ಲಿ ಮೂಸೆ ಉಕ್ಕಿನ ಉತ್ಪಾದನೆಯ ಕಾಲದಲ್ಲಿ ಹೊರಬೀಳುತ್ತಿದ್ದ ಬೂದಿರಾಶಿ, ಚೂರಾದ ಮೂಸೆಗಳು ಈಗ ಊರಿನ ಪಕ್ಕದಲ್ಲಿ ಏರಿಯಂತೆ ತಲೆ ಎತ್ತಿದೆ. ಸುಮಾರು ೧೫,೦೦೦ ಘನ ಮೀಟರ್ ಜಾಗ ಆಕ್ರಮಿಸಿದೆ.[೧೧]

ಅದೇ ರೀತಿ ಹೊಸಪೇಟೆಯ ಕೆಲವು ಪ್ರದೇಶಗಳಾದ ಕೆ.ಗೊಲ್ಲರಹಳ್ಳಿ, ಚಿಲಕನಹಟ್ಟಿ ಮತ್ತು ಕಮಲಾಪುರಗಳಲ್ಲಿ ಕಬ್ಬಿಣ ಉತ್ಪಾದನೆಯಿಂದ ಹೊರ ಬೀಳುತ್ತಿದ್ದ ಕಿಟ್ಟಗಳು ಇದೀಗ ದಿಬ್ಬವಾಗಿ ಸುಮಾರು ಒಂದು ಎಕರೆಯಿಂದ ಹಿಡಿದು ೪ ಎಕರೆಗಳಷ್ಟು ಜಾಗವನ್ನು ಆಕ್ರಮಿಸಿಕೊಂಡಿದೆ. ಮತ್ತು ಕಮಲಾಪುರದಲ್ಲಿ ೧೦ ರಿಂದ ೧೪ ಕೆ.ಜಿ. ತೂಕಗಳನ್ನು ಹೊಂದಿದ್ದ ಅರೆಬರೆ ವೃತ್ತಾಕಾರದ ತುಕ್ಕು ಹಿಡಿದ ಮುದ್ದೆ ಆಕಾರದ ಗಟ್ಟಿ ಕಬ್ಬಿಣವನ್ನು ನೋಡಬಹುದಾಗಿದೆ.

ಪ್ರಾಚೀನ ಕುಲುಮೆಯ ಸ್ವರೂಪ

ಪ್ರಾಚೀನ ಕಾಲದಲ್ಲಿ ಕಬ್ಬಿಣ ತಯಾರಿಕೆಯು ಕೇವಲ ಕೆಲ ಜನಾಂಗದ ಕುಲಕಸುಬುವಾಗಿ, ಪ್ರಪಂಚದ ಎಲ್ಲ ದೇಶಗಳಲ್ಲಿ ಹರಡಿತ್ತು. ಹಾಗೆಯೇ ಭಾರತದಲ್ಲಿಯೂ ಹರಡಿರಬೇಕು. ಪ್ರಾಯಶಃ ಕ್ರಿ.ಪೂ. ಸುಮಾರು ೫೦೦೦ ದಿಂದ ೩೦೦೦ ವರ್ಷಗಳ ಘಟ್ಟದಲ್ಲಿ ತಾಮ್ರದ ಅದಿರು ಮಾನವನಿಗೆ ಪರಿಚಯವಾಗಿರುವುದು ಕಂಡು ಬರುತ್ತದೆ. ತಾಮ್ರವನ್ನು ಪಡೆಯಲು ಕುಲುಮೆಗಳನ್ನು ನಂಬಿದ್ದರು. ಹಾಗಾಗಿ ಕಬ್ಬಿಣವನ್ನು ಉತ್ಪಾದಿಸುವ ಕಲೆಯು ಕೆಲ ಜನಾಂಗದವರಿಗೆ ಮಾತ್ರ ತಿಳಿದಿರಬೇಕು ಎಂದು ಅನಿಸುತ್ತದೆ. ಈ ನಿಟ್ಟಿನಲ್ಲಿ ಎಡ್ವರ್ಡ್ ಥರ್ಸ್ಟನ್ ಅವರು ಹೇಳುವಂತೆ "ಕುಲುಮೆಗೆ ಸಂಬಂಧಿಸಿದಂತೆ ಕಮ್ಮಾರರು(ವಿಶ್ವಕರ್ಮ ಜನಾಂಗ) ಮಾತ್ರ ಕಬ್ಬಿಣದ ಕೆಲಸ ಮಾಡುವ ಸಮುದಾಯ ವಾಗಿತ್ತು ಮತ್ತು ಈ ಸಮುದಾಯವನ್ನು ಅತಿ ಕೀಳು ಜಾತಿಗಳಲ್ಲಿ ಒಂದೆಂದು ಪರಿಗಣಿಸಿದ್ದರಿಂದ ಇವರು ಊರ ಹೊರಭಾಗದಲ್ಲಿ ವಾಸಿಸುತ್ತಿದ್ದರು. ಕಂಬಾರ ಕುಲುಮೆಗಳು ಊರ ಹೊರಗಡೆಯೇ ಇರುತ್ತಿದ್ದವು".[೧೨] ಹಾಗಾಗಿ ಕಬ್ಬಿಣ ಉತ್ಪಾದನೆಯನ್ನು ಕಮ್ಮಾರ ಜನಾಂಗದವರೇ ಕ್ರಿ.ಪೂ. ಕಾಲದ ತಾಮ್ರ ಮತ್ತು ಕಬ್ಬಿಣ ಯುಗದಲ್ಲಿ ಮಾಡುತ್ತಿದ್ದರು ಎಂದು ಅಂದಾಜಿಸಬಹುದಾಗಿದೆ.

ಪ್ರಾಚೀನರು ಕಬ್ಬಿಣ ಉತ್ಪಾದನೆಗೆ ಯಾವ ರೂಪದ ಕುಲುಮೆಯನ್ನು ಮಾಡಿಕೊಂಡಿದ್ದರು ಎಂಬುದನ್ನು ಬುಕಾನನ್ ಕಳೆದ ಶತಮಾನದಲ್ಲಿ ಅತ್ಯಂತ ಸ್ಪಷ್ಟವಾಗಿ ಚಿತ್ರಿಸಿದ್ದಾನೆ. "ಕುಲುಮೆಯನ್ನು ಒಂದು ದೊಡ್ಡ ಗುಡಿಸಲೊಳಗೆ ಕಟ್ಟಲಾಗುತ್ತಿತ್ತು. ನಿರ್ದಿಷ್ಟ ಪ್ರಮಾಣದ ವರ್ತುಲಾಕಾರದ ಗುಂಡಿಯನ್ನು ಮೊದಲು ಸಿದ್ಧಪಡಿಸುತ್ತಿದ್ದರು. ತಳಭಾಗದಲ್ಲಿ ವರ್ತುಲಾಕಾರದ ಗುಣಿಯನ್ನು ತೆಗೆದು ಅದನ್ನು ಬೆಂಕಿಯ ಗೂಡಾಗಿ ಪರಿವರ್ತಿಸುತ್ತಿದ್ದರು. ಬೆಂಕಿಯ ಗೂಡಿನ ಕೆಳಗೆ ಬೂದಿಯ ಕಪಾಟು ನಿರ್ಮಿತವಾಗುತ್ತಿತ್ತು. ಹತ್ತಿರದಲ್ಲಿ ಒಬ್ಬ ಮನುಷ್ಯ ಆರಾಮವಾಗಿ ಕುಳಿತುಕೊಳ್ಳಲು ಅನುಕೂಲವಾಗುವಂತೆ

ಬೂದಿಯ ಗೂಡಿನ ಮಟ್ಟದವರೆಗೆ ಹಳ್ಳ ತೋಡಿ ಒಂದು ಕೋಣೆಯನ್ನು ಕಟ್ಟುತ್ತಿದ್ದರು. ಈ ಕೋಣೆಯಿಂದ ಬೂದಿಯ ಕಪಾಟಿನವರೆಗೆ ರಂಧ್ರದ ಮೂಲಕ ಸಂಪರ್ಕ ಕಲ್ಪಿಸುತ್ತಿದ್ದರು. ಕಪಾಟಿನಲ್ಲಿ ಸಂಗ್ರಹವಾದ ಬೂದಿಯನ್ನು ಆಗಾಗ ಎಳೆದು ಹಾಕುವುದೇ ಈ ಮನುಷ್ಯನ ಕೆಲಸವಾಗಿರುತ್ತಿತ್ತು. ಇನ್ನೊಂದು ಕಡೆ ಮಣ್ಣಿನ ಕೊಳವೆಗಳನ್ನು ಮಾಡಿ ಬೆಂಕಿಯ ಗೂಡಿಗೂ ಮತ್ತು ತಿದಿಗಳಿಗೂ ಸಂಬಂಧ ಏರ್ಪಡಿಸುತ್ತಿದ್ದರು. ತಿದಿಗಳನ್ನು ಒತ್ತುವ ಕೆಲಸಗಾರನಗೆ ಬೆಂಕಿಯ ಕಿಡಿಗಳು ಸಿಡಿಯದ ಹಾಗೆ ೫ ಅಡಿಯ ಅಡ್ಡಗೋಡೆ ಎಬ್ಬಿಸುತ್ತಿದ್ದರು. ತಿದಿಯನ್ನೊತ್ತಿ ಸುಮಾರು ೬ ಘಂಟೆಗಳ ಕಾಲ ಕುಲುಮೆ ಕೆಲಸ ಮಾಡುವಂತೆ ನೋಡಿಕೊಳ್ಳುತ್ತಿದ್ದರು. ಒತ್ತಡದ ಗಾಳಿ ಕುಲುಮೆಯ ಉಷ್ಣತೆಯನ್ನು ನಿರೀಕ್ಷಿತ ಮಟ್ಟಕ್ಕೆ ಏರಿಸುತ್ತಿತ್ತು. ಮಧ್ಯೆ ಮಧ್ಯೆ ಮೂಸೆಗಳ ಸ್ಥಳ ಬದಲಾವಣೆಗಳನ್ನು ಮಾಡಿ ಎಲ್ಲ ಮೂಸೆಗಳಿಗೂ ಏಕರೂಪವಾಗಿ ಉಷ್ಣತೆ ವ್ಯಾಪಿಸುವಂತೆ ನೋಡಿಕೊಳ್ಳುತ್ತಿದ್ದರು. ಈ ಪ್ರಕ್ರಿಯೆ ಮುಗಿದಾಗ ಮೆದು ಕಬ್ಬಿಣವು ಸಂಪೂರ್ಣವಾಗಿ ಇಂಗಾಲೀಕರಣಗೊಂಡು ಕರಗುವ ಸ್ಥಿತಿಯನ್ನು ತಲುಪುತ್ತಿತ್ತು. ಪರಿವರ್ತನೆಯು ಮುಗಿದಾಗ ಕಿಟ್ಟ ಪ್ರತ್ಯೇಕಗೊಂಡ ಉಕ್ಕಿನ ಗಡ್ಡಿ ರೂಪುಗೊಳ್ಳುತ್ತಿತ್ತು. ಅನಂತರ ಮೂಸೆಗಳನ್ನು ತಣ್ಣಗಾಗಲು ಬಿಡುತ್ತಿದ್ದರು. ಕಬ್ಬಿಣದಲ್ಲಿ ಇಂಗಾಲದ ಅಂಶ ಹೆಚ್ಚಿದಂತೆಲ್ಲ ಅದರ ಕರಗುವ ಬಿಂದು ಕಡಿಮೆಯಾಗುತ್ತಿತ್ತು. ಕೊನೆಗೆ ಮೂಸೆಯ ತಳಭಾಗದಂತೆ ಆಕಾರ ಪಡೆಯುತ್ತಿತ್ತು. ಇಂಗಾಲೀಕರಣ ಅಪರಿಪೂರ್ಣವಾಗಿದ್ದರೆ ಕಬ್ಬಿಣವು ಕರಗದೇ ಮೊದಲು ಹೇಗೆ ಜೋಡಿಸಿತ್ತೋ ಹಾಗೆಯೇ ಇರುತ್ತಿತ್ತು. ಉಕ್ಕಿನ ಗಟ್ಟಿಗಳನ್ನು ಚಾನ, ಚಾಕು, ಈಟಿ, ಕತ್ತಿ ಮುಂತಾದ ಆಯುಧಗಳಿಗೂ ಹಾಗೂ ವ್ಯವಸಾಯೋಪಕರಣಗಳಿಗೂ ಬಳಸುತ್ತಿದ್ದರು”.[೧೩] ಇದರಿಂದ ಕುಲುಮೆಗಳು ಯಾವ ರೂಪವನ್ನು ಪಡೆದಿದ್ದವು ಎಂಬುದು ವ್ಯಕ್ತವಾಗುತ್ತದೆ.

ಮುಂದೆ ಕ್ರಮೇಣವಾಗಿ ಕಬ್ಬಿಣ ತಯಾರಿಕೆಯನ್ನು ನಿಲ್ಲಿಸಿ ಕೇವಲ ಕಬ್ಬಿಣದ ಸಾಮಗ್ರಿಗಳನ್ನು ತಯಾರಿಕೆಗೆ ಇಳಿದಿರುವುದು ಕಂಡುಬರುತ್ತದೆ. ಮೂಲ ವೃತ್ತಿಯ ಪಾರಂಪರಿಕ ಕುಲುಮೆಗಳು ಎರಡು ಹೆದ್ದಿದಿಗಳನ್ನು ಹೊಂದಿತು. ಈ ಹೆದ್ದಿದಿಗಳು ಅಕ್ಕ-ಪಕ್ಕದಲ್ಲಿದ್ದು, ಒಂದೊಂದು ತಿದಿಯು ಒಂದು ಆಕಳು ಇಲ್ಲವೆ ದನ ಅಥವಾ ಎಮ್ಮೆ ಇಲ್ಲವೆ ಕೋಣ ಚರ್ಮದಿಂದ ರಚಿಸಿಲಾಗಿರುತ್ತಿತ್ತು. ತಳದಲ್ಲಿ ಒಬ್ಬ ಕಮ್ಮಾರನು ಎರಡು ಕೈಗಳಿಂದ ಆ ಹೆದ್ದಿದಿಗಳನ್ನು ಒತ್ತುತ್ತಿದ್ದನು. ತಿದಿ ಒತ್ತುವ ಕೆಲಸವು ಒಬ್ಬರ ನಂತರ ಮತ್ತೊಬ್ಬರಂತೆ ಸರದಿಯ ಮೇಲೆ ನಡೆಯುತ್ತಿತ್ತು ಎಂದು ತಿಳಿದು ಬರುತ್ತದೆ. ಕಾರಣ ತಿದಿ ಒತ್ತುವ ಕೆಸಲವು ಕಠಿಣವಾಗಿದ್ದು ಒಬ್ಬರೇ ಸುಮಾರು ೬ ಘಂಟೆಗಳ ಕಾಲ ಒತ್ತುವುದು ಅಸಾಧ್ಯವಾಗಿತ್ತು. ಎರಡು ತಿದಿಗಳ ಬಾಯಿಯ ಮುಂಭಾಗದಲ್ಲಿ ಕಬ್ಬಿಣದ ಕೊಳವೆಗಳಿದ್ದು, ಈ ಕೊಳವೆಗಳನ್ನು ಸರ ಎನ್ನುವ (ಜೇಡಿ ಮಣ್ಣು ಇಲ್ಲವೆ ಹುತ್ತದ ಮಣ್ಣು) ಮಣ್ಣಿನ ಕೊಳವೆಗೆ ಜೋಡಿಸಲಾಗಿರುತ್ತಿದ್ದವು. ಈ ಸರವು ಕುಲುಮೆಗೆ ಹೊಂದಿಕೊಂಡೆ ವರ್ತುಲಾಕಾರದ ಬೆಂಕಿಯ ಗುಳಿಗೆ ಜೋಡಿಸಲ್ಪಟ್ಟಿರುತ್ತಿತ್ತು. ಸರವು ಎಷ್ಟೇ ಶಾಖವನ್ನಾದರೂ ತಡೆಯುವ ವಿಶೇಷತೆಯಿಂದ ಕೂಡಿರುತ್ತಿತ್ತು. ಕಾರಣ ಕಮ್ಮಾರನು ಜೇಡಿ ಮಣ್ಣು ಇಲ್ಲವೆ ಹುತ್ತದ ಮಣ್ಣಿನಲ್ಲಿ ಹೊಟ್ಟಿನ ಬೂದಿ, ಇದ್ದಿಲು ಪುಡಿ ಮತ್ತು ಲದ್ದಿಯನ್ನು ಸಮಭಾಗದಲ್ಲಿ ಬೆರೆಸಿ ಚೆನ್ನಾಗಿ ಕುಟ್ಟಿ ಹದಗೊಳಿಸುತ್ತಿದ್ದನು.

ಕುಲುಮೆಗಳನ್ನು ಸಹಜವಾಗಿ ಸುಣ್ಣದ ಭಟ್ಟಿಯ ಆಕಾರದಲ್ಲಿ ನಿರ್ಮಿಸಲಾಗಿರತ್ತಿತ್ತು. ಕುಲುಮೆಗೆ ಕಚ್ಚಾವಸ್ತುಗಳಾಗಿ ಕಬ್ಬಿಣದ ಅದಿರು, ಬೆಣಚುಕಲ್ಲು, ಸುಣ್ಣದಕಲ್ಲು, ಕಲ್ಲಿದ್ದಲು ಮತ್ತು ಮರದ ಇದ್ದಿಲು ಹಾಗೂ ಕಸಕಡ್ಡಿಯನ್ನು ಉರುವಲಾಗಿ (ಇಂಧನವಾಗಿ) ಬಳಸುತ್ತಿದ್ದರು. ಈ ಕಚ್ಚಾ ವಸ್ತುಗಳನ್ನು ಪ್ರಮಾಣದಲ್ಲಿ ಪದರ ಪದರಾಗಿ ಕುಲುಮೆ ತುಂಬಿ ಬೆಂಕಿ ಹಾಕಿ ಶಾಖವನ್ನು ಕೊಡಲು ತಿದಿಯನ್ನು ನಿರಂತರವಾಗಿ ಊದಲಾಗುತ್ತಿತ್ತು. ಆಗ ಕಬ್ಬಿಣದ ಅದಿರು ಕರಗಿ ಶುದ್ಧ ಕಬ್ಬಿಣ ಸಿಗುವವರೆಗೂ ನರಂತರ ಸರದಿಯ ಮೇಲೆ ತಿದಿಯನ್ನು ಒತ್ತಲಾಗುತ್ತಿತ್ತು. ಕಬ್ಬಿಣ ತಯಾರಾಗಿದೆಯೇ ಇಲ್ಲವೋ ಎಂಬುದನ್ನು ಪರೀಕ್ಷಿಸಲು ಮುಖ್ಯ ಕುಲುಮೆಗಾರ ಇರುತ್ತಿದ್ದನು. ಸಂಪೂರ್ಣ ಕುಲುಮೆಯ ಮುಖ್ಯಸ್ಥನೂ ಕೂಡ ಹೌದು. ಅವನನ್ನು 'ಓಜ' ಎಂತಲೂ ಕರೆಯುವುದುಂಟು. ಕಬ್ಬಿಣ ಕರಗಿರುವುದು ರುಜುವಾತಾದ ಕೂಡಲೇ ಕುಲುಮೆಯ ತಳಭಾಗದಲ್ಲಿ ರಂಧ್ರವೊಂದನ್ನು ಮಾಡಿ ಶುದ್ಧ ಕಬ್ಬಿಣದ ಕರಗಿದ ರಸವು ರಂಧ್ರದ ಮೂಲಕ ಹೊರಗೆ ಹರಿದು ಬಂದು ಪಕ್ಕದ ಮತ್ತೊಂದು ತಗ್ಗಿಗೆ ನಿಲ್ಲುವಂತೆ ನೋಡಿಕೊಳ್ಳುತ್ತಿದ್ದರು. ನಂತರ ದೊರೆತ ಶುದ್ಧ ಕಬ್ಬಿಣವನ್ನು ನಾಲ್ಕು ಜನ ಸಹಾಯಕ ಕಮ್ಮಾರರು ಉದ್ದನೆಯ ಇಕ್ಕಳದ ಸಹಾಯದಿಂದ ಹೊರ ತೆಗೆದು ಅದನ್ನು ದುಂಡನೆಯ ಅಥವಾ ಬೇಕಾದ ಆಕೃತಿಗೆ ತರುತ್ತಿದ್ದುದಾಗಿ ತಿಳಿದು ಬರುತ್ತದೆ.

ನಂತರ ಪಡೆದ ಶುದ್ಧ ಕಬ್ಬಿಣವನ್ನು ಪುನಃ ಕಾಸಿ ಬಡಿದು ಸಾಮಗ್ರಿಗಳ ತಯಾರಿಕೆಯಲ್ಲಿ ಬಳಸುತ್ತಿದ್ದರು. ಕಮ್ಮಾರರು ಸರ್ವೆಸಾಮಾನ್ಯವಾಗಿ ಮಳೆಗಾಲದಲ್ಲಿ ಕಬ್ಬಿಣದ ಅದಿರನ್ನು ಕತ್ತೆ, ಕೋಣ ಹಾಗೂ ದನಕರುಗಳ ಮೇಲೆ ತರುತ್ತಿದ್ದರು. ತಂದ ಅದಿರನ್ನು ತಟ್ಟಿ, ಬುಟ್ಟಿ ಮತ್ತು ಭೂಮಿಯಲ್ಲಿ ಆಳವಾದ ಹಗೆವುಗಳನ್ನು ತೆಗೆದು ಸಂಗ್ರಹಿಸುತಿದ್ದರು ಎಂದು ಹಿರಿಯ ವಕ್ತೃಗಳು ಹೇಳುತ್ತಾರೆ. ಅನಂತರ ತಯಾರಿಸಿದ ಸಾಮಗ್ರಿಗಳು ಬೇರೆ ಬೇರೆ ಕಡೆ ಸಾಗಣೆಯಾಗುತ್ತಿದ್ದವು. ಸುಮಾರು ೬೦ ರಿಂದ ೭೦ ವರ್ಷಗಳಿಂದೀಚೆಗೆ ಜೋಡು ಹೆದ್ದಿದಿಗಳನ್ನು (ತಿದಿ) ಬಳಸುವುದನ್ನು ನಿಲ್ಲಿಸಿ ಕೇವಲ ಸಾಮಗ್ರಿಗಳ ತಯಾರಿಕೆಗೆ ಬೇಕಾದ ಒಂದೇ ತಿದಿಯನ್ನು ಬಳಸತೊಡಗಿದ್ದಾರೆ. ಎರಡು ತಿದಿಗಳನ್ನು ತೆಗೆದು ಅಣ್ಣ ತಮ್ಮಂದಿರು ಅದರಲ್ಲಿ ತಲಾ ಒಂದೊಂದು ತಿದಿಯನ್ನು ತಮ್ಮ ತಮ್ಮ ಕುಲುಮೆಯಲ್ಲಿ ಬಳಸುತ್ತಿದ್ದಾರೆ. ಇಲ್ಲವಾದಲ್ಲಿ ಒಂದನ್ನೇ ಬಳಸಿ ಮತ್ತೊಂದನ್ನು ಹಾಗೇಯೆ ಇಟ್ಟುಕೊಳ್ಳುತ್ತಿದ್ದುದಾಗಿ ತಿಳಿದು ಬರುತ್ತದೆ.

ಆಧುನಿಕ ಕೈಗಾರಿಕರಣದ ಆಗಮನದಿಂದಾಗಿ ಕಮ್ಮಾರರು ಆಕಳು ಇಲ್ಲವೆ ದನ ಅಥವಾ ಎಮ್ಮೆ ಇಲ್ಲವೆ ಕೋಣ ಚರ್ಮದ ತಿದಿಗಳನ್ನು ಬಳಸದೆ, ಆಧುನಿಕ ತಂತ್ರಜ್ಞಾನದ ಕೊಡುಗೆಯಾದ ಬ್ಲೋವರ್‌ನ್ನು (ಸುಲಭವಾಗಿ ಗಾಳಿಯನ್ನು ಪಡೆಯುವ ಉಪಕರಣ) ಬಳಸುವುದೇ ಹೆಚ್ಚಾಗಿದೆ. ಕೆಲ ಕಮ್ಮಾರರ ಮನೆ ಮತ್ತು ಕುಲುಮೆ ಸ್ಥಳಗಳು ಪ್ರತ್ಯೇಕವಾಗಿರುವುದರಿಂದ ಕೆಲಸವಾದ ನಂತರ ತಮ್ಮ ಕುಲುಮೆಯ ಸಾಮಗ್ರಿಗಳೊಂದಿಗೆ ಬ್ಲೋವರ್‌ನ್ನು ಹೊತ್ತೊಯ್ಯುವುದು ಸಹಜ ಕ್ರಮವಾಗಿದೆ. ಪ್ರಾಚೀನ ಕಾಲದ ತಿದಿ ಮತ್ತು ಉಪಕರಣಗಳನ್ನು ಬಳಸದೆ ಕೇವಲ ಅವಶ್ಯಕವೆನಿಸಿದ ಉಪಕರಣಗಳನ್ನು ಮಾತ್ರ ಬಳಸುತ್ತಾರೆ. ಸಾಮಾನ್ಯವಾಗಿ ಕಮ್ಮಾರರ ಕುಲುಮೆಗಳು ಬಯಲು ಇಲ್ಲವೆ ತೆಂಗಿನಗಿಡದ

ನೆರಳು ಅಥವಾ ನಾಲ್ಕು ಕಂಬಗಳನ್ನು ಹೂಳಿ ಕೆಲ ತೆಂಗಿನ ಗರಿಗಳನ್ನು ನೆರಳಿಗಾಗಿ ಮೇಲ್ಛಾವಣಿಯನ್ನಾಗಿ ಮಾಡಿಕೊಂಡು ಕೆಲಸ ಮಾಡಲಾಗುತ್ತದೆ. ಕಮ್ಮಾರರು ಇತ್ತೀಚೆಗೆ ಬಳಸುವ ಉಪಕರಣದಲ್ಲಿ ಅಲ್ಪ ಪ್ರಮಾಣದ ಬದಲಾವಣೆಯನ್ನು ಮಾಡಿಕೊಂಡು ಕುಲುಮೆಯಲ್ಲಿ ಕೆಲಸ ಮಾಡುತ್ತಿದ್ದಾರೆಯೇ ಹೊರತು ತಮ್ಮ ಹಿರಿಯರು ಬಳಸಿದ ಮತ್ತು ಪಾಲಿಸಿಕೊಂಡ ಕಟ್ಟುಪಾಡುಗಳನ್ನು ಸಂಪೂರ್ಣವಾಗಿ ಬಿಟ್ಟಿರುವುದಿಲ್ಲವೆಂಬುದು ಕಂಡುಬರುತ್ತದೆ.

ತರುವಾಯ ಕುಲುಮೆ ವೃತ್ತಿ ಸಂಪ್ರದಾಯ ಕೇವಲ ಒಂದೇ ಜನಾಂಗಕ್ಕೆ ಸೀಮಿತವಾಗದೇ ಬಯಲುಗಮ್ಮಾರ, ಘಿಸಾಡಿ, ಮುಸ್ಲಿಂ, ಬೇಡನಾಯಕ, ಹರಿಜನ (ಆದಿ ದ್ರಾವಿಡ), ಬಂಜಾರ (ಲಂಬಾಣಿ) ಮತ್ತು ಗೊಲ್ಲರಿಗೆ (ಯಾದವ) ಕುಲಕಸುಬಾಗಿ ಆಕರ್ಷಿತವಾಗಿರುವುದು ತಿಳಿಯುತ್ತದೆ. ಈ ಸಮುದಾಯಗಳು ಕುಲುಮೆ ವೃತ್ತಿಯನ್ನು ಮೈಗೂಡಿಸಿಕೊಂಡು ಅಲ್ಪಸ್ವಲ್ಪ ಬದಲಾವಣೆಗಳನ್ನು ತಂದುಕೊಂಡು ಕಬ್ಬಿಣದ ಸಾಮಗ್ರಿಗಳನ್ನು ಮಾಡಿ ತಮ್ಮ ಜೀವನವನ್ನು ಮುನ್ನಡೆಸಿಕೊಂಡು ಬರುತ್ತಿರುವುದು ತಿಳಿದು ಬರುತ್ತದೆ. ತಾವು ತಯಾರಿಸಿದ ಸಾಮಗ್ರಿಗಳನ್ನು ರೈತರಿಗೆ ಸಂತೆಗಳ ಮೂಲಕ ಮಾರಾಟ ಮಾಡುತ್ತಾರೆ ಮತ್ತು ಕೆಲ ಅಂಗಡಿಗಳಿಗೆ ಸಾಗಣೆ ಮಾಡುತ್ತಾರೆ ಎಂದು ಕೆಲ ವಕ್ತೃಗಳು ತಿಳಿಸುತ್ತಾರೆ. ಆಧುನಿಕ ಕೈಗಾರಿಕರಣದಿಂದ ಕೈಗಾರಿಕೆಗಳಲ್ಲಿ ರೈತನಿಗೆ ಬೇಕಾದ ಸಾಮಗ್ರಿಗಳನ್ನು ಕಡಿಮೆ ದರದಲ್ಲಿ ದೊರೆಯುತ್ತಿರುವುದರಿಂದ ಮೂಲ ಮತ್ತು ವೃತ್ತಿ ಸಂಬಂಧ ಕಮ್ಮಾರರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿ ಕೈಗಾರಿಕರಣಕ್ಕೆ ಪೈಪೋಟಿ ನೀಡದೆ ತೊಂದರೆಯನ್ನು ಅನುಭವಿಸುತ್ತಿದ್ದಾರೆ ಎಂದು ತಿಳಿದು ಬರುತ್ತದೆ.

ಪ್ರಾಚೀನ ಕುಲುಮೆಯಿಂದ ಕಬ್ಬಿಣ ಪಡೆಯುವ ವಿಧಾನ

ಕಬ್ಬಿಣದ ಅದಿರನ್ನು ಅನ್ವೇಷಿಸುವುದರಲ್ಲಿ ಹರಪ್ಪನ್ನರು ಹೆಚ್ಚು ಅನುಭವವನ್ನು ಹೊಂದಿದ್ದರು. ಗುಡ್ಡಗಾಡುಗಳಿಂದ ಸಂಗ್ರಹಿಸಿದ ಅದಿರನ್ನು ತಂದು, ಆರಿಸಿ, ಜಾಲಾಡಿ ಲೋಹದ ಖನಿಜವುಳ್ಳ ಅದಿರನ್ನು ಸಾಂದ್ರೀಕರಿಸುತ್ತಿದ್ದರು. ಆಮೇಲೆ ಸಿಕ್ಕ ಲೋಹದ ಅಂಶವುಳ್ಳ ಅದಿರನ್ನು ಕುಲುಮೆಗೆ ಸ್ಥಳಾಂತರ ಮಾಡುತ್ತಿದ್ದರು. ಕೆಳಭಾಗದಿಂದ ಇಂಧನವಾಗಿ ಇದ್ದಿಲನ್ನು ತುಂಬಿ ಕೆಂಡಮಾಡಿ ಕುಲುಮೆಯನ್ನು ಸಿದ್ಧಗೊಳಿಸುತ್ತಿದ್ದರು. ಅನಂತರ ಪದರ ಪದರವಾಗಿ ಅದಿರು ಮತ್ತು ಇದ್ದಿಲನ್ನು ತುಂಬುತ್ತಿದ್ದರು. ಕುಲುಮೆಗೆ ಅಳವಡಿಸಿದ ತಿದಿಗಳನ್ನು ಸತತವಾಗಿ ಒತ್ತಿ ಒತ್ತಡದ ಗಾಳಿಯನ್ನು ಕುಲುಮೆಯೊಳಗೆ ಬಿಡುತ್ತಿದ್ದರು. ಇದರಿಂದ ಹೆಚ್ಚಿನ ಶಾಖ ದೊರೆತು ಲೋಹವು ಅದಿರಿನಿಂದ ಬೇರ್ಪಟ್ಟು ದ್ರವೀಕರಣಗೊಳ್ಳುತ್ತಿತ್ತು. ಹಗುರವಾದ ಕಶ್ಮಲವೆಲ್ಲ ಮೇಲೆ ಬರುತ್ತಿದ್ದವು. ಈ ದ್ರವರೂಪದ ಲೋಹವನ್ನು ಕುಲುಮೆಯ ಕೆಳಭಾಗದಲ್ಲಿ ಮುಚ್ಚಿದ್ದ ಕಿಂಡಿಯನ್ನು ತೆಗೆಯುವುದರ ಮೂಲಕ ಹೊರಗೆ ಬಿಡುತ್ತಿದ್ದರು. ಹೀಗೆ ತಯಾರಾದ ಕಬ್ಬಿಣವು ಅಶುದ್ಧವಾಗಿತ್ತು. ಈ ಅಶುದ್ಧ ಕಬ್ಬಿಣವನ್ನು ಮತ್ತೆ ಕರಗಿಸಿದಾಗ ಶುದ್ಧ ರೂಪಕ್ಕೆ ಬರುತ್ತಿತ್ತು. ಆಮೇಲೆ ಅದನ್ನು ಅಚ್ಚುಗಳಿಗೆ ಹಾಕಿ ತಮಗೆ ಬೇಕಾದ ಆಕೃತಿಗಳನ್ನು ಪಡೆಯುತ್ತಿದ್ದಿರಬೇಕು.

ತಾಮ್ರ ಯುಗದಲ್ಲಿ ಪ್ರಾಚಿನರು ಗಳಿಸಿದ ಲೋಹ ತಂತ್ರಜ್ಞಾನದ ಅನುಭವ, ಕೌಶಲ್ಯತೆ, ಗಣಿ ಮಾಡುವ ಪದ್ಧತಿ ಇವೆಲ್ಲವೂ ಕಬ್ಬಿಣದ ತಂತ್ರಜ್ಞಾನಕ್ಕೆ ವಿಶೇಷವಾಗಿ ಲೋಹ ಪರಿಷ್ಕರಣೆ ಮತ್ತು ಕುಲುಮೆಯಲ್ಲಿ ಅದಿರನ್ನು ಕರಗಿಸುವುದು ಮುಂತಾದ ಕ್ರಿಯೆಗಳಿಗೆ ಹೆಚ್ಚು ನೆರವಾಯಿತೆನ್ನುವುದರಲ್ಲಿ ಬೇರೆ ಮಾತಿಲ್ಲ. ಅದರೆ ಆಗ ರೂಢಿಯಲ್ಲಿದ್ದ ಲೋಹ ತಂತ್ರಜ್ಞಾನವು ಹೊರ ಹಾಕುವ ಕಿಟ್ಟದಲ್ಲಿ ಕಬ್ಬಿಣವೂ ಸೇರಿದ್ದು, ಕಬ್ಬಿಣ ಲೋಹದ ನಷ್ಟ ಹೆಚ್ಚಾಗಿತ್ತು. ಕಬ್ಬಿಣದ ಮತ್ತೊಂದು ಅನುಷಂಗಿಕ ಸೇರ್ಪಡೆ ಎಂದರೆ ಸಿಲಿಕಾ. ಇದು ಕಬ್ಬಿಣದ ಆಕ್ಸೈಡ್ ಜೊತೆ ಸಂಯುಕ್ತಗೊಂಡು ಫಯಲೈಟ್ ಎಂಬ ವಸ್ತುವನ್ನು ಉತ್ಪಾದಿಸುತ್ತದೆ. ಕಿಟ್ಟದಲ್ಲಿ ಹೆಚ್ಚಿನ ಕಬ್ಬಿಣದ ಅಂಶವಿರುತ್ತಿದ್ದರಿಂದ ಮೃದು ಕಬ್ಬಿಣವನ್ನು ಕಾಸಿ, ಅದರಲ್ಲಿರುವ ಅಲೋಹ ಪದಾರ್ಥಗಳನ್ನು ತೆಗೆಯಲು ಅನೇಕ ಬಾರಿ ಬಿಸಿಯಾಗಿದ್ದಾಗಲೇ ಬಡಿದು ಬೇರ್ಪಡಿಸಿ ಅನಂತರವಷ್ಟೇ ಉಪಕರಣಗಳನ್ನು ಮಾಡಲು ಅದನ್ನು ಬಳಸಬೇಕಾದ ಪರಿಸ್ಥಿತಿ ಇತ್ತು. ಕಾದ ಕಬ್ಬಿಣವನ್ನು ಬಡಿದಾಗ ಕಿಡಿ ಹೊರಡುವುದು ನಿಲ್ಲುತ್ತಲೇ ಅದು ಶುದ್ಧ ಕಬ್ಬಿಣವಾಗಿ ಮಾರ್ಪಟ್ಟಿದೆ ಎಂದು ಕಮ್ಮಾರರು ಸುಲಭವಾಗಿ ತಿಳಿಯುತ್ತಿದ್ದರು. ಆದರೆ ವ್ಯವಸಾಯಕ್ಕೆ ಅಥವಾ ಆಯುಧಗಳಿಗೆ ಬೇಕಾದ ಗುಣಮಟ್ಟದ ಉಪಕರಣಗಳನ್ನು ಮಾಡುವುದು ಈ ಮೃದು ಕಬ್ಬಿಣ ಬಳಸಿ ಸಾಧ್ಯವಾಗುತ್ತಿರಲಿಲ್ಲ. ಇದನ್ನು ಗಟ್ಟಿ ರೂಪದಲ್ಲಿ ಪಡೆಯಲು ಬೇರೆಯದೆ ಆದ ತಂತ್ರಜ್ಞಾನ ಕಂಡುಕೊಳ್ಳಬೇಕಾಯಿತು. ಈ ದಿಶೆಯಲ್ಲಿ ಕೈಗೊಂಡ ಪ್ರಯತ್ನವೇ ಅದಿರಿಗೆ ಇಂಗಾಲವನ್ನು ಸೇರಿಸುವುದು, ಮೃದು ಕಬ್ಬಿಣಕ್ಕೆ ಶೇ. ೦.೧೫ ರಿಂದ ೧.೭ ಪ್ರಮಾಣ ಇಂಗಾಲ ಬೆರೆಸಿದರೆ ಅದು ಉಕ್ಕಾಗಿ ಪರಿವರ್ತನೆಯಾಗುತ್ತದೆ ಎಂಬುದನ್ನು ಕ್ರಮೇಣ ಕಂಡುಕೊಂಡರು. ಮೊದಮೊದಲು ಇಂಗಾಲವನ್ನು ನೇರವಾಗಿ ಕುಲುಮೆಯಲ್ಲಿ ಅದಿರಿಗೆ ಸೇರಿಸುತ್ತಿರಲಿಲ್ಲ. ಬದಲಾಗಿ ಇದ್ದಿಲನ್ನು ಪುಡಿಮಾಡಿ ಹರಡಿ ಅದರ ಮೇಲೆ ಕಾದ ಕಬ್ಬಿಣದ ರಸವನ್ನು ಸುರಿದು ಸುತ್ತಿಗೆಯಿಂದ ಬಡಿದು ತಗಡಾಗಿ ಪರಿವರ್ತಿಸುತ್ತಿದ್ದರು. ಹಾಗೆಯೇ ತಗಡನ್ನು ಇದ್ದಿಲಿನ ಸ್ತರದ ಮೇಲಿಟ್ಟು ಕಾಸಿ ಬಡಿದು ಮಡಿಸುತ್ತಿದ್ದರು. ಇಂಗಾಲಧ ಬಂಧಕ ಶಕ್ತಿ ಅದಿರನ್ನು ಉಕ್ಕಾಗಿ ಹೇಗೆ ಬದಲಿಸುತ್ತಿತ್ತು ಎಂದು ಕಮ್ಮಾರರು ವೈಜ್ಞಾನಿಕವಾಗಿ ಹೇಳಲು ಶಕ್ತರಾಗಿರಲಿಲ್ಲ. ಆದರೆ ಪರಿಣಾಮದಲ್ಲಿ ಅವರಿಗೆ ಬೇಕಾದ ಗಟ್ಟಿ ಕಬ್ಬಿಣ ದೊರೆಯುತ್ತದೆಂಬುದು ಅವರಿಗೆ ಅನುಭವದಿಂದ ತಿಳಿದಿತ್ತು. ಈ ತಂತ್ರ ಸುಧಾರಣೆ ಕಬ್ಬಿಣ ಲೋಹ ತಂತ್ರಜ್ಞಾನಕ್ಕೆ ಹೊಸ ದಿಕ್ಕನ್ನು ಕೊಟ್ಟಿತು. ವ್ಯವಸಾಯಕ್ಕೆ ಮತ್ತು ಯುದ್ಧೋಪಕರಣಗಳ ತಯಾರಿಕೆಗೆ ಇದರಿಂದ ಹೆಚ್ಚಿನ ಲಾಭವಾಯಿತು.[೧೪]

ಪ್ರಾಚೀನ ಕಾಲದಲ್ಲಿ ಕಬ್ಬಿಣದ ಉತ್ಪಾದನೆಗೆ ಬಳಸುವ ಸಾಮಗ್ರಿಗಳು

ಕಬ್ಬಿಣದ ಉತ್ಪಾದನೆಯು ಪ್ರಾಚೀನ ಕಾಲದಿಂದಲೂ ನಡೆಯುತ್ತಿರುವುದನ್ನು ಅರಿತಿದ್ದೇವೆ. ಕಬ್ಬಿಣದ ಉತ್ಪಾದನೆಯನ್ನು ಕೇವಲ ಒಂದು ಜನಾಂಗದವರೇ ಕುಲಕಸುಬನ್ನಾಗಿ ಮಾಡಿಕೊಂಡಿದ್ದರು. ಅಂತೆಯೇ ನಮ್ಮ ದೇಶದಲ್ಲೂ ಸಹ ಕೇವಲ ಒಂದೇ ಜನಾಂಗದವರು ಈ ಕೆಲಸದಲ್ಲಿ ಪರಿಣಿತಿ ಹೊಂದಿದ್ದರು ಎಂದು ಇತಿಹಾಸ ಪುಟಗಳಿಂದ ತಿಳಿಯಬಹುದು. ಅವರುಗಳು ಕಬ್ಬಿಣ ಉತ್ಪಾದನೆಯನ್ನು ಹೇಗೆ ಮಾಡುತ್ತಿದ್ದರು? ಕಬ್ಬಿಣ ಉತ್ಪಾದನೆಗೆ ಬೇಕಾದ ಸಕಲ ಸಾಮಗ್ರಿಗಳನ್ನು ಎಲ್ಲಿಂದ ತರುತ್ತಿದ್ದರು?

ಹೇಗೆ ಜೋಡಿಸುತ್ತಿದ್ದರು? ಎಂಬುದನ್ನು ತಿಳಿದುಕೊಂಡರೆ ಕಬ್ಬಿಣದ ಉತ್ಪಾದನೆಗೆ ಬೇಕಾಗುವ ಸಾಮಗ್ರಿಗಳ ಪರಿಚಯವಾಗುತ್ತದೆ. ಈ ಸಾಮಗ್ರಿಗಳನ್ನು ಕಬ್ಬಿಣ ಉತ್ಪಾದಿಸುವ ಎಲ್ಲ ಸಮುದಾಯಗಳು ಅವಶ್ಯಕಕವಾಗಿ ಬಳಸುತ್ತಾರೆ ಎಂಬುದು ವ್ಯಕ್ತವಾಗುತ್ತದೆ.

ಕಬ್ಬಿಣ ಉತ್ಪಾದನೆಗೆ ಸಂಬಂಧಿಸಿದ ಸಾಮಗ್ರಿಗಳು ಎಂದರೆ ಕೆಲಸಕ್ಕೆ ಅವಶ್ಯಕವಾದ ಸಾಮಗ್ರಿಗಳನ್ನು ಇಲ್ಲಿ ಪರಿಗಣಿಸಲಾಗಿದೆ. ಈ ಸಾಮಗ್ರಿಗಳಲ್ಲಿ ಎರಡು ವಿಧಗಳನ್ನಾಗಿ ಮಾಡಿಕೊಳ್ಳಲಾಗಿದೆ. ಒಂದು ಮೂಲವೃತ್ತಿಯ ಸಾಮಗ್ರಿಗಳು ಅಂದರೆ ಪಾರಂಪರಿಕವಾಗಿ ಕಬ್ಬಿಣ ತಯಾರಿಸುವಲ್ಲಿ ಬಳಸಲ್ಪುಡುತ್ತಿದ್ದ ಉಪಕರಣಗಳು. ಮತ್ತೊಂದು ಅನಂತರದ ಅಂದರೆ ಈಗಿನ ದಿನಮಾನಗಳಲ್ಲಿ ಕಬ್ಬಿಣದ ಪರಿಕರಗಳನ್ನು ಉತ್ಪಾದಿಸಲು ಬಳಸುವ ಉಪಕರಣಗಳು ಎಂದು ವಿಂಗಡಿಸಲಾಗಿದೆ.

ಅ. ಪಾರಂಪರಿಕ ಕಬ್ಬಿಣ ತಯಾರಿಕೆಗೆ ಸಂಬಂಧಿಸಿದ ಸಾಮಗ್ರಿಗಳು

ಕಬ್ಬಿಣ ತಯಾರಿಸುವುದಕ್ಕೆ ಸಾಮಾಗ್ರಿಗಳು ತುಂಬ ಅವಶ್ಯಕವಾಗಿರುತ್ತವೆ. ಕುಲುಮೆಯಲ್ಲಿ ಎಲ್ಲ ಸಾಮಾಗ್ರಿಗಳನ್ನು ಸರಿಯಾಗಿ ಜೋಡಿಸಿದ್ದರೆ ಮಾತ್ರ ಉತ್ತಮ ಗುಣಮಟ್ಟದ ಕಬ್ಬಿಣವನ್ನು ಪಡೆಯಲು ಸಾದ್ಯ. ಹಾಗಾಗಿ ಇಲ್ಲಿ ಕೆಳಗೆ ಕುಲುಮೆ ಅಥವಾ ಕಮ್ಮಗಾರದ ಚಿತ್ರ ಸಹಿತ ವಿವರಿಸಲಾಗಿದೆ.

೦೧. ಕಮ್ಮಗಾರ : ಕಬ್ಬಿಣವನ್ನು ತಯಾರಿಸುವ ನಿರ್ದಿಷ್ಟ ಪ್ರದೇಶಕ್ಕೆ 'ಕಮ್ಮಗಾರ' ಎಂದು ಕರೆಯುತ್ತಿದ್ದರು. ಕಮ್ಮಗಾರದಲ್ಲಿ ಕುಲುಮೆ ಕೆಲಸ ನಡೆಯುತ್ತಿರಬೇಕು. ಹಾಗಾಗಿ ಕಮ್ಮಗಾರ ಎಂದು ಕರೆಯುತ್ತಿದ್ದರು ಎಂದು ತಿಳಿದುಬರುತ್ತದೆ.

೦೨. ಕಮ್ಮಾರ : ಕಬ್ಬಿಣ ಕೆಲಸವನ್ನು ನಿರ್ವಹಿಸುವವನೇ ಕಮ್ಮಾರ. ಕಬ್ಬಿಣ ಪದವು ಕರ್ಪೂನ್ ಎಂಬ ಮೂಲದಿಂದ ಬಂದಿರಬೇಕೆಂದು ಹಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.[೧೫] ಬಹುಶಃ ಇಲ್ಲಿ 'ಕ' ಅಕ್ಷರವು ಕಬ್ಬಿಣವನ್ನು ಸಂಕೇತಿಸಿದರೆ 'ಮಾರ' ಎಂಬುದು ತಯಾರಿಸುವವನು ಎನ್ನುವುದನ್ನು ಸೂಚಿಸುತ್ತಿರಬೇಕು. ಕಬ್ಬಿಣ(ಕಪ್ಪು) ಸಾಮಾನ್ಯರ ಲೋಹ ಎಂಬ ಭಾವನೆ ಪ್ರಾರಂಭದಲ್ಲಿಯೇ ಬೇರೂರಿರುವಂತೆ ಕಂಡು ಬರುತ್ತದೆ. ಹಾಗಾಗಿ ಕಬ್ಬಿಣ ಕೆಲಸಗಾರರನ್ನು (Black Smith) ಕಮ್ಮಾರ ಎಂದು ಸಂಭೋದಿಸಲಾಗಿದೆ. ತೆಲುಗು ಭಾಷೆಯಲ್ಲಿ 'ಕಮ್ಮಾಲ' ಎಂದರೆ ಕನ್ನಡದ ಕಮ್ಮಾರ ಪದದ ಅರ್ಥವನ್ನೇ ಕೊಡುತ್ತದೆ.[೧೬] ಕಮ್ಮಾರ ಪದವು ಕಬ್ಬಿಣ ತಯಾರಿಸುವ ಜನಾಂಗವನ್ನು ಸೂಚಿಸುವ ಪದವಾಗಿದೆ. ಹಾಗಾಗಿ ಕಮ್ಮಾರನು ಕಬ್ಬಿಣವನ್ನು ತಯಾರಿಸುವ ವ್ಯಕ್ತಿಯಾಗಿದ್ದಾನೆ ಎಂದು ಅರ್ಥೈಸಿಕೊಳ್ಳಬಹುದು. ಪ್ರಾಚೀನ ಕಾಲದಲ್ಲಿ ಜೀವನಕ್ಕಾಗಿ ಕಬ್ಬಿಣದ ಕೆಲಸವನ್ನು ಆಯ್ಕೆ ಮಾಡಿಕೊಂಡಿರಬೇಕು. ನಂತರ ಯಾವುದೋ ಒಂದು ಪಂಗಡ ಇಲ್ಲವೆ ಸಮುದಾಯದವರೇ ಕಬ್ಬಿಣದ ಕೆಲಸವನ್ನು ನಡೆಸುತ್ತಿರಬೇಕು ಎಂಬುದು ಸ್ಪಷ್ಟವಾಗುತ್ತದೆ. ಆ ಜನಾಂಗವೇ ವಿಶ್ವಕರ್ಮ ವಾಗಿರಬೇಕು ಎಂದು ಅನಿಸುತ್ತದೆ. ಕಮ್ಮಾರರನ್ನು ಕಂಬಾರ, ಕುಲುಮೆಗಾರ, ವಿಶ್ವಕರ್ಮ ಎಂತಲೂ ಕರೆಯುವುದುಂಟು. ಇಂದು ಕಂಬಾರರಲ್ಲದೇ ಬಯಲುಗಮ್ಮಾರ, ಘಿಸಾಡಿ, ಮುಸ್ಲಿಂ, ಬೇಡನಾಯಕ, ಹರಿಜನ, ಲಂಬಾಣಿ, ಗೊಲ್ಲ ಜನಾಂಗದವರು ಕುಲುಮೆ ಕೆಲಸ ಮಾಡುತ್ತಿರುವುದು ಕಂಡುಬರುತ್ತದೆ.

ಕಬ್ಬಿಣ ಕೆಲಸ ಮಾಡುವುದಕ್ಕೆ ಕಮ್ಮಾರ ತುಂಬ ಅವಶ್ಯಕ. ಕಮ್ಮಾರ ಇರದೇ ಯಾವುದೇ ಕಬ್ಬಿಣ ಉತ್ಪಾದಿಸುವುದಕ್ಕೆ ಅಸಾಧ್ಯ. ಒಳ್ಳೆಯ ಕಮ್ಮಾರ ಇದ್ದರೆ ಒಳ್ಳೆ ಕಬ್ಬಿಣ ತಯಾರಿಸಬಹುದಾಗಿದೆ. ಕಮ್ಮಾರನು ಕಬ್ಬಿಣದ ಕರ್ತೃ ಎಂದು ಹೇಳಬಹುದು.



ಚಿತ್ರ ೧: ಗಾದಿಗನೂರಿನ ಕಮ್ಮಾರ ಮೌನೇಶ ಆಚಾರ್ಯರವರ ಕುಲುಮೆ

೦೩. **ಹೊಟ್ಟು ಮತ್ತು ಕಸಕಡ್ಡಿ :** ಕಬ್ಬಿಣ ಉತ್ಪಾದನೆಗೆ ಇದ್ದಿಲು ಅಲ್ಲದೆ ಭತ್ತದ ಹೊಟ್ಟನ್ನು ಸಹ ಬಳಸಲಾಗುತ್ತದೆ. ಇದು ಸಹ ವೇಗವಾಗಿ ಬೆಂಕಿ ಹತ್ತಿಕೊಳ್ಳುವುದಕ್ಕೆ ಸಹಕಾರಿಯಾಗಿದೆ. ಹಾಗೇಯೆ ಭತ್ತದ ಹೊಟ್ಟನ್ನು ಕಬ್ಬಿಣದ ವಸ್ತುಗಳನ್ನು ಜೋಡಿಸುವುದಕ್ಕೆ ಬಳಸಲಾಗುತ್ತದೆ ಎಂದು ವಕ್ತೃಗಳು ಹೇಳುತ್ತಾರೆ. ಎರಡು ಕಬ್ಬಿಣದ ವಸ್ತುಗಳನ್ನು ಜೋಡಿಸುವ ಸ್ಥಳದಲ್ಲಿ ಹೊಟ್ಟು ಹಾಕಿ ಬೆಂಕಿ ಹಚ್ಚಬೇಕು. ಬೆಂಕಿ ಹಚ್ಚುವುದಕ್ಕೆ ಕೆಲ ಕಸಕಡ್ಡಿಯನ್ನು ಬಳಸಲಾಗುತ್ತದೆ.

೦೪. **ಇದ್ದಿಲು :** ಇದ್ದಿಲು ಎಂದರೆ ಮರದ ಕಟ್ಟಿಗೆಯನ್ನು ಸುಟ್ಟ ಮೇಲೆ ಉಳಿದ ಕಪ್ಪು ಬಣ್ಣದ ಶೇಷವಾಗಿದ್ದು, ಇದು ಕಬ್ಬಿಣ ಉತ್ಪಾದನೆಗೆ ಬೆಂಕಿಯಾಗಿ ಸಹಾಯ ಮಾಡುತ್ತದೆ. ಮತ್ತು ಇದು ಇಂಗಾಲ ರೂಪದಲ್ಲಿ ಕಬ್ಬಿಣದಲ್ಲಿ ಸೇರುತ್ತದೆ. ಇದರಿಂದ ಕಬ್ಬಿಣದ ಗುಣಮಟ್ಟದ ಸಾಮರ್ಥ್ಯವು ಹೆಚ್ಚುತ್ತದೆ. ಇದ್ದಿಲನ್ನು ಗುಳಿಯ ಮೇಲೆ ಒಂದು ಪದರ ಪದರಾಗಿ ಕಬ್ಬಿಣದ ಮೇಲೆ ಹಾಕಲಾಗುತ್ತದೆ. ಗುಡ್ಡಗಾಡಿನ ಜನರು ಇದ್ದಿಲಿಗಾಗಿ ಗುಡ್ಡಗಾಡಿಗೆ ಹೋಗುತ್ತಾರೆ. ಅಲ್ಲಿ ಮರವನ್ನು ಬೆಂಕಿ ಹಚ್ಚಿ ಅರೆಬರೆ ಸುಟ್ಟ ಮರವನ್ನು ಹಸಿಮಣ್ಣಿನಿಂದ ಮೆತ್ತಿ ಆಮೇಲೆ ಒಣಗಿಸಿ ಇದ್ದಿಲಾಗಿ ಬಳಸುವರು. ಇಂತಹ ಇದ್ದಿಲು ಕಬ್ಬಿಣ ಕರಗುವುದಕ್ಕೆ ಬೇಕಾಗುವ ಶಾಖ ಒದಗಿಸುತ್ತದೆ.

೦೫. **ಅದಿರು :** ಅದಿರು ಎಂದರೆ ಕಬ್ಬಿಣವನ್ನು ತಯಾರಿಸಲು ಬೇಕಾಗುವ ಕಚ್ಚಾವಸ್ತುವಾಗಿದೆ. ಅದಿರಿನಲ್ಲಿ ಕಬ್ಬಿಣ ಅಂಶವಿರುತ್ತದೆ. ಅದಿರನ್ನು ತಂದು ಕುಲುಮೆಯಲ್ಲಿ ಹಾಕಿ ಶಾಖ ಉಣಿಸಿ ಮತ್ತು ಕಾಸಿ ಕಬ್ಬಿಣವನ್ನು ಪಡೆಯಲಾಗುತ್ತದೆ. ಕಬ್ಬಿಣ ಉತ್ಪಾದನೆಗೆ ಅದಿರು ತುಂಬ ಮಹತ್ವದ್ದು. ಅದಿರಿಲ್ಲದೆ ಕಬ್ಬಿಣ ತಯಾರಾಗದು. ಪೂರ್ವದಲ್ಲಿ ಅದಿರನ್ನು ಗಣಿಗಳಿಂದ, ಬೆಟ್ಟ-ಗುಡ್ಡಗಳಿಂದ, ಖನಿಜ ಹೊಂದಿದ ಗುಡ್ಡ ಗಾಡಿನಿಂದ ಮತ್ತು ಗಣಿಯ ಸಮ್ಮುಖದಲ್ಲೇ ಅದಿರನ್ನು ಜಜ್ಜಿ ಪುಡಿ

ಮಾಡಿ ಅಶುದ್ಧಗಳಿಂದ ಬೇರ್ಪಡಿಸಿ ಕೋಣ ಇಲ್ಲವೆ ಕತ್ತೆಗಳ ಹೇರು ಮತ್ತು ಬಂಡಿಗಳ ಮೂಲಕ ಕೂಡ ಸಾಗಿಸುತ್ತಿದ್ದರು. ಅನಂತರ ಅದಿರನ್ನು ಗಾಳಿಲ್ಲಿ ತೂರಿ, ನೀರಿನಲ್ಲಿ ಜಾಲಾಡಿದಾಗ ಗಟ್ಟಿಯಾದ ಕಬ್ಬಿಣ ಅಂಶವಿರುವ ಅದಿರು ತಳ ಸೇರುತ್ತದೆ. ಹೊಲಸು ಮೇಲೆ ತೇಲುತ್ತದೆ. ಮುಂದೆ ಗಟ್ಟಿ ಅದಿರನ್ನು ಕುಲುಮೆ ಸ್ಥಳಕ್ಕೆ ಒಯ್ಯಲಾಗುತ್ತದೆ. ಈ ಹಂತದಲ್ಲಿ ಗಟ್ಟಿಯಾದ ಅದಿರು ಉತ್ತಮ ಗುಣಮಟ್ಟದ ಕಬ್ಬಿಣ ಪಡೆಯುವುದಕ್ಕೆ ಅನುವು ಮಾಡಿಕೊಡುತ್ತದೆ. ಹೆಚ್ಚಾಗಿ ಕುಲುಮೆಗಳು ಅದಿರು ದೊರಕುವ ಪ್ರದೇಶದ ಹತ್ತಿರದಲ್ಲೇ ಕಬ್ಬಿಣ ತಯಾರಿಸುವ ಕಮ್ಮಾರರು ತಮ್ಮ ಸ್ಥಳವನ್ನು ಗುರುತಿಸಿ ಕೊಂಡಿರುತ್ತಾರೆ ಎಂದು ತಿಳಿಯುತ್ತದೆ. ಅದಿರುಗಳನ್ನು ತಟ್ಟೆ, ಬುಟ್ಟಿ ಮತ್ತು ಹಗೆವುಗಳಲ್ಲಿ ಸಂಗ್ರಹಿಸುತ್ತಾರೆ. ಬೇಕಾದಾಗ ತೆಗೆದು ಬಳಸುವರು.

೦೬. **ಬೆಣಚು ಕಲ್ಲು** : ಇದು ಒಂದು ಸಹಜವಾಗಿ ಭೂಮಿಯ ಮೇಲೆ ಸಿಗುವ ಕಲ್ಲಾಗಿದ್ದು ಇದನ್ನು ಕಬ್ಬಿಣ ಕಾಸುವುದಕ್ಕೆ ಹಂತ ಹಂತದ ಪದರಗಳಲ್ಲಿ ಬಳಸಲಾಗುತ್ತದೆ. ಇದು ಕಬ್ಬಿಣ ಕಾಯುವುದಕ್ಕೆ ಸ್ರಾವಕವಾಗಿ (flux) ಬಳಸಲಾಗುತ್ತದೆ. ಕಬ್ಬಿಣದಲ್ಲಿರುವ ಕಶ್ಮಲಗಳು ಸ್ರಾವಕ ಜೊತೆ ಸೇರಿ ಕಿಟ್ಟವಾಗಿ ಹೊರ ಬೀಳುತ್ತದೆ.

೦೭. **ಸುಣ್ಣದಕಲ್ಲು** : ಇದು ಸಹ ಬಿಳಿಬಣ್ಣದ ಕಲ್ಲಾಗಿದ್ದು, ಇದನ್ನು ಕಬ್ಬಿಣ ತಯಾರಿಕೆಯಲ್ಲಿ ಸ್ರಾವಕವಾಗಿ(flux) ಬಳಸಲ್ಪಡುತ್ತದೆ. ಕಬ್ಬಿಣ ತಯಾರಿಕೆಯಲ್ಲಿ ಇದು ಮಹತ್ತರ ಪಾತ್ರವನ್ನು ವಹಿಸುತ್ತದೆ. ಸುಣ್ಣದ ಕಲ್ಲನ್ನು ಹಾಕದೆ ಕಬ್ಬಿಣ ಉತ್ಪಾದಿಸುವುದಕ್ಕೆ ಅಸಾಧ್ಯ. ಸುಣ್ಣದ ಕಲ್ಲಿಗೆ ಕಶ್ಮಲಗಳನ್ನು ಆಕರ್ಷಿಸುವ ಗುಣ ತುಂಬ ಇರುತ್ತದೆ. ಹಾಗಾಗಿ ಕಬ್ಬಿಣದಲ್ಲಿರುವ ಅನುಪಯುಕ್ತ ವಸ್ತುಗಳನ್ನು ಆಕರ್ಷಿಸಿ, ಕೊನೆಯಲ್ಲಿ ಕಿಟ್ಟ ರೂಪದಲ್ಲಿ ಹೊರಹಾಕುತ್ತದೆ.

೦೮. **ಬೆಂಕಿ ಗುಂಡಿ** : ಇದನ್ನು ಬೆಂಕಿಯ ಗುಳಿ ಎಂತಲೂ ಕರೆಯುತ್ತಾರೆ. ಇದು ವರ್ತುಲಾಕಾರದ ಗುಳಿಯಾಗಿದ್ದು, ಇದನ್ನು ಬೆಂಕಿಯ ಗೂಡಾಗಿ ಪರಿವರ್ತಿಸಲಾಗುತ್ತದೆ. ಈ ಗುಂಡಿಯು ಕುಲುಮೆ ಸ್ಥಳದ ಮಧ್ಯೆ ಭಾಗದಲ್ಲಿರುತ್ತದೆ. ಇದರ ಒಂದು ಭಾಗವನ್ನು ಬೂದಿ ಕಪಾಟು ಕೋಣೆಗೆ ಹಾಗೂ ಮತ್ತೊಂದು ಭಾಗವನ್ನು ರಂಧ್ರಗಳ ಮೂಲಕ ಸರವರೆಗೆ ಜೋಡಿಸಲ್ಪಟ್ಟಿರುತ್ತದೆ. ಬೆಂಕಿ ಗುಂಡಿಯು ಕಬ್ಬಿಣವನ್ನು ಕರಗುವುದಕ್ಕೆ ನೆರವಾಗುತ್ತದೆ. ಈ ಗುಂಡಿಯಲ್ಲಿ ಕಬ್ಬಿಣ ಪಡೆಯುವುದಕ್ಕೆ ಬೇಕಾದ ಕಚ್ಚಾ ವಸ್ತುಗಳನ್ನು ಪದರ ಪದರವಾಗಿ ಇಡಲಾಗುತ್ತದೆ.

೦೯. **ಬೂದಿ ಕಪಾಟು** : ಇದು ಒಂದು ಕೋಣೆಯಾಗಿದ್ದು, ಬೆಂಕಿಗೂಡಿನ ಒಂದು ಪಕ್ಕದಲ್ಲಿ ಮಾಡಿರಲಾಗುತ್ತದೆ. ಇದರ ವಿಶೇಷತೆಯೆಂದರೆ, ಕಬ್ಬಿಣವನ್ನು ಕರಗಿಸುವಾಗ ಉಂಟಾಗುವ ಬೂದಿಯು ಬೂದಿ ಕಪಾಟಿನಲ್ಲಿ ಸಂಗ್ರಹಿಸಲಾಗಿರುತ್ತದೆ. ಬೂದಿಯ ಕಪಾಟಿನಲ್ಲಿ ಸಂಗ್ರಹವಾಗುವ ಬೂದಿಯನ್ನು ಬೆಂಕಿಯ ಗೂಡಿನ ಕೆಳಗಿನ ಕೋಣೆಗೆ ಎಳೆಯಲಾಗುತ್ತದೆ. ರಂಧ್ರಗಳ ಮೂಲಕ ಬೂದಿ ಕಪಾಟು ಮತ್ತು ಕೋಣೆಗೆ ಸಂಪರ್ಕವನ್ನು ಕಲ್ಪಿಸುತ್ತಿದ್ದರು.

೧೦. ಸರ : ಇದು ಒಂದು ಮಣ್ಣಿನ ಕೊಳವೆಯಾಗಿದ್ದು, ಹುತ್ತ ಇಲ್ಲವೆ ಜೇಡಿಮಣ್ಣಿನಂದ ಮಾಡಲಾಗಿರುತ್ತದೆ. ಇದನ್ನು ಚೆನ್ನಾಗಿ ಹದ ಬರುವ ಹಾಗೆ ತಟ್ಟಿ, ಕುಟ್ಟಿ ಕೊಳವೆ ಆಕಾರದಲ್ಲಿ

ಮೆತ್ತಿ ಒಣಗಿಸಲಾಗುತ್ತದೆ. ಇದರ ಅಳತೆಯ ಸುಮಾರು ೩ ರಿಂದ ೪ ಇಂಚು ಅಗಲವಾಗಿರುತ್ತದೆ. ಕ್ರಮೇಣವಾಗಿ ಅಗಲವು ಹೆಚ್ಚಾಗುತ್ತಾ ಮತ್ತೊಂದು ತುದಿಯಲ್ಲಿ ೪ ರಿಂದ ೫ ಇಂಚು ಅಗಲವಾಗಿರುತ್ತದೆ, ಉದ್ದವು ಎರಡು ಅಡಿಯವರೆಗೂ ಇರಬಹುದು. ಒಂದು ಭಾಗದಲ್ಲಿ ಕಬ್ಬಿಣದ ಕೊಳವೆಗೆ ಮತ್ತೊಂದು ಭಾಗದ ಬೆಂಕಿ ಗುಂಡಿಗೆ ಇದನ್ನು ಜೋಡಿಸಲಾಗಿರುತ್ತದೆ. ಇದು ಉಷ್ಣವನ್ನು ತಡೆಹಿಡಿಯುತ್ತದೆ. ಗಾಳಿಯನ್ನೂ ಕಬ್ಬಿಣದ ಭಟ್ಟಿಯೊಳಗೆ ಸಾಗಲು ಮಾಡಿದ ಮಣ್ಣಿನ ಕೊಳವೆಯೇ ಸರ.

೧೧. **ಹೆದ್ದಿದಿಗಳು :** ಇವುಗಳನ್ನು ಜೋಡಿ ತಿದಿಗಳು ಎಂತಲೂ ಕರೆಯುತ್ತಾರೆ. ಒಂದು ದೊಡ್ಡವಾದ ಆಕಳು ಇಲ್ಲವೆ ದನ ಅಥವಾ ಎಮ್ಮೆ ಇಲ್ಲವೆ ಕೋಣ ಚರ್ಮವನ್ನು ಬಳಸಿ ತಿದಿಯನ್ನು ತಯಾರಿಸುತ್ತಿದ್ದರು. ಹಾಗೇಯೆ ಜೋಡು ತಿದಿಗೆ ಎರಡು ಆಕಳು ಇಲ್ಲವೆ ದನ ಅಥವಾ ಎಮ್ಮೆ ಇಲ್ಲವೆ ಕೋಣ ಚರ್ಮವನ್ನು ಬಳಸಲಾಗುತ್ತಿತ್ತು. ತಿದಿಯ ಕೆಳಗಡೆ ಮತ್ತು ಮೇಲ್ಗಡೆಯ ಭಾಗದಲ್ಲಿ ಸಾಮಾನ್ಯವಾಗಿ ಅತ್ತಿ ಹಲಗೆ ಅಥವಾ ಹಲಸಿನ ಏಕ ಹಲಗೆಗಳನ್ನು ಸಿಲೆಂಡಿನಾಕಾರದಲ್ಲಿ ಕತ್ತರಿಸಿಕೊಳ್ಳಲಾಗುತ್ತಿತ್ತು. ಮೇಲ್ಭಾಗದ ಮತ್ತು ಕೆಳಭಾಗದ ಹಲಗೆಗಳನ್ನು ಹೊಂದಿಸಲು ಆಕಳು ಇಲ್ಲವೆ ದನ ಅಥವಾ ಎಮ್ಮೆ ಇಲ್ಲವೆ ಕೋಣ ಚರ್ಮವನ್ನು ಬಳಸುತ್ತಿದ್ದರು. ತಿದಿಯ ಮುಂದಿನ ಭಾಗಕ್ಕೆ ಕಬ್ಬಿಣದ ಕೊಳವೆಯನ್ನು ಹೊಂದಿಸುತ್ತಿದ್ದರು. ಎರಡು ತಿದಿಗಳಾಗಿದ್ದರೆ ಗಾಳಿ ಒಂದೇ ಕಡೆ ನುಗ್ಗುವಂತೆ ಎರಡೂ ತಿದಿಗಳ ಮುಂದಿನ ಭಾಗಕ್ಕೆ ಕಬ್ಬಿಣದ ಕೊಳವೆಗಳನ್ನು ಒಂದು ದೊಡ್ಡ ಮಣ್ಣಿನ ಕೊಳವೆಗೆ ಹೊಂದಿಸಲಾಗಿರುತ್ತಿತ್ತು. ಹಾಗೇಯೆ ಈ ಎರಡೂ ತಿದಿಗಳನ್ನು ಒತ್ತುವುದಕ್ಕೆ ನೆರವಾಗುವಂತೆ ತಿದಿಗಳ ಮೇಲಿನ ಭಾಗದಲ್ಲಿ ಕೈಗಳನ್ನು ತೂರಿಸಲು ನೆರವಾಗುವಂತೆ ಬಳೆಯಾಕಾರದ ಚರ್ಮದ ಪಟ್ಟಿಗಳನ್ನು ಅಳವಡಿಸುತ್ತಿದ್ದರು. ಎಂದು ವಕ್ತೃಗಳು ತಿಳಿಸುತ್ತಾರೆ. ಆ ತಿದಿಗಳನ್ನು ಇಬ್ಬರು ವ್ಯಕ್ತಿಗಳು ತಿದಿಯ ಹಿಂದಿನ ಭಾಗದಿಂದ ತಗ್ಗಿನಲ್ಲಿ ನಿಂತು ಸರದಿ ಪ್ರಕಾರ ಒತ್ತುತ್ತಿದ್ದರು ಎಂದು ತಿಳಿದುಬರುತ್ತದೆ. ತಿದಿ ಒತ್ತಿದಾಗ ಹೊರಟ ಗಾಳಿಯು ಕಬ್ಬಿಣದ ಕುಲುಮೆಯೊಳಗೆ ಹೋಗಿ ಕನಿಷ್ಟ ೧೫೬೦° ಸೆ. ಅಂದರೆ ಕಬ್ಬಿಣ ಕರಗುವುದಕ್ಕೆ ಬೇಕಾದ ಒತ್ತಡದ ಗಾಳಿಯನ್ನು ಸಮಾನವಾಗಿ ನೀಡುತ್ತಿದ್ದವು ಎಂದು ವಕ್ತೃಗಳು ತಿಳಿಸುತ್ತಾರೆ. ಇಂತಹ ತಿದಿಗಳು ಇಂದು ನೋಡುವುದಕ್ಕೆ ಅಪರೂಪವಾಗಿವೆ. ಗಾದಿಗನೂರ ಗ್ರಾಮದ ಕಮ್ಮಾರ ಮೌನೇಶ್, ಜಕಣಚಾರಿ, ಭೀಮೇಶ್ ಆಚಾರ್ಯ ಮತ್ತು ಹೊಸಪೇಟೆ ನಗರದಲ್ಲಿರುವ ಘಿಸಾಡಿ ಶಿವಾಜಿ ಚವ್ಹಾಣ್ ಅವರ ಮನೆಯಲ್ಲಿ ಆಕಳ ಚರ್ಮದಿಂದ ಮಾಡಿದ ತಿದಿಯನ್ನು ಬಳಸುತ್ತಿರುವುದು ಕಂಡುಬರುತ್ತದೆ.

೧೨. **ಅಡ್ಡಗೋಡೆ :** ಇದು ಕುಲುಮೆಯಲ್ಲಿನ ಬೆಂಕಿಗೂಡು ಮತ್ತು ತಿದಿಗಳ ಮಧ್ಯದಲ್ಲಿ ಅಂದರೆ ಸರ ಮತ್ತು ಕೊಳವೆ ಸಂದುವ ಜಾಗದಲ್ಲಿ ಸುಮಾರು ೫ ಅಡಿಗಳಷ್ಟು ಎತ್ತರ ಮತ್ತು ಒಂದು ಅಡಿ ಅಗಲದ ಗೋಡೆಯನ್ನು ಕಟ್ಟಲಾಗಿರುತ್ತದೆ. ಮಣ್ಣಿನ ಇಟ್ಟಿಗೆಯಿಂದ ಕಟ್ಟಿರುತ್ತಾರೆ. ಕೆಲವು ಸಲ ಅಡ್ಡಗೋಡೆಯ ಆಕಾರ ಹೆಚ್ಚು ಕಡಿಮೆ ಇರುವುದುಂಟು. ಇದು ತಿದಿ ಒತ್ತುವ ಕೆಲಸಗಾರನಿಗೆ ಬೆಂಕಿಯ ಕಿಡಿಗಳು ಸಿಡಿಯುವುದನ್ನು ತಡೆಯುವುದಕ್ಕೆ ಕಟ್ಟಲಾಗಿರುತ್ತದೆ.

೧೩. ಸಹಾಯಕ ಕಮ್ಮಾರರು : ಕುಲುಮೆ ಕೆಲಸದಲ್ಲಿ ಮುಖ್ಯ ಕಮ್ಮಾರರ ಸಹಾಯಕ್ಕಾಗಿ ಬೇಕಾಗುತ್ತಾರೆ. ಇವರನ್ನು ಚಮ್ಮಟಿಗೆ ಬಡಿಯುವವರು, ತಿದಿ ಒತ್ತುವವರು ಮತ್ತು ಬೂದಿ ಎಳೆಯುವವರು ಎಂದು ಹೆಸರಿಸಬಹುದು. ಚಮ್ಮಟಿಗೆ ಬಡಿಯುವುದಕ್ಕೆ ೪ ಜನ ಬೇಕಾಗುವರು, ತಿದಿ ಒತ್ತುವುದಕ್ಕೆ ಒಬ್ಬರಾದರೆ ಬೂದಿ ಎಳೆಯುವುದಕ್ಕೂ ಒಬ್ಬರು ಬೇಕಾಗುವರು. ಕುಲುಮೆಲ್ಲಿ ಬೇಕಾಗುವ ಸಹಾಯಕ ಕಮ್ಮಾರರು ಕುಲುಮೆ ಕೆಲಸದ ಮೇಲೆ ಅವಲಂಬಿಸಿರುತ್ತದೆ.

೧೪. ಬಕ್ಕಸಕೋಲು : ಈ ಉಪಕರಣವು ಕಬ್ಬಿಣದಿಂದ ಮಾಡಿದ ಉದ್ದನೆಯ ವಸ್ತುವಾಗಿದೆ. ಇದು ತುಂಬ ತೆಳುವಾಗಿದ್ದು ೦.೫ ಸೆಂ.ಮೀ. ನಿಂದ ೧.೫ ಸೆಂ.ಮೀ. ದಪ್ಪವಾಗಿರುತ್ತದೆ. ಉದ್ದವು ೫ ಅಡಿಯವರೆಗೂ ಇರುತ್ತದೆ. ಈ ಉಪಕರಣವು ಕಬ್ಬಿಣ ತಯಾರಿಕೆಯಲ್ಲಿ ಬಹು ಪ್ರಮುಖವಾಗಿ ಬಳಸಲ್ಪಡುತ್ತದೆ. ಕಬ್ಬಿಣ ರಸವಾಗಿದೆಯೋ ಇಲ್ಲವೋ ಎಂದು ಹದ ನೋಡಲು ಮತ್ತು ಇದ್ದಿಲು ಕಚ್ಚಾವಸ್ತುಗಳನ್ನು ತಳ್ಳುವುದಕ್ಕೆ ಹಾಗೂ ಸಮನಾಗಿ ಶಾಖವನ್ನು ಹಂಚುವುದಕ್ಕೆ ಬಳಸಲಾಗುತ್ತದೆ. ಕಮ್ಮಾರರೇ ಈ ಉಪಕರಣವನ್ನು ತಯಾರಿಸುತ್ತಾರೆ. ಇಂದು ಉಪಕರಣ ತಯಾರಿಕೆಯಲ್ಲೂ ಬಳಸುತ್ತಿದ್ದು ಇದರ ಉದ್ದ ೨.೫ ಅಡಿಯಿಂದ ೪ ಅಡಿಗಳಷ್ಟು ಇರುತ್ತದೆ. ಈ ಬಕ್ಕಸಗೋಲಿನ ಒಂದು ತುದಿಯ ಭಾಗ ಮಾತ್ರ ಸ್ವಲ್ಪ ಬಾಗಿದಂತಿರುತ್ತದೆ.

೧೫. ತಂಡಾಸ : ಇದು ಕೂಡ ಒಂದು ಉಪಕರಣವಾಗಿದ್ದು, ಕಬ್ಬಿಣ ತಯಾರಿಕೆಯಲ್ಲಿ ದೊಡ್ಡ ಗಾತ್ರದ ತಂಡಾಸಗಳನ್ನು ಉಪಯೋಗಿಸುತ್ತಿದ್ದರು ಎಂದು ತಿಳಿದು ಬರುತ್ತದೆ. ಬೆಂಕಿಗೂಡಿನಲ್ಲಿರುವ ಉಪಕರಣಗಳು ಮೇಲೆ ಇದ್ದಿಲು ಹಾಕಲೂ, ಬೆಂಕಿ ಹಿಡಿಯಲು, ಚಿಕ್ಕ ಪುಟ್ಟ ಉಪಕರಣಗಳನ್ನು ಹಿಡಿಯಲು ಈ ಉಪಕರಣ ಬಳಕೆಯಾಗುತ್ತದೆ. ಈ ತಂಡಾಸವನ್ನು ಇಂದಿಗೂ ನೋಡುಬಹುದಾಗಿದೆ.

೧೬. ಅಡಿಗಲ್ಲು : ಈ ಉಪಕರಣವು ಕಬ್ಬಿಣ ಉತ್ಪಾದನೆ ಮತ್ತು ಪರಿಕರ ತಯಾರಿಕೆಯಲ್ಲಿ ತುಂಬಾ ಮಹತ್ವದ ಪಾತ್ರವನ್ನು ವಹಿಸುತ್ತದೆ. ಈ ಉಪಕರಣವನ್ನು ಸ್ವತಃ ಕಮ್ಮಾರರೇ ತಯಾರಿಸಿ ಕೊಳ್ಳುತ್ತಿದ್ದರು. ಅಡಿಗಲ್ಲು ಸಾಮಾನ್ಯವಾಗಿ ಎರಡು ಅಡಿ ಚೌಕಾಕಾರದಲ್ಲಿರುತ್ತದೆ. ಹಾಗೇಯೆ ೨.೫ ಅಡಿ ಎತ್ತರವನ್ನು ಹೊಂದಿರುತ್ತದೆ. ಅರ್ಧ ಅಡಿಯಷ್ಟು ಅಡಿಗಲ್ಲು ಮರದ ತುಂಡಲ್ಲಿ ನೆಟ್ಟಿರುತ್ತಾರೆ. ಅಡಿಗಲ್ಲಿನ ಅಳತೆಯು ಆಯಾ ಕಮ್ಮಾರರ ಕುಲುಮೆಗಳ ಗಾತ್ರದ ಮೇಲೆ ಅವಲಂಬಿತವಾಗಿರುತ್ತದೆ. ಕೆಲವು ಅಡಿಗಲ್ಲು ಚೌಕಾಕಾರವಾಗಿರುತ್ತದೆ, ಇನ್ನೂ ಕೆಲವು ವೃತ್ತಾಕಾರದಲ್ಲಿರುತ್ತವೆ. ಹಾಗೆಯೇ ಇನ್ನೂ ಕೆಲವು ಅನಿರ್ದಿಷ್ಟ ಆಕಾರದಲ್ಲಿ ಕೂಡ ಇರುವುದು ಕಂಡುಬರುತ್ತದೆ.

ಅಡಿಗಲ್ಲು ಕಬ್ಬಿಣವನ್ನು ಬೇಕಾದ ರೂಪಕ್ಕೆ ತರುವಲ್ಲಿ ನೆರವಾಗುತ್ತದೆ. ಈ ಉಪಕರಣದ ಮೇಲೆ ಕಾದ ಕಬ್ಬಿಣವನ್ನಿಟ್ಟು ಚಮ್ಮಟಿಗೆಯಿಂದ ಬಡಿಬಡಿದು ಪರಿಕರಗಳನ್ನು ತಯಾರಿಸಲಾಗುತ್ತದೆ. ಇಂದು ಕೈಗಾರಿಕೆಗಳಲ್ಲಿ ತಯಾರಾದ ಮತ್ತು ಇಂಗ್ಲೆಂಡ್ ದೇಶದಿಂದ ಅಮದಾದ ಅಡಿಗಲ್ಲಿಗಳನ್ನು ಬಳಸುತ್ತಿರುವುದು ಕಂಡುಬರುತ್ತದೆ.

೧೭. ಹೆಗ್ಗಿಕ್ಕಳ : ಹೆಗ್ಗಿಕ್ಕಳವನ್ನು ಕುಲುಮೆಯಲ್ಲಿ ತಯಾರಾದ ಕಬ್ಬಿಣವನ್ನು ಹಿಡಿಯಲು ಬಳಸುತ್ತಾರೆ. ಕಬ್ಬಿಣವನ್ನು ಬೇಕಾದ ಆಕಾರಕ್ಕೆ ತರಲು ಈ ಹೆಗ್ಗಿಕ್ಕಳ ಪ್ರಮುಖ ಪಾತ್ರವನ್ನು

ವಹಿಸುತ್ತದೆ. ಇದಿಲ್ಲದೆ ಕಬ್ಬಿಣದ ಕೆಲಸ ಮಾಡುವುದು ಅಸಾಧ್ಯ. ಇದು ಸುಮಾರು ೭ ರಿಂದ ೮ ಅಡಿಯವರೆಗೆ ಉದ್ದವಾಗಿರುತ್ತದೆ. ಇದು ಸ್ವತಃ ಕಮ್ಮಾರರು ತಯಾರಿಸಿಕೊಂಡ ಉಪಕರಣವಾಗಿದೆ. ಈ ಉಪಕರಣವನ್ನು ಕೆ.ಗೊಲ್ಲರಹಳ್ಳಿ, ಚಿಲಕನಹಟ್ಟಿ ಮತ್ತು ಕಮಲಾಪುರದಲ್ಲಿ ಇಂದಿಗೂ ನೋಡಬಹುದಾಗಿದೆ. ಕೆಲವೇ ಕೆಲ ಮನೆಯವರು ಉಳಿಸಿಕೊಂಡಿದ್ದಾರೆ.

೧೮. ಚಮ್ಮಟಿಗೆ : ಈ ಉಪಕರಣವನ್ನು ಕುಲುಮೆಯಲ್ಲಿ ತಯಾರಾದ ಕಬ್ಬಿಣವನ್ನು ಅವಶ್ಯವಾದ ರೂಪದಲ್ಲಿ ತರುವುದಕ್ಕೆ ಚಮ್ಮಟಿಗೆ ಬಹು ಉಪಯುಕ್ತವಾಗಿದೆ. ಚಮ್ಮಟಿಗೆಯ ಸಹಾಯದಿಂದ ಕಬ್ಬಿಣವನ್ನು ಬೇಕಾದ ಆಕಾರದಲ್ಲಿ ಬಡಿದು ನಿರ್ದಿಷ್ಟ ಆಕೃತಿಗೆ ತರಬಹುದಾಗಿದೆ. ಇದನ್ನು ಹಿಂದೆ ಸ್ವತಃ ಕಮ್ಮಾರರೇ ತಯಾರಿಸಿಕೊಳ್ಳುತ್ತಿದ್ದರು. ಇದರ ಗಾತ್ರ ಮತ್ತು ತೂಕವು ಆಯಾ ಕಮ್ಮಾರ ಬಳಸುವುದರ ಮೇಲೆ ಅವಲಂಬಿತವಾಗಿರುತ್ತದೆ. ಸುಮಾರು ೧.೫ ಕೆ.ಜಿ.ಯಿಂದಿಡಿದು ೨೦ ಕೆ.ಜಿ ಯವರೆಗೂ ತಯಾರಿಸಿಕೊಳ್ಳುತ್ತಿದ್ದರು. ಉಪಕರಣದ ಎರಡೂ ಭಾಗ ಸಮತಟ್ಟಾಗಿದ್ದು ಚೌಕಾಕಾರ ದಲ್ಲಿರುತ್ತದೆ. ಇಂದು ಕೈಗಾರಿಕೆಗಳಲ್ಲಿ ತಯಾರಾಗಿ ಮಾರುಕಟ್ಟೆಯ ಚಮ್ಮಟಿಗೆಗಳು ಸಿಗುತ್ತವೆ. ಇವು ೧ ಪೌಂಡ್ ತೂಕ ನಂದ ೨೦ ಪೌಂಡ್ (ಇದು ಅಂತರಾಷ್ಟ್ರಿಯ ಮಟ್ಟದ ತೂಕದ ಅಳತೆಯ ಮಾಪನವಾಗಿದೆ ಒಂದೆ ಪೌಂಡ್ ತೂಕವು ೦.೪೫೪ ಕೆ.ಜಿ ತೂಕಕ್ಕೆ ಸಮವಾಗಿದೆ) ತೂಕದ ಚಮ್ಮಟಿಗೆಗಳನ್ನು ಕಮ್ಮಾರರು ಬಳಸುತ್ತಿರುವುದು ಕಂಡುಬರುತ್ತದೆ. ಚಮ್ಮಟಿಗೆ ಅನ್ನುವುದು ದೇಶಿ ಪದ. ಇಂಗ್ಲೀಷಿನಲ್ಲಿ **'ಹ್ಯಾಮರ್'** ಮತ್ತು 'ಗನ್' ಎಂದು ಕರೆಯುತ್ತಾರೆ.

ಆ. ಕಬ್ಬಿಣದ ಪರಿಕರಗಳ ತಯಾರಿಕೆಯಲ್ಲಿ ಬಳಸುವ ಸಾಮಗ್ರಿಗಳು

ಕಬ್ಬಿಣ ಪರಿಕರ ತಯಾರಿಸುವುದಕ್ಕೆ ಸಾಮಾಗ್ರಿಗಳು ತುಂಬ ಅವಶ್ಯಕವಾಗಿರುತ್ತವೆ. ಕುಲುಮೆಯಲ್ಲಿ ಎಲ್ಲ ಸಾಮಗ್ರಿಗಳನ್ನು ಸರಿಯಾಗಿ ಜೋಡಿಸಿದ್ದರೆ ಮಾತ್ರ ಉತ್ತಮ ಗುಣಮಟ್ಟದ ಪರಿಕರಗಳನ್ನು ಪಡೆಯಲು ಸಾದ್ಯ. ಹಾಗಾಗಿ ಇಲ್ಲಿ ಕೆಳಗೆ ಕುಲುಮೆಯಲ್ಲಿ ಬಳಸುವ ಸಾಮಗ್ರಿಗಳನ್ನು ಚಿತ್ರ ಸಹಿತ ವಿವರಿಸಲಾಗಿದೆ.

೦೧. ಕಮ್ಮಗಾರ : ಕುಲುಮೆ ಕೆಲಸ ಮಾಡಲು ಒಂದು ನಿರ್ದಿಷ್ಟವಾದ ಸ್ಥಳ ಬೇಕಾಗುತ್ತದೆ. ಈ ಸ್ಥಳವೇ ಕಮ್ಮಗಾರವಾಗಿದೆ. ಇಲ್ಲಿ ಕಬ್ಬಿಣ ಪರಿಕರಗಳನ್ನು ತಯಾರಿಸುವ ಕೆಲಸಗಳು ಜರುಗುತ್ತವೆ.

೦೨. ಕಮ್ಮಾರ : ಕಬ್ಬಿಣ ಪರಿಕರಗಳನ್ನು ಉತ್ಪಾದಿಸಲು ಮುಖ್ಯ ಕಮ್ಮಾರ ಬೇಕಾಗುತ್ತಾನೆ. ಕಮ್ಮಾರ ಇಲ್ಲದೆ ಕಬ್ಬಿಣದ ಪರಿಕರಗಳನ್ನು ತಯಾರಿಸುವುದು ಸಾಧ್ಯವಿಲ್ಲ. ಕುಲುಮೆಯಲ್ಲಿ ಮುಖ್ಯ ಕಮ್ಮಾರನಿಗೆ 'ಓಜ' ಎಂತಲೂ ಕರೆಯುತ್ತಾರೆ. ಕಮ್ಮಾರನಿಗೆ ಅನುಭವವಿರುತ್ತದೆ. ಒಳ್ಳೆಯ ಅನುಭವಿ ಕಮ್ಮಾರನದ್ದರೆ ಗುಣಮಟ್ಟದ ವಸ್ತುಗಳನ್ನು ತಯಾರಿಸಬಲ್ಲನು ಎಂದು ಹೇಳುತ್ತಾರೆ.



ಚಿತ್ರ ೨: ಮಲಪನಗುಡಿಯ ಕಮ್ಮಾರ ರಾಮಪ್ಪ ಆಚಾರ್ಯರವರ ಕುಲುಮೆಯ ದೃಶ್ಯ



ಚಿತ್ರ ೩: ಕೆ.ಗೊಲ್ಲರ ಹಳ್ಳಿಯ ಕಮ್ಮಾರ ಗಾಂಧಿ ಸೋಮಪ್ಪ ಆಚಾರ್ಯರವರ ಕುಲುಮೆಯಲ್ಲಿ ಬಳಸುವ ಉಪಕರಣಗಳು

೦೩. **ಕಬ್ಬಿಣ** : ಕಬ್ಬಿಣವು ಕಬ್ಬಿಣದ ವಸ್ತುಗಳನ್ನು ತಯಾರಿಸುವುದಕ್ಕೆ ಬೇಕಾಗುತ್ತದೆ. ಕಬ್ಬಿಣ ಇಲ್ಲದೆ ಯಾವುದೇ ಕಬ್ಬಿಣದ ವಸ್ತುಗಳನ್ನು ತಯಾರಿಸುವುದು ಅಸಾಧ್ಯ.

೦೪. **ಇದ್ದಿಲು** : ಕಬ್ಬಿಣವನ್ನು ಕಾಸುವುದಕ್ಕೆ ಉರುವಲಾಗಿ ಇದ್ದಿಲನ್ನು ಬಳಸಲಾಗುತ್ತದೆ. ಇದು ಶಾಖವನ್ನು ನೀಡುತ್ತದಲ್ಲದೆ ಇಂಗಾಲವನ್ನು ಕಬ್ಬಿಣದಲ್ಲಿ ಬಿಟ್ಟು ಕಬ್ಬಿಣ ಬೇಗ ಕರಗುವುದಕ್ಕೆ ನೇರವಾಗುತ್ತದೆ.

೦೫. **ಭತ್ತದ ತವಡು** : ಇದನ್ನು ಬೆಂಕಿ ಹಚ್ಚುವುದಕ್ಕೆ ಬಳಸಲಾಗುತ್ತದೆ ಮತ್ತು ಇದು ಶಾಖವನ್ನು ಹಿಡಿದಿಡುತ್ತದೆ. ಕಬ್ಬಿಣ ವಸ್ತುಗಳನ್ನು ಜೋಡಿಸುವಾಗ ಬಳಸಲಾಗುತ್ತದೆ. ಇಂದು ಕಾದ ಕಬ್ಬಿಣದ ವಸ್ತುಗಳನ್ನು ಜೋಡಿಸುವುದಕ್ಕೆ ರಸಾಯನಿಕ ವಸ್ತುವಾದ 'ಬಳೆಗಾರ'ವನ್ನು ಬಳಸಲಾಗುತ್ತಿದೆ.

ಇದು ಕಲ್ಲು ಸಕ್ಕರೆ ರೀತಿಯಲ್ಲಿ ಇರುತ್ತದೆ. ಬಿಳಿಯ ಬಣ್ಣದ್ದಾಗಿದ್ದು ಹರಳಿನಂತಿದ್ದು ಮಾರುಕಟ್ಟೆಯಲ್ಲಿ ದೊರೆಯುತ್ತದೆ.

೦೬. **ತಿದಿಗಳು** : ತಿದಿಗಳಲ್ಲಿ ಹೆದ್ದಿದಿಗಳು ಮತ್ತು ಜೋಡಿ ತಿದಿಗಳಿವೆ. ಹೆದ್ದಿದಿಗಳು ಎಂದರೆ ಆಕಳು ಇಲ್ಲವೆ ದನ ಅಥವಾ ಎಮ್ಮೆ ಇಲ್ಲವೆ ಕೋಣ ಚರ್ಮಗಳಿಂದ ಮಾಡಿದ ಏಕ ತಿದಿಗಳು ಮತ್ತೊಂದು ಆಕಳು ಇಲ್ಲವೆ ದನ ಅಥವಾ ಎಮ್ಮೆ ಇಲ್ಲವೆ ಕೋಣ ಚರ್ಮಗಳಿಂದ ಮಾಡಿದ ಮಾಡಿದ ಜೋಡು ತಿದಿಗಳು. ಕಮ್ಮಾರರೇ ತಿದಿಗಳನ್ನು ತಯಾರಿಸಿಕೊಳ್ಳುತ್ತಿದ್ದರು. ಕೆಲವು ಸಲ ತಯಾರು ಮಾಡಿದ ತಿದಿಗಳನ್ನು ಖರೀದಿಸಿ ತರುತ್ತಿದ್ದರು. ತಿದಿಗಳಿಂದ ಕಬ್ಬಿಣ ಕರಗುವುದಕ್ಕೆ ಬೇಕಾದ ಶಾಖ ಸಿಗುತ್ತಿತ್ತು. ಆಕಳ ಚರ್ಮದಿಂದ ಮಾಡಿದ ತಿದಿಗಳು ಕೇವಲ ಗಾದಿಗನೂರು ಗ್ರಾಮದ ಕಮ್ಮಾರ ಮೌನೇಶ್, ಜಕಣಚಾರಿ, ಭೀಮೇಶ್ ಆಚಾರ್ಯ ಮತ್ತು ಹೊಸಪೇಟೆ ನಗರದಲ್ಲಿನ ಘಿಸಾಡಿ ಶಿವಾಜಿ ಚವ್ಹಾಣರವರ ಕುಲುಮೆಯಲ್ಲಿದೆ.

೦೭. **ಬ್ಲೋವರ್** : ಪ್ರಾಚೀನ ತಿದಿಯ ಆಧುನಿಕ ರೂಪಾಂತರವೇ ಬ್ಲೋವರ್ ಇಲ್ಲವೆ ಬ್ಲೋರ್ ಆಗಿದೆ. ಈ ಯಂತ್ರವು ಚಕ್ರವನ್ನು ಹೊಂದಿದ್ದು ಮೇಲ್ಕವಚವು ಸುರಕ್ಷೆಗಾಗಿ ಇದೆ. ಚಕ್ರ ತಿರುಗಿಸಿದಾಗ ಹೊರಬರುವ ಗಾಳಿಯನ್ನು ತಡೆಹಿಡಿದು ಕೊಳವೆ ಮೂಲಕ ಹೊರಗಾಕುವ ಕಾರ್ಯವನ್ನು ಈ ಯಂತ್ರ ಮಾಡುತ್ತದೆ. ಹೀಗೆ ಹೊರಬರುವ ಗಾಳಿಯು ಕುಲುಮೆಯಲ್ಲಿ ಬೆಂಕಿಯನ್ನು ಉತ್ಪಾದಿಸಲು ಬಳಸಲಾಗುತ್ತದೆ. ಚಿಕ್ಕ ಪುಟ್ಟ ಕೆಲಸಗಳಿಗೆ ಈ ಬ್ಲೋವರ್ ಉತ್ತಮ ಗಾಳಿಯಂತ್ರವಾಗಿ ಕಾರ್ಯ ನಿರ್ವಹಿಸುತ್ತದೆ. ಬ್ಲೋವರ್‌ನಿಂದಾಗಿ ಹಿಂದೆ ಬಳಸುತ್ತಿದ್ದ ತಿದಿಗಳು ಶೂನ್ಯವಾಗಿವೆ.

೦೮. **ಸಹಾಯಕ ಕಮ್ಮಾರರು** : ಕಮ್ಮಾರ ಕೆಲಸದಲ್ಲಿ ಮುಖ್ಯ ಕಮ್ಮಾರನಿಗೆ ಕೆಲಸದಲ್ಲಿ ಸಹಾಯ ಮಾಡುವುದಕ್ಕೆ ಬೇಕಾಗುವರು. ನಾಲ್ಕು ಜನ ಚಮ್ಮಟಿಗೆ ಬಡಿಯುವವರು, ಒಬ್ಬ ತಿದಿ ಒತ್ತುವನು ಇರಬೇಕಾಗುತ್ತದೆ. ಇವರುಗಳು ಪರಿಕರ ತಯಾರಿಕೆಯಲ್ಲಿ ಮುಖ್ಯ ಕಮ್ಮಾರನಗೆ ಸಹಾಯವಾಗುವರು.

೦೯. **ಅಡಿಗಲ್ಲು** : ಕಬ್ಬಿಣದ ಪರಿಕರಗಳನ್ನು ತಯಾರಿಸುವುದಕ್ಕೆ ಅವಶ್ಯಕವಾದ ಉಪಕರಣವು ಅಡಿಗಲು ಆಗಿದೆ. ಇದನ್ನು ಸ್ವತಃ ಕಮ್ಮಾರರು ತಯಾರಿಸಿಕೊಳ್ಳುತ್ತಿದ್ದರು. ಸಾಮಾನ್ಯವಾಗಿ ೨ ಅಡಿ ಚೌಕಾಕಾರದಲ್ಲಿದ್ದು ೨.೫ ಅಡಿ ಎತ್ತರವನ್ನು ಹೊಂದಿರುತ್ತದೆ. ಅಡಿಗಲ್ಲಿನ ಮೇಲೆ ಕಬ್ಬಿಣದ ವಸ್ತುಗಳನ್ನು ಇಟ್ಟು ಚಮ್ಮಟಿಗೆಯಿಂದ ಬಡಿದು ಪರಿಕರಗಳನ್ನು ತಯಾರಿಸಲಾಗುತ್ತದೆ. ಕೆಲವು ಅಡಿಗಲ್ಲುಗಳು ಅನಿರ್ದಿಷ್ಟ ಆಕಾರದಲ್ಲಿರುತ್ತವೆ. ಇಂದು ಮಾರುಕಟ್ಟೆಯಲ್ಲಿ ಸಿಗುತ್ತಿರುವ ಇಂಗ್ಲೆಂಡಿನ ಅಡಿಗಲ್ಲನ್ನು ಬಳಸುತ್ತಿದ್ದಾರೆ. ಹೊಸಪೇಟೆ ನಗರದ ಡ್ಯಾಂ ರಸ್ತೆಯ ಬಳಿಯಿರುವ ಕಮ್ಮಾರ ಮೆಹಬೂಬ ಬಾಷರವರ ಕುಲುಮೆಯಲ್ಲಿ ಇಂಗ್ಲೆಂಡ್ ದೇಶದಿಂದ ಅಮದಾದ (ಗೋವ ಮೂಲಕ ಬಿಜಾಪುರ ಮಾರ್ಗವಾಗಿ) ಅಡಿಗಲ್ಲನ್ನು ನೋಡಬಹುದು.

೧೦. **ಚಮ್ಮಟಿಗೆ** : ಈ ಉಪಕರಣವನ್ನು ಕಾದ ಕಬ್ಬಿಣವನ್ನು ಬಡಿಯಲು ಬಳಸಲಾಗುತ್ತದೆ. ನಮಗೆ ಬೇಕಾದ ಆಕೃತಿಯನ್ನು ಈ ಉಪಕರಣವನ್ನು ಬಳಸಿ ಪಡೆಯಬಹುದಾಗಿದೆ. ಕಮ್ಮಾರರು

ತಾವೇ ತಯಾರಿಸಿಕೊಳ್ಳುತ್ತಿದ್ದರು. ಆದರೆ ಇಂದು ಮಾರುಕಟ್ಟೆಯಲ್ಲಿ ವಿವಿಧ ರೀತಿಯ ತೂಕದ ಚಮ್ಮಟಿಗೆಗಳು ದೊರಕುತ್ತವೆ. ೧.೫ ಪೌಂಡ್ ತೂಕದಿಂದ ಹಿಡಿದು ೨೦ ಪೌಂಡ್ ತೂಕದ ವಿವಿಧ ರೀತಿಯ ಚಮ್ಮಟಿಗೆಗಳು ದೊರೆಯುತ್ತವೆ. ಚಮ್ಮಟಿಗೆಯನ್ನು ಇಂಗ್ಲೀಷ್‌ನಲ್ಲಿ 'Hammer' ಅಥವಾ 'Gun' ಎಂದು ಕರೆಯುತ್ತಾರೆ. ಚಮ್ಮಟಿಗೆ ಎಂಬುದು ಶುದ್ಧ ದೇಶೀ ಪದವಾಗಿದೆ.

೧೧. **ಒಲೆ ಇಟ್ಟಿಗೆ ಅಥವಾ ಅಡ್ಡಗೋಡೆ** : ಈ ಗೋಡೆಯನ್ನು ಕುಲುಮೆ ಇಲ್ಲವೆ ತಿದಿ ಅಥವಾ ಬ್ಲೋವರ್‌ನ ಮಧ್ಯಭಾಗಕ್ಕೆ ಅಂದರೆ ಸರ ಮತ್ತು ಕೊಳವೆಯ ನಡುವೆ ಒಂದು ಎತ್ತರವಾಗ ಮಣ್ಣಿನ ಗೋಡೆಯನ್ನು ನಿರ್ಮಿಸಲಾಗಿರುತ್ತದೆ. ಈ ಗೋಡೆಯ ಗಾತ್ರ ಆಯಾ ಕಮ್ಮಾರನ ಮೇಲೆ ಅವಲಂಬಿತವಾಗಿರುತ್ತದೆ. ತಿದಿಯೊತ್ತುವ ಮತ್ತು ತಿದಿಗೆ ಬೆಂಕಿಯಿಂದ ಸಿಡಿಯುವ ಕಿಡಿಗಳು ತಾಗದಿರಲೆಂದು ಈ ಗೋಡೆಯನ್ನು ನಿರ್ಮಿಸಿರಬೇಕು ಈ ಗೋಡೆಯು ಬೆಂಕಿ ಚದುರದಂತೆ ಕಾಯ್ದುಕೊಳ್ಳಲು ಸಹ ಸಹಕಾರಿಯಾಗಿರುತ್ತದೆ.

೧೨. **ಕೈಸುತ್ತಿಗೆ** : ಈ ಉಪಕರಣವನ್ನು ಕಮ್ಮಾರರು ಕೈಯಲ್ಲಿ ಹಿಡಿದಿಟ್ಟುಕೊಂಡಿರುತ್ತಾರೆ. ಇದನ್ನು ಸಾಮಾನ್ಯವಾಗಿ ಕಬ್ಬಿಣದ ಚಿಕ್ಕ ಸಲಕರಣೆಗಳನ್ನು ತಯಾರಿಸುವಲ್ಲಿ ಬಳಸಲಾಗುತ್ತದೆ. ಪ್ರಾಚೀನರು ಚಮ್ಮಟಿಗೆ ಎಂತಲೂ ಕರೆಯುವರು. ಕಮ್ಮಾರರೇ ಈ ಉಪಕರಣವನ್ನು ತಯಾರಿಸಿ ಕೊಳ್ಳುತ್ತಾರೆ. ಇದು ೧ ಕೆ.ಜಿ.ಯಿಂದ ೫ ಕೆ.ಜಿ. ಯವರೆಗೂ ಇರುವ ಸುತ್ತಿಗೆಗಳನ್ನು ತಯಾರಿಸಿ ಕೊಳ್ಳುತ್ತಿದ್ದರು. ಇಂದು ಮಾರುಕಟ್ಟೆಯಲ್ಲಿ ಸಿದ್ಧವಸ್ತುವಾಗಿ ೧ ಪೌಂಡ್ ತೂಕದಿಂದ ೪ ಪೌಂಡಿನವರೆಗೂ ಇರುವ ಕೈಸುತ್ತಿಗೆಗಳು ದೊರಕುತ್ತಿವೆ.

೧೩. **ಇಕ್ಕಳ** : ಈ ಉಪಕರಣವನ್ನು ಕಾದ ಕಬ್ಬಿಣದ ಪರಿಕರಗಳನ್ನು ಹಿಡಿದುಕೊಳ್ಳಲು ಬಳಸಲಾಗುತ್ತದೆ. ಕಮ್ಮಾರರೇ ಈ ಉಪಕರಣವನ್ನು ತಯಾರಿಸುತ್ತಾರೆ. ಸುಮಾರು ೨ ಅಡಿಯಿಂದ ೮ ಅಡಿಯವರೆಗೆ ಇರುತ್ತದೆ. ಆಯಾ ಕುಲುಮೆಗಾರರ ಕೆಲಸದ ಮೇಲೆ ಇಕ್ಕಳದ ಅಳತೆಯು ನಿರ್ಧರಿತವಾಗಿರುತ್ತದೆ. ಇಂದು ಬಳಸುತ್ತಿರುವ ಇಕ್ಕಳಗಳು ಸುಮಾರು ೨ ಅಡಿಗಳಷ್ಟು ಇವೆ. ಇಕ್ಕಳದಲ್ಲಿ ಹಲವಾರು ರೀತಿಗಳಿವೆ.

೧೪. **ಗುದ್ಲಿಕ್ಕಳ** : ಈ ಉಪಕರಣವನ್ನು ಗುದ್ಲಿಯಂತಹ ಕೃಷಿಯೋಗ್ಯ ಉಪಕರಣಗಳನ್ನು ಹಿಡಿಯಲು ಬಳಸಲಾಗುತ್ತದೆ. ಇದು ಸಹ ಸುಮಾರು ಎರಡು ಅಡಿ ಉದ್ದವನ್ನು ಹೊಂದಿದ್ದು ಮುಂಭಾಗ ಸ್ವಲ್ಪ ಅಗಲವಾಗಿರುತ್ತದೆ. ಗುದ್ಲಿಕ್ಕಳದ ಗಾತ್ರವು ಕಮ್ಮಾರ ನಡೆಸುವ ಕುಲುಮೆಗಳ ಮೇಲೆ ಅವಲಂಬಿತವಾಗಿರುತ್ತದೆ. ಸ್ವತಃ ತಾವೇ ತಯಾರಿಸುತ್ತಾರೆ. ಇಂದು ಸಿದ್ಧವಸ್ತುವಾಗಿ ಮಾರುಕಟ್ಟೆಯಲ್ಲಿ ದೊರೆಯುತ್ತಿದೆ.

೧೫. **ಜಗ್ಗಿಕ್ಕಳ ಅಥವಾ ಬೆಸುಗೆ ಇಕ್ಕಳ** : ಈ ಉಪಕರಣವನ್ನು ಸಾಮಾನ್ಯವಾಗಿ ಬೆಸುಗೆ ಹಾಕುವಾಗ ಸಲಕರಣೆಗಳನ್ನು ಹಿಡಿದುಕೊಳ್ಳಲು ಉಪಯೋಗಿಸುವ ಇಕ್ಕಳವಾಗಿದೆ. ಸಾಮಾನ್ಯವಾಗಿ ಬಂಡಿಯ ಗಾಲಿಗೆ ಹಳಿಯನ್ನು ಹಚ್ಚುವಾಗ ಇದನ್ನು ಬಳಸಲಾಗುತ್ತದೆ. ಇದು ಸುಮಾರು ೪ ರಿಂದ ೬ ಅಡಿಯವರೆಗೆ ಇರುತ್ತದೆ. ಈ ಉಪಕರಣವನ್ನು ಕಮ್ಮಾರರು ತಾವೇ ತಯಾರಿಸಿಕೊಳ್ಳುತ್ತಿದ್ದರು.

ಇದನ್ನು ಕಬ್ಬಿಣ ಮತ್ತು ಕಟ್ಟಿಗೆಯಿಂದಲೂ ತಯಾರಿಸಬಹುದು. ಮತ್ತು ಈ ಇಕ್ಕಳ ಸಂಪೂರ್ಣವಾಗಿ ಕಬ್ಬಿಣದಿಂದಲೂ ಇರುವುದನ್ನೂ ಕಾಣಬಹುದು. ಹಾಗೇಯೆ ಇಕ್ಕಳದ ಮುಂಭಾಗ ಕಬ್ಬಿಣದ್ದಾಗಿದ್ದು ಹಿಡಿಯು ಕಟ್ಟಿಗೆಯನ್ನು ಒಳಗೊಂಡಿರುತ್ತದೆ. ಈ ಇಕ್ಕಳದಲ್ಲಿ ಮುಂಭಾಗ ಸ್ವಲ್ಪ ಬಾಗಿರುತ್ತದೆ. ಮತ್ತು ಇನ್ನೊಂದು ಮುಂಭಾಗದ ಸ್ವಲ್ಪ ಕೆಳಗಿನಿಂದ ಜೋಡಿಸಿದ ಕಬ್ಬಿಣದ ಪಟ್ಟಿಯು ಸಡಿಲವಾಗಿ ತೂಗುತ್ತಿರುತ್ತಿದ್ದು, ಬಂಡಿ ಗಾಲಿಯ ಹಳಿಯನ್ನು ಗಟ್ಟಿಯಾಗಿ ಹಿಡಿಯುವುದಕ್ಕೆ ಇದು ನೆರವಾಗುತ್ತದೆ. ಈ ಇಕ್ಕಳವನ್ನು ಜಗ್ಗಿಕ್ಕಳ, ಜಗ್ಗುನಾಯಿ ಅಥವಾ ಜಗ್ಗುಂಡಿ ಎಂತಲೂ ಕರೆಯುತ್ತಾರೆ.

೧೬. **ಬಿಲ್ಲಿಕ್ಕಳ :** ಈ ಉಪಕರಣವನ್ನು ಕಾದ ಕಬ್ಬಿಣವನ್ನು ಹಿಡಿದುಕೊಳ್ಳಲು ಬಳಸುತ್ತಾರೆ. ಈ ಇಕ್ಕಳದ ಮುಂಭಾಗ ಸ್ವಲ್ಪ ಬಿಲ್ಲಿನಾಕಾರದಲ್ಲಿ ಬಾಗಿರುವುದರಿಂದ ಬಲ್ಲಿಕ್ಕಳ ಎಂದು ಕರೆಯುತ್ತಿರಬೇಕು ಎಂದು ವ್ಯಕ್ತವಾಗುತ್ತದೆ.

೧೭. **ಡೊಪ್ಪ ಇಕ್ಕಳ :** ಈ ಇಕ್ಕಳವನ್ನು ಕಾದ ಕಬ್ಬಿಣ ಹಾರಿಯನ್ನು ಹಿಡಿಯಲು ಬಳಸುತ್ತಾರೆ. ಈ ಇಕ್ಕಳವನ್ನು ಕಮ್ಮಾರರು ಸ್ವತಃ ತಾವೇ ತಯಾರಿಸಿಕೊಳ್ಳುತ್ತಾರೆ. ಇದು ಸಹ ಸುಮಾರು ೨ ಅಡಿಯ ಉದ್ದವನ್ನು ಹೊಂದಿದ್ದು, ಬೇರೆ ಬೇರೆ ಗಾತ್ರದ ಇಕ್ಕಳಗಳನ್ನು ಕುಲುಮೆಗಳು ಹೊಂದಿರುತ್ತವೆ.

೧೮. **ಕೊಡಲಿ ಇಕ್ಕಳ :** ಈ ಉಪಕರಣವನ್ನು ಕಾದ ಕೊಡಲಿಯನ್ನು ಹಿಡಿಯಲು ಬಳಸಲಾಗುತ್ತದೆ. ಇದು ಸುಮಾರು ೨ ಅಡಿಯ ಉದ್ಧವನ್ನು ಹೊಂದಿದ್ದು ಗಾತ್ರದಲ್ಲಿ ವ್ಯತ್ಯಾಸವಿರುತ್ತದೆ. ಕಮ್ಮಾರರು ಸ್ವತಃ ತಾವೇ ತಾಯಿರಿಸುತ್ತಾರೆ.

೧೯. **ಹಾರಿ :** ಈ ಉಪಕರಣವನ್ನು ಕೊಡಲಿಯ ರಂಧ್ರಗಳನ್ನು ಮಾಡುವುದಕ್ಕೆ ಬಳಸಲಾಗುತ್ತದೆ. ಹಾರಿಯ ಮುಂಭಾಗ ಕಡಿಮೆ ಇದ್ದು, ಹಿಂಭಾಗದ ಗಾತ್ರವು ಏರಿಕೆಯ ಕ್ರಮದಲ್ಲಿ ಹೆಚ್ಚುತ್ತ ಹೋಗುತ್ತದೆ. ಹಾರಿಯಲ್ಲಿ ಯಾವುದೇ ಗಾತ್ರದ ಬೇಕಾದ ಆಕಾರದ ಕೊಡಲಿ ರಂಧ್ರಗಳನ್ನು ಮಾಡಬಹುದು. ಹಿಂದೆ ಕಮ್ಮಾರರು ತಾವೇ ತಯಾರಿಸಿಕೊಳ್ಳುತ್ತಿದ್ದರು. ಇಂದು ಮಾರುಕಟ್ಟೆಯಲ್ಲಿ ಸಿದ್ಧವಸ್ತುವಾಗಿ ದೊರೆಯುತ್ತಿದೆ. ಹಾರಿಯಲ್ಲಿ ಚಿಕ್ಕ ಹಾರಿ ಮತ್ತು ದೊಡ್ಡ ಹಾರಿ ಎಂದಿದ್ದು ಅವುಗಳನ್ನು ಬಳಸಿ ಸಮತಟ್ಟಾದ ಕೊಡಲಿ ರಂಧ್ರಗಳನ್ನು ಪಡೆಯಬಹುದು.

೨೦. **ಎಕಲೆ (ಮೂಲ್ಲಂಗಿ):** ಈ ಉಪಕರಣವನ್ನು ಕೊಡಲಿಯ ರಂಧ್ರಗಳನ್ನು ಮಾಡುವುದಕ್ಕೆ ಬಳಸಲಾಗುತ್ತದೆ. ಕೊಡಲಿಗೆ ಬೇಕಾದ ರಂಧ್ರದ ಗಾತ್ರವನ್ನು ಈ ಉಪಕರಣದ ಸಹಾಯದಿಂದ ಮಾಡಬಹುದು. ಇದನ್ನು ಕಮ್ಮಾರರು ತಾವೇ ತಯಾರಿಸುತ್ತಿದ್ದರು. ಇಂದು ಮಾರುಕಟ್ಟೆಯಲ್ಲಿ ಸಿದ್ಧವಸ್ತುವಾಗಿ ವಿವಿಧ ಆಕಾರದಲ್ಲಿ ದೊರೆಯುತ್ತದೆ. ಇಂತಹ ಉಪಕರಣವನ್ನು ಹೊಸಪೇಟೆಯ ಕಮ್ಮಾರ ರಾದ ಘಿಸಾಡಿ ಶಿವಾಜಿ ಚವ್ಹಾಣ ರವರ ಕುಲುಮೆಯಲ್ಲಿ ಕಾಣಬಹುದು.

೨೧. **ಚಾನ :** ಈ ಉಪಕರಣವನ್ನು ಕಬ್ಬಿಣದ ವಸ್ತುಗಳನ್ನು ಕತ್ತರಿಸಲು ಬಳಸಲಾಗುತ್ತದೆ. ಇದರ ಹಿಂಭಾಗವು ದುಂಡಾಗಿ ಚಪ್ಪಡಿಯಂತಿದ್ದರೆ, ಮುಂದಿನ ಭಾಗವು ಅಗಲಕ್ಕೆ ಕೊಡಲಿಯಂತಿರುತ್ತದೆ. ಕಮ್ಮಾರರು ತಾವೇ ತಯಾರಿಸಿಕೊಳ್ಳುತ್ತಿದ್ದರು. ಇಂದು ಮಾರುಕಟ್ಟೆಯಲ್ಲಿ ಸಿದ್ಧವಸ್ತುವಾಗಿ ದೊರೆಯುತ್ತಿದೆ. ಈ ಉಪಕರಣವು ಉಕ್ಕಿನಂದ ತಯಾರಿಸಲ್ಪಟ್ಟಿದ್ದು ಸ್ವಲ್ಪ ಬಿರುಸು ಮತ್ತು ಗಟ್ಟಿಯಾಗಿರುತ್ತದೆ.

೨೨. **ಗುದ್ದಿ :** ಈ ಉಪಕರಣವನ್ನು ಕಬ್ಬಿಣದ ವಸ್ತುಗಳ ಮೇಲೆ ರಂಧ್ರಗಳನ್ನು ಹೊಡೆಯಲು ಸಹಾಯಕವಾಗಿ ಬಳಸಲಾಗುತ್ತದೆ. ವಿವಿಧ ರೀತಿಯ ಮತ್ತು ಗಾತ್ರದ ಗುದ್ದಿಗಳಿವೆ. ಇದರಲ್ಲಿ ದೊಡ್ಡ ಗುದ್ದಿ ಮತ್ತು ಸಣ್ಣ ಗುದ್ದಿ ಎಂದು ಕರೆಯುತ್ತಾರೆ. ಮಾರುಕಟ್ಟೆಯಲ್ಲಿ ಸಿದ್ಧವಸ್ತುವಾಗಿ ದೊರೆಯುತ್ತಿದೆ.

೨೩. **ಪಾಗರಿ :** ಈ ಉಪಕರಣವನ್ನು ತೂತುಮೊಳೆ ಅಥವಾ ಪಂಚ್ ಎಂದು ಕರೆಯುತ್ತಾರೆ. ಕಬ್ಬಿಣದ ಉಪಕರಣಗಳನ್ನು ತೂತು ಮಾಡುವುದಕ್ಕಾಗಿ ಬಳಸುವ ಉಪಕರಣವಾಗಿದೆ. ಇದು ಮೊಳೆಯ ಆಕಾರದಲ್ಲಿದ್ದು ವಿವಿಧ ಗಾತ್ರವನ್ನು ಒಳಗೊಂಡಿರುತ್ತದೆ.

೨೪. **ಬೆಟ್ನಿ :** ಈ ಉಪಕರಣವನ್ನು ಬಂಡಿಯ ಇರುಸನ್ನು ಮಾಡುವಾಗ ಬಳಸಲಾಗುತ್ತದೆ. ಸಮತಟ್ಟಾಗಿ ವಸ್ತುವನ್ನು ಮಾಡಬೇಕಾದಾಗ ಉಪಯೋಗಿಸಲಾಗುತ್ತದೆ.

೨೫. **ಕಬ್ಬಿಣದ ಹೊಳ್ಳ :** ಈ ಉಪಕರಣವನ್ನು 'ಹಂಚು' ಮಾಡುವದಕ್ಕೆ ಬಳಸಲಾಗುತ್ತದೆ. ಇದರಲ್ಲಿ ಬೇಕಾದ ಆಕಾರ ಮತ್ತು ಗಾತ್ರದ ತವ್ವಗಳನ್ನು, ಬಗೋನಗಳನ್ನು ಮಾಡಬಹುದು. ಈ ಉಪಕರಣವನ್ನು ಕಮ್ಮಾರರು ತಾವೇ ತಯಾರಿಸಿಕೊಳ್ಳುವರು. ಇಂದು ಮಾರುಕಟ್ಟೆಯಲ್ಲಿ ಸಿದ್ಧವಸ್ತುವಾಗಿ ಸಿಗುತ್ತದೆ. ಈ ಉಪಕರಣವು ವೃತ್ತಾಕಾರದಲ್ಲಿದ್ದು ಇದರ ಉದ್ದ ೩ ರಿಂದ ೪ ಇಂಚು ಉದ್ದ ಮತ್ತು ೧೨ ಇಂಚು ಅಗಲ ಇರುತ್ತದೆ.

೨೬. **ಅರ :** ಈ ಉಪಕರಣವನ್ನು ಕಬ್ಬಿಣದಲ್ಲಿ ತಯಾರಿಸಿದ ಕೊಡಲಿ, ಮಚ್ಚು, ಕುಡುಗೋಲಿನಂತಹ ಹರಿತವಾದ ವಸ್ತುಗಳ ಬಾಯಿಯ ತುದಿಯನ್ನು ಚೂಪಾಗಿಸಲು ಮತ್ತು ಹರಿತವಾಗಿಸಲು ಬಳಸಲಾಗುತ್ತದೆ. ಮಾರುಕಟ್ಟೆಯಲ್ಲಿ ಈ ಉಪಕರಣ ದೊರೆಯುತ್ತದೆ. ಉಕ್ಕಿನಂದ ತಯಾರಿಸಲಾಗುತ್ತದೆ. ವಿವಿಧ ಗಾತ್ರದ ಅರಗಳು ದೊರೆಯುತ್ತವೆ.

೨೭. **ನೀರಿನ ಬಾನಿ :** ಇದು ಕಲ್ಲಿನಿಂದ ಮಾಡಲ್ಪಟ್ಟಿರುತ್ತದೆ. ಬೇಕಾದ ಕಲ್ಲನ್ನು ಕಡಿದು ಬಾನಿನಾಕಾರದಲ್ಲಿ ಮಾಡಲಾಗಿರುತ್ತದೆ. ಈ ದೋಣಿಯನ್ನು ಮಾಡಿಸಲು ವಡ್ಡರ ಸಹಾಯವನ್ನು ಪಡಯಲಾಗಿರುತ್ತದೆ, ಈ ದೋಣಿಯಲ್ಲಿ ಕಮ್ಮಾರರು ನೀರನ್ನು ತುಂಬಿರುತ್ತಾರೆ. ವಸ್ತುಗಳನ್ನು ತಯಾರಿಸಿದ ಮೇಲೆ ಕಾದ ವಸ್ತುಗಳನ್ನು ತಣಿಸಲು ಈ ದೋಣಿಯ ನೀರಿನಲ್ಲಿ ಹಾಕುತ್ತಾರೆ. ಆಗ ಕಾದ ವಸ್ತು ತಣ್ಣಗಾಗುತ್ತದೆ. ದೋಣಿಯ ಗಾತ್ರವು ಕುಲುಮೆ ಕುಲುಮೆಗಳಲ್ಲಿ ವ್ಯತ್ಯಾಸ ಹೊಂದಿರುತ್ತದೆ. ಇತ್ತೀಚೆಗೆ ಪ್ಲಾಸ್ಟಿಕ್ ದೋಣಿಯನ್ನು ಬಳಸುತ್ತಿರುವುದನ್ನು ಕಾಣಬಹುದು.

೩.೧. ವಿಶ್ವಕರ್ಮ ಸಮುದಾಯದ ಕುಲುಮೆಗಳು

ಪೀಠಿಕೆ : ವಿಶ್ವಕರ್ಮ ಸಮುದಾಯವನ್ನು ಪಾಂಚಾಲರು ಎಂದು ಕರೆಯುತ್ತಾರೆ. ಪಾಂಚಾಲರು ಎಂಬುದು ಐದು ಸಮುದಾಯವನ್ನು ಒಟ್ಟಿಗೆ ಸೇರಿಸಿ ಹೇಳುವ ಪದವಾಗಿದೆ. ಪಾಂಚಾಲರು ಭಾರತ ದೇಶದಲ್ಲೆಲ್ಲ ವಿವಿಧ ರೀತಿಯ ಹೆಸರುಗಳಿಂದ ಕಂಡುಬರುತ್ತಾರೆ. ಕರ್ನಾಟಕದಲ್ಲಿರುವ ಪಾಂಚಾಲರನ್ನು ತಾವು ಮಾಡುವ ವೃತ್ತಿಗಳಾದ ಶಿಲ್ಪ, ಕಮ್ಮಾರಿಕೆ, ಬಡಗಿ, ಅಕ್ಕಸಾಲಿ ಮತ್ತು ಕಂಚುಗಾರಿಕೆಯ ಮೇಲೆ ಅವರನ್ನು ಕ್ರಮವಾಗಿ ಶಿಲ್ಪಗಾರ, ಕಂಬಾರ, ಬಡಿಗೇರ, ಅಕ್ಕಸಾಲಿಗ ಮತ್ತು ಕಂಚುಗಾರ ಎಂದು ಕರೆಯುತ್ತಾರೆ. ಈ ಐದು ಪಂಗಡಗಳ ಜನರು ಒಂದೇ ಮೂಲದಲರಾಗಿದ್ದು

ಕಾಲಕ್ರಮೇಣ ಮುಂದೆ ಬೇರೆ ಬೇರೆಯಾಗಿರಬೇಕು. ಈ ಐದು ಪಂಗಡದವರು ತಾವು ಒಂದೇ. ಪಾಂಚಾಲರು, ವಿಶ್ವಕರ್ಮರು ಎಂದು ಹೇಳಿಕೊಂಡರೂ ರಕ್ತ ಸಂಬಂಧದಂತಹ ಸಂದರ್ಭದಲ್ಲಿ ಬಹು ಕಟ್ಟುನಿಟ್ಟಿನ ಸಂಪ್ರದಾಯವನ್ನು ನಡೆಸುತ್ತ, ಒಬ್ಬರಿಗೊಬ್ಬರು ಸಂಬಂಧವಿಲ್ಲದವರಂತೆ ಕಂಡುಬರುವುದನ್ನು ನೋಡಬಹುದು. ಈ ಐದು ಪಂಗಡದವರು ಆಧುನಿಕ ಕೈಗಾರಿಕೆಯ ಪ್ರವೇಶ ದಿಂದಾಗಿ ಪೈಪೋಟಿ ಎದುರಿಸದೆ ತಮಗೆ ಯೋಗ್ಯವಾದ ವೃತ್ತಿಯಲ್ಲಿ ತಲ್ಲೀನವಾಗಿರುವುದನ್ನು ಕಾಣುತ್ತೇವೆ.

ವಿಶ್ವಕರ್ಮ ಸಮುದಾಯ : ಪಾಂಚಾಲರಲ್ಲಿ ಎರಡು ಮುಖ್ಯ ಒಳಪಂಗಡಗಳಿವೆ. ಒಂದು ಹಿರೇಮನೆ ಮತ್ತೊಂದು ಚಿಕ್ಕಮನೆ. ಪಾಂಚಾಲ ಸಮುದಾಯದ ಶ್ರೇಣಿಕೃತ ವ್ಯವಸ್ಥೆಯಲ್ಲಿ ಈ ಎರಡು ಒಳಪಂಗಡದ ಜನರು ಕೂಡ ಹೆಚ್ಚಿನ ಸ್ಥಾನವನ್ನು ಅಲಂಕರಿಸಿದವರಾಗಿರುತ್ತಾರೆ. ಪೂಜೆ-ಪುನಸ್ಕಾರದ ವಿಷಯದಲ್ಲಿ ತುಂಬ ಕಟ್ಟುನಿಟ್ಟಿನ ಪಾಲನೆಯನ್ನು ಮಾಡಿಕೊಂಡಿರಿವುದನ್ನು ನೋಡುತ್ತೇವೆ. ವಿಶ್ವಕರ್ಮದವರು ಮೂಲತಃ ಸಸ್ಯಹಾರಿಗಳಾಗಿರುತ್ತಾರೆ.

ವಿಶ್ವಕರ್ಮ ಸಮುದಾಯದ ಮುದ್ದೆಗಮ್ಮಾರರು ಮತ್ತು ಬಯಲುಗಮ್ಮಾರರು ತಮ್ಮನ್ನು ತಾವು ಹಿರೇಮನೆಯವರು ಎಂದು ತಿಳಿಸುತ್ತಾರೆ. ಇವರುಗಳು ಹೆಚ್ಚಾಗಿ ಉತ್ತರ ಕರ್ನಾಟಕದಲ್ಲಿ ಕಂಡುಬರುತ್ತಾರೆ. ಕರ್ನಾಟಕದಲ್ಲಿರುವ ಕೆಲ ಪಾಂಚಾಲರು ತಮ್ಮನ್ನು ವಿಶ್ವ ಬ್ರಾಹ್ಮಣ ಎಂತಲೂ ಕರೆದುಕೊಳ್ಳುತ್ತಾರೆ. "ಚಿತ್ತೂರು ಅದಾಲತ್ ಕೋರ್ಟಿನ ತೀರ್ಪನ್ನು ಮುಂದಿಟ್ಟು, ಅಲ್ಲಿ ತಾವೇ ವಿಶ್ವಕರ್ಮ, ವಿಶ್ವಬ್ರಾಹ್ಮಣ ರಾಗಿದ್ದು ಬ್ರಾಹ್ಮಣರಿಗಿಂತ ಹೆಚ್ಚಿನವರೆಂದು ತೀರ್ಪಾದುದನ್ನು ತಿಳಿಸುತ್ತ ತಮ್ಮ ಜಾತಿಯು ಬ್ರಾಹ್ಮಣ ಜಾತಿಗಿಂತ ಹೆಚ್ಚಾದುದು ಎಂದು ನಿರೂಪಿಸಲೂ ಪ್ರಯತ್ನಿಸುತ್ತಾರೆ" ಎಂದು ಥರ್ಸ್ಟನ್‌ರವರು ಹೇಳುತ್ತಾರೆ.[೧೭] ಪಾಂಚಾಲರು ತಾವು ವಿಶ್ವಕರ್ಮದವರೆಂದು ಹೇಳಿಕೊಂಡರೂ ಜಾತಿವ್ಯವಸ್ಥೆಯ ಶ್ರೇಣಿಕರಣದಲ್ಲಿ ತಮ್ಮನ್ನು ಎಷ್ಟೇ ಮೇಲಸ್ತರಕ್ಕೆ ಏರಿಸುವ ಪ್ರಯತ್ನ ಮಾಡಿದರೂ, ಸಾಮಾಜಿಕ ವ್ಯವಸ್ತೆಯಲ್ಲಿ ಇವರ ಸ್ಥಾನವು ಪೂರ್ವದಲ್ಲಿದ್ದಂತೆ ಇದೆ. ಯಾವುದೇ ಬೆಳವಣಿಗೆಯನ್ನು ಕಾಣಲಾಗುವು ದಿಲ್ಲ.

ಕಂಬಾರರಲ್ಲಿ ಹಲವಾರು ಪಂಗಡಗಳಿದ್ದು, ಅವುಗಳಲ್ಲಿ ಅನೇಕ ಬೆಡಗುಗಳನ್ನು ಗಮನಿಸಬಹುದು. ಕಂಬಾರರಲ್ಲಿ ಸ್ವಜಾತಿಯ ಬೆಡಗಿನವರ ಜೊತೆ ವೈವಾಹಿತ ಸಂಬಂಧವನ್ನು ಮಾಡಿಕೊಳ್ಳುವುದಿಲ್ಲ.

"ಎಡ್ವರ್ಡ್ ಥರ್ಸ್ಟನ್‌ರವರು ತಮ್ಮ ಕಾಸ್ಟ್ ಲ್ಯಾಂಡ್ ಟ್ರೈಬ್ಸ್ ಇನ್ ಸದರ್ನ್ ಇಂಡಿಯಾ"(ಭಾಗ-೩) ಕೃತಿಯಲ್ಲಿ ಕಮ್ಮಾರ ಎನ್ನುವ ಪದಕ್ಕೆ ಅರ್ಥ ಸೂಚಿಸುತ್ತಾ ಬಳ್ಳಾರಿ ಜಿಲ್ಲೆಯ ಕಮಲಾಪುರದ ಕಮ್ಮಾರರನ್ನು ಹೆಸರಿಸುತ್ತಾರೆ. ಇವರು ಮೂಲತಃ ಕಬ್ಬಿಣ ತಯಾರಿಕೆಯನ್ನು ವೃತ್ತಿ ಮಾಡಿಕೊಂಡಿದ್ದು, ಇವರು ಇತ್ತೀಚೆಗೆ ಕೃಷಿ ಸಂಬಂಧಿತ ಉಪಕರಣಗಳು, ಕೊಪ್ಪರಿಕೆಗಳನ್ನು ತಯಾರಿಸುತ್ತಾರೆ. ಊರ ಹೊರಭಾಗದಲ್ಲಿ ವಾಸ ಮಾಡಿಕೊಂಡಿದ್ದರು. ಇವರನ್ನು ಅಲ್ಲಿಯ ಸ್ಥಳಿಯರು ಬೈಟಕಮ್ಮಾರ(ಬೈಟ ಬಯಲು) ಎಂದು ಗುರುತಿಸುತ್ತಾರೆ.[೧೮]

ಹಿರೇಮನೆ ಪಂಗಡದಲ್ಲಿನ ಕೆಲ ಕಂಬಾರರು ಮುದ್ದೆ ಕಬ್ಬಿಣವನ್ನು ತಯಾರಿಸುತ್ತಿದ್ದರಿಂದ ಅವರನ್ನು ಮುದ್ದೆ ಕಂಬಾರರು ಎಂಬ ಹೆಸರಿನಿಂದ ಕರೆಯುವುದು ರೂಢಿಗೆ ಬಂದಿದೆ. ಅವರು ತಯಾರಿಸುವ ಕಬ್ಬಿಣ ಮುದ್ದೆಯಾಕಾರದಲ್ಲಿರುತ್ತಿತ್ತು. ಅಂದರೆ ದುಂಡನೆಯ ಆಕಾರದಲ್ಲಿ ಇರುತ್ತಿತ್ತು. ಇವುಗಳನ್ನು ಕಬ್ಬಿಣದ ಗಟ್ಟಿಗಳು ಎಂದು ಕರೆಯುತ್ತೇವೆ. ಕಮಲಾಪುರದ ಕಾಳಮ್ಮ ದೇವಸ್ಥಾನದ ಒಂದು ಕೋಣೆಯಲ್ಲಿ ೮ ಮುದ್ದೆ ಕಬ್ಬಿಣದ ಗಟ್ಟಿಯನ್ನು ನೋಡಬಹುದು. ಇವು ಸುಮಾರು ೧೦ ರಿಂದ ೧೪ ಕೆ.ಜಿ. ತೂಕವನ್ನು ಹೊಂದಿವೆ. ಇವುಗಳ ಅಳತೆಯು ಸಮವಾಗಿರದೆ ವಕ್ರವಾಗಿರುವುದು ಕಂಡುಬರುತ್ತದೆ. ಅಂದಾಜಿನ ಅಳತೆಯು ೬ ದಿಂದ ೮ ಇಂಚ ಅಗಲ ಮತ್ತು ೩.೫ ದಿಂದ ೪ ಇಂಚ ಉದ್ದ ಹಾಗೂ ೫.೫ ಯಿಂದ ೮ ಇಂಚವರೆಗೆ ಲಂಬವಿದೆ. ಇತರೆ ಕಮ್ಮಾರ ಮನೆಯಲ್ಲಿರುವ ಮುದ್ದೆ ಕಬ್ಬಿಣವನ್ನು ಉಪಕರಣ ತಯಾರಿಕೆಯಲ್ಲಿ ಬಳಸಲಾಗಿದೆಯೆಂದು ತಿಳಿದುಬರುತ್ತದೆ.

ಕಮ್ಮಾರರು ಬಹುತೇಕ ವಾಸಿಸುವ ಮನೆಗಳು ಊರ ಹೊರವಲಯದಲ್ಲಿದ್ದು ಅವುಗಳನ್ನು ಕುಲುಮೆ, ಕಮ್ಮಾರ ಮುಂತಾದ ಪ್ರತ್ಯಯಗಳನ್ನು ಬಳಸಿ ಹಳ್ಳಿಗಳ ಹೆಸರನ್ನು ಇಟ್ಟಿರುವುದು ಕಂಡು ಬರುತ್ತದೆ. ಉದಾಹರಣೆಗೆ, ಕೆ. ಗೊಲ್ಲರಹಳ್ಳಿ ಇಲ್ಲಿ 'ಕೆ' ಅಂದರೆ ಕುಲುಮೆ. ಹಾಗಾಗಿ ಕೆ. ಗೊಲ್ಲರಹಳ್ಳಿ ಆಗಿದೆ. ಸಂಡೂರಿನಲ್ಲಿರುವ ಯಶವಂತನಗರದ ಮೂಲ ಹೆಸರು ಕನುಮಳ್ಳಿ, ಅಂದರೆ ಕುಲುಮೆಹಳ್ಳಿ. ಜನರ ಬಾಯಲ್ಲಿ ಕನುಮೆಳ್ಳಿಯಾಗಿದೆ. ಕಮಲಾಪುರ ಇದು ಕುಲುಮೆಪುರ. ನಂತರ ಕುಲುಮ್ಯಪುರವಾಗಿ ಕಮಲಾಪುರವಾಗಿರಬೇಕು. ಹರಪನಹಳ್ಳಿಯ ಕೆ. ಕಲ್ಲಹಳ್ಳಿಗೆ ಇಂದಿಗೂ ಕುಲುಮೆ ಕಲ್ಲಹಳ್ಳಿ ಎಂತಲೂ ಕರೆಯುತ್ತಾರೆ. ಹೀಗೆ ಉತ್ತರ ಕರ್ನಾಟಕದಲ್ಲಿ ವಾಸಿಸುವ ಎಲ್ಲ ಮುದ್ದೆ ಕಂಬಾರರು ಇಂತಹ ಹೆಸರಿನ ಹಳ್ಳಿಯಲ್ಲಿ ವಾಸಿಸಿರುವುದನ್ನು ಕಾಣಬಹುದು. ಆದರೆ ಚಿಕ್ಕಮನೆ ಕಮ್ಮಾರ ಎಂದು ಕರೆಯುವ ವಿಶ್ವಕರ್ಮದವರು ಸ್ವಲ್ಪ ಭಿನ್ನವಾದ ವಾಸವನ್ನು ಹೊಂದಿರುವುದು ಕಂಡುಬಂದಿದೆ. ಚಿಕ್ಕಮನೆಯವರು ಹೀರೆಮನೆಯ ಮುದ್ದೆ ಕಂಬಾರ ಮತ್ತು ಬೈಲುಗಮ್ಮಾರರಿಂದ ಬೇರ್ಪಟ್ಟು ನಗರ ಪ್ರದೇಶದಲ್ಲಿ ನೆಲೆಯನ್ನು ಕಂಡುಕೊಂಡಿದ್ದಾರೆ.

ವಿಶ್ವಕರ್ಮ ಸಮುದಾಯದವರು ದೇಶದಲ್ಲೆಲ್ಲ ಅಲ್ಲಲ್ಲಿ ಹರಡಿಕೊಂಡಿರುವುದನ್ನು ತಿಳಿಯಬಹುದು. ವಿಶ್ವಕರ್ಮ ಸಮುದಾಯವನ್ನು ಕುರಿತು ಅನೇಕ ವಿದ್ವಾಂಸರು ಸಂಶೋಧನೆಗಳನ್ನು ಕೈಗೊಂಡಿದ್ದು ಮಹತ್ತರ ಅಂಶಗಳನ್ನು ಒದಗಿಸಿದ್ದಾರೆ. ಕರ್ನಾಟಕದಲ್ಲಿ ಉತ್ತರ ಕರ್ನಾಟಕ ಮತ್ತು ಮಧ್ಯ ಕರ್ನಾಟಕದಲ್ಲಿ ಹೆಚ್ಚಾಗಿ ಈ ಸಮುದಾಯದವರು ಕಂಡುಬರುತ್ತಾರೆ. ವಿಶ್ವಕರ್ಮ ಸಮುದಾಯದವರ ಪಾರಂಪರಿಕ ಮೂಲ ವೃತ್ತಿ ಕಬ್ಬಿಣ ಮತ್ತು ಉಕ್ಕು ತಯಾರಿಸುವುದಾಗಿದೆ. ಕಬ್ಬಿಣ ತಯಾರಿಕೆಯೇ ಇವರ ಕಸುಬಾಗಿರುವುದರಿಂದ ಹೆಚ್ಚಾಗಿ ಕಬ್ಬಿಣ ದೊರೆಯುವ ಬೆಟ್ಟ-ಗುಡ್ಡಗಳ ಸಾಲುಗಳ ಅಂಚಿನಲ್ಲಿ ತಮ್ಮ ನೆಲೆಗಳನ್ನೂ ಗುರುತಿಸಿಕೊಂಡಿದ್ದಾರೆ. ಬಹುಶಃ ಇವರುಗಳು ಮೊದಲಿಗೆ ಅಲೆಮಾರಿಗಳಾಗಿದ್ದು ಆಂಧ್ರದ ಮೂಲದವರಾಗಿರಬೇಕು ಎಂದೆನಿಸುತ್ತದೆ. ಪ್ರಾಗಿತಿಹಾಸದ ಕಾಲದಿಂದ ಕಬ್ಬಿಣದ ಉತ್ಪಾದನೆಯು ನಡೆಯುತ್ತಿರುವುದನ್ನು ಗಮನಿಸಿದರೆ, ಈ ಸಮುದಾಯವು ಕ್ರಿಪೂ. ದಿನಗಳಿಂದಲೇ ಇದೇ ವೃತ್ತಿಯನ್ನು ನಡೆಸಿಕೊಂಡು ಬಂದಿದ್ದಾರೆ ಎಂಬುದು ವ್ಯಕ್ತವಾಗುತ್ತದೆ. ಕಾರಣ ಕ್ರಿಪೂ. ಕಾಲದಲ್ಲಿ ಅಂದರೆ ತಾಮ್ರಯುಗದಿಂದ ಹಿಡಿದು ಇಂದಿನವರೆಗೂ ಕುಲುಮೆಯನ್ನು ಬಳಸುತ್ತಿರುವುದು ಕಂಡುಬರುತ್ತದೆ.

ಹಾಗಾಗಿ, ಈ ಸಮುದಾಯವು ಪ್ರಾಚೀನ ಕಾಲದಿಂದಲೂ ವಾಸಿಸುತ್ತಿದ್ದು, ಹಂತಹಂತವಾಗಿ ಕಬ್ಬಿಣ ಸಿಗುವ ಸ್ಥಳದಿಂದ ಸ್ಥಳಕ್ಕೆ ವಲಸೆ ಹೋಗುತ್ತಾ ಅಲೆಮಾರಿಯಾಗಿರಬೇಕು ಎಂದೆನಿಸುತ್ತದೆ. ಅಲೆಮಾರಿಯಾಗಿ ಆಂಧ್ರದಿಂದ ಕರ್ನಾಟಕಕ್ಕೆ ಬಂದಿರುವ ಸಾಧ್ಯತೆಗಳಿವೆ ಎನ್ನುವುದನ್ನು ಅಲ್ಲಗಳೆಯುವಂತಿಲ್ಲ. ವಿಜಯನಗರ ಅರಸರಿಗೆ ಕಬ್ಬಿಣ ಸರಬರಾಜು ಮತ್ತು ತಯಾರಿಸಿ ಕೊಡುವ ಕಾರಣಕ್ಕಾಗಿ ಬಂದು ನೆಲೆಸಿರಬೇಕು.

ಹೀರೆಮನೆ ಕಮ್ಮಾರರು ಹೆಚ್ಚಾಗಿ ಮಧ್ಯ ಕರ್ನಾಟಕದಲ್ಲಿ ಮಾತ್ರ ನೆಲೆಸಿರುವುದು ಕಂಡುಬರುತ್ತದೆ. "ಜಾನ್ ಬ್ರೋವರ್ ರವರು ಗುರುತಿಸಿರುವಂತೆ, ಕರ್ನಾಟಕದ ಶಿವಮೊಗ್ಗ ಜಿಲ್ಲೆಯಿಂದ ಬಳ್ಳಾರಿ ಜಿಲ್ಲೆಯವರೆಗೆ ಇವರ ವ್ಯಾಪ್ತಿ ಇದೆ" ಗದಗ ಜಿಲ್ಲೆಯ ಶಿರಹಟ್ಟಿ ಪ್ರಾಂತ್ಯದಲ್ಲಿ ಸಹ ಮುದ್ದೆ ಕಂಬಾರರು ಇದ್ದಾರೆ.[೧೯] ಚಿಕ್ಕಮನೆ ಕಮ್ಮಾರರು ಹೆಚ್ಚಾಗಿ ಉತ್ತರ ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕದಲ್ಲಿ ಕಂಡುಬರುತ್ತಾರೆ. ಬಿ.ಆರ್. ಕುಮಾರರವರು ಕೇವಲ ಮಧ್ಯ ಕರ್ನಾಟಕದ ಕಂಬಾರರ ಕುರಿತು ಮಾಹಿತಿ ನೀಡಿದ್ದಾರೆ. ಕಾರಣ, ಕೇವಲ ಹೀರೆಮನೆಯವರ ಕುರಿತು ಅಧ್ಯಯನ ಮಾಡಿರುವುದು ಕಂಡುಬರುವುದು ಸುಸ್ಪಷ್ಟ. ಮುದ್ದೆ ಕಂಬಾರರು ಕೇವಲ ೧೩ ಗ್ರಾಮಗಳಲ್ಲಿ ವಾಸಿಸುತ್ತಿದ್ದಾರೆ.[೨೦] ಬಳ್ಳಾರಿ ಜಿಲ್ಲೆಯ ಕೆ.ಗೊಲ್ಲರಹಳ್ಳಿ, ಚಿಲಕನಹಟ್ಟಿ, ವ್ಯಾಸನಕೆರೆ, ಕನುಮೆಳ್ಳಿ, ಕಮಲಾಪುರ ಮತ್ತು ಹ್ಯಾರಡ, ದಾವಣಗೆರೆ ಜಿಲ್ಲೆಯ ರಂಗಾಪುರ ಮತ್ತು ಕೆ.ಕಲ್ಲಹಳ್ಳಿ, ಗದಗ ಜಿಲ್ಲೆಯ ಕುಸುಲಾಪುರ, ವಡ್ಡಟ್ಟಿ ಮತ್ತು ಅಂಕಲಿ ಮತ್ತು ಚಿತ್ರದುರ್ಗ ಜಿಲ್ಲೆಯ ಗಾರಟ್ಟಿ ಮತ್ತು ಮಾನಂಗಿ ಹಾಗೂ ಶಿವಮೊಗ್ಗ ಜಿಲ್ಲೆಯ ತಮ್ಮಡಿಹಳ್ಳಿ ಮತ್ತು ಮಂಡಘಟ್ಟಿ ಮತ್ತು ದಾವಣಗೆರೆಯ ಸೊರೆಹೊನ್ನೆ (ನ್ಯಾಮತಿ) ಕುಂಬಳೂರು ಹಾಗೂ ರಾಜ್ಯದ ಬೇರೆ ಕಡೆ ಹೋಗಿ ವಲಸೆ ನೆಲೆಯನ್ನು ಕಂಡು ಕೊಂಡಿದ್ದಾರೆ. ಹಾಗೆಯೇ ಚಿಕ್ಕಮನೆ ಕಂಬಾರರು ರಾಯಚೂರು, ಮಸ್ಕಿ, ಗುಲಬರ್ಗಾ, ಆಂಧ್ರದ ಗಡಿಭಾಗ ಮತ್ತು ಬಳ್ಳಾರಿ ಜಿಲ್ಲೆಯ ವಡ್ಡರಹಳ್ಳಿ, ಪಾಪಿನಾಯಕನಹಳ್ಳಿ, ಗಾದಿಗನೂರು, ಕುಡಿತಿನಿ, ಸಂಡೂರು, ದೇವಲಾಪುರ, ಮಟ್ರಿ, ಚಿನ್ನಾಪುರ, ಸುಗ್ಗೆನಹಳ್ಳಿ, ಜವುಕು, ಸಾಣಾಪುರದಲ್ಲಿ ನೆಲೆಸಿರುವುದು ಕಂಡುಬರುತ್ತದೆ. ಚಿಕ್ಕಮನೆಯವರು ಒಂದು ಊರಿನಲ್ಲಿ ಸುಮಾರು ೩ ರಿಂದ ೪ ಕುಟುಂಬಗಳನ್ನು ಮಾತ್ರ ಹೊಂದಿದೆ.

ವಿಶ್ವಕರ್ಮರ ಕುಲುಮೆಗಳು : ವಿಶ್ವಕರ್ಮ ಸಮುದಾಯದ ಕುಲುಮೆಗಳನ್ನು ಹೊಸಪೇಟೆ ಪರಿಸರದಲ್ಲಿ ಕಾಣಬಹುದು. ವಿಶ್ವಕರ್ಮ ಸಮುದಾಯದವರು ತಮ್ಮಲ್ಲೇ ಹಿರೇಮನೆ ಮತ್ತು ಚಿಕ್ಕಮನೆ ಎಂದು ವಿಭಜಿಸಿಕೊಂಡು ಹೊಸಪೇಟೆ ತಾಲೂಕಿನಾದ್ಯಂತ ಬೇರೆ ಬೇರೆ ಊರುಗಳಲ್ಲಿ ನೆಲೆಸಿರುವುದು ಕಂಡುಬರುತ್ತದೆ. ಹಿರೇಮನೆ ಪಂಗಡದವರು ತಾಲೂಕಿನ ಕೆ.ಗೊಲ್ಲರಹಳ್ಳಿ, ಚಿಲಕನಹಟ್ಟಿ, ಮರಿಯಮ್ಮನಹಳ್ಳಿ, ವ್ಯಾಸನಕೆರೆ, ಕಮಲಾಪುರ ಸೀತಾರಾಮತಾಂಡ ಮತ್ತು ನಲ್ಲಾಪುರದಲ್ಲಿ ನೆಲೆಸಿದ್ದಾರೆ. ಹಾಗೂ ಚಿಕ್ಕಮನೆ ಪಂಗಡದವರು ತಾಲೂಕಿನ ವಡ್ಡರಳ್ಳಿ, ಪಾಪಿನಾಯಕನಹಳ್ಳಿ, ಗುಂಡ್ಲಬೈಲುವದ್ದಿಗೇರಿ, ಕಾಕುಬಾಳು, ಬೈಲುವದ್ದಿಗೇರಿ, ಗಾದಿಗನೂರು, ದೇವಲಾಪುರ, ಉಪ್ಪಾರಹಳ್ಳಿ, ಮೆಟ್ರಿ, ಸುಗ್ಗೆನಹಳ್ಳಿ, ಜಿರಿಗನೂರು, ಜವುಕು ಮತ್ತು ಸಾಣಾಪುರದಲ್ಲಿ ನೆಲೆಸಿದ್ದಾರೆ. ವಿಶ್ವಕರ್ಮ ಸಮುದಾಯದ ಹಿರೇಮನೆ ಮತ್ತು ಚಿಕ್ಕಮನೆ ಕುಲುಮೆಗಳ ವಿವರ ಮತ್ತು ವಂಶಾವಳಿಯನ್ನು (ಅನುಬಂಧ–೧ರಲ್ಲಿ) ಗಮನಿಸಿ.

ಚಿಕ್ಕಮನೆ ಕಮ್ಮಾರರ ಕುಲುಮೆಗಳು ಮನೆಗಳಿಗೆ ಹೊಂದಿಕೊಂಡು ಇರುವುದು ಕಂಡುಬರುತ್ತದೆ. ಇವರ ಮನೆಯ ಒಳ ಭಾಗದಲ್ಲಿ ತಿದಿ ಇದ್ದರೆ ಹೊರ ಭಾಗದಲ್ಲಿ ಕುಲುಮೆ ಇರುತ್ತದೆ. ಕುಲುಮೆ ಇರುವ ಮನೆಯ ಮೇಲ್ಭಾಗದಲ್ಲಿ ಗೋಡೆಗೆ ದುಂಡನೆಯ ಇಲ್ಲವೆ ಚೌಕಕಾರದ ಒಂದು ರಂಧ್ರವನ್ನು ಮಾಡಿ. ಆ ರಂಧ್ರದಿಂದ ಬಿದಿರನ್ನು ಹಾಕಿರುತ್ತಾರೆ. ಬಿದಿರಿನ ಒಂದು ತುದಿಯು ತಿದಿಗೆ ಜೋಡಿಸಲ್ಪಟ್ಟಿರುತ್ತದೆ. ಬಿದಿರಿನ ಮತ್ತೊಂದು ತುದಿಯ ಭಾಗವು ಹೊರ ಅಂಗಳಕ್ಕೆ ಬರುವಂತೆ ನೋಡಿಕೊಂಡಿರುತ್ತಾರೆ. ಹೊರಗೆ ಬಂದಿರುವ ಬಿದಿರಿನ ತುದಿ ಭಾಗಕ್ಕೆ ಹಗ್ಗ ಕಟ್ಟಿ ತಿದಿಯನ್ನು ಎಳೆಯಲು ಮಾಡಿರುತ್ತಾರೆ. ಅದರೆ ಹಿರೇಮನೆ ಕಮ್ಮಾರರ ಕುಲುಮೆಗಳು ಸಾಮಾನ್ಯವಾಗಿ ಹತ್ತಿರ ಇರದೆ ಬಯಲಿನಲ್ಲಿ ಚಪ್ಪರ ಹಾಕಿ ಅದರ ಕೆಳಗೆ ಒತ್ತು ತಿದಿಗಳನ್ನು ಬಳಸಿ ಕಬ್ಬಿಣ ತಯಾರಿಸುತ್ತಾರೆ. ಇಂದು ತಿದಿ ಬದಲು ಬ್ಲೋವರ್‌ಗಳನ್ನು ಬಳಸಿ ಕಬ್ಬಿಣದ ಉಪಕರಣಗಳನ್ನು ತಯಾರಿಸುತ್ತಿದ್ದಾರೆ. ಹಿರೇಮನೆಯವರಿಗಿಂತ ಚಿಕ್ಕಮನೆಯವರ ಕುಲುಮೆಗಳು ಶಿಸ್ತುಬದ್ಧವಾಗಿ, ವ್ಯವಸ್ಥಿತವಾದ ಮನೆ ಅಥವಾ ಗುಡಿಸಲುಗಳನ್ನು ಮಾಡಿ, ಅದರಲ್ಲಿ ಕುಲುಮೆಗಳನ್ನು ರಚಿಸಿಕೊಂಡಿರುತ್ತಾರೆ. ಶಿಸ್ತುಬದ್ಧ ತಿದಿಗಳನ್ನು ಗಾದಿಗನೂರಿನಲ್ಲಿರುವ ಕಮ್ಮಾರ ಮೌನೇಶ ಆಚಾರ್ಯ, ಕಮ್ಮಾರ ಜಕಣಚಾರಿ ಆಚಾರ್ಯ ಮತ್ತು ಭೀಮೇಶ್ ಆಚಾರ್ಯರವರ ಮನೆಯಲ್ಲಿ ನೋಡಬಹುದು. ಈ ಮನೆಯವರು ಇಂದಿಗೂ ತಿದಿಗಳನ್ನು ಬಳಸಿ ಕಬ್ಬಿಣದ ವಸ್ತುಗಳನ್ನು ತಯಾರಿಸುತ್ತಿದ್ದಾರೆ. ಇನ್ನೂ ಕಂಪ್ಲಿ ಹೋಬಳಿಯಲ್ಲಿ ಬರುವಂತಹ ದೇವಲಾಪುರದ ಕಮ್ಮಾರ ಬಡಿಗೇರ ಭೀಮಪ್ಪ ಆಚಾರ್ಯ, ಉಪ್ಪಾರಹಳ್ಳಿಯ ಕಮ್ಮಾರ ಬಡಿಗೇರ ಶಂಕ್ರಪ್ಪ ಆಚಾರ್ಯ, ಮೆಟ್ರಿಯ ಕಮ್ಮಾರ ಅಂಜಿನೆಪ್ಪ ಆಚಾರ್ಯ, ಸುಗ್ಗೆನಹಲ್ಲಿಯ ಕಮ್ಮಾರ ನಾಗರಾಜ ಆಚಾರ್ಯ, ಜಿರಿಗನೂರಿನ ಕಮ್ಮಾರ ರುದ್ರಪ್ಪ ಆಚಾರ್ಯ ಮತ್ತು ಜವುಕಿನ ಕಮ್ಮಾರ ಕಾಳಪ್ಪ ಆಚಾರ್ಯ ಹಾಗೂ ಕಮಲಾಪುರದ ಹೋಬಳಿಯಲ್ಲಿ ಬರುವ ಗುಂಡ್ಲ ಬೈಲುವದ್ದಿಗೇರಿಯ ಕಮ್ಮಾರ ಶಂಕ್ರಪ್ಪ ಆಚಾರ್ಯ, ಪಾಪಿನಾಯಕನಹಳ್ಳಿಯ ಕಮ್ಮಾರ ಪಂಪಣ್ಣ ಆಚಾರ್ಯ, ಕಮ್ಮಾರ ಯಂಕಪ್ಪ ಆಚಾರ್ಯ ಮತ್ತು ವಡ್ಡರಹಳ್ಳಿಯ ಕಮ್ಮಾರ ಈರಯ್ಯ ಆಚಾರ್ಯ, ಹೊಸಪೇಟೆ ನಗರದ ಚಿತ್ತವಾಡ್ಗಿಯ ಕಮ್ಮಾರ ಈರಣ್ಣ ಆಚಾರ್ಯ, ನಾಗೇನಹಳ್ಳಿಯ ಬಡಿಗೇರ ಮಹೇಶ್ ಆಚಾರ್ಯ ಮತ್ತು ಕಮಲಾಪುರದ ಕಮ್ಮಾರ ಶಂಕ್ರಪ್ಪ ಆಚಾರ್ಯ ರವರ ಕುಲುಮೆಗಳು ಮನೆಗೆ ಹೊಂದಿಕೊಂಡು ಇದ್ದರೂ ಕೂಡ ಅವು ಶಿಸ್ತುಬದ್ಧ ಮತ್ತು ಸುವ್ಯವಸ್ಥಿತವಾಗಿ ಕಂಡುಬರುವುದಿಲ್ಲ. ಇವರುಗಳು ತಿದಿಯನ್ನು ಬಳಸದೆ. ಇತ್ತೀಚಿನ ಆಧುನಿಕ ಬ್ಲೋವರ್‌ಗಳನ್ನು ಬಳಸುತ್ತಿರುವುದನ್ನು ಕಾಣಬಹುದು. ಚಿಕ್ಕಮನೆ ಕಮ್ಮಾರರ ಪೈಕಿ ಗಾದಿಗನೂರಿನಲ್ಲಿ ಮಾತ್ರ ಕುಲುಮೆಗೆ ಬೇಕಾದ ಗುಣಮಟ್ಟದ ಸಾಮಗ್ರಿಗಳನ್ನು ಸಂಗ್ರಹಿಸಿ ನಿರಂತರವಾಗಿ ಕೆಲಸ ಮಾಡುತ್ತಿದ್ದಾರೆ. ಸುಗ್ಗೆನಹಲ್ಲಿಯ ಶಾರದಾ ನಗರದ ಕಮ್ಮಾರ ನಾಗರಾಜ ಆಚಾರ್ಯರವರು ತಿದಿ ಮತ್ತು ಬ್ಲೋವರ್ ಬದಲು ೬ ಪಂಕಗಳುಳ್ಳ ಮೋಟಾರ್ ಯಂತ್ರವನ್ನು ರಚಿಸಿ ಅದಕ್ಕೆ ಸೈಕಲ ಚಕ್ರವನ್ನು ಜೋಡಿಸಿ ಕುಲುಮೆ ಕೆಲಸ ಮಾಡುತ್ತಿರುವುದು ಕಂಡು ಬರುತ್ತದೆ. ಇದರಿಂದ ಬ್ಲೋವರ್ ತಿರಿಗಿಸುವುದನ್ನು ತಪ್ಪಿಸಲಾಗಿದೆ. ಅದೇ ರೀತಿ ಹಿರೇಮನೆ ಕಮ್ಮಾರರ ಪೈಕಿ ಮರಿಯಮ್ಮನಹಳ್ಳಿ ಹೋಬಳಿಯಲ್ಲಿ ಬರುವ ಕೆ.ಗೊಲ್ಲರಹಳ್ಳಿಯ ಕಮ್ಮಾರ ಗಾಂಝಿ ಸೋಮಣ್ಣ ಆಚಾರ್ಯ, ಕಮ್ಮಾರ ಗಾಂಝಿ ಮೌನೇಶ ಆಚಾರ್ಯ, ಕಮ್ಮಾರ ಗಾಂಝಿ ಚಂದ್ರಪ್ಪ ಆಚಾರ್ಯ ಮತ್ತು ಕಮ್ಮಾರ ವ್ಯಾಸನಕೇರಿ ಕಾಳಶ್ರಪ್ಪ ಆಚಾರ್ಯ ಹಾಗೂ

ಮರಿಯಮ್ಮನಹಳ್ಳಿ ಕಮ್ಮಾರ ಕರಿಯಪ್ಪ ಆಚಾರ್ಯ, ವ್ಯಾಸನಕೇರಿ ಕಮ್ಮಾರ ಯಂಕಪ್ಪ ಆಚಾರ್ಯ, ಚಿಲಕನಹಟ್ಟಿಯ ಕಮ್ಮಾರ ಪಂಪಾಪತಿ ಆಚಾರ್ಯ, ಸಿಂಧಗಿರಿ ಕಮ್ಮಾರ ಸತ್ಯನಾರಾಯಣ ಆಚಾರ್ಯ, ಮುದ್ದೆ ಕಮ್ಮಾರ ವೆಂಕಟೇಶ ಆಚಾರ್ಯ, ಬಡಿಗೇರ ವೆಂಕಟೇಶ ಆಚಾರ್ಯ, ಕಮ್ಮಾರ ಹನುಮಗೌಡ ಆಚಾರ್ಯ, ಬುಲ್ಡೆರ್ ಕಮ್ಮಾರ ಹನುಮಂತಪ್ಪ ಆಚಾರ್ಯ ಹಾಗೂ ಕಮಲಾಪುರ ಹೋಬಳಿಯಲ್ಲಿ ಬರುವ ಕಮ್ಮಾರ ಕಾಳೇಶ್ರಪ್ಪ ಆಚಾರ್ಯ, ಕಮ್ಮಾರ ಶ್ರೀನಿವಾಸ ಆಚಾರ್ಯ, ಕಮ್ಮಾರ ತಿಪ್ಪೇರುದ್ರ ಆಚಾರ್ಯ, ಕಮ್ಮಾರ ಈಶ್ವರಪ್ಪ ಆಚಾರ್ಯ ಮತ್ತು ಕಮ್ಮಾರ ಹೇಮಣ್ಣ ಆಚಾರ್ಯ ರವರ ಕುಲುಮೆಗಳು ಚೆನ್ನಾಗಿ ನಡೆಯುತ್ತಿದ್ದು, ಹೆಚ್ಚಾಗಿ ಕೃಷಿಗೆ ಸಂಬಂಧಿಸಿದ ಉಪಕರಣಗಳನ್ನು ಮಾಡಿಕೊಡುತ್ತಾರೆ. ಕಬ್ಬಿಣದ ವಸ್ತುಗಳನ್ನು ಮಾಡಿ ಅಂಗಡಿಗಳಿಗೆ ಮಾರುವುದನ್ನು ಕಾಣಬಹುದು.

ವಿಶ್ವಕರ್ಮ ಕಮ್ಮಾರರು ಹೆಚ್ಚಾಗಿ ಕೃಷಿಗೆ ಸಂಬಂಧಿಸಿದ ವಸ್ತುಗಳನ್ನು ಮಾಡುವರು. ನೇಗಿಲಿಗೆ ಬೇಕಾದ ರಂಟೆ, ಕುಳ, ಕುಡಕ್ಕೆ, ಜಿಗಳಿ, ಬೆಳೆಗಳಿಗೆ ಸಾಲು ಮಾಡಲು ಪಿಳಗುಡ ಮತ್ತು ಹತಗುಡ, ಹೊಲ ಹರಗಲು ಮತ್ತು ಕಸ ತೆಗೆಯಲು ಬೇಕಾದ ಹೆಗ್ಗುಡ ಮತ್ತು ಬಳಗುಡ, ಬಂಡಿ–ಚಕ್ಕಡಿಯ ಗಾಲಿಯ ಅಚ್ಚು, ಗಾಲಿಯ ಗಡ್ಡುಕಟ್ಟು, ಬಾಯ್‌ಕಟ್, ಗಾಲಿಗಳನ್ನು ಜೋಡಿಸುವ ಅಚ್ಚು, ರಂಧ್ರಕ್ಕೆ ಬೇಕಾದ ಬಾಯಿಬಳಿ ಮತ್ತು ಕಿವಿಬಳಿ, ಕಡೆಗೀಲುಗಳನ್ನು ತಯಾರಿಸಿ ಕೊಡುತ್ತಾರೆ. ಎತ್ತುಗಳಿಗೆ ಸಂಬಂಧಿಸಿದ ಮೇವುಕತ್ತರಿ, ಕುಡಗೋಲು, ಕುರುಪಿ, ನೆರೆಕೋಲು, ಗುದ್ದಲಿ, ಸಲಿಕೆ, ಕೊಡಲಿ ಹಾಗೂ ಏತ ನೀರಾವರಿಗಳಿಗೆ ಅವಶ್ಯವಾದ ದೋಣಿ ಮತ್ತು ದೋಣಿ ಚಿಲಕಗಳು. ಮತ್ತು ಬೆಲ್ಲದ ಕೊಪ್ಪರಿಕೆ, ಬೆಲ್ಲದ ಪಂಟಿ ಮಾಡಲು ಬಕೇಟ್‌ಗಳನ್ನು ತಯಾರಿಸುವರು. ದಿನನಿತ್ಯದ ಗೃಹಬಳಕೆಗೆ ಬೇಕಾಗುವ ತರಕಾರಿ ಕತ್ತರಿಸುವ ಈಳಿಗೆ, ಕುಡಗೋಲು, ಬಾಗಿಲಿನ ಮೊಳೆಗಳು, ಚಿಲಕಗಳು, ನಾಗವಾಸ, ಗೋಡೆಯ ಮೊಳೆ, ನಾಗಾವಾಡ ಸರಪಳಿ, ಕಿಟಕಿ ಮುಚ್ಚುವ ಮರಡು, ಒನಕೆ ಬಳೆ, ಹಾರಿ, ತೂಗುವ ಮಣಿಯ ಮೇಲಿನ ಬಳೆಗಳು, ಊಟದ ಮಣೆ ಮೇಲಿನ ಬಳೆಗಳು, ಪೆಟ್ಟಿಗೆಯ ಚಿಲಕ, ಬೀಸುವಕಲ್ಲು ಮೊಳೆ ಮತ್ತು ಬಾಗಿಲಿನ ಕಬ್ಬಿಣದ ಗುಳಿ. ಯುದ್ಧ ಸಾಮಗ್ರಿಗಳಿಗೆ ಸಂಬಂಧಿಸಿದಂತೆ ಭರ್ಚಿ ಮೊನೆಗಳು, ಕರವಾಳ, ತಲವಾರ ಎಂಬ ಕತ್ತಿಗಳು, ಖಡ್ಗ, ತ್ರಿಶೂಲ, ಚಾಕು, ಉಳಿಗಳು, ಗುರಾಣಿಗಳು. ಧಾರ್ಮಿಕ ವಿಧಿ ವಿಧಾನಗಳಲ್ಲಿ ಬಳಸುವ ಘಂಟೆಯಲ್ಲಿನ ಕಬ್ಬಿಣದ ನಾಲಗೆ, ಕಬ್ಬಿಣದ ತೂಗು ಮತ್ತು ಶಾಲೆಯಲ್ಲಿ ಬಾರಿಸುವ ಘಂಟೆ ಮತ್ತು ಸುತ್ತಿಗೆಯನ್ನು ತಯಾರಿಸಿ ಕೊಡುವುದಾಗಿ ಹೇಳುತ್ತಾರೆ. ವ್ಯಾಪಾರಕ್ಕೆ ಸಂಬಂಧಿಸಿದ ತೂಕದ ಕಬ್ಬಿಣದ ವಸ್ತುಗಳನ್ನು ತಯಾರಿಸುವರು. ಹಾಗೆಯೇ ಸ್ವತಃ ಕುಲುಮೆಯಲ್ಲಿ ಕಬ್ಬಿಣದ ತಯಾರಿಕೆಯಲ್ಲಿ ಬಳಸುವ ಚಮ್ಮಟಿಗೆ (ಗನ್), ಕೈ ಸುತ್ತಿಗೆ, ವಿಧವಿಧವಾದ ಇಕ್ಕಳ, ಅಡಿಗಲ್ಲು, ಬಕ್ಕಸಗೋಲು, ತಾಂಡಾಸ, ಬೆಸುಗೆ ಇಕ್ಕಳ, ಬಿಲ್ಲಿಕ್ಕಳ, ಜಗ್ಗಿಕ್ಕಳ, ಚಾನ, ಪಂಚ (ತೂತುಮೊಳೆ) ಬೆಟ್ನಿ ಹಾಗೂ ಇನ್ನಿತರ ಉಪಕರಣಗಳನ್ನು ತಯಾರಿಸುವರು.

ಇತ್ತೀಚಿನ ದಿನಗಳಲ್ಲಿ ಕುಲುಮೆಗೆ ಬೇಕಾದ ಉಪಕರಣಗಳು ಸಿದ್ಧವಾದ ಮಾರುಕಟ್ಟೆಯಲ್ಲಿ ದೊರೆಯುತ್ತಿರುವುದರಿಂದ ತಯಾರಿಸಿದ ಮಾರುಕಟ್ಟೆಯಲ್ಲಿನ ಉಪಕರಣಗಳನ್ನು ಬಳಸುತ್ತಿರುವುದನ್ನು ಕಾಣಬಹುದು.

ಹಿರೇಮನೆ ಕಮ್ಮಾರ ಮತ್ತು ಚಿಕ್ಕಮನೆ ಕಮ್ಮಾರರು ಕಬ್ಬಿಣದ ವಸ್ತುಗಳನ್ನು ತಯಾರಿಸಲು ಅನುಸರಿಸುವ ವಿಧಾನವು ಸಾಮಾನ್ಯವಾಗಿ ಒಂದೇ ಆಗಿರುತ್ತದೆ. ಹಾಗೆಯೇ ಕುಲುಮೆಗಳಲ್ಲಿ ಬಳಸುವ ಬ್ಲೋವರ್‌ಗಳು, ಚಮ್ಮಟಿಗೆಗಳು, ಇಕ್ಕಳಗಳು ಮತ್ತಿತರ ಉಪಕರಣಗಳು ಒಂದೇ ರೀತಿಯಲ್ಲಿದ್ದು ಕೇವಲ ತೂಕದಲ್ಲಿ ಮತ್ತು ಅಳತೆಯಲ್ಲಿ ಹೆಚ್ಚು ಕಡಿಮೆಯಾಗಿರುವುದನ್ನು ಕಾಣಬಹುದು. ಅವರು ಬಳಸುವ ಬ್ಲೋವರ್‌ಗಳು ೧೪, ೧೨ ಮತ್ತು ೧೦ ಇಂಚಿನದ್ದು ಆಗಿರುತ್ತದೆ. ಚಮ್ಮಟಿಗೆಗಳು ೨ ಪೌಂಡ್ ತೂಕದಿಂದ ೧೪ ಪೌಂಡ್ ತಾಕದ ಚಮ್ಮಟಿಗೆಯನ್ನು ಬಳಸುತ್ತಾರೆ. ಕೈಸುತ್ತಿಗೆಗಳು ಸಾಮಾನ್ಯವಾಗಿ ೨ ರಿಂದ ೪ ಪೌಂಡ್ ತೂಕದವುಗಳಾಗಿರುತ್ತವೆ. ಆಧುನಿಕ ಮಾರುಕಟ್ಟೆಗಳ ಪ್ರವೇಶದಿಂದಾಗಿ ಕುಲುಮೆಗೆ ಬೇಕಾದ ಸಾಮಾಗ್ರಿಗಳು ದೊರೆಯುತ್ತವೆ. ವಿಶೇಷವಾಗಿ ಚಮ್ಮಟಿಗೆಳನ್ನು ಕಮ್ಮಾರರು ಖರೀದಿಸುತ್ತಾರೆ. ಚಮ್ಮಟಿಗೆಯನ್ನು 'ಗನ್' ಎಂದು ಕರೆಯುತ್ತಾರೆ. ಇಂಗ್ಲೀಷ್ ಭಾಷೆಯ ಪದವನ್ನೆ ಉಚ್ಚರಿಸುವುದನ್ನು ಕಾಣತ್ತೇವೆ. ಗನ್‌ನನ್ನು ಇತ್ತೀಚಿನ ದಿನಗಳಲ್ಲಿ ಪೌಂಡ ತೂಕದಲ್ಲಿ ಬಳಕೆ ಮಾಡಲಾಗುತ್ತಿದೆ. ಉದಾಹರಣೆ ೧೪, ೧೨, ೧೦, ೮, ೩, ೨, ೧.೫ ಪೌಂಡಿನ ಗನ್ ಇತ್ಯಾದಿ. ಪೌಂಡ ಎನ್ನುವುದು ತೂಕದ ಅಳತೆ ಸಾಧನವಾಗಿದೆ. ಪೌಂಡ ತೂಕವನ್ನು ಹೆಚ್ಚಾಗಿ ಬ್ರಿಟನ್, ಅಮೇರಿಕಾ ಮತ್ತು ಆಂಗ್ಲ ಭಾಷೆಯನ್ನು ಮಾತನಾಡುವ ದೇಶಗಳಲ್ಲಿ ಬಳಸುವುದನ್ನು ಕಾಣುತ್ತೇವೆ. ಇದು ಅಂತರಾಷ್ಟ್ರೀಯ ಮಟ್ಟದ ತೂಕ ಆಳತೆಯ ಮಾಪನವಾಗಿದೆ. ಒಂದು ಪೌಂಡ್‌ವು ೦.೪೫೪ ಕೆ.ಜಿ.ಗೆ ಸಮಾನವಾಗಿದೆ (೧ಪೌಂಡ=೦.೪೫೪ ಕೆ.ಜೆ ಅಗಿದೆ). ಇಕ್ಕಳಗಳು ೩೦ ರಿಂದ ೪೫ ಸೆಂ.ಮೀ. ಉದ್ದವನ್ನು ಹೊಂದಿರುತ್ತವೆ. ಬಾಯಿಯ ಹತ್ತಿರ ಮಾತ್ರ ಬೇಕಾದ ರೂಪದಲ್ಲಿ ಮಾಡಲಾಗಿರುತ್ತದೆ. ಇದರಿಂದ ವಸ್ತುಗಳನ್ನು ಗಟ್ಟಿಯಾಗಿ ಹಿಡಿಯಲು ಸಹಾಯವಾಗುತ್ತದೆ. ಹೆಗ್ಗಿಕ್ಕಳಗಳು ಸುಮಾರು ೭ ರಿಂದ ೮ ಅಡಿ ಉದ್ದವಾಗಿರುತ್ತವೆ. ಇವುಗಳು ಕೆ.ಗೊಲ್ಲರಹಳ್ಳಿಯ ದೇವಸ್ಥಾನದಲ್ಲಿ ಮತ್ತು ಚಿಲಕನಹಟ್ಟಿಯ ಮುದ್ದೆ ಕಮ್ಮಾರ ವೆಂಕಟೇಶ ಆಚಾರ್ಯ ಹಾಗೂ ಕಮಲಾಪುರ ಕಾಳಶ್ರಪ್ಪ ಆಚಾರ್ಯರವರ ಮನೆಯಲ್ಲಿ ಈಗಲೂ ನೋಡಬಹುದು. ಅಡಿಗಲ್ಲು ಸಹ ಎಲ್ಲ ಕುಲುಮೆಗಳಲ್ಲಿ ಇದ್ದರೂ ಅಲ್ಪ ಪ್ರಮಾಣದ ವ್ಯತ್ಯಾಸವನ್ನು ನಾವು ಕಾಣಬಹುದು. ಬಳಸಿ ಬಳಿಸಿ ಸವೆದು ಹೋಗುವುದರಿಂದ ಕುಲುಮೆಗಳಲ್ಲಿ ಅದರ ಗಾತ್ರದಲ್ಲಿ ಏರಿಳಿತವನ್ನು ಕಾಣುತ್ತೇವೆ. ಇತ್ತೀಚಿಗೆ ಮಾರುಕಟ್ಟೆಯಲ್ಲಿ ಸಿದ್ಧವಾದ ಅಡಿಗಲ್ಲನ್ನು ಬಳಸುತ್ತಿರುವುದನ್ನು ಕಾಣಬಹುದು. ಬಕ್ಕಸಕೋಲು ಮತ್ತು ತಾಂಡಸ ಸಹ ಸಹಜವಾಗಿ ಎಲ್ಲ ಕುಲುಮೆಗಳಲ್ಲಿ ಒಂದೇ ತೆರನಾಗಿರುತ್ತವೆ.

ಹಿರೆ ಮನೆ ಮತ್ತು ಚಿಕ್ಕಮನೆ ಕಮ್ಮಾರರು ತಮ್ಮ ಕಬ್ಬಿಣ ಕೆಲಸ ಮಾಡುವ ಕಮ್ಮಗಾರವನ್ನು ಮುಖ್ಯವಾಗಿ ತಿದಿಗಳು, ಅಡಿಗಲ್ಲು, ಕುಲುಮೆ ಭಟ್ಟಿ, ಓಲೆ ನೋಡುವವನು (ಓಜ), ತಿದಿ ಒತ್ತುವವನು, ನೀರಿನ ಬಾನಿ, ನಾಲ್ಕು ಜನ ಚಮ್ಮಟಿಗೆ ಹೊಡೆಯುವವರು ಮತ್ತು ಕುಲುಮೆ ತಾಯಮ್ಮ ಎಂದು ವಿಂಗಡಿಸುತ್ತಾರೆ.

ಈ ಸಮುದಾಯದ ಕಮ್ಮಾರರು ಮುದ್ದೆ ಕಬ್ಬಿಣವನ್ನು ನೋಡಿದ್ದೇವೆ ಆದರೆ ನಾವು ತಯಾರಿಸುವುದಿಲ್ಲ. ಅದನ್ನು ಹೇಗೆ ತಯಾರಿಸುತ್ತಿದ್ದರು ಎಂಬುದು ನಮಗೆ ಗೊತ್ತಿಲ್ಲ ಎಂದು ಖಚಿತವಾಗಿ ವಕ್ತೃಗಳು ತಿಳಿಸುತ್ತಾರೆ. ಆದರೆ ಎರಡು ಜೋಡಿ ತಿದಿಗಳನ್ನು ಕುಲುಮೆಗೆ ಬಳಸಿ

ಸತತವಾಗಿ ೮ ರಿಂದ ೧೨ ಘಂಟೆ ತಿದಿಯೊತ್ತಿ ಮುದ್ದೆ ಕಬ್ಬಿಣವನ್ನು ತಯಾರಿಸುತ್ತಿದ್ದರು ಎಂದು ತಿಳಿಸುತ್ತಾರೆ. ಮುದ್ದೆ ಕಬ್ಬಿಣ ತಯಾರಿಸುವುದಕ್ಕೆ ಕನಿಷ್ಟ ೧೨ ಜನರು ಬೇಕಾಗುತ್ತಿದ್ದರು ಎಂದು ಹೇಳುತ್ತಾರೆ.

೩.೨. ಬಯಲುಗಮ್ಮಾರ ಸಮುದಾಯದ ಕುಲುಮೆಗಳು

ಪೀಠಿಕೆ : ಬಯಲುಗಮ್ಮಾರರು ಮೂಲತಃ ವಿಶ್ವಕರ್ಮ ಸಮುದಾಯದವರಾಗಿದ್ದು, ಕಾಲಕ್ರಮೇಣ ಒದಗಿ ಬಂದ ಪರಿಸ್ಥಿತಿಯಿಂದಾಗಿ ಬೇರೆಯದೇ ಬುಡಕಟ್ಟು ಸಮುದಾಯದಂತೆ ವಾಸಿಸುತ್ತಿದ್ದಾರೆ ಎಂದು ಹೇಳಬಹುದು. ಇವರು ಪಾಂಚಾಲರಲ್ಲಿ ಕೂಡ ಒಬ್ಬರಾಗಿದ್ದು, ಪೂರ್ವ ಕಾಲದಲ್ಲಿ ತಮ್ಮದೇ ಆದ ವೃತಿಯನ್ನು ಕೈಗೊಂಡಿದ್ದರು. ಬಯಲುಗಮ್ಮಾರರು ಪ್ರಾಯಶಃ ಬಯಲು ಪ್ರದೇಶದಲ್ಲಿ ವೃತ್ತಿಯನ್ನು ಕೈಗೊಂಡಿದ್ದರಿಂದ ಈ ಹೆಸರು ಬಂದಿರಬೇಕು ಎಂದು ತಿಳಿಯುತ್ತದೆ. ವಾಸ್ತವವಾಗಿ ಬಯಲುಗಮ್ಮಾರರು ಬೇರೆ ಸಮುದಾಯದವರಾಗಿರದೆ ವಿಶ್ವಕರ್ಮ ಸಮುದಾಯದಲ್ಲಿ ಒಬ್ಬರಾಗಿರುವುಗು ಕಂಡುಬರುತ್ತದೆ. ಇವರು ವಿಶ್ವಕರ್ಮ ಸಮುದಾಯದಿಂದ ತುಸು ಬೇರೆಯದೆ ರೀತಿಯಲ್ಲಿ ನೆಲೆಯನ್ನು ಕಂಡುಕೊಂಡಿರುವುದರಿಂದ ಇದು ಒಂದು ಸಮುದಾಯ ಆಗಿರಬಹುದು ಎಂದು ಅನಸುವುದು ಸತ್ಯ. ಆದರೆ ಇವರುಗಳ ಜೀವನಕ್ರಮ ಮತ್ತು ವೃತ್ತಿ ವಿಶ್ವಕರ್ಮ ರೀತಿಯಲ್ಲಿ ನಡೆಯುತ್ತದೆ. ಬಹುಶಃ ಬಯಲುಗಮ್ಮಾರರನ್ನು ವಿಶ್ವಕರ್ಮದ ಕೆಲ ಪಂಗಡದವರು ತಮ್ಮಲ್ಲಿಯೇ ಒಬ್ಬರು ಎಂದು ಸ್ವೀಕರಿಸುವುದಕ್ಕೆ ಅಲ್ಲಗಳೆಯುತ್ತಿರುವುದಂತೆ ಕಾಣುತ್ತದೆ. ಬಯಲುಗಮ್ಮಾರರು ಹೆಚ್ಚಾಗಿ ಉತ್ತರ ಕರ್ನಾಟಕದಲ್ಲಿ ಕಂಡುಬರುತ್ತಾರೆ.

ಬಯಲುಗಮ್ಮಾರ ಸಮುದಾಯ

ಬಯಲುಗಮ್ಮಾರ ಸಮುದಾಯವು ವಿಶ್ವಕರ್ಮದಲ್ಲಿನ ಒಂದು ಉಪ ಸಮುದಾಯವಾಗಿದ್ದು, ಇವರ ವಾಸ ಮತ್ತು ವೃತ್ತಿ ಬಯಲು ಪ್ರದೇಶದಲ್ಲಾಗಿದೆ. ಈ ಸಮುದಾಯದ ಜನರು ಊರಿಂದೂರಿಗೆ ವಲಸೆ ಹೋಗುವರು. ಬಯಲುಗಮ್ಮಾರರಿಗೆ ತೀರಾ ಹತ್ತಿರವಾದ ಮತ್ತೊಂದು ಸಮುದಾಯವೆಂದರೆ ಮುದ್ದೆಕಂಬಾರರು. ಈ ಬಯಲುಗಮ್ಮಾರರು ಮತ್ತು ಮುದ್ದೆಗಮ್ಮಾರರು ತಮ್ಮನ್ನು ಹಿರೇಮನೆಯವರು ಎಂದು ಹೇಳಿಕೊಳ್ಳುತ್ತಾರೆ. ಆದರೆ ಇವುಗಳು ಹೀರೆಮನೆಯವರಿಗಿಂತ ಭಿನ್ನವಾದ ಬುಡಕಟ್ಟು ಸಮುದಾಯಗಳು ಎಂದು ಕೆಲವರು ತಿಳಿಸುತ್ತಾರೆ. ಈ ಸಮುದಾಯದವರು ಅಸ್ಪೃಶ್ಯರಾಗಿದ್ದರೂ, ಎಲ್ಲ ಮನೆಗಳಲ್ಲಿ ಪೂಜೆ ಪುನಸ್ಕಾರಗಳಲ್ಲಿ ಪ್ರವೇಶವಿದೆ. ಬಯಲುಗಮ್ಮಾರ ಮತ್ತು ಮುದ್ದೇಗಮ್ಮಾರರು ಹಿರೇಮನೆಯವರೆಂದು ಕೆಲವರು ತಿಳಿಸಿದರೆ, ಮುದ್ದೆಗಮ್ಮಾರರು ತಿಳಿಸುವುದೇ ಬೇರೆ ರೀತಿ ಇದೆ. ಬಯಲುಗಮ್ಮಾರರಿಗೂ ಮತ್ತು ತಮಗೂ ಅಜಗಜಾಂತರ ವ್ಯತ್ಯಾಸಗಳುಂಟು ಎಂದು ಮುದ್ದೆಗಮ್ಮಾರರು ತಿಳಿಸುವರು. ಇವರು ಸಸ್ಯಹಾರಿ ಮತ್ತು ಮಾಂಸಾಹಾರಿಗಳಾಗಿದ್ದಾರೆ.

ಬಯಲುಗಮ್ಮಾರರು ಆಚರಿಸುವ ಆಚರಣೆಗಳು ಮುದ್ದೆಗಮ್ಮಾರರಿಗೆ ತುಂಬಾ ಹತ್ತಿರವಾಗಿದ್ದರೂ ಸಹ, ಬೆಡಗುಗಳು ಮಾತ್ರ ಭಿನ್ನವಾಗಿವೆ ಎಂದು ಕಂಡುಬರುತ್ತದೆ. ಬಯಲುಗಮ್ಮಾರರ ಹಿರಿಯ ವ್ಯಕ್ತಿಯೊಬ್ಬರ ಹೇಳಿಕೆ ಪ್ರಕಾರ ಮುದ್ದೆಕಮ್ಮಾರರು ಕಬ್ಬಿಣ ತಯಾರಕರಾದರೆ, ಬಯಲುಗಮ್ಮಾರರು ಕಬ್ಬಿಣದ ತಯಾರಿಸುವವರು ಎಂದು ಡಾ.ಬಿ.ಆರ್. ಕಮಾರರವರು ತಮ್ಮ ಪುಸ್ತಕದಲ್ಲಿ ತಿಳಿಸುತ್ತಾರೆ.

ಕೆ.ಗೊಲ್ಲರಹಳ್ಳಿ, ಕಮಲಾಪುರ ಮತ್ತು ಚಿನಕನಹಟ್ಟಿಗಳಲ್ಲಿ ಹಿಂದೆ ಮುದ್ದೆಕಬ್ಬಿಣವನ್ನು ತಮ್ಮ ಪೂರ್ವಿಕರು ತಯಾರಿಸುತ್ತಿದ್ದರು ಎಂದು ವಕ್ತೃಗಳಿಂದ ತಿಳಿದು ಬರುತ್ತದೆ. ಹೀಗಾಗಿ ಮುದ್ದೆಗಮ್ಮಾರರು ಕಬ್ಬಿಣ ತಯಾಕರರಾದರೆ, ಬಯಲುಗಮ್ಮಾರರು ಕಬ್ಬಿಣದಿಂದ ಉಪಕರಣವನ್ನು ತಯಾರಿಸುವವರು ಎಂಬುದು ಸರಿ ಎನಿಸುತ್ತದೆ.

ಬಯಲುಗಮ್ಮಾರರು ಉತ್ತರ ಕರ್ನಾಟಕದಲ್ಲಿ ಹೆಚ್ಚಾಗಿರುವುದರಿಂದ ಇವರ ಜನಸಂಖ್ಯೆ ಮುದ್ದೆಗಮ್ಮಾರರಿಗಿಂತ ಹೆಚ್ಚಾಗಿದೆ ಎಂದು ತಿಳಿದು ಬರುತ್ತದೆ. ಇವರಲ್ಲಿ ನಾಲ್ಕು ಬೆಡಗುಗಳಿವೆ. ಹೊವಿನೋರು, ತ್ಯಾಬಲ್ಲೋರು, ಚಿಂತೆಕುಟ್ಲೆಯವರು ಮತ್ತು ನಿಜಗಂಬಳಿಯವರು. ನಂ. ೧೦ ಮುದ್ದಾಪುರದಲ್ಲಿನ ಕಮ್ಮಾರ ರಾಮಣ್ಣ ಆಚಾರ್ಯ ಕುಟುಂಬವು ತ್ಯಾಬಲ್ಲೋರು ಪಂಗಡದವರಾಗಿದ್ದು, ಉತ್ತರ ಕರ್ನಾಟಕದಿಂದ ಬಂದು ನೆಲೆಸಿರುವುದನ್ನು ಅಜ್ಜಿಯೊಬ್ಬರು ತಿಳಿಸುತ್ತಾರೆ.

ಬಯಲುಗಮ್ಮಾರರು ತಮ್ಮನ್ನು ತಾವು ಆರ್ಯಕರ್ಮದವರು ಎಂತಲೂ ಹೇಳಿಕೊಳ್ಳುತ್ತಾರೆ. ಕಂಪ್ಲಿಯಲ್ಲಿ ನೆಲೆಸಿರುವ ಕಮ್ಮಾರ ಅಂಜಿನೆಪ್ಪ ಆಚಾರ್ಯರರನ್ನು ವಿಚಾರಿಸಿದಾಗ, ನಾವು ಬಯಲು ಗಮ್ಮಾರರಾಗಿದ್ದು, ಆರ್ಯಕಮ್ಮಾರರೆಂತಲೂ ಕರೆಯುತ್ತಾರೆ ಎಂದು ಹೇಳುತ್ತಾರೆ. ಬಯಲುಗಮ್ಮಾರರಿಗೆ ತಮ್ಮ ಇರುವಿಕೆ ಮತ್ತು ಸಂಸ್ಕೃತಿ ಮತ್ತು ಸಂಪ್ರದಾಯದ ಕುರಿತು ತಿಳಿದುಕೊಳ್ಳಲು ಕುತೂಹಲ ಇಲ್ಲದಂತೆ ಕಂಡುಬರುತ್ತದೆ. ಕಾರಣ ಅವರಲ್ಲಿರುವ ಅಜ್ಞಾನದ ಕೊರತೆ ಎಂದೇ ಹೇಳಬಹುದಾಗಿದೆ.

ಕುಲುಮೆಗಳು

ಬಯಲುಗಮ್ಮಾರರ ಕುಲುಮೆಗಳು ಕೆಲವು ಸಲ ಚಿಕ್ಕಮನೆಯವರ ಕುಲುಮೆಗೆ ಹೋಲುತ್ತದೆ ಎಂದು ಹೇಳಬಹುದು. ಇವರು ಜೋಡು ತಿದಿಗಳನ್ನು ಉಪಯೋಗಿಸಿದರೂ ಅವು ತುಂಬಾ ಚಿಕ್ಕ ತಿದಿಗಳಾಗಿರುತ್ತವೆ ಮತ್ತು ಇವರು ತಮ್ಮ ಕುಲುಮೆಯ ಉಪಕರಣಗಳನ್ನು ಉರಿಂದೂರಿಗೆ ಹೊತ್ತೊಯ್ದು ಕೆಲಸ ಮಾಡುತ್ತಿರುತ್ತಾರೆ. ಇಂದು ಬಯಲುಗಮ್ಮಾರರು ಅಲೆಮಾರಿತನದಿಂದ ದೂರವಾಗಿ ಒಂದು ಕಡೆ ನೆಲೆ ನಿಂತು ಜೀವನ ಸಾಗಿಸುತ್ತಿದ್ದಾರೆ. ಕಂಪ್ಲಿಯಲ್ಲಿ ಇರುವ ಕಮ್ಮಾರ ಶೇಖರಪ್ಪ ಆಚಾರ್ಯನವರ ಕುಲುಮೆ ಗುಡಿಸಲಿನಲ್ಲಿ ಇದ್ದರೆ ಕಮ್ಮಾರ ಅಂಜಿನೆಪ್ಪ ಆಚಾರ್ಯರ ಕುಲುಮೆ ಮುಖ್ಯ ರಸ್ತೆಯ ಬದಿಗೆ ಇದ್ದು ಚಪ್ಪರವನ್ನು ಹಾಕಿಕೊಂಡು ಕುಲುಮೆ ಕೆಲಸ ಮಾಡುತ್ತಿರುವುದು ಕಂಡುಬರುತ್ತದೆ. ಇವರು ರಾಯಚೂರಿನಿಂದ ವಲಸೆ ಬಂದದ್ದಾಗಿ ತಿಳಿಸುತ್ತಾರೆ. ಕುಲುಮೆಯಲ್ಲಿ ಬ್ಲೋವರ್‌ಗಳನ್ನು ಹೊಂದಿದ್ದು, ಕೃಷಿಗೆ ಸಂಬಂಧಿಸಿದ ಚಿಕ್ಕ ಪುಟ್ಟ ವಸ್ತುಗಳನ್ನು ತಯಾರಿಸಿ ಕೊಡುತ್ತಾರೆ. ಇವರ ಚಮ್ಮಟಿಗೆಗಳು ೮ ರಿಂದ ೧೪ ಪೌಂಡ್ ತೂಕವನ್ನು ಹೊಂದಿದೆ. ಹಾಗೂ ಇಕ್ಕಳಗಳು ೩೮ ರಿಂದ ೪೩ ಸೆಂ.ಮೀ., ಉದ್ದವನ್ನು ಹೊಂದಿವೆ. ಇತರೆ ಚಿಕ್ಕಪುಟ್ಟ ಉಪಕರಣಗಳನ್ನು ಇಟ್ಟುಕೊಂಡಿದ್ದಾರೆ. ಇವರ ಮೂಲ ಕಸುಬು ಕುಲುಮೆ ಕೆಲಸವಾಗಿದೆ. ಆದರೆ ನಂ. ೧೦ ಮುದ್ದಾಪುರದಲ್ಲಿನ ಕಮ್ಮಾರ ರಾಮಣ್ಣ ಆಚಾರ್ಯನ ಕುಲುಮೆಯು ಮನೆಗೆ ಹೊಂದಿಕೊಂಡಿದ್ದು ಆಧುನಿಕ ಬ್ಲೋವರ್‌ಗಳನ್ನು ಬಳಸಲಾಗಿದೆ. ಕೃಷಿಗೆ ಬೇಕಾದ ವಸ್ತುಗಳನ್ನು ತಯಾರಿಸುತ್ತಾರೆ. ಇವರು ಉತ್ತರ ಕರ್ನಾಟಕದವರಾಗಿದ್ದು, ಇಲ್ಲಿಯೇ ಖಾಯಂ ಆಗಿ ನೆಲೆಸಿರುವುದನ್ನು ಕಾಣಬಹುದು. ಬಯಲುಗಮ್ಮಾರರ ಸಮುದಾಯದ ಕುಲುಮೆಗಳ ವಿವರ ವಂಶಾವಳಿಯನ್ನು (ಅನುಬಂಧ–೨ರಲ್ಲಿ) ಗಮನಿಸಿ.

೩.೩. ಘಿಸಾಡಿ ಸಮುದಾಯದ ಕುಲುಮೆಗಳು

ಪೀಠಿಕೆ : 'ಘಿಸಾಡಿ' ಎಂಬ ಪದವು ಜಾತಿ ಅಥವಾ ಒಟ್ಟು ಸಮುದಾಯದ ಹೆಸರನ್ನು ಸೂಚಿಸಿದರೆ, 'ಸಮುದಾಯ ಮತ್ತು ಸಮಾಜ' ಎಂಬುದು ಈ ಸಮುದಾಯದ ಒಟ್ಟು ಚೌಕಟ್ಟನ್ನು ಸೂಚಿಸುತ್ತದೆ. 'ಘಿಸಾಡಿ' ಎಂಬುದು ಒಂದು ಅಲೆಮಾರಿ ಬುಡಕಟ್ಟು ಸಮುದಾಯವಾಗಿದೆ. 'ಯಶವಂತ ರಾಮಕೃಷ್ಣ ದಾತೆ' ಯವರು ಘಿಸಾಡಿ ಪದದ ಬಗ್ಗೆ ಈ ರೀತಿ ಬರೆಯುತ್ತಾರೆ. "ಘಿಸಾಡಿಯು ಕಬ್ಬಿಣದ ಕೆಲಸ ಮಾಡುವಾಗ ಕೆಂಪಗೆ ಕಾಯಿಸಿದ ಕಬ್ಬಿಣ ತಣ್ಣಗಾಗುವುದಕ್ಕಿಂತ ಮೊದಲೇ ಗನ್‌ನಂದ 'ಘಿಸ್ ಘಿಸ್' ಎಂಬ ಶಬ್ದದೊಂದಿಗೆ ಲಘುವಾಗಿ ವೇಗದಿಂದ ನರಂತರವಾಗಿ ಬಡಿಯುತ್ತಿರುತ್ತಾನೆ. ಈ ಘಿಸ್ ಘಿಸ್ ಎಂಬ ಶಬ್ದ ಮತ್ತು ಅತಿಯಾದ ವೇಗ ಘಿಸಾಡಿ ಶಬ್ದದ ಪರಿಕಲ್ಪನೆ ಎಂಬ ಅಭಿಪ್ರಾಯ ನೀಡಿದ್ದಾರೆ. ಘಿಸಾಡಿ ಎಂದರೆ ಗಟ್ಟಿಮುಟ್ಟಾದ ಕಬ್ಬಿಣದ ಕೆಲಸ ಮಾಡುವ ಒಂದು ಕೆಳಜಾತಿ. ಈ ಸಮುದಾಯವು ಒಂದು ಊರಿನಲ್ಲಿ ನೆಲೆ ನಲ್ಲದೆ, ಅಲೆಮಾರಿಯಾಗಿ ವಲಸೆ ಹೋಗುತ್ತಿರುತ್ತದೆ. ಈ ಕುಲದ ಜನರಿಗೆ 'ಲೋಹಾರಿ' ಎಂದು ಸಹ ಕರೆಯುತ್ತಾರೆ ಎಂದು ಸ್ಪಷ್ಟಿಕರಿಸಿದ್ದಾನೆ".[೨೧]

ಘಿಸಾಡಿ ಎಂಬುದು ಒಂದು ಜಾತಿಯ ಜನಾಂಗವಾಗಿದ್ದು ಘರ್ಷಣೆ ಎಂಬ ಧಾತುವಿನಿಂದ ಈ ಶಬ್ದ ಉತ್ಪತ್ತಿಯಾಗಿದೆ. ಈ ಜನರು ಮಹಾರಾಷ್ಟ್ರ ಮತ್ತು ಕರ್ನಾಟಕ ಪ್ರದೇಶದಲ್ಲಿ ವಾಸಿಸುತ್ತಾರೆ ಎಂದು ಹೇಳಿದ್ದಾರೆ. ವಿಶ್ವಸಂಸ್ಥೆಯ ಇತ್ತೀಚಿನ ಮಾಹಿತಿಯ ಪ್ರಕಾರ ವಿಶ್ವದಲ್ಲಿ ಶೇ. ೨೦ರಷ್ಟು ಜನರು ಅಲೆಮಾರಿಗಳಿದ್ದಾರೆ ಹಾಗೂ ಭಾರತದಲ್ಲಿ ಶೇ. ೧೦ರಷ್ಟು ಜನರು ಅಂದರೆ ಸುಮಾರು ೧೦ ಕೋಟಿ ಜನರಿದ್ದಾರೆ. ದೇಶದಲ್ಲಿ ಅಲೆಮಾರಿ ಸಮುದಾಯಕ್ಕೆ ಕರ್ನಾಟಕ ೨ನೇ ಸ್ಥಾನವನ್ನು ಪಡೆದಿದೆ. ಈ ಸಮುದಾಯದ ಮೂಲ ಲಕ್ಷಣಗಳೆಂದರೆ ಪಶುಪಾಲನೆ, ನಾಟಿವೈದ್ಯ, ಕಲಾ ಪ್ರದರ್ಶನ, ಭಿಕ್ಷಾಟನೆ, ನಿರ್ಗತಿಕತನ, ಬಯಲಿನಲ್ಲಿ ವಾಸ ಮಾಡುವರು.[೨೨] ಈ ಸಮುದಾಯವು ಕರ್ನಾಟಕದಲ್ಲಿ ಅಲೆಮಾರಿ ಬುಡಕಟ್ಟು ಜನಾಂಗದಲ್ಲಿ ಸೇರಿದ ಸಮುದಾಯವಾಗಿದ್ದು, ಇವರುಗಳು ವೃತ್ತಿಯಲ್ಲಿ ಹಲವಾರು ಕಡೆ ಸಾರ್ವಜನಿಕರ ಕಣ್ಣಿಗೆ ವಿಶ್ವಕರ್ಮರಂತೆ ಕಂಡುಬರುತ್ತಾರೆ.

ಘಿಸಾಡಿ ಸಮುದಾಯ : ಘಿಸಾಡಿ ಸಮುದಾಯದ ಮೂಲವನ್ನು ಕಂಡುಕೊಳ್ಳಬೇಕಾದಲ್ಲಿ ಇತಿಹಾಸದ ಪುಟಗಳನ್ನು ಇಣುಕಿ ನೋಡಬೇಕಾಗುತ್ತದೆ. ಇವರುಗಳು ಮೂಲತಃ ರಾಜಸ್ಥಾನ ಪ್ರದೇಶ ಚಿತ್ತೂಡಗಡ್, ಮೇವಾಡ್ ಮತ್ತು ಉದಯಪುರ ಮೂಲದವರಾಗಿದ್ದು, ಇವರು ಕ್ರಿ.ಶ. ೧೧೬೦ರಲ್ಲಿ ರಜಪೂತ್ ವಂಶಸ್ಥರ ರಾಜಾಶ್ರಯುದಲ್ಲಿದ್ದುಕೊಂಡು ಸೈನ್ಯಕ್ಕೆ ಬೇಕಾದ ಯುದ್ಧಸಾಮಗ್ರಿಗಳನ್ನು ತಯಾರಿಸಿ ಕೊಡುತ್ತಿದ್ದರು. ಇವರಿಗೆ ರಾಣಾ ಪ್ರತಾಪ್ ಸಿಂಗ್ ಮುಖ್ಯಸ್ಥನಾಗಿದ್ದು ಇವರನ್ನು ದೈವ ಸಮಾನರಾಗಿ ಕಾಣುತ್ತಿದ್ದರು. ವಂಶದ ಮೂಲ ಪುರುಷ ಎಂದೇ ತಿಳಿಯುತ್ತಾರೆ. ರೈತರಿಗೆ ಸಲಕರಣೆಗಳನ್ನು ತಯಾರಿಸಿ ಕೊಡುತ್ತಿದ್ದರು.[೨೩]

ಈ ಸಮುದಾಯದ ಮೂಲದ ಕುರಿತು ವಿದ್ವಾಂಸರಲ್ಲಿ ಅನೇಕ ಭಿನ್ನಾಬಿಪ್ರಾಯಗಳನ್ನು ಕಾಣಬಹುದು. ಈ ಸಮುದಾಯದವರು ರಾಜಸ್ಥಾನದಿಂದ ಮಹಾರಾಷ್ಟ್ರದ ಮೂಲಕ ಕರ್ನಾಟಕದಲ್ಲಿ

ನೆಲೆಯನ್ನು ಕಂಡುಕೊಂಡಿರುವುದನ್ನು ತಿಳಿಯಬಹುದು. ಕ್ರಿ.ಶ. ೧೫೭೬ರಲ್ಲಿ ಮೊಘಲರ ಅರಸ ಅಕ್ಬರ್ ಮತ್ತು ರಾಣಾ ಪ್ರತಾಪ್ ಸಿಂಗ್‌ರ ನಡುವಿನ ಯುದ್ಧದಲ್ಲಿ ರಾಣಾ ಪ್ರತಾಪ್ ಸಿಂಗ್ ಸೋತಾಗ ಈ ಘಿಸಾಡಿ ಜನರು ಅಲ್ಲಿಂದ ಅಲೆಮಾರಿಯಾಗಿ ಮುಂದೆ ಮಹಾರಾಷ್ಟ್ರದ ಶಿವಾಜಿ ಸೈನ್ಯಕ್ಕೆ ಯುದ್ಧ ಮತ್ತು ಕೃಷಿಗೆ ಬೇಕಾದ ಸಾಮಗ್ರಿಗಳನ್ನು ಮಾಡಿಕೊಡುತ್ತಿದ್ದರು. ಮುಂದೆ ಬ್ರಿಟಿಷರ ಆಡಳಿತದಲ್ಲಿ ರೈಲ್ವೆ ಯೋಜನೆ ಬಂದ ಕೂಡಲೇ ಇವರ ಸಂಚಾರಿ ಜೀವನ ಮತ್ತು ಕಸುಬುಗಳು ನಂತು ಹೋದವು.[೨೪] ಹೀಗೆ ಘಿಸಾಡಿಗಳು ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ವಲಸೆ ಬಂದು ಬಿಜಾಪುರ, ಬೆಳಗಾಂ, ಗುಲ್ಬರ್ಗಾ, ಬೀದರ್, ಬಾಗಲಕೋಟೆ, ಧಾರವಾಡ, ಗದಗ, ಶಿವಮೊಗ್ಗ, ದಾವಣಗೆರೆ, ಚಿಕ್ಕಮಗಳೂರು, ಬಳ್ಳಾರಿ, ಕೊಪ್ಪಳ, ಉತ್ತರ ಕನ್ನಡ, ಹಾವೇರಿ ಮತ್ತು ಚಿತ್ರದುರ್ಗಗಳಲ್ಲಿ ನೆಲೆಯನ್ನು ಕಂಡಿದ್ದಾರೆ. ಒಟ್ಟು ೧೫ ಜಿಲ್ಲೆಗಳಲ್ಲಿ ಇವರು ವಾಸ್ತವ್ಯವನ್ನು ಹೂಡಿದ್ದಾರೆ. ಘಿಸಾಡಿ ಸಮುದಾಯದ ಒಟ್ಟು ೧೬ ಕುಟುಂಬಗಳು ಬಳ್ಳಾರಿ ಜಿಲ್ಲೆಯಲ್ಲಿವೆ. ಬಳ್ಳಾರಿ ತಾಲೂಕಿನಲ್ಲಿ ೭ ಕುಟುಂಬಗಳಿದ್ದರೆ, ಸಂಡೂರಿನಲ್ಲಿ ೫ ಕುಟುಂಬಗಳಿವೆ. ಹಾಗೆಯೇ ಹೊಸಪೇಟೆ ತಾಲೂಕಿನಾದ್ಯಂತ ೪ ಕುಟುಂಬಗಳನ್ನು ಕಾಣಬಹುದು.

ಘಿಸಾಡಿ ಬುಡಕಟ್ಟು ಸಮುದಾಯದವರನ್ನು ಆಯಾ ಪ್ರದೇಶದ ಪರಿಸರದಲ್ಲಿ ನೆಲೆಸಿರುವ ಹಿನ್ನೆಲೆಯಲ್ಲಿ ವಿವಿಧ ಹೆಸರುಗಳಿಂದ ಗುರುತಿಸಿರುವುದನ್ನು ಕಾಣಬಹುದು. ಈ ದಿಶೆಯಲ್ಲಿ ಇವರುಗಳನ್ನು ಘಿಸಾಡಿ ಸಮುದಾಯ, ಘಿಸಾಡಿ ಕಮ್ಮಾರರು, ಬೈಲು ಕಮ್ಮಾರರು (ಬೈಲ್ ಗಂಬಾರರು), ಗಾಡಿಯಾ ಗಾಡುರಿಯಾ ಲೋಹಾರ್ (ಗಾಡಿ ಲೋಹಾರ್), ರಜಪೂತ್ ಕಮ್ಮಾರ, ಅಲೆಮಾರಿ ಕಮ್ಮಾರ್, ಬೈಟಿ ಕಮ್ಮಾರ್, ಚಿತ್ತೋಡಿ ಘಿಸಾಡಿ ಲೋಹಾರ್ ಮತ್ತು ಚಿತ್ತೋಡಿ ಲೋಹಾರ ಎಂಬ ಹೆಸರುಗಳಿಂದ ಕರೆಯುತ್ತಾರೆ.

ಈ ಬುಡಕಟ್ಟು ಸಮುದಾಯದವರು ಅರಸರಿಂದ ರಾಜಾಶ್ರಯವನ್ನು ಪಡೆದವರಾಗಿದ್ದು ಮತ್ತು ತಾವುಗಳು ಅವರ ಕುಲಸ್ಥರು ಎಂದು ತಿಳಿದುಕೊಳ್ಳುತ್ತಾರೆ. ಅಂತೆಯೇ ಅರಸುಗಳ ಸಂತತಿಯಾದ ಸೊಳೊಂಕಿ, ಚವ್ಹಾಣ, ಪವಾರ ಕುಲ ಸಂತತಿಯಿಂದ ಗುರುತಿಸಿಕೊಳ್ಳುವರು. ಘಿಸಾಡಿ ಸಮುದಾಯದಲ್ಲಿ ಮುಖ್ಯವಾಗಿ ೫ ಬೆಡಗುಗಳಿವೆ. ಅವು ಸುರ್ವೇನ್, ಸೊಳೊಂಕಿ, ಚವ್ಹಾಣ, ಪವಾರ ಮತ್ತು ಪಡವಲಕರ್‌ಗಳೆಂದು ಗುರುತಿಸಬಹುದು. ಇವರುಗಳಲ್ಲಿ ಇತ್ತೀಚಿನ ದಿನಗಳಲ್ಲಿ ಕೆಲ ಕುಟುಂಬಗಳು ನೆಲೆಯನ್ನು ಕಂಡುಕೊಂಡಿದ್ದರೆ, ಇತರೆ ಕುಟುಂಬಗಳು ವಲಸೆಯನ್ನು ನಂಬಿಕೊಂಡಿವೆ. ಈ ದಿಶೆಯಲ್ಲಿ ಹೊಸಪೇಟೆ ತಾಲೂಕಿನಲ್ಲಿರುವ ಎಂ.ಜೆ. ನಗರದ ಘಿಸಾಡಿ ಶಿವಾಜಿ ಚವ್ಹಾಣರವರು ಸುಮಾರು ೬೦ ವರ್ಷಗಳಿಂದ ವಾಸಿಸುತ್ತಿದ್ದು, ತಮ್ಮ ಕುಲಕಸುಬನ್ನು ಮಾಡಿಕೊಂಡು ಜೀವಿಸುತ್ತಿದ್ದರೆ, ಇವರದೆ ಸಂಬಂಧಿಕರಾದ ಘಿಸಾಡಿ ರಾಮಪ್ಪ ಚವ್ಹಾಣರವರು ಕೊಂಡನಾಯಕನಹಳ್ಳಿಯಲ್ಲಿ ನೆಲೆಯನ್ನು ಕಂಡಿದ್ದಾರೆ. ಕಂಪ್ಲಿಯಲ್ಲಿರುವ ಘಿಸಾಡಿ ಗುನಾಜಿ ಚವ್ಹಾಣ ಮತ್ತು ಮೆಟ್ರಿಯಲ್ಲಿರುವ ಘಿಸಾಡಿ ರಾಮಚಂದ್ರಪ್ಪ ಸೊಳೊಂಕಿ ರವರು ಅಲೆಮಾರಿಯಾಗಿ ಊರಿಂದೂರಿಗೆ ವಲಸೆ ಹೋಗುತ್ತಿರುವುದನ್ನು ಕಾಣಬಹುದು. ಇವರುಗಳು ಸಸ್ಯಹಾರಿ ಮತ್ತು ಮಾಂಸಾಹಾರಿಗಳಾಗಿದ್ದಾರೆ. ಇವರುಗಳು ಮುಖ್ಯವಾಗಿ

ಅಂಬಾ ಭವಾನಿ ದೇವಿಯನ್ನು ಪೂಜಿಸುವುದಲ್ಲದೆ ಇತರೆ ಎಲ್ಲ ಸ್ತ್ರೀ ದೈವವನ್ನು ಪೂಜಿಸುತ್ತಾರೆ. ಪುರುಷ ದೈವಗಳಲ್ಲಿ ಜೆಜೋರಿ ಖಂಡೋಬನನ್ನು ಪೂಜಿಸುವುದಲ್ಲದೆ ಇತರ ವಿಶ್ವಕರ್ಮ ಸಮುದಾಯ ದವರು ಪೂಜಿಸುವ ದೈವಗಳನ್ನು ಕೂಡ ಪೂಜಿಸುತ್ತಿರುವುದನ್ನು ಕಾಣುತ್ತೇವೆ. ಇಸ್ಲಾಂ ಧರ್ಮದ ದೈವಗಳನ್ನು ನೆನೆಯುತ್ತಾರೆ.

ಕುಲುಮೆಗಳು

ಘಿಸಾಡಿ ಬುಡಕಟ್ಟು ಸಮುದಾಯದ ಕುಲುಮೆಗಳು ಸರ್ವೆಸಾಮಾನ್ಯವಾಗಿ ಬಯಲಿನಲ್ಲಿ ಇರುವುದನ್ನು ಎಲ್ಲಾ ಕಡೆಯಲ್ಲೂ ಗಮನಸಬಹುದು. ಕಾರಣ ಇವರು ಅಲೆಮಾರಿ ಜನಾಂಗದವರು. ಒಂದು ಕಡೆ ನೆಲೆಯೂರದೆ ತಮ್ಮ ಕುಲುಮೆ ಸಾಮಗ್ರಿಗಳನ್ನು ತಮ್ಮ ಜೊತೆಗೆ ಹೊತ್ತೊಯ್ದುಕೊಂಡೆ ವೃತ್ತಿಯನ್ನು ನಡೆಸುತ್ತಾರೆ. ಹಾಗಾಗಿ ದೊಡ್ಡ ಕುಲುಮೆಯನ್ನು ಮಾಡಿದೆ ಚಿಕ್ಕ ಚಿಕ್ಕ ಕುಲುಮೆಗಳನ್ನು ಮಾಡಿಕೊಂಡಿರುತ್ತಾರೆ. ಇವರುಗಳು ಮೂಲತಃ ಜೋಡು ತಿದಿ ಕುಲುಮೆಯನ್ನು ಹೊಂದಿದ್ದರೂ ಸಹ ಅವು ಚಿಕ್ಕದಾಗಿರುತ್ತಿತ್ತು. ಇವರು ಕೂಡ ಪೂರ್ವದಲ್ಲಿ ಆಕಳ ಇಲ್ಲವೆ ದನ ಅಥವಾ ಎಮ್ಮೆ ಇಲ್ಲವೆ ಕೋಣದ ಚರ್ಮದಿಂದ ಮಾಡಿದ ತಿದಿಯನ್ನು ಬಳಸುತ್ತಿದ್ದರು, ಇಂದು ಆಧುನಿಕ ಮಾರುಕಟ್ಟೆಯಲ್ಲಿ ಸಿದ್ಧವಾದ ಬ್ಲೋವರ್‌ಗಳನ್ನು ಬಳಸುತ್ತಿದ್ದಾರೆ. ತಿದಿಗಳನ್ನು ಮಹಾರಾಷ್ಟ್ರದಿಂದ ತರಲಾಗುತ್ತಿತ್ತು ಎಂದು ವಕ್ತೃಗಳು ಹೇಳುತ್ತಾರೆ. ಒಂದೇ ಕಡೆ ನೆಲೆನಿಂತ ಕುಟುಂಬಗಳು ಕುಲುಮೆಯನ್ನು ಮನೆಯ ಹತ್ತಿರ ಇಲ್ಲವೆ ಮನೆಯಲ್ಲಿ ಗುಡಿಸಲು ಇಲ್ಲವೆ ಚಪ್ಪರ ಹಾಕಿ ನಡೆಸುತ್ತಿರುವುದನ್ನು ಕಾಣಬಹುದು. ಈ ದಿಶೆಯಲ್ಲಿ ಹೊಸಪೇಟೆ ತಾಲೂಕಿನ ಎಂ.ಜಿ. ನಗರದಲ್ಲಿನ ಘಿಸಾಡಿ ಶಿವಾಜಿ ಚವ್ಹಾಣರ ಕುಲುಮೆಯು ಮನೆಗೆ ಅಂಟಿಕೊಂಡೆ ಇದ್ದು ಗುಡಿಸಲು ಹಾಕಿಕೊಂಡಿದ್ದಾರೆ. ಗುಡಿಸಲಿನಲ್ಲಿ ಆಕಳ ಚರ್ಮದಿಂದ ಮಾಡಿದ ತಿದಿಯನ್ನು ಬಳಸಿ ಕಬ್ಬಿಣ ವಸ್ತುಗಳನ್ನು ತಯಾರಿಸುತ್ತಿರುವುದನ್ನು ಕಾಣುತ್ತೇವೆ. ಇವರ ಕುಲುಮೆಯು ದಕ್ಷಿಣ ದಿಕ್ಕಿನಲ್ಲಿದ್ದು, ಒಲೆಯು ಪೂರ್ವ ದಿಕ್ಕಿನಲ್ಲಿದೆ. ಆಕಳ ಚರ್ಮದಿಂದ ಮಾಡಿದ ತಿದಿಯನ್ನು ಕೊಳವೆಗಳಿಗೆ ಜೋಡಿಸಿ, ಅಲ್ಲಿಂದ ಮುಂದೆ ಸರಕ್ಕೆ ಜೋಡಿಸಲ್ಪಟ್ಟಿದೆ. ತಿದಿಯ ಮೇಲ್ಭಾಗದ ಒಂದು ತುದಿಯನ್ನು ಬಿದಿರಿನ ಒಂದು ಭಾಗಕ್ಕೆ ಜೋಡಿಸಿದ್ದಾರೆ, ಬಿದಿರಿನ ಮತ್ತೊಂದು ಭಾಗಕ್ಕೆ ಹಗ್ಗಕಟ್ಟಿ ಎಳೆಯುವುದಕ್ಕೆ ನೆರವಾಗುವಂತೆ ರಚಿಸಲಾಗಿದೆ. ಇವರ ಕುಲುಮೆಯಲ್ಲಿ ಮೂಲ್ಲಂಗಿ ಎನ್ನುವ ಉಪಕರಣವಿದೆ. ಇದನ್ನು ಏಕೇಲೆ ಎಂತಲೂ ಕರೆಯುತ್ತಾರೆ. ಇದು ಕೊಡಲಿ ರಂಧ್ರ ಮಾಡುವುದಕ್ಕೆ ಉಪಯುಕ್ತವಾಗಿದೆ. ಇದು ೮೦ ವರ್ಷಗಳಷ್ಟು ಹಳೆಯದು ಎಂದು ಹೇಳುತ್ತಾರೆ. ಇವರು ಮೂಲತಃ ಮಹಾರಾಷ್ಟ್ರದಿಂದ ಶಿವಮೊಗ್ಗದ ಬೀರನಹಳ್ಳಿಯಲ್ಲಿ ಕೆಲಕಾಲ ಇದ್ದು ನಂತರ ಹೊಸಪೇಟೆಗೆ ವಲಸೆ ಬಂದು ನೆಲೆಯನ್ನು ಕಂಡುಕೊಂಡಿದ್ದಾರೆ. ಘಿಸಾಡಿ ಕುಟುಂಬದ ಕುಲುಮೆಗಳಲ್ಲಿ ಇವರದು ಸ್ವಲ್ಪ ಸುವ್ಯವಸ್ಥೆಯನ್ನು ಹೊಂದಿದ ಕುಲುಮೆ ಎನ್ನಬಹುದು.

ಆದರೆ ಕೊಂಡನಾಯಕನಹಳ್ಳಿಯಲ್ಲಿರುವ ಘಿಸಾಡಿ ರಾಮಪ್ಪ ಚವ್ಹಾಣರ ಕುಲುಮೆ ಬಯಲಿನಲ್ಲಿದ್ದು, ತಿದಿಯ ಬಳಕೆ ಇಲ್ಲದೆ ಆಧುನಿಕ ಬ್ಲೋವರ್‌ಗಳನ್ನು ಉಪಯೋಗಿಸುತ್ತಿದ್ದಾರೆ. ಆದರೆ ಸುವ್ಯವಸ್ಥೆಯಿಂದ ಇಲ್ಲ ಎಂದು ಹೇಳಬಹುದು. ಅದೇ ರೀತಿ ಕಂಪ್ಲಿಯಲ್ಲಿರುವ ಘಿಸಾಡಿ ಗುನಾಜಿ ಚವ್ಹಾಣರವರು

ವಲಸೆ ಬಂದಿದ್ದು ಸುಮಾರು ೩ ತಿಂಗಳಿಂದ ರಸ್ತೆಯ ಪಕ್ಕದಲ್ಲಿ ವೃತ್ತಿಯನ್ನು ಪ್ರಾರಂಭಿದ್ದಾರೆ. ಇವರು ಡೇರಿ (ಟೆಂಟ್)ಯನ್ನು ನಿರ್ಮಿಸಿ, ಒಂದು ಭಾಗ(ಹಿಂದಿನ)ವನ್ನು ವಾಸಿಸುವುದಕ್ಕೆ ಮತ್ತು ಮುಂದಿನ ಭಾಗವನ್ನು ಕುಲುಮೆಗಾಗಿ ನಿರ್ಮಿಸಿರುವುದನ್ನು ಕಾಣಬಹುದು. ಇವರು ಬಳಸುವ ಚಮ್ಮಟಿಗೆಗಳು ಚೌಕಾಕಾರದಲ್ಲಿದ್ದು ೧೦ ರಿಂದ ೧೪ ಪೌಂಡ್ ತೂಕ ಹೊಂದಿದ್ದು ಹೈದರಾಬಾದಿನಿಂದ ತಂದಿರುವುದಾಗಿ ತಿಳಿಸಿದರು. ೨ ಅಡಿಗಲ್ಲುಗಳಿವೆ ಮತ್ತು ಉಳಿದ ಚಿಕ್ಕಪುಟ್ಟ ಸಾಮಾನುಗಳು ಎಲ್ಲರ ಹಾಗೆಯೇ ಇವೆ ಎಂದು ಹೇಳಬಹುದು. ಈ ಕುಟುಂಬಗಳಿಗೆ ತಾವು ಮಾಡುವ ವೃತ್ತಿಯ ಪ್ರಾಚೀನತೆಯನ್ನು ಕುರಿತು ವಿಚಾರಿಸಿದರೆ, ತಮ್ಮ ಹಿರಿಯರು ಆರಂಭಿಸಿದ ವೃತ್ತಿಗಳ ಬಗ್ಗೆ ಸಂಪೂರ್ಣ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ಈ ಸಮುದಾಯದ ಹೊಸಪೇಟೆ ತಾಲೂಕಿನಲ್ಲಿರುವ ಕುಲುಮೆಗಳ ವಿವರ ಮತ್ತು ವಂಶಾವಳಿಯನ್ನು (ಅನುಬಂಧ-೩ರಲ್ಲಿ) ಗಮನಿಸಿ.

೩.೪. ಮುಸ್ಲಿಂ ಸಮುದಾಯದ ಕುಲುಮೆಗಳು

ಪೀಠಿಕೆ : ಮುಸ್ಲಿಂ ಸಮುದಾಯವು ಒಂದು ಅಲ್ಪಸಂಖ್ಯಾತ ಸಮುದಾಯವಾಗಿದ್ದು, ಈ ಸಮುದಾಯವು ಧರ್ಮದ ಆಚರಣೆಗೆ ಸಂಬಂಧಿಸಿದಂತೆ ದೇಶದಲ್ಲಿ ೨ನೇ ಸ್ಥಾನವನ್ನು ಪಡೆದಿದೆ. ಒಟ್ಟು ದೇಶದ ೧೩.೪% ಜನಸಂಖ್ಯೆಯನ್ನು ಹೊಂದಿದೆ. ಪ್ರಪಂಚದಲ್ಲಿರುವ ಎಲ್ಲಾ ಧರ್ಮಗಳಿಗೆ, ತಮ್ಮದೆ ಧರ್ಮದ ವಿಶಿಷ್ಟ ವ್ಯಕ್ತಿ ಅಥವಾ ಜನಾಂಗದಿಂದ ಆ ಧರ್ಮ ಉದಯವಾಗಿರುವುದನ್ನು ಕಾಣುತ್ತೇವೆ. ಉದಾ: ಕ್ರೈಸ್ತ ಧರ್ಮದ ಸಂಬಂಧವು ಏಸು ಕ್ರಿಸ್ತನೊಂದಿಗೆ ಇರುವುದರಿಂದ, ಅದರ ಹೆಸರು 'ಕ್ರೈಸ್ತ ಧರ್ಮ' ಎಂದಾಗಿದೆ. ಬೌದ್ಧ ಧರ್ಮದ ಸ್ಥಾಪಕರಾದ ಗೌತಮ ಬುದ್ಧರಾಗಿರುವುದರಿಂದ ಅದನ್ನು 'ಬೌದ್ಧ ಧರ್ಮ'ವೆಂದು ಕರೆಯುತ್ತಾರೆ. ಹೀಗೆ ಪಟ್ಟಿ ಸಾಗುತ್ತದೆ. ಆದರೆ ಇಸ್ಲಾಂ ಧರ್ಮವು ಯಾವುದೇ ಒಬ್ಬ ವ್ಯಕ್ತಿ ಇಲ್ಲವೆ ಯಾವುದೇ ಜನಾಂಗದ ಜೊತೆ ಗುರುತಿಸಲಿಲ್ಲವೆಂದು ಈ ಹೆಸರಿನಿಂದಲೇ ಸ್ಪಷ್ಟವಾಗಿ ತಿಳಿಯುತ್ತದೆ. ಇಸ್ಲಾಂ ಎಂಬ ಗುಣವನ್ನು ಜನರಲ್ಲಿ ಬೆಳೆಸುವ ಪ್ರಯತ್ನ ಮಾಡುತ್ತದೆ.[೨೫] ಈ ಧರ್ಮದ ಮೂಲ ವೃತ್ತಿ ವ್ಯಾಪಾರ ಮಾಡುವುದು, ಪೂರ್ವದಲ್ಲಿ ಖಾರ ಪದಾರ್ಥಗಳನ್ನು ವ್ಯಾಪಾರ ಮಾಡುತ್ತಿರುವುದಾಗಿ ತಿಳಿದು ಬರುತ್ತದೆ. ಇಂದು ಕೇವಲ ವ್ಯಾಪಾರವನ್ನು ನಂಬದೆ ಹಲವಾರು ವೃತ್ತಿಗಳಲ್ಲಿ ಭಾಗಿಯಾಗಿರುವುದನ್ನು ಕಾಣಬಹುದು.

ಮುಸ್ಲಿಂ ಸಮುದಾಯ

ಮುಸ್ಲಿಂ ಸಮುದಾಯ ಎಂದಾಕ್ಷಣ ನಮ್ಮರಿವಿಗೆ ಬರುವುದು ಕಷ್ಟಜೀವಿ ಎಂದು. ಕಷ್ಟದ ಕೆಲಸ ಮಾಡುವುದರಲ್ಲಿ ಸದಾ ನಿಸ್ಸಿಮರು. ಈ ಧರ್ಮದವರು ಮಾಡಿದ ವೃತ್ತಿಗಳೇ ಇಲ್ಲವೆನ್ನಬಹುದು. ಇಂದು ಈ ಸಮುದಾಯದವರು ಪ್ರಪಂಚದಾದ್ಯಂತ ಎಲ್ಲೆಡೆಯೂ ವ್ಯಾಪಕವಾಗಿ ಹರಡಿರುವುದನ್ನು ಕಾಣುತ್ತೇವೆ. ಈ ನಿಟ್ಟಿನಲ್ಲಿ ಯಾವುದೇ ಒಬ್ಬ ಮನುಷ್ಯ ಮುಸ್ಲಿಂ ನಾಗಬೇಕಾದರೆ ಮೊಟ್ಟಮೊದಲು ಅವನಿಗೆ ದೇವರಲ್ಲಿ, ಪ್ರವಾದಿಗಳಲ್ಲಿ, ಪರಲೋಕದ ಕುರಿತು ಮತ್ತು ಅಲ್ಲಾಹನ ಎಲ್ಲ ಗ್ರಂಥ ಮತ್ತು ದೇವಚರು ಹಾಗೂ ವಿಧಿಯಲ್ಲಿ ವಿಶ್ವಾಸವನ್ನು ಹೊಂದ ಬೇಕಾಗುತ್ತದೆ ಎಂದು ಕುರಾನ್ ತಿಳಿಸುತ್ತದೆ. ಮುಸ್ಲಿಂ ಸಮುದಾಯದ ಧರ್ಮ ಇಸ್ಲಾಂ ಆಗಿದೆ. ಅರಬ್ಬಿ ಭಾಷೆಯಲ್ಲಿ 'ಇಸ್ಲಾಂ' ಎಂದರೆ ಅನುಸರಣೆ

ಮತ್ತು ವಿಧೇಯತೆಯಾಗಿದೆ. ಇಸ್ಲಾಂ ಧರ್ಮವು ಅಲ್ಲಾಹನ ಅನುಸರಣೆ ಮತ್ತು ವಿಧೇಯತೆಯಾಗಿರುವುದರಿಂದ ಅದನ್ನು ಇಸ್ಲಾಂ ಎಂದು ಹೆಸರಿಸಲಾಗಿದೆ. ಯಾವುದೇ ಒಬ್ಬ ವ್ಯಕ್ತಿಯು ಇಸ್ಲಾಂ ಸ್ವೀಕರಿಸಿದ ಮೇಲೆ ಅವನು ಮುಸಲ್ಮಾನನೆಸಿಕೊಳ್ಳುತ್ತಾನೆ. ಹಾಗೆಯೇ ಇಸ್ಲಾಂನ್ನು ತ್ಯಜಿಸಿದರೆ ಅವನು ಮುಸ್ಲಿಂಮನಾಗಿ ಉಳಿಯುವುದಿಲ್ಲ. ಅಂತಹ ವ್ಯಕ್ತಿ ಯಾವುದೇ ಜನಾಂಗದವನಾಗಿದ್ದರೂ ಸರಿ.[೨೬] ಈ ಸಮುದಾಯದಲ್ಲಿ ಸುನ್ನಿ, ಶಿಯಾ, ಸೈಯ್ಯದ್, ಮೊಘಲ, ಶೇಕ್ ಮತ್ತು ಪಠಾಣ ಇತ್ಯಾದಿ ಉಪಜಾತಿಗಳಿವೆ. ಸೈಯ್ಯದ್ ಪಂಗಡದವರನ್ನು ಗುರುಗಳು ಎಂಬ ಭಾವನೆಯನ್ನು ಉಳಿದ ಪಂಗಡದವರಲ್ಲಿ ಕಾಣುತ್ತೇವೆ. ಈ ಸಮುದಾಯಗಳು ತಮ್ಮ ಧರ್ಮಗ್ರಂಥವಾದ 'ಶರಿಯತ್' ಎಂಬ ಕಾನೂನಿನ್ವಯ ಜೀವನ ನಡೆಸುತ್ತಿರುವುದಾಗಿ ತಿಳಿದುಬರುತ್ತದೆ.

ಇಸ್ಲಾಂ ನಮ್ಮ ದೇಶದಲ್ಲಿ ಕ್ರಿ.ಶ. ೭ನೇ ಶತಮಾನದ ವೇಳೆಗಾಗಲೇ ಅರಬ್‌ನಿಂದ ದಕ್ಷಿಣ ಭಾರತದ ಮಲಬಾರ್ ಪ್ರಾಂತ್ಯವನ್ನು ಪ್ರವೇಶಿಸಿರುವುದಾಗಿ ತಿಳಿಯುತ್ತೇವೆ. ಇವರ ಮೂಲ ವೃತ್ತಿ ವ್ಯಾಪಾರ ಮಾಡುವದು. ಖಾರ ಪದಾರ್ಥಗಳನ್ನು ವ್ಯಾಪಾರ ಮಾಡುತ್ತಿದ್ದರು, ಹಾಗೆಯೇ ಕ್ರಿ.ಶ.೧೨ನೇ ಶತಮಾನದಲ್ಲಿ ಉತ್ತರ ಭಾರತಕ್ಕೆ ಪ್ರವೇಶ ಮಾಡುತ್ತಾರೆ. ಈ ಸಮುದಾಯದವರು ಹೆಚ್ಚಾಗಿ ಉತ್ತರಪ್ರದೇಶ, ಬಿಹಾರ, ಮಹಾರಾಷ್ಟ್ರ ಮತ್ತು ಕೇರಳಗಳಲ್ಲಿ ಕಂಡುಬರುತ್ತಾರೆ. ಕರ್ನಾಟಕದಲ್ಲಿ ಸುಮಾರು ಶೇ. ೧೨.೩೩ ರಷ್ಟು ಮುಸ್ಲಿಂರಿದ್ದಾರೆ. ಆದರೆ ಭಾರತದಲ್ಲಿ ಇವರು ಆಳ್ವಿಕೆಯನ್ನು ಕ್ರಿ.ಶ. ೧೦ನೇ ಶತಮಾನದಿಂದೀಚೆಗೆ ನಡೆಸಿದ್ದುದನ್ನು ತಿಳಿಯುತ್ತೇವೆ. ಬಹುಮನ ಸುಲ್ತಾನ್ ಮತ್ತು ಆದಿಲ್ ಷಾಹಿ ಆಳ್ವಿಕೆಯು ಪ್ರಮುಖವಾದುದ್ದು. ಕರ್ನಾಟಕದಲ್ಲಿನ ಎಲ್ಲ ಜಿಲ್ಲೆಗಳಲ್ಲಿ ಇವರುಗಳನ್ನು ಗುರುತಿಸಬಹುದು. ಹೆಚ್ಚಾಗಿ ಉತ್ತರ ಕರ್ನಾಟಕದಲ್ಲಿ ಕಂಡುಬರುತ್ತಾರೆ. ಕಾರಣ ಈ ಜನಾಂಗದ ಆಳ್ವಿಕೆಯು ಉತ್ತರ ಭಾರತದಿಂದಲೇ ಪ್ರಾರಂಭವಾಗಿದ್ದು ಹಂತಹಂತವಾಗಿ ಕರ್ನಾಟಕಕ್ಕೆ ಅದರಲ್ಲೂ ಉತ್ತರ ಕರ್ನಾಟಕಕ್ಕೆ ಬಂದಿರುವುದು ಸುಸ್ಪಷ್ಟ, ಈ ಸಮುದಾಯದವರ ಮೂಲ ಭಾಷೆ ಉರ್ದು. ಇವರ ಮೂಲ ವೃತ್ತಿ ವ್ಯಾಪಾರವಾಗಿದ್ದು ಇತ್ತೀಚಿನ ದಿನಗಳಲ್ಲಿ ಹಲವಾರು ವೃತ್ತಿಗಳಲ್ಲಿ ಕುಲುಮೆ ವೃತ್ತಿಯೂ ಒಂದಾಗಿದೆ ಎಂದು ತಿಳಿಯಬಹುದು.

ಮುಸ್ಲಿಂ ಕಮ್ಮಾರರನ್ನು 'ಲೋಹಾರ' ಎಂತಲೂ ಕರೆಯುತ್ತಾರೆ. ಉತ್ತರ ಭಾರತದ ಕಡೆ 'ಶ್ರಫಿ' ಎಂದು ಕರೆಯುತ್ತಾರೆ. ಈ ಹೆಸರನ್ನು ಸೂಚಿಸುವಂತೆ ಪಾಕಿಸ್ತಾನದ ಲಾಹೋರ ನಗರವನ್ನು 'ಲೋಹಾಪುರ' ಎಂತಲೂ, ಲೋಹಾರ ರಾಜವಂಶ ಎಂದು ಕರೆದಿರುವುದನ್ನು ಇತಿಹಾಸದ ಪುಟಗಳಿಂದ ತಿಳಿಯಬಹುದಾಗಿದೆ. ಕಮ್ಮಾರ ಪದದ ಸಮಾನಾಂತರ ಪದವಾಗಿ 'ಲೋಹಾರ' ಎಂದು ಬಳಸಲಾಗುತ್ತದೆ.[೨೮] ಮುಸ್ಲಿಂ ಲೋಹಾರಗಳು ಮೂಲತಃ ಮುಲ್ತಾನ್ ಪ್ರದೇಶದವರಾಗಿದ್ದು, ಇವರು ಪೂರ್ವದಲ್ಲಿ ರಾಜಸ್ಥಾನದ ರಜಪೂತ್ ವಂಶದವರಾಗಿದ್ದರು. ತರುವಾಯ ಮುಸ್ಲಿಂ ಆಳ್ವಿಕೆಯಲ್ಲಿ ಪ್ರಾಯಸಃ ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡಿರಬೇಕು. ಹಾಗಾಗಿ ಈ ವೃತ್ತಿಯು ಹಿಂದೂಗಳಿಂದಲೇ ಪ್ರಾರಂಭವಾಗಿದ್ದರೂ, ನಂತರದ ದಿನಗಳಲ್ಲಿ ಮುಸ್ಲಿಂ ವೃತ್ತಿಯಾಗಿ ಪ್ರಭಾವಿಸಿರುವುದು ಮತ್ತು ಒಂದು ಉಪಜಾತಿಯಾಗಿ ಪರಿಣಮಿಸಿರುವುದು ಆಶ್ಚರ್ಯದ ಸಂಗತಿ ಎನ್ನಬಹುದು. ಹೀಗೆ

ಲೋಹಾರ ವೃತ್ತಿಯು ಉತ್ತರದಿಂದ ಬಳುವಳಿಯಾಗಿ ದಕ್ಷಿಣಕ್ಕೆ ಹರಡಿರುವುದು ವ್ಯಕ್ತವಾಗುತ್ತದೆ. ಈ ನಿಟ್ಟಿನಲ್ಲಿ ಹೊಸಪೇಟೆ ತಾಲೂಕಿನಾದ್ಯಂತ ಕುಲುಮೆ ವೃತ್ತಿಯನ್ನು ಕಾಣಬಹುದು. ಈ ಪ್ರದೇಶದಲ್ಲಿ ಕಬ್ಬಿಣ ಉತ್ಪಾದನೆಯು ವಂಶಪಾರಂಪರಿಕವಾಗಿ ಬಂದಿದೆ ಕೆಲ ವಕ್ತೃಗಳು ತಿಳಿಸುತ್ತಾರೆ.

ಕುಲುಮೆಗಳು

ಮುಸ್ಲಿಂ ಸಮುದಾಯದ ಕಬ್ಬಿಣದ ಕುಲುಮೆಗಳು ಹೊಸಪೇಟೆ ನಗರ ಪ್ರದೇಶ ಮತ್ತು ನಾಗೇನಹಳ್ಳಿ, ಕಮಲಾಪುರ ಹೋಬಳಿಯ ಧರ್ಮಸಾಗರ ಮತ್ತು ಬುಕ್ಕಸಾಗರ ಹಾಗೂ ಕಂಪ್ಲಿ ಹೋಬಳಿಯ ಕಂಪ್ಲಿ ಪುರಸಭೆ ಪ್ರದೇಶ ಮತ್ತು ದೇವಲಾಪುರದಲ್ಲಿ ನೆಲೆಸಿರುವುದನ್ನು ಕಾಣುತ್ತೇವೆ. ಹೆಚ್ಚಾಗಿ ಹೊಸಪೇಟೆ ನಗರ ಪ್ರದೇಶದಲ್ಲಿ ಕಾಣುತ್ತೇವೆ.

ಹೊಸಪೇಟೆಯ ಚಪ್ಪರದಳ್ಳಿ ೨೬ನೇ ವಾರ್ಡ್‌ನಲ್ಲಿರುವ ಮತ್ತು ಡ್ಯಾಂ ರಸ್ತೆಗೆ ಹೊಂದಿಕೊಂಡಂತೆ ಕಮ್ಮಾರ ವಲಿಸಾಬರವರ ಕುಲುಮೆ ಇದೆ. ಈ ಕುಲುಮೆಯು ಮನೆಗೆ ಹೊಂದಿಕೊಂಡಂತೆ ಇದ್ದು ತೆಂಗಿನಗಿಡದ ಒಣಗಿದ ಗರಿಗಳನ್ನು ಹಾಸಿ, ಚಪ್ಪರ ಮಾಡಿಕೊಂಡಿರುತ್ತಾರೆ. ಈ ಕುಲುಮೆಯು ಉತ್ತರ ದಿಕ್ಕಿನಲ್ಲಿದ್ದು, ಒಲೆಯು ಸಹ ಉತ್ತರ ದಿಕ್ಕಿನಲ್ಲಿದೆ. ಇದರ ಅಳತೆಯು ೧೫ ಅಡಿ ಉದ್ದ ಮತ್ತು ೧೫ ಅಡಿ ಅಗಲದ ವಿಸ್ತೀರ್ಣವನ್ನು ಹೊಂದಿದೆ. ಇವರು ತಿದಿಯ ಬದಲು ಆಧುನಿಕ ಬ್ಲೋವರ್‌ನ್ನು ಉಪಯೋಗಿಸುತ್ತಿದ್ದಾರೆ. ಬ್ಲೋವರ್‌ಗೆ ಸೈಕಲ್ ಗಾಲಿಯನ್ನು ಅಳವಡಿಸಿ ತಿರುಗಿಸಲಾಗುತ್ತದೆ. ಬ್ಲೋವರ್‌ನ ತುದಿಯನ್ನು ಮಣ್ಣಿನ ಕೊಳವೆಯನ್ನು ಸರಕ್ಕೆ ಜೋಡಿಸಲಾಗಿದೆ. ಸರವನ್ನು ಬೆಂಕಿ ಗೂಡಿಗೆ ಸೇರಿಸಿದ್ದಾರೆ. ಕೊಳವೆ ಮತ್ತು ಸರದ ಮೇಲೆ ಅಡ್ಡಗೋಡೆಯನ್ನು ನಿರ್ಮಿಸಿ, ಕಿಡಿ ಸಿಡಿಯದಂತೆ ರಚಿಸಿದ್ದಾರೆ. ಬೆಂಕಿಯ ಗೂಡಿನ ಮುಂದೆ ಅಡಿಗಲ್ಲನ್ನು ಮರದ ತುಂಡಲ್ಲಿ ಸೇರಿಸಿ ಅಲುಗಾಡದಂತೆ ಗಟ್ಟಿಯಾಗಿ ನಿಲ್ಲಿಸಲಾಗಿದೆ ಮತ್ತು ಎದುರುಗಡೆ ಪ್ಲಾಸ್ಟಿಕ್‌ನಿಂದ ಮಾಡಿದ ನೀರಿನ ಬಾನಿಯನ್ನು ಇರಿಸಲಾಗಿದೆ. ಚಮ್ಮಟಿಗೆ ಮತ್ತು ವಿಧವಿಧವಾದ ಇಕ್ಕಳಗಳು ಹಾಗೂ ಕುಲುಮೆಗೆ ಬೇಕಾದ ಚಿಕ್ಕ ಪುಟ್ಟ ವಸ್ತುಗಳನ್ನು ಇರಿಸಲಾಗಿದೆ. ಈ ಕುಲುಮೆಯು ನಗರದಲ್ಲಿ ಸುಮಾರು ೬೦ ವರ್ಷಗಳಿಂದ ನಡೆಯುತ್ತಿದೆ. ಆದರೆ ಇವರ ಮೂಲವೃತ್ತಿಯು ಇದೇ ಆಗಿದ್ದು ಪ್ರಾಚೀನತೆಯ ಬಗ್ಗೆ ಹೆಚ್ಚಾಗಿ ತಿಳಿದುಬಂದಿಲ್ಲ. ಈ ಕುಲುಮೆಯಲ್ಲಿ ಹಿಂದೆ ತಿದಿಯಿಂದ ಕೆಲಸ ಮಾಡುತ್ತಿದ್ದರು, ಹಲವಾರು ಹಳೆಯ ಉಪಕರಣಗಳನ್ನು ಹೊಂದಿದ್ದರು. ಆದರೆ ಇಂದು ಅವುಗಳು ಕಂಡುಬರುವುದಿಲ್ಲ. ಕಾರಣ ಕಳುವಾಗಿವೆ ಎಂದು ತಿಳಿಸುತ್ತಾರೆ. ಈ ಕುಲುಮೆಯಲ್ಲಿ ಇಂಗ್ಲೆಂಡಿನಲ್ಲಿ ತಯಾರಾದ ಅಡಿಗಲ್ಲನ್ನು ಗೋವಾದಿಂದ ತರಿಸಲಾಗಿದ್ದು, ಅದು ಸುಮಾರು ೧೫ ವರ್ಷಗಳ ಹಿಂದೆ ಕಳುವಾಗಿದೆ ಎಂದು ಪೋಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಲಾಗಿದೆ ಎಂದು ಹೇಳುತ್ತಾರೆ. ಈ ಕುಲುಮೆಯಲ್ಲಿ ಪ್ರತಿದಿನ ಕಾಳಮ್ಮ ದೇವಿಗೆ ಪೂಜೆ ಮಾಡಿ ಕೆಲಸ ಪ್ರಾರಂಭಿಸುತ್ತಾರೆ. ವಿಶ್ವಕರ್ಮ ಸಮುದಾಯದ ಕುರಿತು ತುಂಬಾ ಒಲವಿರುವುದಂತೆ ತೋರುತ್ತದೆ. ಕುಲುಮೆಯಲ್ಲಿ ಪ್ರತಿದಿನವೂ ಕೆಲಸ ನಡೆಯುತ್ತಿದೆ.

ಅದೇ ರೀತಿ ಚಪ್ಪರದಹಳ್ಳಿಯ ೨೭ನೇ ವಾರ್ಡ್‌ನಲ್ಲಿರುವ, ಡ್ಯಾಂ ರಸ್ತೆಗೆ ಹೊಂದಿಕೊಂಡಂತೆ ಕಮ್ಮಾರ ಮಹಬೂಬ ಬಾಷರವರ ಕುಲುಮೆ ಇದೆ. ಇದು ಸುಮಾರು ೬೦ ವರ್ಷಗಳಿಂದ ನಡೆಯುತ್ತಿದೆ ಮತ್ತು ಪೂರ್ವದಲ್ಲಿ ೧೫೦ ವರ್ಷಗಳ ಹಿಂದೆ ಕೊಟ್ಟೂರಿನಲ್ಲಿ ನಡೆಸುತ್ತಿದ್ದುದಾಗಿ ತಿಳಿಸುತ್ತಾರೆ. ಈ ಕುಲುಮೆ ಪಶ್ಚಿಮ ದಿಕ್ಕಿನಲ್ಲಿದ್ದು, ಒಲೆಯು ಪಶ್ಚಿಮ ದಿಕ್ಕಿನಲ್ಲಿದೆ. ಇದು ೧೫ ಅಡಿ ಉದ್ದ ಮತ್ತು ೧೫ ಅಡಿ ಅಗಲ ವಿಸ್ತೀರ್ಣವನ್ನು ಹೊಂದಿದೆ. ತಿದಿ ಬದಲು ಬ್ಲೋವರ್‌ನ್ನು ಬಳಸುತ್ತಿದ್ದಾರೆ. ಇಂಗ್ಲೆಂಡಿನಲ್ಲಿ ತಯಾರಿಸಿದ ಅಡಿಗಲ್ಲನ್ನು ಸುಮಾರು ೨೦ ವರ್ಷಗಳಿಂದ ಬಳಸುತ್ತಿದ್ದಾರೆ ಎನ್ನುವುದು ವಿಶೇಷ.

ಸಂಡೂರು ರಸ್ತೆಗೆ ಹೊಂದಿಕೊಂಡಂತೆ, ಮ್ಯಾಸಗೇರಿಯಲ್ಲಿ ಕಮ್ಮಾರ ಜಿಲಾನ್‌ಸಾಬರ ಕುಲುಮೆಯನ್ನು ಕಾಣಬಹುದು. ಈ ಕುಲುಮೆಯ ಸುಮಾರು ೩೦ ವರ್ಷಗಳಿಂದ ನಡೆಯುತ್ತಿದ್ದು, ಹಿಂದೆ ಕೊಟ್ಟೂರಿನಲ್ಲಿ ನಡೆಸಲಾಗುತ್ತಿತ್ತು ಎಂದು ಹೇಳುತ್ತಾರೆ. ಈ ಕುಲುಮೆಯು ದಕ್ಷಿಣ ದಿಕ್ಕಿನಲ್ಲಿದ್ದರೆ, ಒಲೆಯು ಪೂರ್ವ ದಿಕ್ಕಿನಲ್ಲಿದೆ. ಉಳಿದಂತೆ ಎಲ್ಲರ ಕುಲುಮೆಯಲ್ಲಿರುವಂತೆಯೇ ಇವರಲ್ಲಿಯೂ ಕಾಣುತ್ತೇವೆ.

೯ನೇ ವಾರ್ಡನ ಮುದಿಯಪ್ಪನ ಗುಡಿ ಹತ್ತಿರ, ಹಳೆ ಮೇದಾರ ರಸ್ತೆ ಬದಿಯಲ್ಲಿರುವ ಕಮ್ಮಾರ ಸೈಯ್ಯದ್‌ಸಾಬ ಕುಲುಮೆಯನ್ನು ನೋಡಬಹುದು. ಈ ಕುಲುಮೆಯು ಸುಮಾರು ೧೫೦ ವರ್ಷಗಳಿಂದ ನಡೆಯುತ್ತಿದೆ. ಪೂರ್ವದಲ್ಲಿ ಸಹ ಇದೇ ವೃತ್ತಿಯನ್ನು ನಡೆಸುತ್ತಿದ್ದರು ಎಂದು ಹೇಳುತ್ತಾರೆ. ಈ ಕುಲುಮೆಯು ದಕ್ಷಿಣ ದಿಕ್ಕಿನಲ್ಲಿದ್ದು ಒಲೆಯು ಪೂರ್ವ ದಿಕ್ಕಿನಲ್ಲಿದೆ. ಇದರ ವಿಸ್ತೀರ್ಣ ೭ ಅಡಿ ಉದ್ದ ಮತ್ತು ೧೦ ಅಡಿ ಅಗಲವನ್ನು ಹೊಂದಿದೆ. ಕಚ್ಚಾ ಅಡಿಗಲ್ಲನ್ನು ಹೊಂದಿದೆ.

೨೪ನೇ ವಾರ್ಡ್‌ನಲ್ಲಿರುವ ಅಂಬೇಡ್ಕರ್ ನಗರದ ಆಕಾಶವಾಣಿ ರಸ್ತೆಗೆ ಹೊಂದಿಕೊಂಡಂತೆ ಕಮ್ಮಾರ ಮರ್ದಾನ್‌ಸಾಬರವರ ಕುಲುಮೆ ಇದೆ. ಈ ಕುಲುಮೆಯು ಮನೆಯಲ್ಲಿಯೇ ಇರುವುದು ವಿಶೇಷ. ಕುಲುಮೆಯು ಪಶ್ಚಿಮ ದಿಕ್ಕಿನಲ್ಲಿದ್ದು ಒಲೆಯು ಪೂರ್ವ ದಿಕ್ಕಿನಲ್ಲಿದೆ. ಕುಲುಮೆಯ ವಿಸ್ತೀರ್ಣ ೧೦ ಅಡಿ ಉದ್ದ ಮತ್ತು ೧೨ ಅಡಿ ಅಗಲವನ್ನು ಹೊಂದಿದೆ ಮತ್ತು ಇವರ ಸಹೋದರನಾದ ಕಮ್ಮಾರ ಖಾದರ್‌ಭಾಷಾ ಕುಲುಮೆಯು, ೨೫ನೇ ವಾರ್ಡನ ೪ನೇ ಕ್ರಾಸ್‌ನಲ್ಲಿದ್ದು, ಜಂಬುನಾಥ ರಸ್ತೆಯ ಬಲಬದಿಯಲ್ಲಿದೆ. ಇದು ಉತ್ತರ ದಿಕ್ಕಿನಲ್ಲಿದ್ದು ಒಲೆಯು ಪೂರ್ವದಿಕ್ಕಿನಲ್ಲಿದೆ. ಇದು ೧೨ ಅಡಿ ಉದ್ದ ಮತ್ತು ೧೫ ಅಡಿ ಅಗಲದ ವಿಸ್ತೀರ್ಣವನ್ನು ಹೊಂದಿದೆ. ಹಾಗೆಯೇ ಊರಮ್ಮ ಬಯಲಿನಲ್ಲಿರುವ ಒಂದು ಕುಲುಮೆಯನ್ನು ಕಾಣುತ್ತೇವೆ. ಇವರು ಮನೆಯನ್ನು ಅಂಟಿಕೂಂಡೆ ಬಯಲಿನಲ್ಲಿ ಕುಲುಮೆ ರಚಿಸಿಕೊಂಡು ಕಸುಬು ನಡೆಸುತ್ತಿದ್ದಾರೆ

ಇವುಗಳಲ್ಲದೆ ಹಳೆ ಮೇದಾರ ರಸ್ತೆಯಲ್ಲಿರುವ ಕಮ್ಮಾರ ಸೈಯ್ಯದ್ ಭಾಷಾ ಹಾಗೂ ಹಂಪಿ ರಸ್ತೆಯಲ್ಲಿರುವ ಕಮ್ಮಾರ ಜಂಗ್ಲಿಸಾಬ ಮತ್ತು ಕಮ್ಮಾರ ದಸ್ತಗೀರ್ ಸಾಬರ ಒಂದೊಂದು ಕುಲುಮೆಗಳಿದ್ದು

ಇವು ಸುಮಾರು ಕ್ರಮವಾಗಿ ೨೦, ೧೦ ಮತ್ತು ೧೫ ವರ್ಷಗಳಿಂದ ಸಂಕಷ್ಟಕ್ಕೀಡಾಗಿ ಸ್ಥಗಿತಗೊಂಡಿವೆ ಎಂದೂ ತಿಳಿದುಬರುತ್ತದೆ.

ಹೊಸಪೇಟೆ ತಾಲೂಕಿನ ನಾಗೇನಹಳ್ಳಿಯಲ್ಲಿ ಮೂರು ಕುಲುಮೆಗಳಿದ್ದು, ಅವು ಅಣ್ಣತಮ್ಮಂದಿರ ಕುಲುಮೆಗಳಾಗಿವೆ. ಇವುಗಳ ಮನೆಯ ಮುಂದೆ ಚಪ್ಪರ ಹಾಕಿಕೊಂಡು ಸುಮಾರು ೮೦ ವರ್ಷಗಳಿಂದ ಈ ವೃತ್ತಿಯನ್ನು ನಡೆಸುತ್ತಿದ್ದುದಾಗಿ ತಿಳಿಸುತ್ತಾರೆ. ಪೂರ್ವದಲ್ಲಿ ಇವರ ವೃತ್ತಿಯು ಕೃಷಿಯಾಗಿರುವುದನ್ನು ನೆನೆಯುತ್ತಾರೆ. ಕಮ್ಮಾರ ಮೌಲಾಸಾಬ ಕುಲುಮೆಯು ಉತ್ತರ ದಿಕ್ಕಿನಲ್ಲಿದ್ದು, ಒಲೆಯು ಸಹ ಉತ್ತರ ದಿಕ್ಕಿನಲ್ಲಿದೆ. ೧೫ ಅಡಿ ಉದ್ದ ಮತ್ತು ೧೫ ಅಡಿ ಅಗಲದ ವಿಸ್ತೀರ್ಣವನ್ನು ಕುಲುಮೆ ಹೊಂದಿದೆ. ಕಮ್ಮಾರ ಇಬ್ರಾಹಿಂಸಾಬರ ಕುಲುಮೆ ಮತ್ತು ಒಲೆಯು ಉತ್ತರ ದಿಕ್ಕಿನಲ್ಲಿದ್ದು ಇದರ ಅಳತೆ ೮ ಅಡಿ ಉದ್ದ ಮತ್ತು ೮ ಅಡಿ ಅಗಲದ ವಿಸ್ತೀರ್ಣವನ್ನು ಹೊಂದಿದೆ. ಕಮ್ಮಾರ ಫಕ್ರುಸಾಬರ ಕುಲುಮೆಯು ಮನೆಯ ಒಳಗೆ ಇದೆ. ಕುಲುಮೆ ಮತ್ತು ಒಲೆಯು ಪೂರ್ವದಿಕ್ಕಿನಲ್ಲಿದ್ದು ೮ ಅಡಿ ಉದ್ದ ಮತ್ತು ೮ ಅಡಿ ಅಗಲದ ವಿಸ್ತೀರ್ಣವನ್ನು ಹೊಂದಿದೆ. ನಾಗೇನಹಳ್ಳಿಯಲ್ಲಿರುವ ಮೂರು ಕುಲುಮೆಗಳು ತಿದಿ ಬದಲು ಬ್ಲೋವರ್‌ನ್ನು ಹೊಂದಿದ್ದು, ಕಚ್ಚಾ ಅಡಿಗಲ್ಲನ್ನು ಇರಿಸಿ ಕೊಂಡಿದ್ದಾರೆ.

ಕಮಲಾಪುರ ಹೋಬಳಿಗೆ ಬರುವ ಬುಕ್ಕಸಾಗರದಲ್ಲಿ ಕಮ್ಮಾರ ಹುಸೇನಸಾಬ ಮತ್ತು ಕಮ್ಮಾರ ಚಂದುಸಾಬರವರ ಕುಲುಮೆಯನ್ನು ಕಾಣಬಹುದು. ಕಮ್ಮಾರ ಹುಸೇನ್‌ಸಾಬರ ಕುಲುಮೆಯು ಮನೆಯ ಮುಂದೆ ಇದ್ದು ಬಯಲಿನಲ್ಲಿದೆ. ಕುಲುಮೆಯು ಉತ್ತರ ಮತ್ತು ಒಲೆಯು ಪಶ್ಚಿಮ ದಿಕ್ಕಿನಲ್ಲಿದೆ. ಇದರ ವಿಸ್ತೀರ್ಣ ೫ ಅಡಿ ಉದ್ದ ಮತ್ತು ೬ ಅಡಿ ಅಗಲವಿದೆ. ಇವರು ಸುಮಾರು ೨೫ ವರ್ಷ ಗಳಿಂದ ಕುಲುಮೆಯನ್ನು ನಡೆಸುತ್ತಿದ್ದಾರೆ. ಕಮ್ಮಾರ ಚಂದುಸಾಬರ ಕುಲುಮೆಯು ಕಮಲಾಪುರ ಮತ್ತು ಕಂಪ್ಲಿ ರಸ್ತೆಯ ಎಡಬದಿಯಲ್ಲಿದೆ ಕುಲುಮೆಗೆ ಚಪ್ಪರವನ್ನು ಹಾಕಿರುತ್ತಾರೆ. ಈ ಕುಲುಮೆಯು ಸುಮಾರು ಹತ್ತು ವರ್ಷಗಳಿಂದ ನಡೆಯುತ್ತಿದೆ. ಹಾಗೆಯೇ ಧರ್ಮಸಾಗರದಲ್ಲಿರುವ ಕಮ್ಮಾರ ಹುಸೇನ್ ಸಾಬದ ಕುಲುಮೆಯು ಹಿಂದಿನ ೨೦೦ ವರ್ಷಗಳಿಂದ ನಡೆಯುತ್ತಿದೆ. ಇತ್ತೀಚೆಗೆ ಸ್ಥಳವನ್ನು ಪಕ್ಕದಲ್ಲೇ ಬದಲಿಸಿರುವುದನ್ನು ತಿಳಿಸುತ್ತಾರೆ. ಈ ಕುಲುಮೆಯು ಒಂದನೇ ವಾರ್ಡ್‌ನಲ್ಲಿದೆ. ಕುಲುಮೆಯು ಬಯಲಿನಲ್ಲಿ ಉತ್ತರ ದಿಕ್ಕಿನಲ್ಲಿದ್ದು ಒಲೆಯು ದಕ್ಷಿಣಕ್ಕಿದೆ. ಕುಲುಮೆಯು ೪ ಅಡಿ ಉದ್ದ ಮತ್ತು ೬ ಅಡಿ ಅಗಲದ ಅಳತೆಯನ್ನು ಹೊಂದಿದೆ.

ಕಂಪ್ಲಿ ಹೋಬಳಿಗೆ ಬರುವ ಕಂಪ್ಲಿ ಪುರಸಭೆಯಲ್ಲಿ ಕಮ್ಮಾರ ಅಬ್ದುಲ್‌ಸಾಬರ ಕುಲುಮೆಯು ಉತ್ತರಕ್ಕಿದ್ದು, ಒಲೆಯು ಕೂಡಾ ಉತ್ತರ ದಿಕ್ಕಿನಲ್ಲಿದೆ. ಇದರ ಅಳತೆಯು ೧೫ ಅಡಿ ಉದ್ದ ಮತ್ತು ೧೦ ಅಡಿ ಅಗಲವನ್ನು ಹೊಂದಿದೆ. ಸುಮಾರು ೫೦ ವರ್ಷಗಳಿಂದ ಕೆಲಸ ನಡೆಯುತ್ತಿದೆ ಎಂದು ತಿಳಿಸುತ್ತಾರೆ ಬಾದನಹಟ್ಟಿಯ ಕಮ್ಮಾರ ಶೆಕ್ಷಾವಲಿ ಸಾಬರವರ ಕುಲುಮೆಯು ಬಳ್ಳಾರಿ ರಸ್ತೆಯ ಎಡಬದಿಯಲ್ಲಿದ್ದು, ಚಪ್ಪರದಲ್ಲಿ ನಡೆಯುತ್ತಿದೆ. ಕುಲುಮೆಯು ಪಶ್ಚಿಮ ದಿಕ್ಕಿನಲ್ಲಿದೆ. ಒಲೆಯು ಸಹ ಪಶ್ಚಿಮ ದಿಕ್ಕಿನಲ್ಲಿದೆ. ಇದರ ಅಳತೆಯು ೬ ಅಡಿ ಉದ್ದ ಮತ್ತು ೬ ಅಡಿ ಅಗಲದ ವಿಸ್ತೀರ್ಣವನ್ನು ಹೊಂದಿದೆ. ಸುಮಾರು ೫೦ ವರ್ಷಗಳಿಂದ ಕೆಲಸ ನಡೆಯುತ್ತಿದ್ದು, ಪೂರ್ವದಲ್ಲಿ ಬಾದನಹಟ್ಟಿ

ಗ್ರಾಮದಲ್ಲಿ ನಡೆಯುತ್ತಿದ್ದುದನ್ನು ತಿಳಿಸುತ್ತಾರೆ. ಬಾದನಹಟ್ಟಿ ಗ್ರಾಮ ಶಿಲಾಯುಗದ ಒಂದು ನೆಲೆಯಾಗಿದ್ದು, ಈ ನೆಲೆಯಲ್ಲಿ ಕಬ್ಬಿಣದ ಬಳಕೆಯಾಗಿರುವುದು ಇತಿಹಾಸದ ಪುಟಗಳಿಂದ ತಿಳಿದು ಬರುತ್ತದೆ. ಹಾಗೆಯೇ ಸುಗ್ಗೆನಹಳ್ಳಿಯ ಶಾರದಾ ನಗರದಲ್ಲಿ ಕಮ್ಮಾರ ಪಿಂಜಾರ ಶಾಷ ಸಾಬರವರ ಕುಲುಮೆ ಇದೆ. ಮನೆಯ ಪಕ್ಕದಲ್ಲಿ ನಡೆಯುತ್ತಿದ್ದು ಬಯಲು ಜಾಗವಾಗಿದೆ. ಕುಲುಮೆ ಮತ್ತು ಒಲೆಯು ಪಶ್ಚಿಮ ದಿಕ್ಕಿನಲ್ಲಿದೆ. ೬ ಅಡಿ ಉದ್ದ ಮತ್ತು ೬ ಅಡಿ ಅಗಲದ ವಿಸ್ತೀರ್ಣವನ್ನು ಹೊಂದಿದೆ. ದೇವಲಾಪುರ ಗ್ರಾಮದ ಕಮ್ಮಾರ ಇಮಾಮ ಸಾಬರ ಕುಲುಮೆಯನ್ನು ಕಾಣುತ್ತೇವೆ. ಈ ಕುಲುಮೆಯು ಸುಮಾರು ೬೦ ವರ್ಷಗಳಿಂದ ನಡೆಯುತ್ತಿದ್ದು, ಕಂಪ್ಲಿ ರಸ್ತೆಯನ್ನು ಹೊಂದಿಕೊಂಡಂತೆ ಎಡಬದಿಯಲ್ಲಿದೆ. ೬ ಅಡಿ ಉದ್ದ ಮತ್ತು ೬ ಅಡಿ ಅಗಲದ ಜಾಗವನ್ನು ಬಳಸಿಕೊಂಡು ಕೆಲಸ ಮಾಡುತ್ತಿದ್ದಾರೆ.

ಹೊಸಪೇಟೆಯಲ್ಲಿರುವ ಮುಸ್ಲಿಂ ಸಮುದಾಯದ ಎಲ್ಲಾ ಕುಲುಮೆಗಳು ಕಬ್ಬಿಣದ ವಸ್ತುಗಳನ್ನು ತಯಾರಿಸುವಲ್ಲಿ ಒಂದೇ ತೆರನಾದ ವಿಧಾನಗಳನ್ನು ಅನುಸರಿಸುತ್ತವೆ. ತಿದಿ ಬದಲು ಬ್ಲೋವರ್ ಬಳಸುತ್ತಿದ್ದಾರೆ. ಕಚ್ಚಾ ಅಡಿಗಲ್ಲು ಮತ್ತು ತಾವೇ ತಯಾರಿಸಿಕೊಂಡ ಇಕ್ಕಳಗಳು ಹಾಗೂ ಮಾರುಕಟ್ಟೆಯಲ್ಲಿ ಸಿದ್ಧವಾಗಿರುವ ಚಮ್ಮಟಿಗೆಗಳನ್ನು ಮತ್ತು ಕುಲುಮೆಗೆ ಬೇಕಾದ ಚಿಕ್ಕ ಪುಟ್ಟ ವಸ್ತುಗಳನ್ನು ಹೊಂದಿದ್ದಾರೆ. ಕೆಲವು ಕುಲುಮೆಗಳು ಚಪ್ಪರವನ್ನು ಹೊಂದಿದ್ದರೆ ಕೆಲವು ಹಾಕದೇ ಇರುವುದನ್ನು ನೋಡುತ್ತೇವೆ. ಇವುಗಳು ಕೇವಲ ಕೃಷಿಗೆ ಮತ್ತು ಗೃಹಪಯೋಗಿ ವಸ್ತುಗಳನ್ನು ಮಾತ್ರ ತಯಾರಿಸಿ ಕೊಡುತ್ತಾರೆ. ಈ ಸಮುದಾಯದವರು ಸುಮಾರು ೨೦೦ ವರ್ಷಗಳಿಂದ ಕುಲುಮೆ ವೃತ್ತಿಯನ್ನು ನಡೆಸುತ್ತಿರುವುದಾಗಿ ಕಂಡುಬರುತ್ತದೆ. ಈ ವೃತ್ತಿಯನ್ನು ಕೆಲ ಕಮ್ಮಾರರು ವಂಶಪಾರಂಪರಿಕವಾಗಿ ನಡೆಸುತ್ತಿದ್ದರೆ, ಕೆಲ ಕಮ್ಮಾರರು ಆರ್ಥಿಕ ಪರಿಸ್ಥಿತಿಗಾಗಿ ನಡೆಸುತ್ತಿರುವುದನ್ನು ಕಾಣುತ್ತೇವೆ. ಹಿಗಾಗಿ ಈ ವೃತ್ತಿಯು ಮುಸ್ಲಿಂ ಆಳ್ವಿಕೆಯ ನಂತರದ ದಿನಗಳಿಂದ ನಡೆಯುತ್ತಿರಬಹುದು ಎಂಬುದು ವ್ಯಕ್ತವಾಗುತ್ತದೆ. ಮುಸ್ಲಿಂ ಸಮುದಾಯದ ಶೇಖ್ ಮತ್ತು ಸೈಯ್ಯದ್ ಪಂಗಡದವರೇ ಈ ವೃತ್ತಿಯನ್ನು ನಡೆಸಿಕೊಂಡು ಬರುತ್ತಿರುವುದು ವಿಶೇಷವಾಗಿದೆ. ಈ ಕುಲುಮೆ ವೃತ್ತಿಯು ಮುಸ್ಲಿಂರಲ್ಲಿ ಒಂದು ಮೂಲ ವೃತ್ತಿಯಾಗಿರುವುದನ್ನು ಕಾಣುತ್ತೇವೆ. ಇವರ ಕುಲುಮೆಯ ವಿವರ ಮತ್ತು ವಂಶಾವಳಿಯನ್ನು (ಅನುಬಂಧ–೪ರಲ್ಲಿ) ಗಮನಿಸಿ.

೩.೫. ಬೇಡ ನಾಯಕರ ಸಮುದಾಯದ ಕುಲುಮೆಗಳು

ಪೀಠಿಕೆ : ಬೇಡ ನಾಯಕ ಸಮುದಾಯವು ಒಂದು ಬುಡಕಟ್ಟು ಸಮುದಾಯವಾಗಿದ್ದು, ಇವರ ಮೂಲ ಕಸುಬು ಪಶುಪಾಲನೆಯಾಗಿದೆ. ಇವರು ಪಶುಗಳನ್ನು ಸಾಕುತ್ತಿದ್ದು, ಹೆಚ್ಚಾಗಿ ಗುಡ್ಡಗಾಡು ಹಟ್ಟಿ ಪ್ರದೇಶದಲ್ಲಿ ಕಂಡುಬರುವಂತಹ ಜನಾಂಗವಾಗಿದೆ. ಬೇಡ ನಾಯಕರು ದೇಶದಲ್ಲೆಲ್ಲಾ ಹರಡಿದ್ದಾರೆ. ಬೇಡನಾಯಕರು ಕಾಯ ಮತ್ತು ಅಂಗಸಾಧನೆಯಲ್ಲಿ ಪ್ರವೀಣರಾಗಿದ್ದರಿಂದ ಇವರುಗಳನ್ನು ಪ್ರಾಚೀನ ಕಾಲದಲ್ಲಿ, ರಾಜ ಮಹಾರಾಜರು ತಮ್ಮ ಸೈನ್ಯದಲ್ಲಿ ಇರಿಸಿಕೊಂಡಿದ್ದರು. ಅಂತೆಯೇ ಈ ಸಮುದಾಯವು ರಾಮಾಯಣವನ್ನು ಬರೆದ ವಾಲ್ಮೀಕಿ ಋಷಿಗಳಿಂದ ಈ ಜನಾಂಗವನ್ನು ಗುರುತಿಸಲಾಗುತ್ತದೆ. ಈ ಜನಾಂಗವು ಪುರಾತನ ಕಾಲದಿಂದ ಪಶುಪಾಲನೆ ವೃತ್ತಿಯನ್ನು ಮೂಲ

ಕಸುಬನ್ನಾಗಿ ಮಾಡಿಕೊಂಡಿದ್ದರೂ ಸಹ, ಮುಂದೆ ಗುಡ್ಡಗಾಡು, ಅರಣ್ಯ ವಾಸದಿಂದ, ಊರು, ಗ್ರಾಮ ಮತ್ತು ಪಟ್ಟಣಗಳಲ್ಲಿ ನೆಲೆ ಕಂಡುಕೊಳ್ಳುವುದರ ಜೊತೆಗೆ ವೃತ್ತಿಗಳಲ್ಲಿ ಹಲವಾರು ಬದಲಾವಣೆಗಳನ್ನು ಕಾಣತೊಡಗಿದರು. ಪಶುಪಾಲನೆ, ಬೇಟೆಯಾಡುವಿಕೆ, ಸೈನ್ಯದಳ, ಕೃಷಿ, ವ್ಯಾಪಾರ ಹೀಗೆ ಪಟ್ಟಿ ಸಾಗುತ್ತದೆ. ಇಂತಹದೆ ಬೆಳವಣಿಗೆಯಲ್ಲಿ ಕಬ್ಬಿಣದ ಕುಲುಮೆಗಳನ್ನು ನಡೆಸುವ ವೃತ್ತಿಯನ್ನು ಇತ್ತೀಚಿನ ದಿನಗಳಲ್ಲಿ ಹೊಸಪೇಟೆ ತಾಲೂಕಿನ ರಾಮಸಾಗರದಲ್ಲಿ ಕಾಣಬಹುದು.

ಬೇಡ ನಾಯಕ ಸಮುದಾಯ

ಬೇಡ ನಾಯಕ ಸಮುದಾಯದ ಮೂಲವು ಪ್ರಾಚೀನ ಕಾಲದಿಂದ ಇದ್ದು, ಪೌರಾಣಿಕವಾಗಿ ಅನೇಕ ಪುರಾವೆಗಳು ಸಿಗುತ್ತವೆ. ಈ ಜನಾಂಗವು ವಾಸ್ತವವಾಗಿ, ಉತ್ತರದ ಕಡೆಯಿಂದ ಬಂದಿರದೆ, ಆಂಧ್ರದ ಗುಡ್ಡಗಾಡು ಪ್ರದೇಶವಾದ ಶ್ರೀಶೈಲದ ಕಡೆಯಿಂದ ಬಂದಿದೆ ಎಂದು ನಿಖರವಾಗಿ ತಿಳಿಯುತ್ತದೆ ಕಾರಣ ಈ ಜನಾಂಗದ ಮೂಲ ವೃತ್ತಿ ಪಶುಪಾಲನೆಯಾಗಿದ್ದು, ದನಕರುಗಳಿಗೆ ಮೇವು, ನೀರು ದೊರಕದೆ ಇರುವುದರಿಂದ ಮತ್ತು ಮೇಲಿಂದ ಮೇಲೆ ಉತ್ತರ ಭಾರತದ ಮುಸ್ಲಿಂ ದಾಳಿಯನ್ನು ತಡೆಯಲಾರದೆ ಬಂದರು ಎಂದು ತಮಿಳಿನ ಕೃತಿಯೊಂದು ಹೇಳುತ್ತದೆ.[೨೭] ಬೇಡ ನಾಯಕರ ಮೂಲವೃತ್ತಿ ಪಶುಪಾಲನೆಯಾಗಿರುವುದರಿಂದ 'ಮ್ಯಾಸ' ಎಂಬ ಪದವನ್ನು ಮೇಯಿಸುವುದು ಎಂಬ ಪದದಿಂದ ಬಂದಿದೆ ಎಂದು ವ್ಯಕ್ತಿಗಳು ಹೇಳುತ್ತಾರೆ. ಎಂ.ಜೆ. ಈಶ್ವರಪ್ಪನವರ ಪ್ರಕಾರ 'ಮ್ಯಾಸರು' ಎಂಬ ಪದ ದನ ಮೇಯಿಸುವವರು ಎಂಬ ಪದದಿಂದಲೇ ಬಂದಿರಬಹುದು ಅಥವಾ ಸೈನಿಕರಾಗಿ ಇಲ್ಲವೆ ಮೀಸಲು ಪಡೆಯವರಾಗಿ ವಿಜಯನಗರ ರಾಜಮಹಾರಾಜರುಗಳು ಆಳ್ವಿಕೆಯಡಿಯಲ್ಲಿ ಇದ್ದುದರಿಂದ ಮೀಸಲು ನಾಯಕರು ಅಥವಾ ಮ್ಯಾಸ ನಾಯಕರು ಆದರು ಎಂದೆನ್ನುವ ಸಾಧ್ಯತೆಯನ್ನು ಕುರಿತು ತಮ್ಮ 'ಮ್ಯಾಸ ಬೇಡರು' ಪುಸ್ತಕಯಲ್ಲಿ ತಿಳಿಸಿದ್ದಾರೆ. ಮ್ಯಾಸ ಪದ 'ಮೇಯಿಸುವವರು' ಎಂಬ ಶಬ್ದದಿಂದ ನಿಷ್ಪನ್ನವಾಯಿತೆಂದು ವಿದ್ವಾಂಸರು ಹೇಳುತ್ತಾರೆ. ಇವರ ದೇವರುಗಳನ್ನು ಕುರಿತು ಒಂದು ಕಡೆ ನೆಲೆ ಇಲ್ಲದೆ ಬೇಟೆಯಾಡುತ್ತಾ, ಬೇರೆ ಕಡೆ ಸಾಗುತ್ತಾ ಅಲೆಮಾರಿ ಜನಾಂಗವಾಗಿದ್ದು ಇವರು ಸಾಗಣೆಗೆ ಅನುಕೂಲವಾಗಲೆಂದು ಪೆಟ್ಟಿಗೆ ದೇವರುಗಳನ್ನು ನಿರ್ಮಾಣ ಮಾಡಿಕೊಂಡಿರಬೇಕು. ಪಾಲೇ ದೇವರು, ಓಬಳದೇವರು, ಕುಪಳದೇವರು, ಭೋಸೇ ದೇವರು, ಗಾದರ ದೇವರು ಮುಂತಾದ ಗಂಡು ದೇವತೆಗಳನ್ನು ಪೂಜಿಸುತ್ತಾರೆ.[೨೮] ಈ ಜನಾಂಗವು ಕೆಲವು ಸಲ ಪಶುಪಾಲನೆ ವೃತ್ತಿಯನ್ನು ಬಿಟ್ಟು ಸೈನಕ ವೃತ್ತಿಯಲ್ಲಿದ್ದರು ಎಂದು ತಿಳಿದುಬರುತ್ತದೆ. ರಾಜಮಹಾರಾಜರ ಯುದ್ಧಗಳಲ್ಲಿ ಭಾಗವಹಿಸಿ ನಂತರ ಹಟ್ಟಿಗಳಲ್ಲಿ ವಾಸಿಸುತ್ತಿದ್ದರು.

ಈ ಜನಾಂಗದಲ್ಲಿ ಎರಡು ಪಂಗಡಗಳಿವೆ. ಒಂದು ಮ್ಯಾಸ ಬೇಡ ನಾಯಕರು ಮತ್ತೊಂದು ಊರು ನಾಯಕರು. ನಮ್ಮ ದೇಶದಲ್ಲಿ ಎರಡೂ ರೀತಿಯ ನಾಯಕರು ದೊರೆಯುತ್ತಾರೆ. ಮ್ಯಾಸ ನಾಯಕರು ಹೆಚ್ಚಾಗಿ ಚಿತ್ರದುರ್ಗ, ತುಮಕೂರುಗಳಲ್ಲಿ ಕಂಡುಬರುತ್ತಾರೆ. ಬಳ್ಳಾರಿ ಜಿಲ್ಲೆಯಲ್ಲಿ ಮತ್ತು ಹೊಸಪೇಟೆ ತಾಲೂಕಿನಾದ್ಯಂತ ಮ್ಯಾಸ ನಾಯಕರು ಕಂಡುಬರುತ್ತಾರೆ. ಬೇಡನಾಯಕರು ಮೂಲತಃ ಮ್ಯಾಸನಾಯಕರೇ ಆಗಿದ್ದು, ಕಾಲಕ್ರಮೇಣ ಬದಲಾಗುತ್ತಾ, ಊರುನಾಯಕರಾಗಿರುವುದನ್ನು ಕಾಣುತ್ತೇವೆ.

ಈ ಜನಾಂಗದ ಜನರನ್ನು, ಕೆಲ ರಾಜರು ಅರಣ್ಯವಾಸಿ ಬೇಡರನ್ನು ಮೆಚ್ಚಿ ಬಹುಮಾನಗಳನ್ನು ನೀಡಿ ಮೀಸಲು ಪಡೆಯವರನ್ನಾಗಿ ನೇಮಿಸಿದ್ದರು. ಈ ಸಮುದಾಯದವರು ಅರಣ್ಯದಲ್ಲಿ ವಾಸಿಸುತ್ತಾ ಬೇಟೆಯಾಡಿ, ಪಶುಪಾಲನೆ ಮಾಡಿ ದೃಢಕಾಯದವರಾಗಿದ್ದರು. ಬಿಲ್ವಿದ್ಯೆ, ಅಂಗಸಾಧನೆಯಲ್ಲಿ ಪ್ರವೀಣರೂ ಕೂಡ ಹೌದು. ಆದರೆ ಇಂದು ಯಾವ ವೃತ್ತಿಯನ್ನು ಹಿಡಿಯಬೇಕು ಎಂದು ತಿಳಿಯುತ್ತಿಲ್ಲ ಜೊತೆಗೆ ಪಶುಪಾಲನೆ ಲಾಭದಾಯಕವೂ ಅಲ್ಲ. ಅರಣ್ಯವು ಉಳಿದಿಲ್ಲ ಮತ್ತು ಸೈನಿಕ ವೃತ್ತಿಯು ಸಾಧ್ಯವಿಲ್ಲ. ಇಂದು ಬೇಟೆಗಾರಿಕೆಯಂತೂ ವೃತ್ತಿಯಾಗಿ ಉಳಿದಿಲ್ಲ ಹೀಗಾಗಿ ಅತಂತ್ರರಾಗಿ ದ್ವಂದ್ವ ಸ್ಥಿತಿಯಲ್ಲಿದ್ದ ಕೆಲವು ಬುಡಕಟ್ಟು ನಾಯಕರು ಅರಣ್ಯ ಬಿಟ್ಟು ಊರು, ಕೇರಿ, ಗ್ರಾಮ ಮತ್ತು ಪಟ್ಟಣಗಳಲ್ಲಿ ಸೇರಿ ವಿದ್ಯೆ ಮತ್ತು ಸಿರಿತನದಲ್ಲಿ ಮುಂದುವರಿದ್ದಾರೆ. ಈ ದಿಶೆಯಲ್ಲಿ ಹೊಸಪೇಟೆ ತಾಲೂಕಿನ ರಾಮಸಾಗರದಲ್ಲಿ ನೆಲೆಸಿರುವ ಬಸವರಾಜ ನಾಯಕರು ಒಬ್ಬರಾಗಿದ್ದು, ಕಬ್ಬಿಣದ ಕುಲುಮೆಯನ್ನು ಸುಮಾರು ೬೦ ವರ್ಷಗಳಿಂದ ನಡೆಸುತ್ತಾ ಬಂದಿರುವುದನ್ನು ಕಾಣಬಹುದು.

ಕುಲುಮೆಗಳು

ಈ ಸಮುದಾಯದ ಮೂಲವೃತ್ತಿಯು ಪಶುಪಾಲನೆಯಾಗಿದೆ. ಆದರೆ ಕಬ್ಬಿಣದ ಕುಲಮೆ ಅಲ್ಲವೇ ಅಲ್ಲ ಎಂದು ಗೊತ್ತಾಗುತ್ತದೆ. ಯಾವುದೋ ಒಂದು ಕಠಿಣ ಪರಿಸ್ಥಿತಿಯಲ್ಲಿ ಈ ವೃತ್ತಿಯನ್ನು ಆಯ್ಕೆ ಮಾಡಿರುವ ಸಾಧ್ಯತೆಗಳು ಹೆಚ್ಚು. ಕುಲುಮೆಗಳು ಬಯಲು ಪ್ರದೇಶ ಅಥವಾ ಕಮ್ಮಾರ ಮನೆಗಳಿಗೆ ಹೊಂದಿಕೊಂಡಂತೆ ಇರುವುದು ವಾಡಿಕೆಯಾಗಿದೆ. ಈ ದಿಶೆಯಲ್ಲಿ ಹೊಸಪೇಟೆ ತಾಲೂಕಿನ ರಾಮಸಾಗರದ ಬಸವರಾಜ ನಾಯಕರ ಕುಲುಮೆಯು ಕಂಪ್ಲಿ ಹೊಸಪೇಟೆ ಮಾರ್ಗದ ರಸ್ತೆಗೆ ಹೊಂದಿಕೊಂಡಂತೆ ಇದ್ದು, ಕುಲುಮೆ ಪಶ್ಚಿಮ ಮುಖವಾಗಿದ್ದು, ಒಲೆಯು ಪಶ್ಚಿಮ ದಿಕ್ಕಿನಲ್ಲಿದ್ದು ಗಾಳಿಗಾಗಿ ಬ್ಲೋವರ್ ಬಳಸುತ್ತಿದ್ದಾರೆ. ಕಚ್ಚಾ ಅಡಿಗಲ್ಲು ಬಳಸುತ್ತಿದ್ದಾರೆ. ಹಾಗೇಯೆ ಚಿಕ್ಕಪುಟ್ಟ ಸಾಮಗ್ರಿಗಳನ್ನು ಕಬ್ಬಿಣದ ಪರಿಕರ ತಯಾರಿಕೆಯಲ್ಲಿ ಬಳಸುತ್ತಿರುವುದು ಕಂಡು ಬರುತ್ತದೆ. ಕುಲುಮೆಯು ವ್ಯವಸ್ಥಿತವಾಗಿ ಇಲ್ಲದೇ ಇರುವುದು ಕಂಡು ಬರುತ್ತದೆ. ತಾಲೂಕಿನಲ್ಲಿ ನಾಯಕ ಸಮುದಾಯದ ಒಂದೇ ಕುಲುಮೆಯನ್ನು ನೋಡಬಹುದು. ಇವರ ಕುಲುಮೆಯ ವಿವರ ಮತ್ತು ವಂಶಾವಳಿಯನ್ನು (ಅನುಬಂಧ–೫ರಲ್ಲಿ) ಗಮನಿಸಿ.

೩.೬. ಹರಿಜನ ಸಮುದಾಯದ ಕುಲುಮೆಗಳು

ಪೀಠಿಕೆ : ಹರಿಜನ ಎಂಬುದು ಒಂದು ಕೆಳಸ್ತರದ, ಕೆಳಜಾತಿಯ, ಅಸ್ಪೃಶ್ಯ ಸಮಾಜ ಎಂದು ಹೇಳಬಹುದು. ಸಾಮಾಜಿಕವಾಗಿ, ಆರ್ಥಿಕವಾಗಿ ಶೋಷಣೆಗೆ ಒಳಗಾಗಿರುವ ಸಮಾಜ ಎಂತಲೂ ಕರೆಯಬಹುದು. ಇಂತಹ ಶೋಷಣೆಗೆ ಒಳಪಟ್ಟಿರುವ ಹಲವಾರು ಸಮುದಾಯಗಳು ನಮ್ಮ ದೇಶದಲ್ಲಿವೆ. ಈ ದಿಶೆಯಲ್ಲಿ ಆದಿ ದ್ರಾವಿಡ (ಹರಿಜನ) ಸಮಾಜವು ಒಂದಾಗಿದೆ. ಈ ಸಮಾಜವು ಪೂರ್ವಕಾಲದಿಂದ ಇತ್ತೀಚಿನ ದಿನಗಳಲ್ಲೂ ಮೇಲವರ್ಗದ ಸಮುದಾಯಗಳಿಂದ ಶೋಷಿತಲ್ಪಟ್ಟಿರುವುದು ವಿಷಾದನೀಯ. ಈ ಸಮುದಾಯವು ಶೋಷಣೆಗೆ ಒಳಗಾಗಲು ಹಲವಾರು ನಿರ್ಬಂಧನೆಗಳನ್ನು ಪೂರ್ವಕಾಲದಿಂದಲೂ ಒಂದಲ್ಲ ಒಂದು ರೀತಿಯಲ್ಲಿ ನಡೆಯುತ್ತಲೇ ಇದೆ. ನಮ್ಮ ಸಮಾಜವು ಶೂದ್ರರನ್ನು ಅದರಲ್ಲೂ ದಲಿತರನ್ನು ದ್ವಿತೀಯ ಪ್ರಜೆಗಳೆಂದು ಭಾವಿಸಿ ಹಲವಾರು ನಿರ್ಬಂಧನೆಗಳನ್ನು

ನೀಡಿದೆ. ಉದಾ. ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಮತ್ತು ರಾಜಕೀಯ ಹಕ್ಕುಗಳಿಂದ ಮೊಟಕು ಗೊಳಿಸುವುದು, ಶೈಷಣಿಕವಾಗಿ ವಂಚಿತರಾಗುವಂತೆ ಮಾಡುವುದು. ಅಂತೆಯೇ ತೀರ ಕೆಳಹಂತದ ಕೆಲಸಗಳಿಗೆ ದಲಿತರೆ ಅರ್ಹರು ಎಂಬ ಅಪವಾದವನ್ನು ಸೃಷ್ಟಿಸಲಾಯಿತು ಎಂಬುದು ಸುಸ್ಪಷ್ಟ. ಹಾಗಾಗಿ ಇವರು ಕೇವಲ ಕೆಳಹಂತದ ಕೆಲಸಗಳಿಗೆ ಸೀಮಿತರಾದರು. ಈ ಸಮುದಾಯದ ಮೂಲ ವೃತ್ತಿ ಚರ್ಮದ ಕೆಲಸವಾಗಿದ್ದು ನಂತರದ ದಿನಗಳಲ್ಲಿ ಜೀವನಕ್ಕಾಗಿ ಹಲವಾರು ಬೇರೆ ಬೇರೆ ಕಸುಬುಗಳಿಗೆ ಅವಲಂಬಿತರಾಗಿರುವುದು ತಿಳಿಯುತ್ತದೆ. ಈ ದಿಶೆಯಲ್ಲಿ ಹೊಸಪೇಟೆ ತಾಲೂಕಿನ ಕಂಪ್ಲಿ ಹೋಬಳಿ ಮತ್ತು ಕಮಲಾಪುರ ಹೋಬಳಿಯ ಧರ್ಮಸಾಗರದಲ್ಲಿ ಕಂಡುಬರುವ ಕುಲುಮೆ ವೃತ್ತಿಯನ್ನು ಕಾಣಬಹುದು.

ಹರಿಜನ ಸಮುದಾಯ

ಹರಿಜನ ಎಂಬುದು ದಲಿತರನ್ನು ಕರೆಯುವ ಪರ್ಯಾಯ ಪದವಾಗಿದೆ. ಹರಿಜನ ಸಮುದಾಯ ಎಂಬುದು ಶೋಷಿಸಲ್ಪಟ್ಟಿರುವ ಕೆಳಸ್ತರದ ಜನಾಂಗವಾಗಿದೆ. ಈ ಸಮುದಾಯವನ್ನು ಅಸ್ಪೃಶ್ಯರು, ಅಂತ್ಯಜರು, ಅಂತ್ಯವಸಾಯ, ದಸ್ಯು, ಆದಿಮ ಜನಾಂಗ, ತಿರುಕುಲತ್ತರ, ಪಂಚಮರು, ಬಹಿಷ್ಕೃತರು, ಆದಿಕರ್ನಾಟಕ, ಆದಿದ್ರಾವಿಡ, ಅನುಸೂಚಿತ, ಪರಿಶಿಷ್ಟ ಜಾತಿ ಎಂತಲೂ ಕರೆಯುತ್ತಿರುವುದರ ಕುರಿತು ಇತಿಹಾಸದ ಪುಟಗಳಿಂದ ತಿಳಿಯಬಹುದು. ಈ ದಿಶೆಯಲ್ಲಿ ಉತ್ತರ ಕರ್ನಾಟಕದಲ್ಲಿರುವ ಆದಿದ್ರಾವಿಡರನ್ನು ಬೇರೆ ಬೇರೆ ಹೆಸರುಗಳಿಂದ ಕರೆಯುವ ಪದ್ಧತಿ ಕಂಡುಬರುತ್ತದೆ. ಬಿಜಾಪುರ, ಬೆಳಗಾಂ, ಧಾರವಾಡ, ರಾಯಚೂರು ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿನ ಜನರಿಗೆ 'ಮಾದಿಗರು', ಮಾದರು ಎಂದು ಕರೆದರೆ ಬೆಳಗಾವಿ, ಬಿಜಾಪುರ ಜಿಲ್ಲೆಯ ಗಡಿಭಾಗದಲ್ಲಿ ಇವರನ್ನು ಹೊಲೆಯರೆಂದು ಕರೆಯುವುದು ತಿಳಿದುಬರುತ್ತದೆ.[೨೯] ಆದಿದ್ರಾವಿಡ ಸಮುದಾಯವನ್ನು ಉತ್ತರ ಕರ್ನಾಟಕದ್ಯಾದಂತ ಸಾಮಾನ್ಯವಾಗಿ ಮಾದಿಗರು ಎಂದು ಕರೆಯುವುದು ಸಾಮಾನ್ಯವಾಗಿದೆ. ಆದರೆ ಪ್ರಾದೇಶಿಕವಾಗಿ ಇತರ ಬೇರೆ ಬೇರೆ ಹೆಸರುಗಳಿಂದ ಕರೆಯುವುದು ತಿಳಿದು ಬರುತ್ತದೆ. ಆದಿ ದ್ರಾವಿಡ(ಎ.ಕ.) ಎಂದು ದಕ್ಷಿಣ ಕರ್ನಾಟಕ ಭಾಗದಲ್ಲಿ ಹಾಗೂ ಬಳ್ಳಾರಿ ಜಿಲ್ಲೆಯ ಹೊಸಪೇಟೆ, ಕಂಪ್ಲಿ, ಸಿರುಗುಪ್ಪ ಇತ್ಯಾದಿ ಕಡೆಗಳಲ್ಲಿ ಕರೆಯುತ್ತಾರೆ.

ಆದಿ ದ್ರಾವಿಡರು ಯಾರು? ಎಲ್ಲಿಂದ? ಯಾವಾಗಾ? ಹೇಗೆ ಬಂದರು? ಎನ್ನುವುದಕ್ಕೆ ನಿಖರವಾದ ಪುರಾವೆಗಳು ದೊರೆಯದಿದ್ದರೂ ಪ್ರಾಯಶಃ ಈ ನಾಡಿನವರಾಗಿರಬೇಕು ಮತ್ತು ಅವರುಗಳು ಆಡುವ ಭಾಷೆಯನ್ನು ಅವಲೋಕಿಸಿ, ಆಂಧ್ರದಿಂದ ಮತ್ತು ಮಹಾರಾಷ್ಟ್ರದಿಂದ ಬಂದವರೆಂದು ಹೇಳುವುದು ಉತ್ಪ್ರೇಕ್ಷೆಯಾಗುತ್ತದೆ.[೩೦] ಈ ಸಮುದಾಯವನ್ನು ಹಲವಾರು ಜಾತಿಗಳಿಂದ ಕರೆಯುತ್ತಾರೆ. ಮತ್ತು ಹಲವಾರು ಒಳಪಂಗಡಗಳನ್ನು ತಾವುಗಳು ನಡೆಸುವ ವೃತ್ತಿ, ಭಾಷೆ ಮತ್ತು ಕುಲವನ್ನಾಧರಿಸಿ ಪಂಗಡಗಳನ್ನು ಮಾಡಿಕೊಂಡಿರುವುದನ್ನು ತಿಳಿಯಬಹುದು.

ಈ ಸಮುದಾಯದ ಮೂಲ ವೃತ್ತಿ ಚರ್ಮದ ಕೆಲಸವಾಗಿದೆ. ಇದಲ್ಲದೆ ಇನ್ನಿತರ ವೃತ್ತಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದನ್ನು ಕಾಣಬಹುದು. ಇವರುಗಳು ಸತ್ತ ಪ್ರಾಣಿಯ ಚರ್ಮವನ್ನು

ಸುಲಿದು, ಹದಗೊಳಿಸಿ ಅದರಿಂದ ಹಗ್ಗ, ಮಿಣಿ, ಜತ್ತಿಗೆ, ಬಾರು, ಮಟ್ಟಿ ಮಾಡಿ ಸಾಮಗ್ರಿಗಳನ್ನು ಸಿದ್ಧಪಡಿಸಿ ರೈತರಿಗೆ ಕೊಟ್ಟು ಕೂಲಿ ಪಡೆಯುತ್ತಾರೆ ಎಂದು ವಕ್ತೃಗಳು ತಿಳಿಸುತ್ತಾರೆ. ರೈತರಿಗೆ ಬೇಕಾದ ಚರ್ಮದ ಎಲ್ಲ ಕೆಲಸಗಳನ್ನು ಮಾಡುತ್ತಿರುವುದಾಗಿ ಹೇಳುತ್ತಾರೆ. ಇಂದಿನ ದಿನಗಳಲ್ಲಿ ಚರ್ಮದ ಕೆಲಸವಲ್ಲದೆ, ಕೃಷಿ, ವ್ಯಾಪಾರ ಮತ್ತು ಕೂಲಿ ಕೆಲಸಗಳನ್ನು ಮಾಡುತ್ತಿರುವುದನ್ನು ಕಾಣಬಹುದು. ಈ ದಿಶೆಯಲ್ಲಿ ಕಂಪ್ಲಿ ಹೋಬಳಿಯ ಕಮ್ಮಾರ ಗಂಗಪ್ಪ ಹರಿಜನ ಮತ್ತು ಕಮಲಾಪುರ ಹೋಬಳಿಯ ಧರ್ಮಸಾಗರದ ಕಮ್ಮಾರ ಮಲ್ಲಪ್ಪ ಹರಿಜನ, ಕ್ರಮವಾಗಿ ೧೦೦ ಮತ್ತು ೧೫೦ ವರ್ಷಗಳಿಂದ ಕಬ್ಬಿಣದ ಕುಲುಮೆ ಕೆಲಸವನ್ನು ತಮ್ಮ ವೃತ್ತಿಯನ್ನಾಗಿ ಮಾಡಿಕೊಂಡಿರುವುದನ್ನು ಕಾಣುತ್ತೇವೆ.

ಕುಲುಮೆಗಳು

ಈ ಸಮುದಾಯದ ಕುಲುಮೆಗಳು ಹೊಸಪೇಟೆ ತಾಲೂಕಿನ ಕಂಪ್ಲಿ ಹೋಬಳಿ ಮತ್ತು ಕಮಲಾಪುರ ಹೋಬಳಿಯ ಧರ್ಮಸಾಗರ ಗ್ರಾಮಗಳಲ್ಲಿ ಕಂಡುಬರುತ್ತಿದೆ. ಹೊಸಪೇಟೆ ತಾಲೂಕಿನಲ್ಲಿ ಕೇವಲ ಎರಡು ಮಾತ್ರ ಇವೆ ಮತ್ತು ಇತರ ಯಾವುದೇ ಗ್ರಾಮಗಳಲ್ಲಿ ಕಂಡುಬರದೇ ಇರುವುದು ವಿಶೇಷವಾಗಿದೆ. ಈ ಕುಲುಮೆಗಳಲ್ಲಿ ಕೇವಲ ಕೃಷಿಗೆ ಅವಶ್ಯಕವಾದ ವಸ್ತುಗಳನ್ನು ಮಾತ್ರ ಮಾಡುತ್ತಾರೆ. ಅಕ್ಕ-ಪಕ್ಕದ ಹಳ್ಳಿಗಳ ರೈತರು ತಮ್ಮ ಕೃಷಿಗೆ ಬೇಕಾದ ವಸ್ತುಗಳನ್ನು ಮಾಡಿಸಿಕೊಳ್ಳುತ್ತಾರೆ. ಈ ಕುಲುಮೆಗಳು ಪ್ರತಿದಿನ ನಡೆಯದೆ ಕೇವಲ ಕೆಲಸವಿದ್ದಾಗ ಮಾತ್ರ ನಡೆಯುತ್ತವೆ ಎಂದು ತಿಳಿಸುತ್ತಾರೆ.

ಕಂಪ್ಲಿಯಲ್ಲಿರುವ ಕಮ್ಮಾರ ಹರಿಜನ ಗಂಗಪ್ಪನವರ ಕುಲುಮೆಯು ಪೂರ್ವಕ್ಕೆ ಇದ್ದು ಕುಲುಮೆ ಒಲೆಯು ಉತ್ತರ ದಿಕ್ಕಿನಲ್ಲಿದೆ. ಇದರ ಅಳತೆಯು ೬ ಅಡಿ ಉದ್ದ ಮತ್ತು ೬ ಅಡಿ ಅಗಲದ ಸ್ಥಳವನ್ನು ಹೊಂದಿದೆ. ಒಲೆಗೋಡೆ, ಆಧುನಿಕ ಯಂತ್ರವಾದ ಬ್ಲೋವರ್, ಅಡಿಗಲ್ಲು ಮತ್ತು ಚಮ್ಮಟಿಗೆಯನ್ನು ಹೊಂದಿದೆ. ಹಾಗೆಯೇ, ಅವಶ್ಯಕವಾದ ಕೆಲ ಚಿಕ್ಕ ಪುಟ್ಟ ಸಾಮಾನುಗಳನ್ನು ಹೊಂದಿದೆ. ಕಮಲಾಪುರ ಹೋಬಳಿಯ ಧರ್ಮಸಾಗರದಲ್ಲಿರುವ ಕಮ್ಮಾರ ಹರಿಜನ ಮಲ್ಲಪ್ಪನವರ ಕುಲುಮೆಯು ಸಹ ಅದೇ ಲಕ್ಷಣವನ್ನು ಹೊಂದಿದೆ. ಆದರೆ ಕುಲುಮೆಯು ರಸ್ತೆ ಪಕ್ಕದಲ್ಲಿದ್ದು, ಒಲೆಯು ಉತ್ತರ ದಿಕ್ಕಿನಲ್ಲಿದ್ದು ಬಯಲಿನಲ್ಲಿರುವುದನ್ನು ಕಾಣುತ್ತೇವೆ. ಈ ಎರಡೂ ಕುಲುಮೆಗಳು ಹೆಚ್ಚು ಕಡಿಮೆ ಒಂದೇ ಗುಣಲಕ್ಷಣಗಳನ್ನು ಹೊಂದಿದೆ. ಕಂಪ್ಲಿಯಲ್ಲಿರುವ ಕುಲುಮೆಯು ಸುಮಾರು ೧೦೦ ವರ್ಷಗಳಿಂದ ನಡೆಯುತ್ತಿದ್ದರೆ ಧರ್ಮಸಾಗರದಲ್ಲಿರುವ ಕುಲುಮೆಯು ೧೫೦ ವರ್ಷಗಳಿಂದ ನಡೆಯುತ್ತಿದೆ ಎಂದು ವಕ್ತೃಗಳು ತಿಳಿಸುತ್ತಾರೆ. ಇವರು ಕಬ್ಬಿಣದಿಂದ ಕಬ್ಬಿಣದ ವಸ್ತುಗಳನ್ನು ತಯಾರಿಸುತ್ತಾರೆ ಎಂದು ಕಂಡು ಬರುತ್ತದೆ. ಇವರ ಕುಲುಮೆಗಳನ್ನು ವಿಶ್ವಕರ್ಮ ಸಮುದಾಯದವರ ಕುಲುಮೆಗಳನ್ನು ಹೋಲಿಸಿದರೆ ವ್ಯವಸ್ಥಿತವಾಗಿ ಇಲ್ಲದಿರುವುದು ನಿಖರವಾಗಿ ತಿಳಿಯುತ್ತದೆ. ಕಾರಣ ಇವರ ಮೂಲ ವೃತ್ತಿ ಕಬ್ಬಿಣ ತಯಾರಿಸುವುದು ಆಗಿರುವುದಿಲ್ಲ. ಹಾಗಾಗಿ ಇವರು ವಿಶ್ವಕರ್ಮ ಕಮ್ಮಾರರಿಂದ ಪ್ರೇರಣೆ ಪಡೆದು, ಉಪಜೀವನಕ್ಕಾಗಿ ಈ ವೃತ್ತಿಯನ್ನು ಅವಲಂಬಿಸಿಕೊಂಡಿರುವುದು ವ್ಯಕ್ತವಾಗುತ್ತದೆ. ಹೀಗೆ ಈ ಸಮುದಾಯದ ಕುಲುಮೆಯ ವಿವರ ಮತ್ತು ವಂಶಾವಳಿಯನ್ನು (ಅನುಬಂಧ-೬ರಲ್ಲಿ) ಗಮನಿಸಿ.

೩.೭. ಲಂಬಾಣಿ (ಬಂಜಾರ) ಸಮುದಾಯದ ಕುಲುಮೆಗಳು

ಪೀಠಿಕೆ : ಲಂಬಾಣಿ ಸಮುದಾಯವು ಒಂದು ಅಲೆಮಾರಿ ಬುಡಕಟ್ಟು ಜನಾಂಗವಾಗಿದ್ದು ಕ್ರಿ.ಶ. ೪೦೦ ವರ್ಷಗಳಿಂದ ಇವರ ಇತಿಹಾಸ ಸಿಗುತ್ತದೆ. ಪೂರ್ವ ಪ್ರಾಚೀನ ಇತಿಹಾಸದ ಬಗ್ಗೆ ಮಾಹಿತಿ ದೊರಕದಿರುವುದು ದುರದೃಷ್ಟಕರ. ಈ ಜನಾಂಗವು ಪ್ರಪಂಚದ ಎಲ್ಲೆಡೆಯಲ್ಲಿಯೂ ಭಿನ್ನ ಭಿನ್ನ ಹೆಸರುಗಳಿಂದ ಗುರುತಿಸಲ್ಪಟ್ಟಿರುತ್ತದೆ. ಅಂತೆಯೇ ಭಾರತದಲ್ಲೂ ವ್ಯಾಪಕವಾಗಿ ೨೧ ರಾಜ್ಯಗಳಲ್ಲಿ ಕಂಡುಬರುತ್ತಾರೆ. ಕಾರಣ ಇವರು ಅಲೆಮಾರಿ ಬುಡಕಟ್ಟು ಜನಾಂಗದವರಾಗಿದ್ದು, ಇವರ ಮೂಲ ಕಸುಬು ವ್ಯಾಪಾರ. ಈ ದಿಕ್ಕಿನಲ್ಲಿ ನೋಡಿದಾಗ ಲಂಬಾಣಿ ಸಮುದಾಯವು ರಾಜ್ಯ ಜಿಲ್ಲೆಗಳಲ್ಲಿ ಇರುವುದನ್ನು ಗುರುತಿಸಬಹುದು. ಇವರುಗಳು ಮೂಲತಃ ವ್ಯಾಪಾರ ಮಾಡುತ್ತ ಊರಿಂದೂರಿಗೆ ವಲಸೆ ಹೋಗುತ್ತಿದ್ದು ಕಾಲಕ್ರಮೇಣ ಒಂದು ಕಡೆ ಗುಂಪಾಗಿ ನೆಲೆಯೂರಿ ವ್ಯಾಪಾರವಲ್ಲದೆ, ವ್ಯವಸಾಯ ಮತ್ತಿತರ ಕೆಲಸಗಲನ್ನು ಮಾಡಿ ಜೀವನ ಸಾಗಿಸುವ ಅನಿವಾರ್ಯತೆ ಉಂಟಾಯಿತು. ಅಂತೆಯೇ ಈ ಜನಾಂಗದವರು ಇತ್ತೀಚಿನ ದಿನಮಾನಗಳಲ್ಲೂ ಕೂಡ ಬೇರೆ ಬೇರೆ ಕೆಲಸಗಳ ಮೇಲೆ ಗುಳೆ ಹೊರಟು ಹೋಗುವುದನ್ನು ಕಾಣುತ್ತೇವೆ. ಈ ದಿಕ್ಕಿನಲ್ಲಿ ಹೊಸಪೇಟೆ ತಾಲೂಕಿನ ಕಲ್ಲಹಳ್ಳಿ ತಾಂಡ ಮತ್ತು ಶೀತಾರಾಮ ತಾಂಡದಲ್ಲಿ ಕುಲುಮೆ ವೃತ್ತಿಯನ್ನು ಆರಿಸಿ ಜೀವನ ಸಾಗಿಸುತ್ತಿರುವುದನ್ನು ಕಾಣುತ್ತೇವೆ.

ಲಂಬಾಣಿ ಸಮುದಾಯ

ಲಂಬಾಣಿ (ಬಂಜಾರ) ಸಮುದಾಯವು ಮೂಲತಃ ಅಲೆಮಾರಿ ಬುಡಕಟ್ಟಿನ ಪಂಗಡವಾಗಿದ್ದು ಸ್ವಾತಂತ್ರ್ಯ ಬಂದ ನಂತರದ ದಿನಗಳಲ್ಲಿ ಪರಿಶಿಷ್ಟ ಜಾತಿಗೆ ಸೇರಿಸಲಾಗಿದೆ. ಈ ಜನಾಂಗವು ಕ್ರಿ.ಶ. ೪೦೦ ವರ್ಷಗಳಿಂದ ಬೆಳಕಿಗೆ ಬಂದಿರುವುದನ್ನು ಇತಿಹಾಸದ ಪುಟಗಳಿಂದ ತಿಳಿಯಬಹುದು. ಈ ಜನಾಂಗವು ಕರ್ನಾಟಕ ವರ್ಣರಂಜಿತ ಗುಂಪಿಗೆ ಸೇರಿದೆ. ಇವರು ತಮ್ಮನ್ನು ತಾವು 'ಗೊರಮಾಟಿ' ಎಂದು ಕರೆದುಕೊಳ್ಳುತ್ತಾರೆ. ಪೂರ್ವದಲ್ಲಿ ಆರ್ಯವರ್ಗಕ್ಕೆ ಸಂಬಂಧಿಸಿದವರಿಂದಲೇ ತಮ್ಮ ಬಣ್ಣ ಮತ್ತು ಸೌಂದರ್ಯಗಳ ಬಗೆಗೆ ಹೆಚ್ಚಿನ ಅಭಿಮಾನ ಹೊಂದಿದ್ದಿರಬೇಕು ಎನಸುತ್ತದೆ.[೩೧]

ಈ ಸಮುದಾಯದ ಕುರಿತು ಒಂದು ಕಡೆ ಎಡ್ಗರ್ ಥರ್ಸ್ಟನ್ ಈ ರೀತಿ ಬರೆಯುತ್ತಾರೆ. "ಇವರು ಕ್ಷತ್ರಿಯರ ಮೂಲದವರಿಗೆ ಸಂಬಂಧಿಸಿದವರಾಗಿದ್ದು, ಯುದ್ಧ, ಬೇಟೆ, ಕಾವಲು ಕಾಯುವುದರಲ್ಲಿ ನಿಪುಣರೆಂದು ಬಂಜಾರ ಶಬ್ದ ಜಾತಿ ಸೂಚಕವಾಗಿರುವಂತೆ, ವ್ಯವಸಾಯ ಸೂಚಕವಾಗಿದೆ ಎಂದು ಹೇಳುತ್ತಾರೆ. ಹಾಗೇಯೆ ಲಂಬಾಣಿಗಳು ಮತ್ತು ಸುಗಾಲಿಗಳು ಒಂದೇ ಆಗಿದ್ದು, ಈ ಜನರು ದಕ್ಷಿಣ ಭಾಗದಲ್ಲಿ ಹೆಚ್ಚಾಗಿ ಕಾಣಿಸುತ್ತಾರೆ. ಪಶುಪಾಲನೆ, ಭಾರ ಎತ್ತುವಿಕೆ, ಗೋರಕ್ಷಣೆ ಮತ್ತು ವ್ಯಾಪಾರ ಮುಂತಾದ ವೃತ್ತಿಯನ್ನು ಅವಲಂಬಿಸಿದ್ದಾರೆ ಎಂದು ೧೮೯೧ರ ಮದ್ರಾಸ್ ಜನಗಣತಿಯಲ್ಲಿ ವಿವರಿಸಲಾಗಿದೆ".[೩೨]

ಲಂಬಾಣಿಗರು ಮೂಲತಃ ರಾಜಸ್ಥಾನ ಮೂಲದವರಾದ ಇವರು ಮೊಘಲರ ಸೈನಿಕರ ಜೊತೆಗೆ ಕರ್ನಾಟಕಕ್ಕೆ ಬಂದು ಎಲ್ಲೆಡೆಯೂ ಹಂಚಿಹೋಗಿದ್ದಾರೆ. ಕರ್ನಾಟಕದಲ್ಲಿನ ಮೈಸೂರು,

ಮಂಡ್ಯ, ಕೊಡಗು, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕಡಿಮೆ ಇದ್ದರೆ ಗುಲ್ಬರ್ಗ, ಶಿವಮೊಗ್ಗ, ಬಳ್ಳಾರಿ, ಚಿತ್ರದುರ್ಗ ಜಿಲ್ಲೆಗಳಲ್ಲಿ ಹೆಚ್ಚು ಜನರನ್ನು ಕಾಣಬಹುದು. ನಮ್ಮ ಕರ್ನಾಟಕ ರಾಜ್ಯದಲ್ಲಿ ಸುಮಾರು ೪೫,೦೦,೦೦೦ ಎಂದು ಅಂದಾಜಿಸಲಾಗಿದೆ. ಅಲೆಮಾರಿ ವ್ಯಾಪಾರಸ್ಥರಾದ ಇವರು ದೇಶದ ಮೂಲೆ ಮೂಲೆಯಲ್ಲಿನ ಸೈನ್ಯಗಳಿಗೆ ಆಹಾರ ಧಾನ್ಯಗಳನ್ನು ಪೂರೈಸುತ್ತಿದ್ದರೆಂದು ಮಿ.ಏರ್ವಿನ್ ವರದಿ ಮಾಡುತ್ತದೆ. ಭಾರತದಲ್ಲಿ ವಾಹನಗಳ ಸೌಕರ್ಯ ಇಲ್ಲದ ಸಂದರ್ಭದಲ್ಲಿ ಆಹಾರ ಧಾನ್ಯಗಳನ್ನು ಸರಬರಾಜು ಮಾಡುತ್ತಿದ್ದು, ನಂತರ ಮೊಘಲರ ಆಳ್ವಿಕೆ ಮುಕ್ತಾಯಗೊಂಡು, ಆಂಗ್ಲರು ಬಂದೊಡನೆ ರೈಲು ಸೌಕರ್ಯ ಬಂದಾಗ, ಇವರ ವ್ಯಾಪಾರ ನಿಂತು ಹೋಗಿ ತುಂಬಾ ನಷ್ಟ ಅನುಭವಿಸಬೇಕಾಯಿತು. ಆಗ ಇವರುಗಳು ತಮ್ಮ ಜೀವನವನ್ನು ನಡೆಸಲು ಪಡಬಾರದ ಕಷ್ಟ ಪಟ್ಟು ಒಂದು ಕಡೆ ನೆಲೆ ನಿಲ್ಲುವುದಕ್ಕೆ ಪ್ರಾರಂಭಿಸಿದರು ಎಂದು ತಿಳಿದು ಬರುತ್ತದೆ.[೩೩] ಹೀಗೆ ಈ ಜನರು ಮುಂದೆ ಒಂದೊಂದು ತಂಡ ಕಟ್ಟಿಕೊಂಡು ಸೌಕರ್ಯ ಇರುವ ಸ್ಥಳದಲ್ಲಿ ನೆಲೆಯನ್ನು ಕಂಡು 'ತಾಂಡ'ಗಳಲ್ಲಿ ವಾಸಿಸುವುದನ್ನು ಕಾಣಬಹುದು.

ಈ ಸಮುದಾಯದಲ್ಲಿ ರಾಥೋಡ್, ಚವ್ಹಾಣ ಮತ್ತು ಪವಾರ ಎಂಬ ಪಂಗಡಗಳಿದ್ದು ಈ ಮೂರು ಪಂಗಡಗಳಲ್ಲಿ ಉಪಜಾತಿಗಳಿವೆ. ಎಲ್ಲಾ ಉಪಜಾತಿಗಳು ಇಂದು ಕೃಷಿಯನ್ನವಲಂಬಿಸಿ ಕೊಂಡಿದ್ದಾರೆ. ಕೃಷಿಯನ್ನು ಆಧರಿಸಿ ಜೀವನ ಮಾಡುತ್ತಿದ್ದು, ಮಳೆಯಿಲ್ಲದೆ ವ್ಯವಸಾಯ ಮಾಡುವುದಕ್ಕೆ ತುಂಬಾ ಕಷ್ಟವಾಗುತ್ತಿರುವುದರಿಂದ ಸೌಕರ್ಯ ಇರುವ ಪ್ರದೇಶದ ಕಡೆ ಗುಳೆ ಹೊರಡುತ್ತಿರುವುದನ್ನು ಕಾಣಬಹುದು. ತಮಗೆ ಅನುಕೂಲವಾಗುವಂತಹ ವೃತ್ತಿಯನ್ನು ನೆಚ್ಚಿ ಜೀವನ ಸಾಗಿಸುತ್ತಿದ್ದಾರೆ. ಈ ದಿಶೆಯಲ್ಲಿ ಹೊಸಪೇಟೆಯಲ್ಲಿನ ಕಲ್ಲಹಳ್ಳಿ ತಾಂಡಾದಲ್ಲಿರುವ ೪೦ ವರ್ಷಗಳಿಂದ ನಡೆಯುತ್ತಿರುವ ಥಾವರ್ಯ ನಾಯ್ಕರವರ ಕಬ್ಬಿಣದ ಕುಲುಮೆಯನ್ನು ಹೆಸರಿಸಬಹುದು.

ಕುಲುಮೆಗಳು

ಕಬ್ಬಿಣದ ಉತ್ಪಾದನೆಯು ಪ್ರಾಗೈತಿಹಾಸಿಕ ಕಾಲದಿಂದಲೂ ನಡೆಯುತ್ತಿರುವುದನ್ನು ತಿಳಿದಿದ್ದೇವೆ. ಹಾಗೆಯೇ ಕುಲುಮೆಯು ಕೇವಲ ಒಂದೇ ಜನಾಂಗಕ್ಕೆ ಸೀಮಿತವಾಗದೇ ಕಾಲಕ್ರಮೇಣ ಹಲವಾರು ಸಮುದಾಯದ ಕುಲಕಸುಬಾಗಿರುವುದು ಸತ್ಯ. ಇಂತಹ ಬೆಳವಣಿಗೆಯಲ್ಲಿ ಲಂಬಾಣಿ ಸಮುದಾಯವು ಕೂಡ ಇತ್ತೀಚಿನ ದಿನಮಾನಗಳಲ್ಲಿ ಕುಲುಮೆ ಕೆಲಸಕ್ಕೆ ಇಳಿದಿರುವುದು ಕಂಡುಬರುತ್ತದೆ. ಹೊಸಪೇಟೆ ತಾಲೂಕಿನ ಸೀತಾರಾಮ ತಾಂಡಾ ಎಂಬ ಲಂಬಾಣಿ ತಾಂಡಾದಲ್ಲಿ ಕಮ್ಮಾರ ಈಶ್ವರಪ್ಪ ಆಚಾರ್ಯರರ ಕುಲುಮೆಯು ೧೯೭೫ ರಿಂದ ನಡೆಯುತ್ತಿದೆ. ಈ ಕುಲುಮೆಯು ಹಂಪಿ ಪವರ್ ಕ್ಯಾಂಪ್ ಹೋಗುವ ದಾರಿಯಲ್ಲಿದ್ದು, ಬಯಲು ಪ್ರದೇಶದಲ್ಲಿ ಕುಲುಮೆಯನ್ನು ನಿರ್ಮಿಸಲಾಗಿದೆ. ಈ ಕುಲುಮೆಯು ಬಯಲಿನಲ್ಲಿ ಅಂದರೆ ಗಿಡದ ನೆರಳಿನಲ್ಲಿ ನಡೆಯುತ್ತಿರುವುದನ್ನು ಕಾಣಬಹುದು. ಈ ಕುಲುಮೆಯನ್ನು ವಿಶ್ವಕರ್ಮ ಸಮುದಾಯದವರೆ ನಡೆಸುತ್ತಿದ್ದರೂ ಸಹ ಇದು ಲಂಬಾಣಿ ತಾಂಡದಲ್ಲಿರುವುದು ವಿಶೇಷ. ಕಾರಣ ಹೊಸಪೇಟೆಯ ಯಾವುದೇ ತಾಂಡಾಗಳಲ್ಲಿ ಇಂತಹ ಕುಲುಮೆ ಕಂಡುಬರುವುದಿಲ್ಲ. ಈ ಕುಲುಮೆಯಲ್ಲಿ ಪ್ರಾಣಿ ಚರ್ಮದ ತಿದಿ ಬದಲು ಟೈಯರ್‌ನಿಂದ ಮಾಡಿದ ತಿದಿಯನ್ನು ಬಳಸಿ

ಗಾಳಿ ಪಡೆಯುತ್ತಿದ್ದರು. ಈ ಕುಲುಮೆಯು ಉತ್ತರ ದಿಕ್ಕಿನಲ್ಲಿದೆ. ಒಲೆ ಸಹ ಉತ್ತರದಲ್ಲಿದೆ. ನಂತರ ಇತ್ತೀಚಿನ ೧೫ ವರ್ಷಗಳಿಂದ ಆಧುನಿಕ ಯಂತ್ರವಾದ ಬ್ಲೋವರ್‌ನ್ನು ಬಳಸುತ್ತಿದ್ದರು ಎಂದು ಕಂಡು ಬರುತ್ತದೆ. ಆದರೆ ಈ ಕುಲುಮೆಯು ಹಿಂದಿನ ಎರಡು ಮೂರು ವರ್ಷಗಳಿಂದ ಕೆಲಸ ವಿಲ್ಲದೆ ಸ್ಥಗಿತಗೊಂಡಿರುವುದನ್ನು ಕಾಣುತ್ತೇವೆ. ಊರಿನ ಪಕ್ಕದಲ್ಲಿರುವ ನಾಸಿರೆಡ್ಡಿ ಕ್ಯಾಂಪ್, ಚಿನ್ನಾಪುರ, ನಲ್ಲಾಪುರಗಳಿಂದ ರೈತರು ಬಂದು ತಮಗೆ ಬೇಕಾದ ಕಬ್ಬಿಣದ ವಸ್ತುಗಳನ್ನು ಮಾಡಿಸಿ ಕೊಳ್ಳುತ್ತಿದ್ದರು ಎಂದು ತಿಳಿಸುತ್ತಾರೆ.

ಕಲ್ಲಹಳ್ಳಿ ತಾಂಡದಲ್ಲಿನ ಲಂಬಾಣಿ ಥಾವರ್ಯ ನಾಯ್ಕರವರ ಕುಲುಮೆಯು ಹೊಸಪೇಟೆ ಸಂಡೂರು ಮುಖ್ಯ ರಸ್ತೆಯ ಬದಿಯಲ್ಲಿರುವ ಬಸ್ ನಿಲ್ದಾಣದ ಹತ್ತಿರವಿದ್ದು, ಪೂರ್ವ ದಿಕ್ಕಿಗೆ ಕುಲುಮೆ ಇದ್ದರೆ, ಉತ್ತರಕ್ಕೆ ಒಲೆಯನ್ನು ಕಾಣಬಹುದು. ಕಬ್ಬಿಣದ ಅಡಿಗಲ್ಲನ್ನು ಹೊಂದಿದ್ದು ಚಿಕ್ಕಪುಟ್ಟ ಉಪಕರಣಗಳನ್ನು ಕಾಣಬಹುದು. ಬಹುಶಃ ಇವರು ಮೂಲತಃ ಕಮ್ಮಾರ ಅಲ್ಲ ಎಂದು ಹೇಳುತ್ತಾರೆ. ಬದಲಾಗಿ ಕಷ್ಟದ ಕಾಲದಲ್ಲಿ ಚಿಕ್ಕಮಗಳೂರು ಕಡೆಗೆ ಗುಳೆ ಹೊರಡಿದ್ದರು. ಆಗ ಈ ಕೆಲಸವನ್ನು ಕಲಿತರು ಎಂದು ಹೇಳುತ್ತಾರೆ. ಇವುಗಳನ್ನು ವೀಕ್ಷಿಸಿದಾಗ ಈ ಸಮುದಾಯವು ಮೂಲತಃ ಕಬ್ಬಿಣ ಉತ್ಪಾದಕರಲ್ಲ ಎಂಬುದು ಅರಿವಾಗುತ್ತದೆ. ಕೇವಲ ಜೀವನ ನಡೆಸಲು ಮಾಡು ತ್ತಿರುವ ವೃತ್ತಿ ಎಂದು ನಿಖರವಾಗಿ ಹೇಳಬಹುದು. ಈ ಕುಲುಮೆಯಲ್ಲಿ ಕೃಷಿಗೆ ಬೇಕಾದ ವಸ್ತುಗಳನ್ನು ಮಾಡಿಕೊಡುತ್ತಾರೆ. ಈ ಸಮುದಾಯದವರ ಕಲುಮೆಗಳ ವಿವರ ಮತ್ತು ವಂಶಾವಳಿ ಯನ್ನು (ಅನುಬಂಧ–೭ರಲ್ಲಿ) ಗಮನಿಸಿ.

೩.೮. ಗೊಲ್ಲ ಸಮುದಾಯದ ಕುಲುಮೆಗಳು

ಪೀಠಿಕೆ : ಗೊಲ್ಲ ಸಮುದಾಯವು ಒಂದು ಬುಡಕಟ್ಟು ಸಮುದಾಯವಾಗಿದ್ದು ಗೋವುಗಳನ್ನು ಸಾಕುವುದು ಇವರ ಮೂಲ ವೃತ್ತಿಯಾಗಿದೆ. ಈ ಸಮುದಾಯವು ಊರಿನಿಂದ ಹೊರಗೆ ವಾಸಿಸುವ ಜನಾಂಗ ಎಂದು ಹೆಳುತ್ತಾರೆ. ಈ ಜನಾಂಗವು ಮುಖ್ಯವಾಗಿ ಕರ್ನಾಟಕದ ತುಮಕೂರು, ಚಿತ್ರದುರ್ಗ, ಬಳ್ಳಾರಿ, ಬೆಂಗಳೂರಿನ ಮಾಗಡಿ, ಕನಕಪುರ, ದೊಡ್ಡಬಳ್ಳಾಪುರ, ಹಾಸನ, ಅರಿಸಿನಕೆರೆಯಲ್ಲಿ ವಾಸಿಸುವುದನ್ನು ಗುರುತಿಸಬಹುದು. ಹಾಗೆಯೇ ಚಿತ್ರದುರ್ಗದ ಹಿರಿಯೂರು, ಚಳ್ಳಕೆರೆ ಮತ್ತು ಶಿರಾ ತಾಲೂಕುಗಳಲ್ಲಿ ಹೆಚ್ಚಿನ ಜನಸಂಖ್ಯೆಯನ್ನು ಕಾಣಬಹುದು. ಈ ಜನಾಂಗವು ಕೃಷ್ಣನ ಆರಾಧಕರಾಗಿದ್ದಾರೆ. ಇವರ ಮೂಲ ಕಸುಬು ಗೋವುಗಳನ್ನು ಸಾಕುವುದು. ಆದರೆ ಇತ್ತೀಚಿನ ದಿನಮಾನಗಳಲ್ಲಿ ಸ್ವಲ್ಪ ಬದಲಾವಣೆಯನ್ನು ಕಂಡುಕೊಂಡಿದ್ದಾರೆ. ದನಕರುಗಳ ಬದಲು ಕುರಿಸಾಕಣೆ ಪ್ರಧಾನವಾಗಿದೆ. ಜೊತೆಗೆ ವ್ಯವಸಾಯವನ್ನು ಅವಲಂಬಿಸಿರುವುದನ್ನು ಕಾಣಬಹುದು. ಕಾರಣ ಆಧುನಕ ತಂತ್ರಜ್ಞಾನದಿಂದ ಹೊಲಗಳ ಕೆಲಸವು ಸುಲಭವಾಗಿದ್ದು ಮತ್ತು ಮೇವಿನ ಕೊರತೆ ಉಂಟಾಗಿದೆ. ಹೀಗೆ ಈ ಜನಾಂಗವು ಮೂಲ ವೃತ್ತಿಯನ್ನು ತೊರೆದು ತಮಗೆ ಯೋಗ್ಯವಾದ ವೃತ್ತಿಯನ್ನು ನೆಚ್ಚಿಕೊಂಡು ಜೀವನ ನಡೆಸುತ್ತಿದ್ದಾರೆ. ಈ ದಿಶೆಯಲ್ಲಿ ಹೊಸಪೇಟೆ ತಾಲೂಕಿನ ಗುಂಡ್ಲಬೈಲುವಿದ್ದಿಗೇರಿಯಲ್ಲಿ ನಡೆಸುತ್ತಿರುವ ಗೊಲ್ಲ ಸಮುದಾಯದ ಕಬ್ಬಿಣ ಕುಲುಮೆ ವೃತ್ತಿಯನ್ನು ಗುರುತಿಸಬಹುದು.

ಗೊಲ್ಲ ಸಮುದಾಯ

ಗೊಲ್ಲ ಸಮುದಾಯವು ಪ್ರಾಯಶಃ ಆಂಧ್ರದ ಮೂಲದಿಂದ ಬಂದಿರಬಹುದು ಎಂಬ ವಾದದಲ್ಲಿ ವಿದ್ವಾಂಸರ ಭಿನ್ನಾಭಿಪ್ರಾಯಗಳಿವೆ. ಗೊಲ್ಲ ಎಂದರೆ ಗೋವುಗಳನ್ನು ಕಾಯುವವನು ಎಂದು ಅರ್ಥ. ಕಾಡುಗೊಲ್ಲ ಎಂದರೆ ಕಾಡಿನಲ್ಲಿ ವಾಸಿಸುತ್ತಿರುವವನು ಎಂದು ಅರ್ಥವಾಗುತ್ತದೆ. ಹಟ್ಟಿ ಸುತ್ತ ಬೇಲಿ ಹಾಕುವವನು ಎಂದೂ ಸಹ ಅರ್ಥ. ಈ ಸಮುದಾಯದವರು ಊರು, ಗ್ರಾಮಗಳಿಂದ ಸುಮಾರು ೫ ಕಿ.ಮೀ. ದೂರದಲ್ಲಿ ಮನೆಗಳನ್ನು ನಿರ್ಮಿಸಿ ಊರಿಗೆ ಬೇಲಿ ಹಾಕುತ್ತಾರೆ. ಇವರು ಸಾಮಾನ್ಯವಾಗಿ, ಇವರ ವಾಸದ ನೆಲೆಗಳನ್ನು 'ಹಟ್ಟಿ'ಗಳು ಎಂದು ಕರೆಯುತ್ತಾರೆ. ಹಟ್ಟಿಗಳಲ್ಲಿ ತಮ್ಮ ದೇವರುಗಳ ದೇವಸ್ಥಾನಗಳನ್ನು ರಚಿಸಿ ಸುತ್ತಲೂ ಬೇಲಿಯನ್ನು ಹಾಕಿರುತ್ತಾರೆ. ಇವರು ಗುಂಪಾಗಿ ವಾಸಿಸುತ್ತಾರೆ. ಈ ಜನಾಂಗವನ್ನು ಯಾದವ ಕುಲಸ್ಥರು ಎಂದು ಕರೆಯುತ್ತಾರೆ. ಕಾಡುಗೊಲ್ಲರಲ್ಲಿ ಹಲವಾರು ವಿಧಗಳಿವೆ. ಊರುಗೊಲ್ಲರು ಆಂಧ್ರಪ್ರದೇಶ ಮತ್ತು ಕರ್ನಾಟಕದಲ್ಲಿ ಕಂಡುಬರುತ್ತಾರೆ. ಕಡ್ಡಿ ಹಟ್ಟಿ ಗೊಲ್ಲರೆಂದರೆ ಬಹಿಷ್ಕರ ಹಾಕಿಸಿಕೊಂಡವರು ಮುದ್ದಿನಗೊಲ್ಲರು, ಪೆದ್ದೇಟಗೊಲ್ಲರು ಆಂಧ್ರದಲ್ಲಿ ಕಂಡುಬರುತ್ತಾರೆ. ಕಂಚಿಗೊಲ್ಲರು ಕರ್ನಾಟಕದಲ್ಲಿ ಕಂಡುಬರುತ್ತಾರೆ.[೩೪] ಈ ಜನಾಂಗದಲ್ಲೂ ಹಲವಾರು ಉಪಜಾತಿಗಳನ್ನು ಹೆಸರಿಸಬಹುದು. ಈ ಜನಾಂಗದವರ ಮೂಲ ವೃತ್ತಿ ದನಗಳನ್ನು ಸಾಕುವುದು ವಂಶಪಾರಂಪರಿಕವಾಗಿ ಬಂದಿರುವಂತಹದು. ಆದರೆ ಇತ್ತೀಚಿನ ಆಧುನಿಕರಣದಿಂದಾಗಿ ತಮ್ಮ ಮೂಲ ವೃತ್ತಿಯನ್ನು ತೊರೆದು ಬೇರೆ ಬೇರೆ ವೃತ್ತಿಗಳನ್ನು ಕೈಗೊಂಡಿರುವುದನ್ನು ಕಾಣುತ್ತೇವೆ. ಈ ಸಮುದಾಯವು ಹೆಚ್ಚಾಗಿ ಗುಂಪಾಗಿ ನೆಲೆಸಿದ್ದು ತಮ್ಮ ನ್ಯಾಯ ತೀರ್ಮಾನವನ್ನು ಬಗೆಹರಿಸುವುದಕ್ಕೆ ಕಟ್ಟೆಯನ್ನು ತಮ್ಮ ಹಟ್ಟಿಯಲ್ಲಿ ಮಾಡಿಕೊಂಡಿರುತ್ತಾರೆ. ಇಂದು ಜನರು ತಮ್ಮ ವೃತ್ತಿ ಬದುಕಿಗೆ ಬೇಕಾದ ಉಪ ಕೆಲಸಕಾರ್ಯಗಳನ್ನು ತಾವೇ ಮಾಡಿಕೊಳ್ಳುವ ಪರಿಸ್ಥಿತಿ ಒದಗಿದೆ. ಈ ದಿಶೆಯಲ್ಲಿ ಹೊಸಪೇಟೆ ತಾಲೂಕಿನ ಗುಂಡ್ಲಬೈಲುವದ್ದಿಗೇರಿಯ ಕಮ್ಮಾರ ಗೊಲ್ಲ ಸತ್ಯನಾರಾಯಣರವರು ಕಬ್ಬಿಣ ಕುಲುಮೆ ಕೆಲಸಗಳನ್ನು ನಡೆಸುತ್ತಿರುವುದನ್ನು ಕಾಣಬಹುದು.

ಕುಲುಮೆಗಳು

ಈ ಸಮುದಾಯದ ಕುಲುಮೆಗಳು ಹೊಸಪೇಟೆ ತಾಲೂಕಿನ ಗುಂಡ್ಲಬೈಲುವದ್ದಿಗೇರಿಯಲ್ಲಿ ಕಂಡುಬರುತ್ತದೆ. ಕುಲುಮೆ ವೃತ್ತಿಯು ಮೂಲತಃ ವಿಶ್ವಕರ್ಮ ಸಮಾಜದ ಪಾರಂಪರಿಕವಾಗಿ ಬಂದಿರುವ ವೃತ್ತಿಯಾಗಿದೆ. ಆದರೂ ಸಹ ಇತರ ಸಮುದಾಯಗಳು ಈ ಕೆಲಸವನ್ನು ವೃತ್ತಿಯನ್ನಾಗಿ ಮಾಡಿಕೊಂಡಿದೆ. ಈ ಕುಲುಮೆಯನ್ನು ಗೊಲ್ಲ ಸಮುದಾಯದವರು ನಡೆಸುತ್ತಿದ್ದಾರೆ ಮತ್ತು ಕುಲುಮೆಯನ್ನು ಕೇವಲ ತಮ್ಮ ಕೃಷಿ ಕೆಲಸಕ್ಕೆ ಅನುಕೂಲಕರವಾಗಲೆಂದು ನಡೆಸುತ್ತಿದ್ದೇವೆ ಎಂದು ಹೇಳುತ್ತಾರೆ. ಈ ಕುಲುಮೆಯು ಪ್ರಾಚೀನ ಕಾಲದಿಂದ ನಡೆಯದೆ ಇತ್ತೀಚಿನ ಸುಮಾರು ೩೦ ವರ್ಷಗಳಿಂದ ನಡೆಯುತ್ತಿದೆ ಎಂದು ತಿಳಿದು ಬಂದಿದೆ. ಇವರಿಗೆ ಪ್ರಾಚೀನ ಕುಲುಮೆಯ ಬಗ್ಗೆ ಮಾಹಿತಿ ಇರುವುದಿಲ್ಲ ಎಂಬುದು ವ್ಯಕ್ತವಾಗುತ್ತದೆ. ಈ ಕುಲುಮೆಯನ್ನು ತಮ್ಮ ಮನೆಯ ಅಂಗಳದಲ್ಲಿ ಹಾಕಿರುವುದನ್ನು ನೋಡಬಹುದು. ಇವರು ತಿದಿಯ ಬದಲು ಆಧುನಕ ಯಂತ್ರವಾದ

ಬ್ಲೋವರ್‌ನ್ನು ಉಪಯೋಗಿಸಿ ಕಬ್ಬಿಣದ ವಸ್ತುಗಳನ್ನು ತಯಾರಿಸುತ್ತಾರೆ. ಒಂದು ಕಬ್ಬಿಣದ ಅಡಿಗಲ್ಲು ಮತ್ತು ಎರಡು ಚಮ್ಮಟಿಗೆ ಹಾಗೂ ಮತ್ತಿತರ ಚಿಕ್ಕಪುಟ್ಟ ಸಹಾಯಕ ಸಾಮಗ್ರಿಗಳನ್ನು ಹೊಂದಿರುತ್ತಾರೆ. ಹಾಗೆಯೇ ತಮ್ಮ ಕೃಷಿಗೆ ಅವಶ್ಯಕ ಸಾಮಾನುಗಳನ್ನು ಮಾತ್ರ ತಯಾರಿಸುತ್ತಾರೆ. ಈ ಕುಲುಮೆಯು ದಕ್ಷಿಣ ದಿಕ್ಕಿನಲ್ಲಿದ್ದು, ಒಲೆಯು ದಕ್ಷಿಣ ದಿಕ್ಕಿನಲ್ಲಿದೆ. ಇವರ ಕುಲುಮೆ ವಿಶ್ವಕರ್ಮ ಸಮುದಾಯದ ಕುಲುಮೆಯಂತೆ ಕಂಡುಬರುವುದಿಲ್ಲ ಎಂಬುದೇ ವಿಶೇಷ. ಇದೇ ಊರಿನಲ್ಲಿ ಇವರ ಸಹೋದರರಿಗೆ ಸೇರಿದ ಎರಡು ಕುಲುಮೆಗಳಿರುವುದನ್ನು ಕಾಣುತ್ತೇವೆ. ಇವರ ಕುಲುಮೆಗಳು ಸಹ ಒಂದೇ ರೀತಿಯಾಗಿದ್ದು ಯಾವುದೇ ವಿಶೇಷತೆಯಿಂದ ಕೂಡಿರುವುದಿಲ್ಲ. ಈ ಸಮುದಾಯದ ಕುಲುಮೆಗಳ ವಿವರ ಮತ್ತು ವಂಶಾವಳಿಯನ್ನು (ಅನುಬಂಧ–೮ರಲ್ಲಿ) ಗಮನಿಸಿ.

ಕುಲುಮೆಯಲ್ಲಿ ಪರಿಕರಗಳನ್ನು ತಯಾರಿಸುವ ವಿಧಾನಗಳು

ಪ್ರಾಗೈತಿಹಾಸಿಕ ಕಾಲದಿಂದಲೂ ಕುಲುಮೆಯಲ್ಲಿ ಕಬ್ಬಿಣವನ್ನು ಕಾಸಿ ಕಬ್ಬಿಣದ ಪರಿಕರಗಳನ್ನು ತಯಾರಿಸುವ ವಿಧನಾವನ್ನು ಕಾಣುತ್ತೇವೆ. ಕುಲುಮೆಗಳು ಪ್ರಾಚೀನ ಕಾಲದಲ್ಲಿ ಕಬ್ಬಿಣ ತಯಾರಿಸುವುದಕ್ಕೆ ಅವಶ್ಯಕವಾದ ಉರುವಲು, ಇದ್ದಿಲು, ಸುಣ್ಣದ ಕಲ್ಲು, ಬೆಣಚುಕಲ್ಲು ಮತ್ತು ಕಬ್ಬಿಣಾಂಶವಿರುವ ಅದಿರನ್ನು ಪದರ ಪದರಾಗಿ ಒಲೆಯಲ್ಲಿ ಹಾಕಿ, ಶಾಖವನ್ನು ಉಣಿಸುತ್ತಿದ್ದರು. ಆಗ ಮುದ್ದೆ ಕಬ್ಬಿಣ ಬರುತ್ತಿತ್ತು ಎಂದು ವಕ್ತೃಗಳು ತಿಳಿಸುತ್ತಾರೆ. ಕುಲುಮೆಯಿಂದ ಪಡೆದ ಕಬ್ಬಿಣವನ್ನು ಮತ್ತೆ ಚಮ್ಮಟಿಗೆಯಿಂದ ತಟ್ಟಿ ತಟ್ಟಿ ಬೇಕಾದ ಆಕಾರವನ್ನು ಕೊಡುತ್ತಿದ್ದರು. ಹಾಗೆಯೆ ಕಬ್ಬಿಣದಿಂದ ಹಲವಾರು ಪರಿಕರಗಳನ್ನು ಪಡೆಯುತ್ತಿದ್ದುದಾಗಿ ತಿಳಿದು ಬರುತ್ತದೆ. ಹೆಮಟೈಟ್ ಅಂಶವಿರುವ ಕಬ್ಬಿಣದ ಅದಿರಿನಿಂದ ಕೇವಲ ದಿನನಿತ್ಯದ ಗೃಹಪಯೋಗಿ ಮತ್ತು ಕೃಷಿಗೆ ಬೇಕಾಗುವ ಪರಿಕರಗಳನ್ನು ಪಡೆಯುತ್ತಿದ್ದರು. ಮ್ಯಾಂಗನೀಸ್ ಅಂಶವಿರುವ ಅದರಿನಂದ ಪಡೆದ ಕಬ್ಬಿಣವು ಗಾಢವಾಗಿರುತ್ತದೆ. ಮತ್ತು ಬಿರುಸಾಗಿದ್ದು, ಹರಿತವಾಗಿರುತ್ತದೆ. ಹಾಗಾಗಿ ಯುದ್ಧಕ್ಕೆ ಬೇಕಾದ ಕೆಲ ಸಾಮಾಗ್ರಿಗಳನ್ನು ತಯಾರಿಸುತ್ತಿದ್ದುದಾಗಿ ತಿಳಿದುಬರುತ್ತದೆ. ಮತ್ತು ಉಳಿ, ಗರಗಸ, ಆರ ಮುಂತಾದ ಹರಿತವಾದ ಪರಿಕರಗಳನ್ನು ತಯಾರಿಸುವುದಕ್ಕೆ ಬಳಕೆಯಾಗುತ್ತಿತ್ತು. ಈ ತಯಾರಿಕೆಯು ಪೂರ್ವ ಪ್ರಾಚೀನ ಕಾಲದಿಂದಿಡಿದು ಇಂದಿನವರೆಗೂ ನಡೆಯುತ್ತಲೆ ಬರುತ್ತಿರುವುದನ್ನು ಕಾಣುತ್ತೇವೆ. ಆದರೆ ಆಯಾ ಕಾಲಮಾನದ ಪರಿಸ್ಥಿತಿಗೆ ಹೊಂದುವಂತಹ ಮತ್ತು ಅವಶ್ಯವಾದ ಪರಿಕರಗಳನ್ನು ತಯಾರಿಸುವುದು ರೂಢಿಯಾಗಿರುವುದನ್ನು ಇತಿಹಾಸದ ಪುಟಗಳಿಂದ ತಿಳಿಯಬಹುದು. ಹೀಗೆ ಕುಲುಮೆಯಿಂದ ತಯಾರಾಗುವ ಪರಿಕರಗಳು ಮಾನವನ ನಾಗರಿಕತೆಯ ವಿಕಾಸದಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತವೆ.

ಹಿಂದೆ ಪೂರ್ವ ಪ್ರಾಚೀನ ಕಾಲದಲ್ಲಿ ಹೆಚ್ಚಾಗಿ ಕೃಷಿಗೆ ಮತ್ತು ಬೇಟೆಗೆ ಅವಶ್ಯವಾದ ಕಬ್ಬಿಣದ ಪರಿಕರಗಳನ್ನು ತಯಾರಿಸುತ್ತಿದ್ದರು. ಕಾರಣ ಅದು ಮಾನವನು ಕಾಡು ಸಂಸ್ಕೃತಿಯನ್ನು ತೊರೆದು ನವನಾಗರಿಕತೆಯ ಸಂಸ್ಕೃತಿಯ ಕಡೆಗೆ ಇಟ್ಟ ಮೊದಲ ಹೆಜ್ಜೆಯಾಗಿತ್ತು. ತದನಂತರ ಯುದ್ಧಗಳಿಗೆ ಬೇಕಾದ ಕಬ್ಬಿಣದ ಪರಿಕರಗಳನ್ನು ತಯಾರಿಸಲು ಪ್ರಾರಂಭಿಸುತ್ತಾನೆ. ಹೀಗೆ ಮುಂದೆ ಬದಲಾಗುವ ಸನ್ನಿವೇಶದಲ್ಲಿ ಹಲವಾರು ವಿಧವಿಧವಾದ ಕಬ್ಬಿಣದ ಪರಿಕರಗಳನ್ನು ತಯಾರಿಸುವ ಗೋಜಿಗೆ

ಬೀಳುತ್ತಾನೆ. ಒಟ್ಟಾರೆಯಾಗಿ ಮಾನವ ಪ್ರಾಗೈತಿಹಾಸಿಕ ಕಾಲದಿಂದ ಹಿಡಿದು ಇಂದಿನವರೆಗೂ ಹಲವಾರು ವಿಧಗಳಲ್ಲಿ ಕಬ್ಬಿಣದ ಪರಿಕರಗಳನ್ನು ತಯಾರಿಸಿರುವುದನ್ನು ಕಾಣುತ್ತೇವೆ. ಈ ಪರಿಕರಗಳನ್ನು ಬಳಸುವುದರ ಮೇರೆಗೆ ನಾವು ನಾಲ್ಕು ರೀತಿಯ ಪರಿಕರಗಳನ್ನಾಗಿ ವಿಂಗಡಿಸಬಹುದಾಗಿದೆ.

ಅ] ಕೃಷಿಗೆ ಸಂಬಂಧಿಸಿದ ಪರಿಕರಗಳು : ಜಿಗಳಿ, ರಂಟೆ [ಮುಂಜಣ], ಕುಳ ಕುಂಟಿಕುಳ [ಹತಗುಡ], ಪಿಳಗುಡ, ಹೆಗ್ಗುಡ, ಒಳಗಾಡ, ಡಮಗುಂಟೆ, ಬಂಡಿಚಕ್ಕಡಿಗೆ ಹೊಂದಿಕೊಂಡಂತೆ ಗಾಲಿಯ ಅಚ್ಚು, ಗಾಲಿಯ ಗಡ್ಡು ಕಟ್ಟು, ಬಾಯಕಟ್, ಕಿವಿಬಿಳಿ, ಕಡೆಗೀಲು, ಎತ್ತಿಗೆ ಸಂಬಂದಿಸಿದ ಮೇವುಕತ್ತರಿ, ಕುರುಪಿ, ಕುಡಗೋಲು, ನೆರೆಕೋಲು, ಗುದ್ದಲಿ, ಸಲಿಕೆ, ಕೊಡಲಿ, ಏತ ನೀರಾವರಿಗೆ ದೋಣಿ ಮತ್ತು ದೋಣಿ ಚಿಲಕಗಳು, ಬೆಲ್ಲ ತಯಾರಿಕೆಯಲ್ಲಿ ಬೆಲ್ಲದ ಕೊಪ್ಪರಿಕೆ, ಬೆಲ್ಲದ ಪೆಂಟಿ ಮಾಡಲು ಬಕೆಟ್ ಸಾಚಗಳು ಮತ್ತು ಪಿಕಾಸಿ [ಬಾಯಿಗುದ್ದಲಿ], ಕೆಳವು ಕರ್ಚಿಗೆ, ಕುಂಟಿತಾಳ, ಗಡ್ಡಿಕುಂಟಿತಾಳ, ಕೀರುಗುಂಡಿ ಕುಡ, ೪ ಗೇಣಿನ ಕುಂಟಿ ತಾಳ [ಹರಗುವುದು] ೫" ಗೇಣಿನ ಕುಂಟಿತಾಳ [ಬಿತ್ತುವುದು], ಕೊರಗಿ ಕುಡ [ಮುಂಜಣ] ಮುಂತಾದ ಪರಿಕರಗಳನ್ನು ಉತ್ಪಾದಿಸಲಾಗುತ್ತದೆ.

ಆ] ನಿತ್ಯಪ್ರಯೋಗಿ ಗೃಹಬಳಕೆಗೆ ಸಂಬಂಧಿಸಿದ ಪರಿಕರಗಳು : ತರಕಾರಿ ಕತ್ತರಿಸುವ ಈಳಿಗೆ, ಕುಡುಗೋಲು, ಬಾಗಿಲಿನ ಮೊಳೆಗಳು, ಚಿಲಕಗಳು, ನಾಗವಾಸ, ಗೋಡೆಯ ಮೊಳೆ, ಹಾರಿ, ನಾಗವಾಡ ಸರಪಳಿ, ಕಿಟಕಿ ಮುಚ್ಚುವ ಮರಡು, ವನಕೆಮಳೆ, ತೂಗುವ ಮಣಿಯ ಮೇಲಿನ ಬಳೆಗಳು, ಊಟದ ಮಣಿ ಮೇಲಿನ ಬಳೆಗಳು, ಪಟ್ಟಿಗೆಯ ಚಿಲಕ, ಬೀಸುವ ಕಲ್ಲು ಮೊಳೆ, ಬಾಗಿನಂದ ಕಬ್ಬಿಣದ ಗುಳಿ ಮುಂತಾದವು.

ಇ] ಯುದ್ಧಗಳಿಗೆ ಸಂಬಂಧಿಸಿದ ಸಾಮಾಗ್ರಿಗಳು : ಭರ್ಚಿ ಮೊನೆಗಳು, ಕರಮಳ, ತಲವಾರ ಎಂಬ ಕತ್ತಿಗಳು, ಸಬಳ, ಕೂಲ, ಭಲ್ಯ, ಶೂಲ, ಕರ್ಟಡೆ, ಶೂಲಿ, ಸುರಿಗೆ, ಸುಸಲ, ಭಿಂಡಿಮಳ, ಈಟಿ, ಶಕ್ತಿ, ಖಡ್ಗ, ತ್ರಿಶುಲ, ಚಾಕು, ಉಳಿಗಳು, ಪಂಚಾರಾಯುಧ ತೋಮರ, ಮುಸಂಡಿ, ಮುದ್ಗರ್, ಗುರಾಣಿ, ಬಂದೂಕುಗಳು, ಮತ್ತು ತೋಪು ಮುಂತಾದವುಗಳು.[೩೫]

ಈ] ಧಾರ್ಮಿಕ ಕೇಂದ್ರಗಳಿಗೆ ಸಂಬಂಧಿಸಿದ ಪರಿಕರಗಳು : ದೇವಾಲಯದ ಘಂಟೆಯೊಳಗಿನ ನಾಲಿಗೆ, ಶಾಲೆಯಲ್ಲಿನ ಕಬ್ಬಿಣದ ತೂಗು, ಬಾರಿಸುವ ಸುತ್ತಿಗೆ ಕಳಸದ ಕಬ್ಬಿಣದ ಸರಪಳಿ, ದೇವರ ತ್ರಿಶುಲ ಇತ್ಯಾದಿ.

ಉ] ವಾಣಿಜ್ಯ ವಹಿವಾಟಿಗೆ ಸಂಬಂಧಿಸಿದ ಪರಿಕರಗಳು : ಸೇರು, ಪಾವು, ಪಡಿ, ಕಾಲುಪಾವು, ಚಪಾಕು, ತಕ್ಕಡಿ, ತಕ್ಕಡಿಕಲ್ಲು, ಉಣ್ಣೆ ಕತ್ತರಿಸುವ ಕತ್ತರಿ, ಕುರುಬರ ದೋಟಿ, ಕೊಡಲಿ, ಚಪಕೊಡಲಿ, ವಿಳ್ಯದ ಎಲೆ ಕತ್ತರಿಸುವ ಕತ್ತರಿ, ಅಡಿಕೆ ಕತ್ತರಿಸುವ ಅಡಕತ್ತರಿ. ಉಗುರು ಕತ್ತರಿಸುವ ಸಾಧನ, ಒಡ್ಡರ ಸುತ್ತಿಗೆ, ಶಿಲ್ಪಿಗಳ ಸುತ್ತಿಗೆ, ಉಳಿ, ಚಾನ, ಸಣ್ಣ ಹಾರಿ, ಗರಗಸ, ಇಕ್ಕಳ, ಚಮ್ಮಟಿಗೆ, ಗುದ್ದಿ, ಪಾಗರಿ, ಅಡಿಗಲ್ಲು ಬಕ್ಕಸಕೋಲು, ತಾಂಡಾಸ, ಹೆಗ್ಗಿಕ್ಕಳ, ಜಗ್ಗುಂಡಿ, ಮುಂತಾದವು ಹೀಗೆ ಕಮ್ಮಾರರು ತಯಾರಿಸುವ ಪರಿಕರಗಳನ್ನು ಗುರುತಿಸಬಹುದು.

ಪ್ರಾಚೀನ ಕಾಲದಿಂದ ಕಮ್ಮಾರರು ಕಬ್ಬಿಣದ ಪರಿಕರಗಳನ್ನು ತಯಾರಿಸುತ್ತ ಬಂದಿದ್ದರೂ, ಕಾಲಕ್ರಮೇಣ ಕೆಲ ಪರಿಕರಗಳ ಬಳಕೆಯು ಆಯಾ ಕಾಲದಲ್ಲಿ ಸ್ಥಗಿತಗೊಂಡಿರುವುದನ್ನು ಅರಿಯಬಹುದು, ಪ್ರಾಚೀನ ಕಮ್ಮಾರಿಕೆಯಲ್ಲಿ ತಯಾರಾಗುತ್ತಿದ್ದ ಪರಿಕರಗಳ ವಿಧಾನಗಳ ಕುರಿತ ಲೇಖನವಾಗಲಿ, ಮಾಹಿತಿಯಾಗಲಿ ದೊರಕುವುದಿಲ್ಲ. ಇದು ಪ್ರಾಚೀನ ಕಾಲದ ಕಮ್ಮಾರರ ಅಜ್ಞಾನವನ್ನು ತೋರಿಸುತ್ತದೆ. ಇಂದಿಗೂ ಎಷ್ಟೇ ನುರಿತ ಕಮ್ಮಾರರಿದ್ದರೂ, ತಾವು ತಯಾರಿಸುವ ಪರಿಕರಗಳ ಕುರಿತು ವಿಧಾನಗಳನ್ನು ದಾಖಲಿಸುವುದು ಸಾಧ್ಯವಾಗಿಲ್ಲ. ಹಾಗಾಗಿ ಇಂದಿನ ಕಮ್ಮಾರರಿಗೆ ಪ್ರಾಚೀನ ಕಾಲದಲ್ಲಿ ಬಳಕೆಯಾಗುತ್ತಿದ್ದ ಕೆಲ ಪರಿಕರಗಳ ಕುರಿತ ಮಾಹಿತಿ, ಮತ್ತು ತಯಾರಿಸುವ ವಿಧಾನಗಳು ತಿಳಿದಿಲ್ಲ ಎಂದು ವ್ಯಕ್ತವಾಗುತ್ತದೆ. ಈ ಅಂಶವು ಹೊಸಪೇಟೆ ತಾಲೂಕಿನಲ್ಲಿ ನಡೆಸುತ್ತಿರುವ ಕುಲುಮೆ ವೃತ್ತಿಯ ಕಮ್ಮಾರರಿಗೆ ಅನ್ವಯಿಸುತ್ತದೆ. ಆದಾಗ್ಯೂ ಎಲ್ಲ ಸಮುದಾಯಗಳು ತಮ್ಮ ಕುಲುಮೆಗಳಲ್ಲಿ ತಯಾರಿಸಲಾಗುವ ಕಬ್ಬಿಣ ಪರಿಕರಗಳ ವಿಧಾನಗಳು ಒಂದೇ ತೆರನಾಗಿದೆ. ಇವರುಗಳು ಇಂದು ಒಟ್ಟಾರೆಯಾಗಿ ತಯಾರಿಸುವ ಕಬ್ಬಿಣದ ಪರಿಕರಗಳ ವಿಧಾನಗಳನ್ನು ಇಲ್ಲಿ ವಿವರಿಸಲಾಗಿದೆ.

ತರಕಾರಿ ಕತ್ತರಿಸುವ ಈಳಿಗೆ : ಪ್ರಾರಂಭದಲ್ಲಿ ಕುಲುಮೆಯಲ್ಲಿ ಕಬ್ಬಿಣ ಕಾಸುವುದಕ್ಕೆ ಬೇಕಾದ ಕಚ್ಚಾ ವಸ್ತುಗಳನ್ನು ಹಾಕಿ ಬೆಂಕಿ ಹಚ್ಚಿ ಸಿದ್ಧತೆ ಮಾಡಿಕೊಳ್ಳಬೇಕಾಗುತ್ತದೆ. ನಂತರ ೧½ ಅಡಿ ಉದ್ದದ ಮತ್ತು ½ ದಾರ ದಪ್ಪ ಅಳತೆಯ ಕಬ್ಬಿಣದ ಪ್ಲೇಟನ್ನು ತೆಗೆದುಕೊಂಡು ಕಾದ ಬೆಂಕಿಯಲ್ಲಿಡಬೇಕು. ಮೊದಲ ಕಾವಿನಲ್ಲಿ ಪ್ಲೇಟ್‌ನ್ನು ಚಮ್ಮಟಿಗೆಯಿಂದ ಬಡಿದು ಬಾಗಿಸಬೇಕು. ಎರಡನೆ ಕಾವಿನಲ್ಲಿ ಕೊಬ್ಬರಿ ತಿಕ್ಕುವ ಭಾಗವನ್ನು ಚಾಣದಿಂದ ಕತ್ತರಿಸಿ, ವೃತ್ತಕಾರದಲ್ಲಿ ಬರುವಂತೆ ಮಾಡಬೇಕು. ತದನಂತರ 'V' ಆಕಾರದಲ್ಲಿ ವೃತ್ತದುದ್ದಕ್ಕೂ ಕತ್ತರಿಸಬೇಕು. ಮೂರನೆಯ ಕಾವಿಗೆ ಈಳಿಗೆಯಿಂದ ಕತ್ತರಿಸುವ ಭಾಗವನ್ನು ಚಮ್ಮಟಿಗೆಯಿಂದ ಬಡಿದು ತೆಳ್ಳಗೆ ಮಾಡಿಕೊಳ್ಳಬೇಕು. ನಾಲ್ಕನೆಯ ಕಾವಿಗೆ ಈಳಿಗೆಯನ್ನು ಜೋಡಿಸಲು ಪಾಗರಿಯಿಂದ ರಂಧ್ರವನ್ನು ಮಾಡಿ ಜೋಡಿಸಬೇಕು. ಕೊನೆಯಲ್ಲಿ ಕಾಸಿ ನೀರಿನ ಬಾನಿಯಲ್ಲಿ ತಣಿಸಬೇಕು. ಅನಂತರದಲ್ಲಿ ಅಂದಿಂದ ಈಳಿಗೆಯ ಕತ್ತರಿಸುವ ಮುಂಭಾಗವನ್ನು ನಯವಾಗಿ ಉಜ್ಜಿ ಹರಿತಗೊಳಿಸಬೇಕು. ಇದೇ ವಿಧಾನವನ್ನು ಬಳಸಿ ವಿಧ ವಿಧವಾದ ಈಳಿಗೆಗಳನ್ನು ತಯಾರಿಸಬಹುದು.

ಕುಡುಗೋಲು : ೧½ ಅಡಿ ಉದ್ದದ ಮತ್ತು ¼ ಇಂಚು ದಪ್ಪದ ಒಂದು ಪ್ಲೇಟನ್ನು ತೆಗೆದುಕೊಂಡು, ಸಿದ್ಧಪಡಿಸಿದ ಒಲೆಗೆ ಹಾಕಬೇಕು. ಎರಡನೆಯ ಕಾವಿನಲ್ಲಿ ಭಾಗಿಸಿ ವಾಯಿಯನ್ನು ತೆಳು ಮಾಡಬೇಕು. ಮೂರನೆಯ ಕಾವಿನಲ್ಲಿ ಪ್ಲೇಟಿನ ಕೆಳಗಿನ ಭಾಗವನ್ನು ಬಡಿದು, ಚೂಪಾದ ತುದಿ ಮಾಡಿ ಹಿಡಿಯಲ್ಲಿ ಹಾಕಬೇಕು. ಕೊನೆಯಲ್ಲಿ ಸ್ವಲ್ಪ ಕಾಸಿ ನೀರಿನ ಬಾನಿ ತಣಿಸಿ, ಆರದಿಂದ ನಯವಾಗಿ ಉಜ್ಜಿ ಹರಿತಗೊಳಿಸಬೇಕು. ಇದೇ ವಿಧಾನ ಬಳಸಿ ಹಲವಾರು ವಿಧದ ಕುಡಗೋಲುಗಳನ್ನು ತಯಾರಿಸಬಹುದು.

ಬಾಗಲಿನ ಮೊಳೆಗಳು : ೪ ಅಡಿಯ ಒಂದು ತಂತಿಯನ್ನು ತೆಗೆದುಕೊಂಡು ಒಲೆಯಲ್ಲಿಟ್ಟು ಕಾಸಿ, ಇಕ್ಕಳದಿಂದ ತೆಗೆದು ಒಂದು ಭಾಗವನ್ನು ವೃತ್ತಾಕಾರದಲ್ಲಿ ಭಾಗಿಸಬೇಕು. ಮತ್ತೊಂದು

ಭಾಗಕ್ಕೆ ಹರಿತವಾಗುವವರೆಗೂ ಬಡಿಯಬೇಕು. ಇದೇ ವಿಧಾನವನ್ನು ಬಳಸಿ ಬೇರೆ ಬೇರೆ ರೀತಿಯ ಮೊಳೆಗಳನ್ನು ತಯಾರಿಸಬಹುದು.

ಚಿಲಕಗಳು : ೪ ಅಡಿ ಉದ್ದದ ಮತ್ತು ೮ ಮಿ.ಮೀ ದಪ್ಪದ ಮೂರು ಕಂಬಿಗಳನ್ನು ತೆಗೆದುಕೊಂಡು ಒಲೆಯಲ್ಲಿ ಕಾಸಬೇಕು. ಮೊದಲ ಕಾವಿನಲ್ಲಿ ಒಂದು ಕಂಬಿಯಿಂದ ನಾಗಾವಾಸವನ್ನು ಮಾಡಿಕೊಳ್ಳಬೇಕು. ನಾಗಾವಾಸದ ಒಂದು ಭಾಗವನ್ನು ಚೂಪಾಗಿ ಮಾಡಬೇಕು. ಮತ್ತೊಂದು ಬಾಗವನ್ನು ವೃತ್ತವನ್ನಾಗಿ ಭಾಗಿಸಬೇಕು. ಎರಡನೆಯ ಕಾವಿನಲ್ಲಿ ಎರಡನೆಯ ಕಂಬಿಯನ್ನು ಭಾಗಿಸಿ ನಾಗಾವಾಸದಲ್ಲಿ ಪೋಣಿಸಿ ಜೋಡಿಸಬೇಕು [ಹೆಚ್ಚು ಶಾಖವನ್ನು ಉಣಿಸಿದರೆ ಸುಲಭವಾಗಿ ಜೋಡುತ್ತವೆ ಎಂದು ವಕ್ತ್ಯಗಳು ತಿಳಿಸುತ್ತಾರೆ] ಮೂರನೆಯ ಕಾವಿನಲ್ಲಿ ಮೂರನೆಯ ಕಂಬಿಯನ್ನು ಭಾಗಿಸಿ ನಾಗವಾಸದಲ್ಲಿ ಪೋಣಿಸಿರುವ ಕಂಬಿಗೆ ಪೋಣಿಸಿ ಜೋಡಿಸಬೇಕು. ಕೊನೆಯಲ್ಲಿ ತಯಾರಾದ ಚಿಲಕವನ್ನು ನೀರಿನಲ್ಲಿ ತಣಿಸಬೇಕು. ಇದೇ ರೀತಿಯ ವಿಧಾನವನ್ನು ಬೇರೆ ಬೇರೆ ಚಿಲಕಗಳನ್ನು ಮಾಡುವುದಕ್ಕೆ ಬಳಸಲಾಗುತ್ತದೆ.

ನಾಗವಾಸ : ಬೇಕಾದ ಅಳತೆಯ ಒಂದು ಕಬ್ಬಿಣದ ಕಂಬಿಯನ್ನು ತೆಗೆದುಕೊಂಡು ಒಲೆಯಲ್ಲಿ ಕಾಸಬೇಕು. ಒಂದನೆಯ ಕಾವಿನಲ್ಲಿ ಕಂಬಿಯ ಒಂದು ಭಾಗವನ್ನು ವೃತ್ತವನ್ನಾಗಿ ಮಾಡಬೇಕು. ಇನ್ನೊಂದು ಭಾಗದ ತುದಿಯನ್ನು ಚೂಪಾಗಿ ಮಾಡಬೇಕು. ಕೊನೆಯಲ್ಲಿ ನೀರಿನಲ್ಲಿ ತಣಿಸಬೇಕು.

ಗೋಡೆಯ ಮಾಳ : ಒಂದು ಅಡಿ ಉದ್ದ ಮತ್ತು ೧೨ ಮಿ.ಮೀ ದಪ್ಪ ಅಳತೆಯ ಎರಡು ಕಂಬಿಗಳನ್ನು ತೆಗೆದುಕೊಂಡು ಕುಲುಮೆ ಒಲೆಯಲ್ಲಿ ಕಾಸಬೇಕು. ಮೊದಲನೆಯ ಕಾವಿನಲ್ಲಿ ಕಂಬಿಯ ಮುಂಭಾಗವನ್ನು 'L' ಆಕಾರದಲ್ಲಿ ಭಾಗಿಸಬೇಕು. ಮತ್ತು ಎರಡನೆಯ ಕಾವಿನಲ್ಲಿ ಕಂಬಿಯ ಹಿಂಭಾಗವನ್ನು ಚೂಪಾಗಿ ಮಾಡಬೇಕು. ಮೊಳೆಯನ್ನು ಪ್ಲೇಟ್ ಅಥವಾ ಕಂಬಿಯಿಂದಲೂ ಮಾಡಬಹುದು. ಕಂಬಿಯನ್ನು ಚಮ್ಮಟಿಗೆಯಿಂದ ಬಡಿದು ಪ್ಲೇಟ್ ಮಾಡಲೂಬಹುದು.

ನಾಗವಾಡ ಸರಪಳಿ : ಈ ಸರಪಳಿಯ ಅಂದಾಜು ೧೦ ಅಡಿ ಉದ್ದವಿರುತ್ತದೆ. ಇದು ಕಂಬಿಗಳಿಂದ ಮಾಡಿದ ವೃತ್ತಗಳಿಂದ ಕೂಡಿದ್ದು ಒಂದೊಂದು ವೃತ್ತವು ೪ ಅಡಿಯ ಕಂಬಿಗಳಿಂದ ಮಾಡಲ್ಪಟ್ಟಿರುತ್ತವೆ. ಇದಕ್ಕೆ ನಾಗವಾಡ ಎಂದು ಕರೆಯುತ್ತಾರೆ. ಇದನ್ನು ಮನೆಯಲ್ಲಿ ತೂಗುವ ಮಣಿಗೆ ಹಾಕಲಾಗುತ್ತದೆ. ಒಂದು ಸರಪಳಿಯಲ್ಲಿ ಕನಿಷ್ಟ ೫೦ ರಿಂದ ಗರಿಷ್ಟ ೨೦೦ರವರೆಗೂ ನಾಗವಾಡಗಳಿರುತ್ತವೆ. ಮೊದಲೆ ಗೊತ್ತು ಮಾಡಿದ ಅಳತೆಯ ಕಂಬಿಗಳನ್ನು ತೆಗೆದುಕೊಂಡು ಒಲೆಯಲ್ಲಿ ಒಂದರಂತೆ ಒಂದಾಗಿ ಕಾಯಿಸಬೇಕು. ಮೊದಲನೆಯ ಕಾವಿನಲ್ಲಿ ಕಂಬಿಯನ್ನು ಭಾಗಿಸಿ ಎರಡನೆಯ ಕಾವಿನಲ್ಲಿ ಜೋಡಿಸಬೇಕು. ಹೀರೆ ಪ್ರತಿಯೊಂದು ಕಂಬಿಯನ್ನು ನಾಗವಾಡವಾಗಿ ಬದಲಿಸುವಾಗ ಈ ವಿಧಾನವನ್ನು ಪುನರಾವರ್ತನೆ ಮಾಡಬೇಕು ಮತ್ತು ಜೋಡಿಸಬೇಕು.

ಕಿಟಕಿ ಮುಚ್ಚುವ ಮರಡು : ಹತ್ತು ಇಂಚು ಉದ್ದದ ಪ್ಲೇಟನ್ನು ತೆಗೆದುಕೊಂಡು, ಒಲೆಯಲ್ಲಿ ಕಾಸಬೇಕು. ಮೊದಲನೆಯ ಕಾವಿನಲ್ಲಿ ಪ್ಲೇಟಿನ ಹಿಂಭಾಗವನ್ನು ಬಡಿದು ತೆಳ್ಳಗೆ ಮಾಡಿ ಒಂದು

ಕಡೆ ಚೂಪಾಗಿ ಮಾಡಬೇಕು. ಎರಡನೆಯ ಕಾವಿನಲ್ಲಿ ಪ್ಲೇಟಿನ ಮುಂಭಾಗವನ್ನು ಬಡಿದು 'L' ಆಕಾರದಲ್ಲಿ ಭಾಗಿಸಬೇಕು. ಮೂರನೇಯ ಕಾವಿನಲ್ಲಿ ಪಾಗರಿಯಿಂದ ಮೂರು ಕಡೆ ರಂಧ್ರವನ್ನು ಮಾಡಬೇಕು.

ತೊಟ್ಟಿಲ ಕೊಂಡಿ : ಹದಿನಾರು ಇಂಚು ಉದ್ದ ಮತ್ತು ೪ ಇಂಚು ದಪ್ಪದ ಕಂಬಿಯನ್ನು ತೆಗೆದುಕೊಂಡು ಒಲೆಯಲ್ಲಿಟ್ಟು ಕಾಸಬೇಕು. ಮೊದಲನೆಯ ಕಾವಿನಲ್ಲಿ ಬೇಕಾದ ಆಕಾರದಲ್ಲಿ ಭಾಗಿಸಬೇಕು. ಎರಡನೆ ಕಾವಿನಲ್ಲಿ ಎರಡು ತುದಿಗಳನ್ನು ಬೇಕಾದ ಆಕಾರದಲ್ಲಿ ಪೋಣಿಸಬೇಕು. ಮೂರನೇಯ ಕಾವಿನಲ್ಲಿ ತೂಗುವ ಮೊಳೆಯನ್ನು ಪೋಣಿಸಿ ಜೋಡಿಸಬೇಕು. ನಂತರ ನೀರಿನಲ್ಲಿ ತಣಿಸಬೇಕು. ಈ ವಿಧಾನವನ್ನು ಬಳಸಿ ವಿಧವಿಧವಾದ ತೊಟ್ಟಿಲ ಕೊಂಡಿಗಳನ್ನು ತಯಾರಿಸಬಹುದು.

ಒನಕೆ ಬಳೆ : ೮ ಇಂಚು ಉದ್ದದ [೪ ಇಂಚು ಅಗಲ ಮತ್ತು ೧ ಇಂಚು ಉದ್ದ] ಪ್ಲೇಟನ್ನು ತೆಗೆದುಕೊಂಡು ಕುಲುಮೆಯ ಒಲೆಯಲ್ಲಿ ಕಾಸಬೇಕು. ಮೊದಲನೆಯ ಕಾವಿನಲ್ಲಿ ಬಡಿದು ಭಾಗಿಸಬೇಕು. ಎರಡನೆಯ ಕಾವಿನಲ್ಲಿ ಜೋಡಿಸಬೇಕು. ಹೀಗೆ ಎರಡು ಬಳೆಗಳನ್ನು ಮಾಡಬೇಕಾಗುತ್ತದೆ. ತಯಾರಾದ ಬಳೆಗಳನ್ನು ಒನಕೆಯ ಎರಡು ತುದಿಗಳಲ್ಲಿ ಸೇರಿಸಬೇಕು.

ಹಾರಿ : ೧೬ ಇಂಚು ಉದ್ದ ಮತ್ತು ೪ ಇಂಚು ದಪ್ಪದ ಕಂಬಿಯನ್ನು ತೆಗೆದುಕೊಂಡ ಕುಲುಮೆ ಒಲೆಯಲ್ಲಿ ಕಾಸಬೇಕು. ಮೊದಲನೆಯ ಕಾವಿನಲ್ಲಿ ಬಡಿದು ತಲೆಯನ್ನು ಮಾಡಿಕೊಳ್ಳಬೇಕು. ಎರಡನೆಯ ಕಾವಿನಲ್ಲಿ ಹಿಂಭಾಗವನ್ನು ಚೂಪಾಗಿ ಮಾಡಬೇಕು. ನಂತರ ನೀರಿನಲ್ಲಿ ತಣಿಸಬೇಕು. ಈ ವಿಧಾನವನ್ನು ಬಳಸಿ ವಿಧವಿಧವಾದ ಬೇಕಾದ ಆಕಾರಗಳಲ್ಲಿ ಹಾರಿಗಳನ್ನು ರಚಿಸಬಹುದು.

ತೂಗುವ ಮಣಿಯ ಮೇಲಿನ ಬಳೆಗಳು : ಈ ಬಳೆಗಳು ೪ ಇಂಚು ಉದ್ದ ಮತ್ತು ೪ ಇಂಚು ವೃತ್ತಗಳಿಂದ ಕೂಡಿರುತ್ತದೆ. ಬೇಕಾದ ಅಳತೆಯ ಕಂಬಿಯನ್ನು ತೆಗೆದುಕೊಂಡು ಕುಲುಮೆಯಲ್ಲಿ ಕಾಸಬೇಕು. ಮೊದನೆಯ ಕಾವಿನಲ್ಲಿ ಭಾಗಿಸಬೇಕು. ಎರಡನೆಯ ಕಾವಿನಲ್ಲಿ ಭಾಗಿಸಿದ ಬಳೆಗಳನ್ನು ಜೋಡಿಸಬೇಕು. ನಂತರ ನೀರನ್ನುಣಿಸಬೇಕು.

ಪೆಟ್ಟಿಗೆಯ ಚಿಲಕ : ೧೨ ಇಂಚು ಉದ್ದದ ಕಂಬಿಯನ್ನು ತೆಗೆದುಕೊಂಡು ಒಲೆಯಲ್ಲಿ ಕಾಸಬೇಕು. ಮೊದಲನೆಯ ಕಾವಿನಲ್ಲಿ ಜಾನದಿಂದ ಕತ್ತರಿಸಬೇಕು. ಎರಡನೆಯ ಕಾವಿನಲ್ಲಿ ತುಂಡು ಕಂಬಿಯನ್ನು ವೃತ್ತ ಅಥವಾ ಆಯತಕಾರದಲ್ಲಿ ಭಾಗಿಸಬೇಕು. ಮೂರನೆಯ ಕಾವಿನಲ್ಲಿ ಸಿದ್ಧವಾದ ನಾಗವಾಸದಲ್ಲಿ ಜೋಡಿಸಿ ಪೋಣಿಸಬೇಕು. ನಂತರ ನೀರುಣಿಸಬೇಕು ಹೀಗೆ ಬೇಕಾದ ರೀತಿಯಲ್ಲಿ ಚಿಲಕವನ್ನು ತಯಾರಿಸಬಹುದು.

ಸೇರು : ಹದಿನಾರು ಗೇಜಿನ ಮತ್ತು ಒಂದು ದಾರ ದಪ್ಪ ಅಳತೆಯ ಪ್ಲೇಟನ್ನು ತೆಗೆದುಕೊಂಡು ಚಮ್ಮಟಿಗೆಯಿಂದ ವೃತ್ತಾಕಾರವಾಗಿ ಭಾಗಿಸಬೇಕು. ನಂತರ ಪ್ಲೇಟಿನ ಎರಡು ತುದಿಗಳು ಸೇರಿದ ಜಾಗದಲ್ಲಿ ಅವಶ್ಯವಾದ ರಂಧ್ರಗಳನ್ನು ಮಾಡಿ ಅವುಗಳಲ್ಲಿ ಮೊಳೆಗಳನ್ನು ಹೊಡೆದು ಪೋಣಿಸಬೇಕು. ವೃತ್ತಾಕಾರದ ಪ್ಲೇಟಿನ ತಳಭಾಗದಲ್ಲಿ ಒಂದು ವೃತ್ತಾಕಾರದ ಪ್ಲೇಟನ್ನು ಮೊದಲೇ ಕತ್ತರಿಸಿಕೊಂಡು

ಕೆಳಗಿನಿಂದ ಜೋಡಿಸಿ, ಪೋಣಿಸಬೇಕು. ಇದೇ ಮಾದರಿಯನ್ನು ಅನುಸರಿಸಿ ಪಾವು, ಪಡಿ, ಚಟಾಕು, ಕಾಲುಪಾವುಗಳನ್ನು ತಯಾರಿಸಬಹುದು.

ತಕ್ಕಡಿಕಲ್ಲು : ೫ ಇಂಚು ಸುತ್ತಳತೆಯ ಕಬ್ಬಿಣದ ಕಂಬಿಯನ್ನು ಪಡೆದುಕೊಂಡು ಒಲೆಯಲ್ಲಿ ಕಾಸಬೇಕು. ಮೊದಲನೆ ಕಾವಿನಲ್ಲಿ ಕಂಬಿಯನ್ನು ಕತ್ತರಿಸಬೇಕು, ಎರಡನೆಯ ಕಾವಿನಲ್ಲಿ ಕತ್ತರಿಸಿದ ಕಂಬಿಗಳನ್ನು ಬಡಿದು ವೃತ್ತ ಇಲ್ಲವೆ ಚೌಕಾಕಾರದ ಕಚ್ಚಾ ರೂಪದಲ್ಲಿ ತರಬೇಕು. ನಂತರ ನೀರಿನಲ್ಲಿ ತಣಿಸಬೇಕು. ಹೀಗೆ ಈ ವಿಧಾನವನ್ನು ಬಳಸಿ, ಬೇರೆ ಬೇರೆ ತೂಕದ ತಕ್ಕಡಿ ಕಲ್ಲುಗಳನ್ನು ಪಡೆಯಬಹುದು.

ಉಣ್ಣೆ ಕತ್ತರಿಸುವ ಕತ್ತರಿ : ಕಾಠಿಣ್ಯತೆಯನ್ನು ಹೊಂದಿರುವ ೧೬ ಗೇಜಿನ ಪ್ಲೇಟಿನ [ಸಾಮಾನ್ಯವಾಗಿ ಬೆಲ್ಲದ ಕೊಪ್ಪರಿಕೆಯಿಂದ] ತೆಗೆದುಕೊಂಡು ಒಲೆಯಲ್ಲಿ ಕಾಸಬೇಕು. ಮೊದಲನೆಯ ಕಾವಿನಲ್ಲಿ ಪ್ಲೇಟನ್ನು ಸೀಳಬೇಕು. ಎರಡನೆಯ ಕಾವಿನಲ್ಲಿ ಸೀಳಿದ ಪ್ಲೇಟಿನ ಮುಂಭಾಗವನ್ನು ತಟ್ಟಿ ತಟ್ಟಿ ಚೂಪಾಗಿಸಬೇಕು. ಮೂರನೆಯ ಕಾವಿನಲ್ಲಿ ಹಿಂಭಾಗವನ್ನು ಹಿಡಿಕೆ ಆಕಾರದಲ್ಲಿ ಭಾಗಿಸಬೇಕು. ಇದೇ ವಿಧಾನದಿಂದ ಇನ್ನೊಂದು ಸೀಳಿದ ಪ್ಲೇಟಿನಿಂದ ತಯಾರಿಸಬೇಕು. ತದನಂತರ ೪ನೇ ಕಾವಿನಲ್ಲಿ ಎರಡೂ ಪ್ಲೇಟ್‌ಗಳನ್ನು 'X' ಆಕಾರದಲ್ಲಿಟ್ಟು, ಎರಡು ಪ್ಲೇಟ್‌ಗಳು ಸಾಧುವ ಜಾಗದಲ್ಲಿ ರಂಧ್ರವನ್ನು ಮಾಡಿ ಮೊಳೆಯನ್ನು ಹೊಡೆಯಬೇಕು. ಆ ಮೇಲೆ ನೀರುಣಿಸಬೇಕು.

ಕುರುಬರ ದೋಟಿ : ಒಂದು ಅಡಿ ಉದ್ದದ ಪ್ಲೇಟನ್ನು ಪಡೆದುಕೊಂಡು ಒಲೆಯಲ್ಲಿ ಕಾಸಬೇಕು. ಮೊದಲನೆಯ ಕಾವಿನಲ್ಲಿ ಬಡಿದು ಭಾಗಿಸಬೇಕು. ಎರಡನೆಯ ಕಾವಿನಲ್ಲಿ ಚಾನದಿಂದ ರಂಧ್ರವನ್ನು ಮಾಡಬೇಕು. ಮೂರನೆಯ ಕಾವಿನಲ್ಲಿ ಬಾಗಿದ ಪ್ಲೇಟಿನ ಮುಂಭಾಗವನ್ನು ಚೂಪಾಗಿ ಮಾಡಬೇಕು. ಆ ಮೇಲೆ ದೋಟಿಗೆ ನೀರುಣಿಸಬೇಕು. ಕೊನೆಯಲ್ಲಿ ಅಂದಿಂದ ಚೆನ್ನಾಗಿ ಉಜ್ಜಿ ಹಂತವಾಗುವಂತೆ ಮಾಡಬೇಕು. ಇದನ್ನು ತಪ್ಪಲು ತೆಗೆಯಲು ಬಳಸುವರು.

ಕೊಡಲಿ : ನಾಲ್ಕು ಚಕ್ರಗಳ ವಾಹನದಲ್ಲಿ ಬಳಸುವ ಆಕ್ಸಲ್‌ನ್ನು ಬಳಸಿ ಕೊಡಲಿ ತಯಾರಿಸುತ್ತಾರೆ. ಕಾರಣ ಕೊಡಲಿ ಹರಿತವಾಗಿರಬೇಕು. ಈ ಗುಣಗಳನ್ನು ಆಕ್ಸಲ್ ಪ್ಲೇಟ್‌ಗಳು ಹೊಂದಿರುತ್ತವೆ ಎಂದು ವಕ್ತೃಗಳು ತಿಳಿಸುತ್ತಾರೆ.

ಕೊಡಲಿಗೆ ಬೇಕಾದ ಅಳತೆಯ ಆಕ್ಸಲ್ ಪ್ಲೇಟ್‌ನ್ನು ಪಡೆದು ಕುಲುಮೆ ಒಲೆಯಲ್ಲಿ ಕಾಸಬೇಕು. ಕಾದನಂತರ ಮೊದಲನೆ ಕಾವಿನಲ್ಲಿ ಪ್ಲೇಟ್‌ನ್ನು ಜಾನದಿಂದ ಕತ್ತರಿಸಬೇಕು. ಎರಡನೆಯ ಕಾವಿನಲ್ಲಿ ಪ್ಲೇಟನ್ನು ಸೀಳಿ ರಂಧ್ರ ಮಾಡಿ ತುಂಬನ್ನು ಮಾಡಬೇಕು. ಮೂರನೆಯ ಕಾವಿನಲ್ಲಿ ಬಡಿದು ತೆಳ್ಳಗೆ ಬಾಯಿಯನ್ನು ಮಾಡಬೇಕು. ನಾಲ್ಕನೆಯ ಕಾವಿನಲ್ಲಿ ಸ್ವಲ್ಪ ನೀರುಣಿಸಬೇಕು. ನಂತರ ಆರದಿಂದ ಸರಿಯಾಗಿ ಉಜ್ಜಿ ಚೂಪಾಗಿ, ಹರಿತವಾಗಿ ಮಾಡಬೇಕು. ಇದೇ ವಿಧಾನವನ್ನು ಬಳಸಿ ಬೇರೆ ಬೇರೆ ರೀತಿಯ ಕೊಡಲಿಗಳನ್ನು ಮಾಡಬಹುದು.

ಬೀಸುವ ಕಲ್ಲು ಮೊಳೆ : ೩ ಇಂಚು ಉದ್ದದ ಮತ್ತು ೪ ಇಂಚು ದಪ್ಪದ ತಂತಿಯನ್ನು ಪಡೆದು ಒಲೆಯಲ್ಲಿ ಕಾಸಬೇಕು. ನಂತರ ಮೊದಲನೆಯ ಕಾವಿನಲ್ಲಿ ಬಡಿದು ಬೇಕಾದ ಆಕಾರದ ಮೊಳೆಯನ್ನು ಪಡೆಯಬಹುದು. ಬೀಸುವ ಎರಡು ಕಲ್ಲುಗಳ ನಡುವೆ ಕೊಂಡಿಯಾಗಿ ಇದನ್ನು ಬಳಸಲಾಗುತ್ತದೆ.

ತಲವಾರ್ : ತಲವಾರ್‌ಗೆ ಬೇಕಾದ ಪ್ಲೇಟನ್ನು ಪಡೆದುಕೊಂಡು ಒಲೆಯಲ್ಲಿ ಕಾಸಬೇಕು. ಮೊದಲನೆಯ ಕಾವಿನಲ್ಲಿ ಸುತ್ತಿಗೆಯಿಂದ ಬಡಿದು ಭಾಗಿಸಬೇಕು. ಎರಡನೆಯ ಕಾವಿನಲ್ಲಿ ಮುಂಭಾಗ ವನ್ನು ಚೂಪಾಗುವಂತೆ ಮಾಡಬೇಕು. ಮೂರನೇಯ ಕಾವಿನಲ್ಲಿ ಹಿಂಭಾಗವನ್ನು ಬೇಕಾದ ಆಕಾರ ದಲ್ಲಿ ಬಾಗಿಸಬೇಕು. ನಾಲ್ಕನೆಯ ಕಾವಿನಲ್ಲಿ ಬಾಗಿದ ಪ್ಲೇಟಿನ ಮುಂಭಾಗವನ್ನು ಸರಿಯಾಗಿ ಬಡಿದು ನಯವಾಗಿ ಚೂಪಾಗಿ ಮಾಡಿಕೊಳ್ಳಬೇಕು. ಐದನೆಯ ಕಾವಿನಲ್ಲಿ ನೀರುಣಿಸಬೇಕು. ಮತ್ತು ಆರನೆಯ ಕಾವಿನಲ್ಲಿ ಮಣ್ಣಿನಲ್ಲಿ ಹೂತು ತಣಿಸಬೇಕು. ತದನಂತರ ಆರದಿಂದ ಸರಿಯಾಗಿ ಉಜ್ಜಿ, ಹರಿತವಾಗುವಂತೆ ಮಾಡಬೇಕು. ಹಿಂದಿನ ಕಾಲದಲ್ಲಿ ಟಗರು ಕೊಂಬಿನಿಂದ ಉಜ್ಜುತ್ತಿದ್ದರು. ಹಾಗಾಗಿ ತಲವಾರ ಹಂತವಾಗಿರುತ್ತಿತ್ತು ಎಂದು ತಿಳಿದು ಬರುತ್ತದೆ.

ಉಳಿಗಳು : ನಾಲ್ಕು ಚಕ್ರ ವಾಹನದಲ್ಲಿ ಬಳಸುವ ಆಕ್ಸಲ್ ಪ್ಲೇಟ್‌ಗಳನ್ನು ಬಳಸಿ ಉಳಿಯನ್ನು ತಯಾರಿಸಲಾಗುತ್ತದೆ. ಆಕ್ಸಲ್ ಪ್ಲೇಟ್‌ಗಳನ್ನು ಪಡೆದು ಒಲೆಯಲ್ಲಿ ಕಾಸಬೇಕು. ಮೊದಲನೆ ಕಾವಿನಲ್ಲಿ ಉಳಿಗೆ ಬೇಕಾದ ಉದ್ದವನ್ನು ಕತ್ತರಿಸಬೇಕು. ಎರಡನೆ ಕಾವಿನಲ್ಲಿ ಬಡಿದು ಮೇಲಿನಿಂದ ತಳದಲ್ಲಿ ಅಗಲವನ್ನು ಮಾಡುತ್ತ ಹೋಗಬೇಕು. ಮೂರನೆಯ ಕಾವಿನಲ್ಲಿ ಬಾಯಿಯನ್ನು ಮಾಡಬೇಕು. ನಾಲ್ಕನೆಯ ಕಾವಿನಲ್ಲಿ ಹಿಂದಿನ ತುದಿಯನ್ನು ಬಡೆದು ಚೂಪಾಗಿ ಮಾಡಿ ಹಿಡಿಯೊಳಗೆ ಸೇರಿಸಿ ಪೋಣಿಸಬೇಕು. ಐದನೆಯ ಕಾವಿನಲ್ಲಿ ಬಿಸಿಮಾಡಿ ಹೊರ ತೆಗೆದು ನೀರುಣಿಸಬೇಕು. ಕೊನೆಯಲ್ಲಿ ಆರದಿಂದ ನಯವಾಗಿ ಉಜ್ಜಿ ಬಾಯಿಯನ್ನು ಹರಿತವಾಗುವಂತೆ ಮಾಡಬೇಕು.

ಘಂಟೆಯ ನಾಲಿಗೆ : ಧಾರ್ಮಿಕ ಕೇಂದ್ರಗಳಲ್ಲಿ ಬಳಸುವ ಘಂಟೆಗಳಲ್ಲಿ ನಾಲಿಗೆಯನ್ನು ಬಳಸುತ್ತಾರೆ. ಮೊದಲು ಸಿದ್ಧವಾದ ಹಿತ್ತಾಳೆಯ ಘಂಟೆಯನ್ನು ಹೊಂದಿರಬೇಕು. ನಂತರ ನಾಲಗೆಯ ಆಕಾರದಲ್ಲಿ ಜಿಗಟು ಮಣ್ಣಿನಿಂದ ಅಚ್ಚು ಮಾಡಿಕೊಳ್ಳಬೇಕು. ತದನಂತರ ಕಬ್ಬಿಣವನ್ನು ಒಲೆಯಲ್ಲಿ ಕಾಸಬೇಕು. ಒಂದನೆಯದು ದ್ರವರೂಪ ಬರುವಂತ ಶಾಖವನ್ನು ಉಣಿಸಬೇಕು. ಎರಡನೆಯದು ದ್ರವದಲ್ಲಿರುವ ಕಬ್ಬಿಣದ ರಸವನ್ನು ಸಿದ್ಧವಾದ ಅಚ್ಚುವಿನಲ್ಲಿ ಸುರಿಯಬೇಕು. ಹಾಗೆಯೇ ಸ್ವಲ್ಪ ಕಾಲ ತಣ್ಣಗಾಗುವುದಕ್ಕೆ ಬಿಡಬೇಕು. ಆ ಮೇಲೆ ಮಣ್ಣನ್ನು ಹೊಡೆದಾಗ ಅಚ್ಚುವಿನ (Die) ರೂಪದಲ್ಲಿರುವ ಘಂಟೆ ನಾಲಗೆ ಸಿದ್ಧ ವಾಗುತ್ತದೆ. ಈ ನಾಲಗೆಯನ್ನು ತೆಗೆದುಕೊಂಡು ಘಂಟೆಯೊಳಗೆ ಜೋಡಿಸಬೇಕು. ಇದೇ ವಿಧಾನವನ್ನು ಬಳಸಿ ಬೇರೆ ಬೇರೆ ಬೇರೆ ಗಾತ್ರದ ನಾಲಗೆಗಳನ್ನು ಪಡೆಯಬಹುದು.

ಕಬ್ಬಿಣದ ತೂಗು : ಕಬ್ಬಿಣದ ಕಂಬಿ ಇಲ್ಲವೆ ಪ್ಲೇಟನ್ನು ಪಡೆದುಕೊಂಡು ಒಲೆಯಲ್ಲಿ ಕಾಸಬೇಕು. ಒಂದನೆಯ ಕಾವಿನಲ್ಲಿ ಬೇಕಾದ ಅಳತೆಯ ಆಕಾರದಲ್ಲಿ ಜಾನ ಮತ್ತು ಸುತ್ತಿಗೆ ಬಳಸಿ ಕತ್ತರಿಸಬೇಕು.

ಎರಡನೆ ಕಾವಿನಲ್ಲಿ ಎರಡು ಇಲ್ಲವೆ ಮೂರು ಕಡೆ ಸಮಾಂತರದಲ್ಲಿ ಪಾಗರಿಯನ್ನು ಬಳಸಿ ರಂಧ್ರವನ್ನು ಮಾಡಬೇಕು. ಹೀಗೆ ಕಬ್ಬಿಣದ ತೂಗನ್ನು ಪಡೆಯಬಹುದು.

ಕಳಸದ ಸರಪಳಿ : ಬೇಕಾದ ಕಬ್ಬಿಣದ ಕಂಬಿಗಳನ್ನು ಮೊದಲು ಸಮಾನಂತರದಲ್ಲಿ ಕತ್ತರಿಸಬೇಕು. ನಂತರ ಕತ್ತರಿಸಿರುವ ಕಂಬಿಗಳನ್ನು ಒಲೆಯಲ್ಲಿ ಹಾಕಿ ಕಾಸಬೇಕು. ಮೊದಲನೆಯ ಕಾವಿನಲ್ಲಿ ಕಂಬಿಗಳನ್ನು ಹಿಕ್ಕಳದಿಂದ ಹೊರತೆಗೆದು ಅಡಿಗಲ್ಲು ಮೇಲಿಟ್ಟು ಭಾಗಿಸಬೇಕು. ಎರಡನೆಯ ಕಾವಿನಲ್ಲಿ ಜೋಡಿಸಿ ಪೋಣಿಸಬೇಕು. ಇದೇ ವಿಧಾನವನ್ನು ಬಳಸಿ ವೃತ್ತಾಕಾರದ ಇಲ್ಲವೆ ಜೋಡಿಸುತ್ತ ಹೋಗಬೇಕು. ಆಗ ಸರಪಳಿಯ ಸಿದ್ಧವಾಗುತ್ತದೆ. ಇದನ್ನು ಕಳಸದ ಮುಂದೆ ಬಳಸಬಹುದು.

ಕೊಪ್ಪರಿಕೆ : ಕೊಪ್ಪರಿಕೆ ತಯಾರಿಕೆಯಲ್ಲಿ ೧೨ ಅಡಿ ಉದ್ದ ಮತ್ತು ೩ ಅಡಿ ಲಂಬವಿರುವ ೧೬ ಗೇಜಿನ ಶೀಟ್‌ನ್ನು ತೆಗೆದುಕೊಳ್ಳಬೇಕು. ನಂತರ ಶೀಟನ್ನು ಚಮ್ಮಟಿಗೆಗಳಿಂದ ಬಡಿದು ಬಡಿದು ವೃತ್ತಾಕಾರವಾಗಿ ಭಾಗಿಸಬೇಕು. ಶೀಟನ್ನು ಭಾಗಿಸಿದಾಗ ಉಂಟಾಗುವ ಮುಂಭಾಗದ ವೃತ್ತವು ಶೀಟಿನ ಹಿಂಭಾಗದ ವೃತ್ತಕ್ಕಿಂತ ಹೆಚ್ಚಾಗಿರುವಂತೆ ನೋಡಿಕೊಳ್ಳಬೇಕು. ಶೀಟಿನ ಎರಡು ತುದಿಗಳು ತಲುಪುವ ಜಾಗದಲ್ಲಿ ಸುತ್ತಿಗೆ ಮತ್ತು ಚಾನ ಬಳಸಿ ರಂಧ್ರಗಳನ್ನು ಮಾಡಿಕೊಳ್ಳಬೇಕು. ರಂಧ್ರಗಳು ಸಮಾಂತರದಲ್ಲಿರುವ ಹಾಗೆ ಜಾಗೃತಿ ವಹಿಸಬೇಕು. ಶೀಟಿನ ಮುಂಭಾಗದದಿಂದ ಕೆಳಗಿನ ಭಾಗದವರೆಗೂ ರಂಧ್ರಗಳನ್ನು ಹೊಡೆಯಬೇಕು. ಮುಂದೆ ವೃತ್ತಾಕಾರವಾಗಿ ಜೋಡಿಸಲ್ಪಟ್ಟಿರುವ ಶೀಟನ್ನು ಬಿಚ್ಚದ ಹಾಗೆ ಜಾಗೃತಿ ವಹಿಸಿ ರಂಧ್ರಗಳಲ್ಲಿ ಮೊಳೆಯನ್ನು ಹೊಡೆಯಬೇಕು. ತದನಂತರ ಕಳೆಗಡೆ ಒಂದು ವೃತ್ತಾಕಾರದ ಶೀಟನ್ನು ಕತ್ತರಿಸಿಕೊಂಡು ಕೆಳಗೆ ಇಟ್ಟು ಶೀಟನ್ನು ಹೊರಗಿನಿಂದ ಮುಚ್ಚಬೇಕು. ಕೆಳಗಿನ ಶೀಟು ಮೇಲಿನ ಶೀಟಿಗೆ ಸಂದುವ ಜಾಗದಲ್ಲಿ ಸಮಾನಾಂತರವಾಗಿ ಅವಶ್ಯವಿದ್ದಷ್ಟು ರಂಧ್ರಗಳನ್ನು ಮಾಡಿ ಮೊಳೆಗಳನ್ನು ಹೊಡೆದು ಪೋಣಿಸಬೇಕು. ಮೊದಲೆ ಸಿದ್ಧಪಡಿಸಿದ ೪ ಬಳೆಗಳನ್ನು ಮುಂಭಾಗದ ಶೀಟಿಗೆ ಉತ್ತರ–ದಕ್ಷಿಣ ಇಲ್ಲವೆ ಪೂರ್ವ–ಪಶ್ಚಿಮವಾಗಿ ರಂಧ್ರ ಮಾಡಬೇಕು. ಆ ರಂಧ್ರಗಳಲ್ಲಿ ಬಳೆಗಳನ್ನು ಜೋಡಿಸಿ ಪೋಣಿಸಬೇಕು. ಹೀಗೆ ಈ ವಿಧಾನ ಬಳಸಿ ಹಲವಾರು ರೀತಿಯ ಕೊಪ್ಪರಿಕೆಗಳನ್ನು ತಯಾರಿಸಬಹುದು.

ಬಕೆಟ್ : ಮೊದಲು ಬಕೆಟ್ ತಯಾರಿಕೆಗೆ ಬೇಕಾದ ಅಳತೆಯ ಶೀಟನ್ನು ತೆಗೆದುಕೊಂಡು ಚಮ್ಮಟಿಗೆಯಿಂದ ಬಡಿದು ವೃತ್ತಾಕಾರವಾಗಿ ಭಾಗಿಸಬೇಕು. ಎರಡು ತುದಿಗಳು ಸೇರುವ ಜಾಗದಲ್ಲಿ ಮೇಲಿಂದ ಕೆಳಗೆ ಇಲ್ಲವೆ ಕೆಳಗಿನಿಂದ ಮೇಲಕ್ಕೆ ಸಮಾನಾಂತರದಲ್ಲಿ ಚಾನದ ಸಹಾಯದಿಂದ ರಂಧ್ರಗಳನ್ನು ಮಾಡಬೇಕು. ನಂತರ ರಂಧ್ರಗಳಲ್ಲಿ ಮೊಳೆ ಹೊಡೆದು ಜೋಡಿಸಿ ಪೋಣಿಸಬೇಕು. ಹಾಗೆಯೇ ಕೆಳಗಿನ ಬಾಗಿಸಿದ ಪ್ಲೇಟಿನ ಕೆಳಗಿನ ಭಾಗದಲ್ಲಿ ವೃತ್ತಕಾರದ ಪ್ಲೇಟನ್ನು ಕತ್ತರಿಸಿ, ಒಳಗಿನಿಂದ ಜೋಡಿಸಿ ಪೋಣಿಸಬೇಕು ಬಕೆಟ್‌ಗೆ ಉತ್ತರ–ದಕ್ಷಿಣವಾಗಿ ಎರಡು ರಂಧ್ರಗಳನ್ನು ಮಾಡಿ ೧೦ ಮಿ.ಮೀ ದಪ್ಪದ ಕಂಬಿಯನ್ನು ಜೋಡಿಸಿ, ಪೋಣಿಸಿ ಹಿಡಿಕೆಯನ್ನಾಗಿ ಮಾಡಬೇಕು. ಇದು ಬಕೆಟ್ ತಯಾರಿಸುವ ವಿಧಾನವಾಗಿದೆ.

ಪಿಕಾಸಿ : ಪಿಕಾಸಿ ತಯಾರಿಕೆಗೆ ೧೬ ಇಂಚು ಉದ್ದವುಳ್ಳ ಪ್ಲೇಟನ್ನು ತೆಗೆದುಕೊಂಡು ಒಲೆಯಲ್ಲಿ ಕಾಸಬೇಕು. ಮೊದಲನೆಯ ಕಾವಿನಲ್ಲಿ ಚಮ್ಮಟಿಗೆಯಿಂದ ಬಡಿದು ಒಂದು ನಿರ್ದಿಷ್ಟ ಆಕಾರದಲ್ಲಿ ತರಬೇಕು. ಎರಡನೆಯ ಕಾವಿನಲ್ಲಿ ಪ್ಲೇಟಿನ ಮಧ್ಯಭಾಗದಲ್ಲಿ ಚಾನದಿಂದ ಸೀಳಬೇಕು. ಮೂರನೇಯ ಕಾವಿನಲ್ಲಿ ಹಾರಿಕೊಲನ್ನು ಬಳಸಿ ರಂಧ್ರವನ್ನು ಮಾಡಿಕೊಳ್ಳಬೇಕು. ರಂಧ್ರವು ೪ ಇಂಚು ಅಗಲವಾಗಿರುವಂತೆ ನೋಡಿಕೊಳ್ಳಬೇಕು. ನಾಲ್ಕನೆಯ ಕಾವಿನಲ್ಲಿ ರಂಧ್ರವನ್ನು ತುಂಬನ್ನಾಗಿ ಪರಿವರ್ತಿಸಬೇಕು. ಐದನೆಯ ಕಾವಿನಲ್ಲಿ ತುಂಬಿನ ಪಕ್ಕದಲ್ಲಿರುವ ೬ ಇಂಚು ಭಾಗವನ್ನು ಬಡಿದು ಬಾಯಿಯನ್ನು ಚೂಪಾಗಿರುವಂತೆ ಮಾಡಿಕೊಳ್ಳಬೇಕು. ಆರನೇಯ ಕಾವಿನಲ್ಲಿ ಮೊತ್ತೊಂದು ಭಾಗವಾದ ೬ ಇಂಚನ್ನು ಬಡಿದು ಬಾಯಿಯನ್ನು ಆಯತಾಕಾರದಲ್ಲಿ ತರಬೇಕು. ಏಳನೆಯ ಕಾವಿನಲ್ಲಿ ಕಾಸಿ ನೀರುಣಿಸಬೇಕು. ಕೊನೆಯಲ್ಲಿ ಅರದಿಂದ ಚೆನ್ನಾಗಿ ಉಜ್ಜಿ ಹರಿತವಾಗುವಂತೆ ಮಾಡಬೇಕು ಇದೇ ವಿಧಾನವನ್ನು ಬಳಸಿ ವಿಧವಿಧವಾದ ಪಿಕಾಸಿಗಳನ್ನು ಪಡೆಯಬಹುದು.

ಕಳೆ ಕುರ್ಚಿಗೆ : ಮೊದಲು ಕುರ್ಚಿಗೆಗೆ ಬೇಕಾದ ಅಳತೆಯ ಪ್ಲೇಟನ್ನು ತೆಗೆದುಕೊಂಡು ಒಲೆಯಲ್ಲಿ ಕಾಸಬೇಕು. ಮೊದಲನೆ ಕಾವಿನಲ್ಲಿ ಬಡಿದು ಚಾನದಿಂದ ಕತ್ತರಿಸಬೇಕು. ಎರಡನೆಯ ಕಾವಿನಲ್ಲಿ ಬಡಿದು ಚಾನದಿಂದ ರಂಧ್ರ ಮಾಡುವುದಕ್ಕೆ ಸೀಳಬೇಕು. ಮೂರನೆಯ ಕಾವಿನಲ್ಲಿ ಹಾರಿಕೋಲು ಸಹಾಯದಿಂದ ತುಂಬು ಮಾಡಿಕೊಳ್ಳಬೇಕು. ನಾಲ್ಕನೆಯ ಕಾವಿನಲ್ಲಿ ತುಂಬಿನಿಂದ ಕೆಳಗಿನ ಭಾಗವನ್ನು ಬಡಿಯುತ್ತಾ ಬಾಯಿಯನ್ನು ತೆಳ್ಳಗೆ ಮಾಡಿಕೊಳ್ಳಬೇಕು. ಆರನೆಯ ಕಾವಿನಲ್ಲಿ ಕಾಸಿ, ನೀರುಣಿಸಬೇಕು. ಕೊನೆಯಲ್ಲಿ ಅರದಿಂದ ಚೆನ್ನಾಗಿ ಉಜ್ಜಿ ಹರಿತಗೊಳಿಸಬೇಕು. ಇಂತಹ ವಿಧಾನವನ್ನು ಬೇರೆ ಬೇರೆ ಅಳತೆಯ ಕುರ್ಚಿಗೆಗಳಿಗೆ ಅನ್ವಯಿಸಿ ತಯಾರಿಸಬಹುದು.

ನೇರೆಕೋಲು : ಮೊದಲ ೪ ತಂತಿಯನ್ನು ತೆಗೆದುಕೊಂಡು ಒಲೆಯಲ್ಲಿ ಕಾಸಬೇಕು. ಮೊದಲನೆಯ ಕಾವಿನಲ್ಲಿ ತಂತಿಯನ್ನು ಬೇಕಾದ ಅಳತೆಯಲ್ಲಿ 'U' ಭಾಗಿಸಬೇಕು. ಎರಡನೆಯ ಕಾವಿನಲ್ಲಿ ಹಿಂದಿನ ಭಾಗವನ್ನು ಉದ್ದನೆಯ ಕಟ್ಟಿಗೆಯಲ್ಲಿ ಸೇರಿಸಬೇಕು ಇದು ನೇರೆಕೋಲು ಮಾಡುವ ವಿಧಾನವಾಗಿದೆ.

ಗುದ್ದಲಿ : ಮೊದಲು ಗುದ್ದಲಿಗೆ ಬೇಕಾದ ಸುಮಾರು ೧೮ ಇಂಚು ಉದ್ದ ಪ್ಲೇಟನ್ನು ತೆಗೆದು ಕೊಂಡು ಒಲೆಯಲ್ಲಿ ಕಾಸಬೇಕು. ಮೊದಲನೆ ಕಾವಿನಲ್ಲಿ ಬೇಕಾದ ಉದ್ದ ಮತ್ತು ದಪ್ಪ ಬರುವ ಹಾಗೆ ಬಡಿದುಕೊಳ್ಳಬೇಕು. ಎರಡನೇ ಕಾವಿನಲ್ಲಿ ಒಂದು ಭಾಗವನ್ನು ತಲೆಯನ್ನಾಗಿಸಿ ಚಾನದಿಂದ ಸೀಳಬೇಕು. ಮೂರನೆಯ ಕಾವಿನಲ್ಲಿ ಹಾರಿಕೋಲು ಬಳಸಿ, ಸೀಳಿದ ಭಾಗವನ್ನು ರಂಧ್ರವನ್ನಾಗಿ, ತುಂಬುನ್ನಾಗಿ ಪರಿವರ್ತಿಸಬೇಕು. ನಾಲ್ಕನೆಯ ಕಾವಿನಲ್ಲಿ ತುಂಬಿನ ಕೆಳ ಭಾಗವನ್ನು ಬಡಿಯುತ್ತಾ ಬಾಯಿಯನ್ನು ಮಾಡಿಕೊಳ್ಳಬೆಕು. ಐದನೆಯ ಕಾವಿನಲ್ಲಿ ಬಿಸಿಮಾಡಿ ನೀರುಣಿಸಬೇಕು. ಕೊನೆಯಲ್ಲಿ ಆರದಿಂದ ನಯವಾಗಿ ಉಜ್ಜಿ ಹರಿತಗೊಳಿಸಬೇಕು. ಇದೇ ವಿಧಾನವನ್ನು ಬಳಸಿ ವಿವಿಧ ರೀತಿಯ ಗುದ್ದಲಿಗಳನ್ನು ತಯಾರಿಸಬಹುದು.

ಸಲಿಕೆ : ಮೊದಲು ೧೪ ಗೇಜಿನ ಪ್ಲೇಟನ್ನು ತಗೆದುಕೊಂಡು ಸಲಿಕೆಗೆ ಬೇಕಾದ ಅಳತೆಯ ಆಕಾರದಲ್ಲಿ ಕತ್ತರಿಸಬೇಕು. ನಂತರ ತುಂಬಿಗೆ ಬೇಕಾದ ಅಳತೆಯ ಪ್ಲೇಟನ್ನು ತೆಗೆದುಕೊಂಡು ಒಲೆಯಲ್ಲಿ ಹಾಕಿ ಕಾಸಬೇಕು. ಮೊದಲನೆಯ ಕಾವಿನಲ್ಲಿ ಬೇಕಾದ ಅಳತೆಯ ಎರಡು ತುದಿಗಳನ್ನು ಕತ್ತರಿಸಬೇಕು. ಎರಡನೆಯ ಕಾವಿನಲ್ಲಿ ಬಡಿದು 'L' ಆಕಾರದಲ್ಲಿ ಬಾಗಿಸಬೇಕು. ಮೂರನೆಯ ಕಾವಿನಲ್ಲಿ ಬಾಗಿದ ಒಂದು ಭಾಗವನ್ನು ತಲೆಯನ್ನಾಗಿ ಮಾಡಿ ಸೀಳಬೇಕು. ನಾಲ್ಕನೆಯ ಕಾವಿನಲ್ಲಿ ಸೀಳಿದ ಜಾಗವನ್ನು ರಂಧ್ರವನ್ನಾಗಿ ಮಾಡಿ, ಹಾರಿಕೋಲು ಸಹಾಯದಿಮದ ತುಂಬು ಮಾಡಿಕೊಳ್ಳಬೇಕು. ಐದನೆಯ ಕಾವಿನಲ್ಲಿ ತುಂಬಿನ ಕೆಳಭಾಗದಲ್ಲಿ ಬಾಯಿಯನ್ನು ಮಾಡಿ, ಸಮಾನಾಂತರದಲ್ಲಿ ಎರಡು ಚಿಕ್ಕ ರಂಧ್ರಗಳನ್ನು ಮಾಡಿಕೊಳ್ಳಬೇಕು. ಆರನೆಯ ಕಾವಿನಲ್ಲಿ ತುಂಬನ್ನು ಪ್ಲೇಟಿನ ಮೇಲಿಟ್ಟು ರಂಧ್ರ ಸಂದುವ ಜಾಗದಲ್ಲಿ ಮೊಳೆಯನ್ನು ಹೊಡೆದು ಪೋಣಿಸಬೇಕು. ಇದೇ ವಿಧಾನದಿಂದ ಹಲವಾರು ರೀತಿಯ ಸಲಿಕೆಗಳನ್ನು ತಯಾರಿಸಬಹುದು.

ರಂಟೆ ಮುಂಜಣ : ಮೊದಲು ೨ ಅಡಿ ಉದ್ದ ಮತ್ತ ೧ ೧/೨ ಇಂಚು ಅಗಲವುಳ್ಳ ಪ್ಲೇಟನ್ನು ಕತ್ತರಿಸಿಕೊಂಡು ಒಲೆಯಲ್ಲಿ ಕಾಸಬೇಕು. ಮೊದಲನೆಯ ಕಾವಿನಲ್ಲಿ ಬಡಿದು ಒಂದು ತುದಿಯನ್ನು ತಲೆಯಾಗಿಸಿ, ಮತ್ತೊಂದು ತುದಿಯನ್ನು ಬಾಯಿಯನ್ನಾಗಿ ಮಾಡಿ, ತಲೆಯಿಂದ ಬಾಯಿಯವರೆಗೆ ಅಗಲವು ಕ್ರಮೇಣ ಕಡಿಮೆಯಾಗುವಂತೆ ನೊಡಿಕೊಂಡು ಬಡಿಯುತ್ತಾ ಹೋಗಬೇಕು. ಎರಡನೆಯ ಕಾವಿನಲ್ಲಿ ಪಾಗರಿ ಬಳಸಿ ಎರಡು ರಂಧ್ರಗಳನ್ನು ಮಾಡಿಕೊಳ್ಳಬೇಕು. ಕೊನೆಯಲ್ಲಿ ನೀರುಣಿಸಬೇಕು. ಇದೇ ವಿಧಾನ ಬಳಸಿ ಮಂಜುಣ ತಯಾರಿಸುವರು.

ಗಳೆವು ಕುಡ : ಮೊದಲು ಗಳೆವು 'ಕುಡ' ಗೆ ಬೇಕಾದ ೩ ಅಡಿ ಉದ್ದ ಮತ್ತು ೨ ೧/೨ ಇಂಚು ಅಗಲದ ಪ್ಲೇಟನ್ನು ಕತ್ತರಿಸಿ ಒಲೆಯಲ್ಲಿ ಕಾಸಬೇಕು. ಪ್ಲೇಟಿನ ಒಂದೊಂದು ತುದಿಯನ್ನು ಕಾಸಿ ಬೇಕಾದ ಆಕಾರವನ್ನು ಮಾಡಬೇಕು. ಮೊದಲನೆಯ ಕಾವಿನಲ್ಲಿ ಬಡಿದು ೨ ಇಂಚುಗಳುಳ್ಳ ಕಿವಿಯನ್ನು ಮಾಡಿಕೊಳ್ಳಬೇಕು. ಎರಡನೆಯ ಕಾವಿನಲ್ಲಿ ಬಡಿದು ಬಾಯಿಯನ್ನು ಮಾಡಬೇಕು. ಬಾಯಿ ಮಾಡುವಾಗ ಬಾಯಿಯ ಹಿಂದಿನ ಭಾಗದಿಂದ ಬಾಯಿಯವರೆಗೆ ಅಗಲವು ಇಳಿಕೆ ಯಾಗುವುದನ್ನು ನೋಡಿಕೊಳ್ಳಬೇಕು. ಇನ್ನೂ ಎರಡು ಕಾವುಗಳನ್ನು ಬಳಸಿ ಪ್ಲೇಟಿನ ಇನ್ನೊಂದು ಭಾಗದಲ್ಲಿ ಕಿವಿ ಮತ್ತು ಬಾಯಿಯನ್ನು ಮಾಡಬೇಕು. ಐದನೆ ಕಾವಿನಲ್ಲಿ ಎರಡು ಬಾಯಿಯ ಮಧ್ಯದ ಜಾಗವನ್ನು ಬಡಿದು ಒಟ್ಟು ೩ ಅಡಿಯು 'ಕುಡ'ಗೆ ಸರಿಯಾಗಿ ಬಾಯಿ ಬರುವಂತೆ ಮಾಡಬೇಕು. ಕೊನೆಯಲ್ಲಿ ನೀರುಣಿಸಬೇಕು. ಇದು ಗಳೆವು ಕುಡದ ವಿಧಾನವಾಗಿದೆ. ಈ ವಿಧಾನವನ್ನು ಬಳಸಿ ಮೆಣಸಿನಕಾಯಿ ಕುಡ, ಕುಂಟೆ ಕುಡ, ಪಿಳಗುಡ, ಕೂರಗಿ ಕುಡ, ಕುಂಟಿಕುಳ, ಕುರುಪಿ ಕುಡಗಳನ್ನು ತಯಾರಿಸಬಹುದು.

ಜಿಗಳಿ : ಮೊದಲು ೧/೨ ಇಂಚು ದಪ್ಪವುಳ್ಳ ಒಂದು ಕಂಬಿಯನ್ನು ತೆಗೆದುಕೊಂಡು ಬೇಕಾದ ಉದ್ದಕ್ಕೆ ಕತ್ತರಿಸಬೇಕು. ನಂತರ ಕುಲುಮೆಯಲ್ಲಿ ಕಾಸಬೇಕು. ಮೊದಲನೆಯ ಕಾವಿನಲ್ಲಿ ಬಡಿದು 'U' ಆಕಾರಕ್ಕೆ ಬಡಿದು ಬಾಗಿಸಬೇಕು. ಕೊನೆಯಲ್ಲಿ ನೀರುಣಿಸಬೇಕು. ಇದನ್ನು ನೇಗಿಲು ಮಂಜಣವನ್ನು ಅಲುಗಾಡದಂತೆ ಕುಡಿಸಲು ಬಳಸುವರು.

ಗಾಲಿಯ ಅಚ್ಚು : ಮೊದಲು ನಾಲ್ಕು ಚಕ್ರ ವಾಹನದಲ್ಲಿ ಬಳಸುವ ಆಕ್ಸಲ್‌ನಿಂದ ೫ ಅಡಿ ಉದ್ದ ಮತ್ತು ೨ ೧/೨ ಇಂಚು ದಪ್ಪದ ಪ್ಲೇಟನ್ನು ಪಡೆದುಕೊಳ್ಳಬೇಕು. ಪ್ಲೇಟಿನ ಒಂದು ತುದಿಯನ್ನು ಒಲೆಯಲ್ಲಿ ಕಾಸಬೇಕು. ಮೊದಲನೆಯ ಮತ್ತು ಎರಡನೆಯ ಕಾವಿನಲ್ಲಿ ಸುಮಾರು ೧೬ ಇಂಚು ಅಳತೆಯ ಭಾಗವನ್ನು ಬಡಿಬಡಿದು ವೃತ್ತಾಕಾರದಲ್ಲಿ ತರಬೇಕು. ಮೂರು, ನಾಲ್ಕು ಮತ್ತು ಐದನೆಯ ಕಾವಿನಲ್ಲಿ ರಂಧ್ರವನ್ನು ಮಾಡಿಕೊಳ್ಳಬೇಕು. ಇದೇ ವಿಧಾನವನ್ನು ಇನ್ನೊಂದು ತುದಿಯಲ್ಲಿ ಬಳಸಿ, ವೃತ್ತಾಕಾರವಾಗಿ ಮಾಡಿ, ರಂಧ್ರವನ್ನು ಮಾಡಬೇಕು. ವೃತ್ತಾಕಾರವಾಗಿ ಮಾಡಲು ಬೆಟ್ನಿಯನ್ನು ಬಳಸಬೇಕು. ಕೊನೆಯಲ್ಲಿ ನೀರುಣಿಸಬೇಕು. ಇದು ಗಾಲಿಯ ಅಚ್ಚು ತಯಾರಿಸುವ ವಿಧಾನವಾಗಿದೆ.

ಗಾಲಿಯ ಬಾಯಿ ಬಳೆಗಳು : ಮೊದಲು ಗಾಲಿಯ ಬಾಯಿಬಳೆಗೆ ಬೇಕಾದ ೮ ಇಂಚು ಉದ್ದ ಮತ್ತು ೨ ಇಂಚು ಅಗಲದ ಪ್ಲೇಟನ್ನು ಪಡೆದು ಒಲೆಯಲ್ಲಿ ಕಾಸಬೇಕು. ಮೊದಲನೆಯ ಕಾವಿನಲ್ಲಿ ಬಡಿದು ವೃತ್ತಾಕಾರವಾಗಿ ಬಾಗಿಸಬೇಕು ಮತ್ತು ಜೋಡಿಸಿ ಪೋಣಿಸಬೇಕು. ಇದೇ ರೀತಿ ಪುನರಾವರ್ತಿಸಿ ಇನ್ನೊಂದು ಬಳೆಯನ್ನು ರಚಿಸಬೇಕು. ಕೊನೆಯಲ್ಲಿ ನೀರುಣಿಸಬೇಕು. ಇದು ಗಾಲಿಯ ಬಾಯಿಬಳೆ ಮಾಡುವ ವಿಧಾನ.

ಕಿವ ಬಳೆ : ಬಂಡಿಗಾಲಿಗೆ ಬೇಕಾದ ಕಿವಿಬಳೆಗೆ ೧೨ ಇಂಚು ಉದ್ದ ಮತ್ತು ೧/೨ ಇಂಚು ಅಗಲದ ಪ್ಲೇಟನ್ನು ಕತ್ತರಿಸಿಕೊಂಡು ಒಲೆಯಲ್ಲಿ ಹಾಕಿ ಕಾಸಬೇಕು. ಮೊದಲನೆಯ ಕಾವಿನಲ್ಲಿ ತಲೆಯಿಂದ ಹಿಡಿದು ಬಾಯಿಯವರೆಗೆ ಇಳಿಕೆ ಕ್ರಮದಲ್ಲಿ ಬರುವಂತೆ ಬಡಿಯಬೇಕು ಮತ್ತು ತಲೆಯಲ್ಲಿ 'L' ಆಕಾರದಲ್ಲಿ ಬಾಗಿಸಬೇಕು. ಕೊನೆಯಲ್ಲಿ ನೀರುಣಿಸಬೇಕು. ಇದು ಕಿವಿಬಳೆ ಮಡುವ ವಿಧಾನವಾಗಿದೆ.

ಗಾಲಿಯ ಕುಂಬ ಗಡ್ಡು ಕಟ್ಟು : ಗಡ್ಡು ಕಟ್ಟಿಗೆ ಬೇಕಾದ ಅಳತೆಯ ಪ್ಲೇಟನ್ನು ಮೊದಲು ಕತ್ತರಿಸಿಕೊಳ್ಳಬೇಕು. ನಂತರ ಕತ್ತರಿಸಿದ ಪ್ಲೇಟನ್ನು ಒಲೆಯಲ್ಲಿ ಹಾಕಿ ಕಾಸಬೇಕು. ಮೊದಲನೆಯ ಕಾವಿನಲ್ಲಿ ಬಂಡಿಯ ಮೇಲಿನ ಗಡ್ಡಿನ ಅಳತೆಯ ಆಕಾರದಲ್ಲಿ ವೃತ್ತವಾಗಿ ಬಾಗಿಸಬೇಕು. ಬಾಗಿಸಿದ ಕಟ್ಟನ್ನು ಗಾಲಿಯ ಕುಂಬದ ಮೇಲಿಟ್ಟು ಜೋಡಿಸಿ, ಪೋಣಿಸಬೇಕು. ಇದು ಒಂದು ರೀತಿಯ ಗಾಲಿಯ ದೊಡ್ಡ ಬಳೆಯಂತೆ ಕಂಡು ಬರುತ್ತದೆ.

ಗಾಲಿ ಅಳಿ : ಗಾಲಿ ಅಳಿಗೆ ಬೇಕಾದ ಅಳತೆಯ ೧೮ ಅಡಿ ಉದ್ದ ಮತ್ತ ೨ ೪ ಇಂಚು ಅಗಲ ಹಾಗೂ ೧/೨ ಇಂಚು ದಪ್ಪದ ಪ್ಲೇಟನ್ನು ತೆಗೆದುಕೊಳ್ಳಬೇಕು. ನಂತರ ಆ ಪ್ಲೇಟನ್ನು ಕುಲುಮೆ ಒಲೆಯಲ್ಲಿ ಕಾಸಬೇಕು. ಇದು ಒಂದು ಕಾವಿನಲ್ಲಿ ಸುಮಾರು ೧/೨ ಅಡಿಯಿಂದ ೧ ಅಡಿ ಕಾಯ ಬಹುದು. ೧೮ ಅಡಿ ಉದ್ದಕ್ಕೂ ಕಾಯಿಸುತ್ತಾ ಹೋಗಬೇಕು. ಪ್ರತಿಯೊಂದು ಕಾವಿನಲ್ಲಿಯೂ ಹೆಚ್ಚು ತೂಕವುಳ್ಳ ಚಮ್ಮಟಿಗೆಯಿಂದ ಸುಮಾರು ೩ ಜನ ಚಮ್ಮಟಿಗಾರರ ನೆರವಿನಂದ ಬಡಿಯುತ್ತಾ ವೃತ್ತಾಕಾರವಾಗಿ ಬಾಗಿಸುತ್ತಾ ಹೋಗಬೇಕು. ಪೂರ್ಣವಾಗಿ ವೃತ್ತವಾದ ಮೇಲೆ ಎರಡು ತುದಿಗಳು

ಸೇರುವ ಜಾಗದಲ್ಲಿ ಪುನಃ ಕಾಸಿ ಜೋಡಿಸಿ, ಪೋಣಿಸಬೇಕು. ಹೆಚ್ಚು ಶಾಖವನ್ನು ಉಣಿಸಿದಾಗ ಎರಡು ತುದಿಗಳು ಜೋಡಿಸಲ್ಪಡುತ್ತವೆ. ಎರಡು ತುದಿಗಳನ್ನು ಒಲೆಯಲ್ಲಿಟ್ಟು ಭತ್ತದ ತವಡು ಹಾಕಿ ಕಾಸುವುದರಿಂದಲೂ ಬೇಗನೆ ಜೋಡಿಸಲ್ಪಡುತ್ತವೆ. ಇಂದು ರಸಾಯನಿಕ ವಸ್ತುವಾದ "ಬಳೆಗಾರ"ವನ್ನು ಬಳಸಿಯೂ ಜೋಡಿಸಬಹುದು. (ಬಿಳಿ ಆಕಾರದ ಕಲ್ಲು ಸಕ್ಕರೆಯಂತಿರುವ ವಸ್ತುವೇ ಬಳೆಗಾರವಾಗಿದೆ.) ನಂತರ ಕೊನೆಯ ಕಾವಿನಲ್ಲಿ ಜೋಡಿಸಲ್ಪಟ್ಟಿರುವ ಅಳಿಯನ್ನು ಚೆನ್ನಾಗಿ ಬಡಿದು ಒಂದೇ ತೆರನಾದ ಆಕಾರದಲ್ಲಿ ತರುವಂತೆ ಮಾಡಿಕೊಳ್ಳಬೆಕು. ಈ ಕ್ರಿಯೆಯಲ್ಲಿ ತಿದಿ ಇಲ್ಲವೆ ಬ್ಲೋವರ್‌ವನ್ನು ನರಂತರ ಒತ್ತುತ್ತಲೇ ಇರಬೇಕು. ಹಾಗೆಯೇ ಮುಖ್ಯಸ್ಥ ಇಲ್ಲವೆ 'ಓಜ'ನು ತುಂಬ ಜಾಗರೂಕತೆಯಿಂದ ಕೆಲಸ ಮಾಡಬೇಕಾಗುತ್ತದೆ. ಸ್ವಲ್ಪ ಚಿತ್ತ ಕೆಟ್ಟರೂ ಅಪಾಯ ಹೆಚ್ಚು. ಈ ಕ್ರಿಯೆಯಲ್ಲಿ ಗಾಲಿ ಅಳಿಯನ್ನು ಹಿಡಿಯಲು, ಎತ್ತಲು ಹೆಗ್ಗಿಕ್ಕಳವನ್ನು ಬಳಸ ಬೇಕಾಗುತ್ತದೆ. ಹೆಗ್ಗಿಕ್ಕಳವನ್ನು ಬಳಸಿಯೇ ಗಾಲಿಯನ್ನು ತಯಾರಿಸಬೇಕು. ಗಾಲಿ ಅಳಿ ತಯಾರಾದ ಮೆಲೆ ಅದನ್ನು ಇಬ್ಬರು ಚಮ್ಮಟಿಗಾರರು ಹೆಗ್ಗಿಕ್ಕಳದಿಮದ ಎತ್ತಿ ಬಂಡಿ ಹಳಿ ತಟ್ಟುವ ಜಾಗದಲ್ಲಿ ತೆಗೆದುಕೊಂಡು ಹೋಗಿ ಇಡಬೇಕು. ಕಾದ ಅಳಿಯನ್ನು ಕಟ್ಟಿಗೆಯಿಂದ ಮಾಡಿಕ ಚಕ್ರಗಳ ಮೇಲೆ ಇಡುತ್ತಾರೆ. ನಂತರ ಜಗ್ಗುಂಡಿ ಅಂತಹ ಸಾಧನವನ್ನು ಬಳಸಿ ಗಾಲಿ ಅಳಿಯನ್ನು ಕಟ್ಟಿಗೆ ಚಕ್ರಕ್ಕೆ ಕುಡಿಸುತ್ತಾರೆ. ಇದು ಒಂದು ವಿಧಾನ.

ಎರಡನೆಯ ವಿಧಾನವೆಂದರೆ, ಬೇಕಾದ ಅಳತೆಯ ಪ್ಲೇಟನ್ನು ಚಮ್ಮಟಿಗೆಯಿಂದ ಬಡಿದು ಬಡಿದು, ಎರಡು ತುದಿ ಸಾರುವ ಜಾಗವನ್ನು ಜೋಡಿಸಿ, ಪೋಣಿಸಬೇಕಾಗುತ್ತದೆ. ನಂತರ ಅಳಿ ಇರುವ ವೃತ್ತದಷ್ಟು ಜಾಗವನ್ನು ನೆಲದ ಕೆಳಗೆ ಸುಮಾರು ಒಂದು ಅಡಿ ಆಳ ತೆಗೆಯಬೇಕು. ಬೆಂಕಿ ಬರುವುದಕ್ಕೆ ಬೇಕಾದ ಕಚ್ಚಾ ವಸ್ತುಗಳನ್ನು ಹಾಕಿ ಬೆಂಕಿ ಹಚ್ಚಬೇಕು. ತವಡು ಮತ್ತು ಸಗಣಿಯನ್ನು ಹಾಕಬಹುದು. ಆಳದ ವೃತ್ತದಲ್ಲಿ ಕಚ್ಚಾ ವಸ್ತಗಳ ಜೊತೆಗೆ ವೃತ್ತಾಕಾರದ ಅಳಿಯನ್ನು ಇಟ್ಟು, ಕಾವು ಬರುವವರೆಗು ಕಾಸಬೇಕು. ಕಾವು ಬಂದ ಮೇಲೆ ಇಬ್ಬರು ಇಲ್ಲವೇ ನಾಲ್ಕು ಜನ ಸಹಾಯಕರಿಂದ ಹೆಗ್ಗಕ್ಕಳ ಬಳಸಿ ಮೇಲಕ್ಕೆತ್ತಿ ಬಂಡಿಯ ಕಟ್ಟಿಗೆಯ ಗಾಲಿಯ ಮೇಲೆ ಇಟ್ಟು ಜೋಡಿಸಬೇಕು. ಜೋಡಿಸುವುದಕ್ಕೆ ಜಗ್ಗುಂಡಿಯನ್ನು ಬಳಸಬೇಕು.

ಮೂರನೆಯ ವಿಧಾನವೆಂದರೆ, ಮೊದಲೆ ಹಾಕಿರುವ ಅಳಿಯನ್ನು ಪುನಃ ಹೊಸದಾಗಿ ಮಾಡುವುದು. ಕಾರಣ, ಅಳಿಯ ಬಳಸಿ ಬಳಸಿ ಸವೆದು ಹೋಗಿ ಹಿರಿದಾಗಿರುತ್ತದೆ. ಹಿರಿದಾಗಿರುವ ಅಳಿಯ ಬಳಕೆಯು ಉತ್ತಮವಲ್ಲ. ಹಾಗಾಗಿ ಅಂತಹ ಅಳಿಯನ್ನು ಪುನಶ್ಚೇತನಗೊಳಿಸಬಹುದು. ಹಿರಿದಾಗಿರುವ ಅಳಿಯನ್ನು ತಂದು ಮೊದಲು ಒಲೆಯಲ್ಲಿ ಕಾಸಬೇಕು. ನಂತರ ಕತ್ತರಿಸಿದ ತುದಿಯನ್ನು ಜೋಡಿಸಿ ಕುಲುಮೆ ಒಲೆಯಲ್ಲಿ ಕಾಸಬೇಕು. ಕಾಯಿಸುವಾಗ ಜೋಡಣೆಯಾಗುವಂತೆ ಮಾಡಲು ಭತ್ತದ ಹೊಟ್ಟನ್ನು ಹೆಚ್ಚಾಗಿ ಹಾಕಬೇಕು. ಹೆಚ್ಚು ಶಾಖ ಉಣಿಸಿದರೆ ಜೋಡಣೆಯಾಗುತ್ತದೆ. ಬಳೆಗಾರದಿಂದಲು ತುದಿಗಳನ್ನು ಜೋಡಿಸಬಹುದು. ಎರಡನೆಯ ಕಾವಿನಲ್ಲಿ ತುದಿಗಳನ್ನು ಜೋಡಿಸಿ ಪೋಣಿಸಬೇಕು. ಮೂರನೆಯ ಕಾವಿನಲ್ಲಿ ಕಾಸಿ, ಹೆಗ್ಗಿಕ್ಕಳ ಸಹಾಯದಿಂದ ಎರಡು ಇಲ್ಲವೆ ನಾಲ್ಕು ಜನರ ನೆರವಿನೊಂದಿಗೆ ಬಂಡಿಗಾಲಿ ಇರುವ ಸ್ಥಳದಲ್ಲಿ ಎತ್ತಿಕೊಂಡು ಹೋಗಿ ಗಾಲಿಯ ಮೇಲೆ

ಸರಿಯಾಗಿ ಇಟ್ಟು ಅಳಿ ಮತ್ತು ಗಾಲಿ ಜೋಡುವಂತೆ ಹೊಂದಿಸಬೇಕು. ನೆರವಿಗೆ ಜಗ್ಗುಂಡಿ ಯನ್ನು ಉತ್ತರ–ದಕ್ಷಿಣ ದಿಕ್ಕಿನಲ್ಲಿ ಬಳಸಬೇಕು. ಕೊನೆಯಲ್ಲಿ ನೀರನ್ನು ಗಾಲಿಗಳ ಮೇಲೆ ತಣಿಸಬೇಕು. ಇವು ಗಾಲಿ ಅಳಿ ಮಾಡುವ ವಿಧಾನಗಳು

ಮೇವು ಕತ್ತರಿಸುವ ಕತ್ತರಿ : ಮೊದಲು ಕತ್ತರಿಗೆ ಬೇಕಾಗುವ ೧೮ ಇಂಚು ಉದ್ದ ಮತ್ತು ೧/೨ ಇಂಚು ದಪ್ಪದ ಪ್ಲೇಟನ್ನು ತೆಗೆದುಕೊಂಡು ಒಲೆಯಲ್ಲಿ ಕಾಸಬೇಕು. ಮೊದಲನೆ ಕಾವಿನಲ್ಲಿ ಸುತ್ತಿಗೆಯಿಂದ ಬಡೆದು ಬಾಗಿಸಬೇಕು. ಎರಡನೇ ಕಾವಿನಲ್ಲಿ ಕುಡುಗೊಲಿನ ಬಾಯಿಯನ್ನು ಚೂಪಾಗಿ ಮಾಡಿಕೊಳ್ಳಬೇಕು. ಮೂರನೇಯ ಕಾವಿಯಲ್ಲಿ ಹಿಡಿಯನ್ನು ಬಡೆದು ತುಸುಹೆಚ್ಚು ಉದ್ದ ಮಾಡಿ ಕೊಳ್ಳಬೇಕು. ನಾಲ್ಕನೇ ಕಾವಿನಲ್ಲಿ ಕುಡುಗೋಲಿನ ಹಿಡಿಯನ್ನು ಕಟ್ಟಿಗೆಯ ದಿಂಡಿನಲ್ಲಿ ಜೋಡಿಸಿ ಅಲುಗಾಡದಂತೆ ಹಿಡಿಯನ್ನು ವಿರುದ್ಧ ದಿಕ್ಕಿನಲ್ಲಿ ಬಾಗಿಸಬೇಕು. ಮತ್ತು ಮೂರು ಅಡಿ ಉದ್ದ ಮತ್ತು ಒಂದು ಇಂಚು ಅಗಲದ ಕಂಬಿಯನ್ನು ಕತ್ತರಿಸಿ ಒಲೆಯಲ್ಲಿ ಕಾಸಬೇಕು. ಮೊದಲನೇ ಕಾವಿನಲ್ಲಿ ಒಂದು ತುದಿಯನ್ನು ಬಡಿದು ಚಾನದಿಂದ ಸೀಳಬೇಕು. ಸೀಳುವಾಗ ಕುಡುಗೋಲಿನಲ್ಲಿ ಸಲೀಸಾಗಿ ಚಲಿಸುವಂತಿರಬೇಕು. ಸೀಳಿದ ರಂಧ್ರವನ್ನು ಬಿಟ್ಟು, ಮತ್ತೊಂದು ಜಾಗದಲ್ಲಿ ಕಂಬಿಗೆ ಉದ್ಧವಾಗಿ ಕುಡುಗೋಲು ಒಳಹೋಗುವಂತೆ ಸೀಳಬೇಕು. ನಂತರ ಸೀಳಿರುವ ಕಂಬಿಯನ್ನು ಕಟ್ಟಿಗೆ ದಿಂಡಿಗೆ ಜೋಡಿಸಬೇಕು. ಜೋಡಿಸುವಾಗ ಕುಡುಗೋಲು ಒಳಗಡೆ ಹೋಗುವಂತೆ ಎಚ್ಚರ ವಹಿಸಬೇಕು. ಕೊನೆಯಲ್ಲಿ ಕುಡುಗೋಲನ್ನು ಆರದಿಂದ ಉಜ್ಜಿ ಹರಿತವಾಗುವಂತೆ ನೋಡಿಕೊಳ್ಳಬೇಕು. ಈ ವಿಧಾನದಿಂದ ಕತ್ತರಿಯನ್ನು ತಯಾರಿಸಬೇಕು.

ಕೊಡಲಿ : ಕೊಡಲಿಗೆ ೬ ಇಂಚು ಉದ್ಧ ಮತ್ತು ೧/೨ ದಪ್ಪದ ಪ್ಲೇಟನ್ನು ತೆಗೆದುಕೊಂಡು ಒಲೆಯಲ್ಲಿ ಕಾಸಬೇಕು. ಮೊದಲನೇ ಕಾವಿನಲ್ಲಿ ಬಡಿದು ಬಾಗಿಸಬೇಕು. ಎರಡನೇ ಕಾವಿನಲ್ಲಿ ಹೊಳ್ಳ ಇಲ್ಲವೇ ಹಾರಿಕೋಲಿನಿಂದ ತುಂಬನ್ನು ಮಾಡಿಕೊಳ್ಳಬೇಕು. ಮೂರನೇ ಕಾವಿನಲ್ಲಿ ಬಡಿದು ಬಾಯಿಯನ್ನು ಮಾಡಿಕೊಳ್ಳಬೇಕು. ನಾಲ್ಕನೇ ಕಾವಿನಲ್ಲಿ ಬಾಯಿಯನ್ನು ನಯವಾಗಿ ಚೂಪಾಗಿ ಮಾಡಬೇಕು. ಐದನೇಯ ಕಾವಿನಲ್ಲಿ ಬಿಸಿ ಮಾಡಿ ನೀರುಣಿಸಬೇಕು. ಕೊನೆಯಲ್ಲಿ ಬಾಯಿಯನ್ನು ಆರದಿಂದ ಉಜ್ಜಿ ಹರಿತವಾಗುವಂತೆ ಮಾಡಬೇಕು.

ಪರಶುರಾಮ ಕೊಡಲಿ: ಕೊಡಲಿಗೆ ಬೇಕಾದ ೧೨ ಇಂಚು ಉದ್ದ ಮತ್ತು ೧/೨ಇಂಚು ದಪ್ಪದ ಪ್ಲೇಟನ್ನು ತೆಗೆದುಕೊಂಡು ಒಲೆಯಲ್ಲಿ ಕಾಸಬೇಕು. ಮೊದಲನೇ ಕಾವಿನಲ್ಲಿ ಬಡಿದು ಬೇಕಾದ ಆಕಾರಕ್ಕೆ ತರಬೇಕು. ಎರಡನೇ ಕಾವಿನಲ್ಲಿ ಮಧ್ಯದಲ್ಲಿ ಚಾನದಿಂದ ಸೀಳಬೇಕು. ಮೂರನೇ ಕಾವಿನಲ್ಲಿ ಸೀಳಿರುವ ರಂಧ್ರವನ್ನು ಹೊಳ್ಳ ಇಲ್ಲವೇ ಎಕೆಲೆ ಅಥವಾ ಹಾರಿಕೋಲಿನಿಂದ ಅಗಲ ಮಾಡಿ ತುಂಬು ಮಾಡಿಕೊಳ್ಳಬೇಕು. ನಾಲ್ಕನೇ ಕಾವಿನಲ್ಲಿ ತುಂಬಿನ ಒಂದು ಬದಿಯ ಪ್ಲೇಟನ್ನು ಬಡಿದು ತೆಳ್ಳಗೆ ಮಾಡಬೇಕು. ಐದನೇ ಕಾವಿನಲ್ಲಿ ಕೊಡಲಿಯ ಬಾಯಿಯನ್ನು ಅರ್ಧಚಂದ್ರಾಕೃತಿ ಬರುವಂತೆ ಚೂಪಾಗಿ ಹೆಣೆಯಬೇಕು. ಮತ್ತು ತುಂಬಿನ ಇನ್ನೊಂದು ಬದಿಯಲ್ಲಿ ನಾಲ್ಕರಿಂದ ಐದರಲ್ಲಿ ಮಾಡಿರುವಂತೆ ಮಾಡಬೇಕು. ಎಂಟನೇ ಕಾವಿನಲ್ಲಿ ಬಿಸಿ ಮಾಡಿ ನೀರುಣಿಸಬೇಕು.

ಕೊನೆಯಲ್ಲಿ ಆರದಿಂದ ನಯವಾಗಿ ಉಜ್ಜಿ ಹರಿತವಾಗುವಂತೆ ಮಾಡಬೇಕು. ತುಂಬಿನಲ್ಲಿ ಕಟ್ಟಿಗೆ ಇಲ್ಲವೇ ಕಬ್ಬಿಣದ ಕಂಬಿಯನ್ನು ಜೋಡಿಸಬೇಕು. ಇದು ಪರಶುರಾಮ ಕೊಡಲಿ ಮಾಡುವ ವಿಧಾನ ವಾಗಿರುತ್ತದೆ.

ವಡ್ಡರ ಸುತ್ತಿಗೆ: ಸುತ್ತಿಗೆಗೆ ಬೇಕಾದ ಅಳತೆಯ ಕಂಬಿಯನ್ನು ತೆಗೆದುಕೊಂಡು ಒಲೆಯಲ್ಲಿ ಕಾಸಬೇಕು. ಮೊದಲನೇ ಕಾವಿನಲ್ಲಿ ಸುತ್ತಿಗೆಯಿಂದ ಹೊಡೆದು ಸುತ್ತಿಗೆ ಆಕಾರಕ್ಕೆ ತರಬೇಕು. ಎರಡನೇ ಕಾವಿನಲ್ಲಿ ಸುತ್ತಿಗೆಯ ತಲೆಯಲ್ಲಿ ಚಾನದಿಂದ ಸೀಳಬೇಕು. ಮೂರನೇ ಕಾವಿನಲ್ಲಿ ಸೀಳಿದ ರಂಧ್ರವನ್ನು ಹಾರಿಕೋಲು ಇಲ್ಲವೇ ಹೊಳ್ಳದಿಂದ ಅಗಲವನ್ನು ಮಾಡಬೇಕು. ಮತ್ತು ಬೆಟ್ನಿಯಿಂದ ಸಮತಲ ಮಾಡಬೇಕು. ನಂತರ ನೀರುಣಿಸಬೇಕು. ಕೊನೆಯಲ್ಲಿ ಕಟ್ಟಿಗೆಯ ದಿಂಡನ್ನು ತುಂಬಿನಲ್ಲಿ ಸೇರಿಸಬೇಕು.

ಉಳಿ: ಉಳಿ ಮಾಡಲು ೧/೨ ಅಗಲ ಮತ್ತು ೬ ಇಂಚು ಉದ್ದ ಹಾಗೂ ಅರ್ಧ ಇಂಚು ದಪ್ಪದ ಪ್ಲೇಟನ್ನು ತೆಗೆದುಕೊಂಡು ಒಲೆಯಲ್ಲಿ ಹಾಕಿ ಕಾಸಬೇಕು. ಮೊದಲನೇ ಕಾವಿನಲ್ಲಿ ಹೊಡೆದು ತಲೆಯ ಭಾಗವನ್ನು ಆಯುತಾಕಾರವಾಗಿ ಮಾಡಿ ಬಾಯಿಯನ್ನು ಸ್ವಲ್ಪ ಚಿಕ್ಕದು ಮಾಡಿಕೊಂಡು ಚೂಪಾಗಿ ಮಾಡಬೇಕು. ನಂತರ ಬೆಟ್ನಿಯಿಂದ ಸಮತಲ ಮಾಡಿಕೊಳ್ಳಬೇಕು. ಕೊನೆಯಲ್ಲಿ ನೀರುಣಿಸ ಬೇಕು. ತದನಂತರ ಆರದಿಂದ ಉಜ್ಜಿ ಚೂಪಾಗುವಂತೆ ಮಾಡಬೇಕು. ಇದೇ ವಿಧಾನವನ್ನು ಬಳಸಿ ವಿವಿಧ ಉಳಿಗಳನ್ನು ರಚಿಸಬಹುದು.

ಚಾನ: ಚಾನವನ್ನು ಮಾಡಲು ಉಳಿಗಳನ್ನು ಮಾಡುವ ವಿಧಾನವನ್ನೇ ಬಳಸಿ ಚಾನಗಳನ್ನು ಮಾಡಬಹುದು.

ಗರಗಸ: ಗರಸ ಮಾಡಲು ೧೬ ಗೇಜಿನ ಪ್ಲೇಟನ್ನು ತೆಗೆದುಕೊಂಡು ಒಲೆಯಲ್ಲಿ ಕಾಸಬೇಕು. ಒಂದನೇಯ ಕಾವಿನಲ್ಲಿ ಒಂದು ತುದಿಯಲ್ಲಿ ರಂಧ್ರ ಮಾಡಿಕೊಳ್ಳಬೇಕು. ಎರಡನೇಯ ಕಾವಿನಲ್ಲಿ ಮತ್ತೊಂದು ತುದಿಯಲ್ಲಿ ರಂದ್ರ ಮಾಡಬೇಕು. ತದನಂತರ ಮೂರನೇಯ ಕಾವಿನಲ್ಲಿ ಬಾಯಿಯನ್ನು ತೆಳುವಾಗಿ ಮಾಡಿಕೊಳ್ಳಬೇಕು. ಕೊನೆಯಲ್ಲಿ ಚಾನದಿಂದ ಗರಗಸ ಬಾಯಿಯನ್ನು "V" ಆಕಾರದಲ್ಲಿ ಕತ್ತರಿಸುತ್ತ ಹೋಗಬೇಕು. ಇದು ಗರಗಸವನ್ನು ಮಾಡುವ ವಿಧಾನವಾಗಿದೆ.

ಇಕ್ಕಳಗಳು : ಇಕ್ಕಳಕ್ಕೆ ೧/೨ ಇಂಚು ದಪ್ಪ, ಮತ್ತು ೩೦ ರಿಂದ ೪೫ ಸೆಂ.ಮೀ. ಉದ್ದವುಳ್ಳ ಎರಡು ಕಂಬಿಗಳನ್ನು ತೆಗೆದುಕೊಂಡು ಒಲೆಯಲ್ಲಿ ಕಾಸಬೇಕು. ಮೊದಲನೆಯ ಕಾವಿನಲ್ಲಿ ಕಂಬಿಯ ತುದಿಯನ್ನು ತಟ್ಟಿ ಬೇಕಾದ ಬಾಯಿಯನ್ನು ಮಾಡಿಕೊಳ್ಳಬೇಕು. ಉದಾಹರಣೆ ಕೊಂಡಿ, ಬೆಸುಗೆ, ದಪ್ಪ, ಸಾದಾ ಇಕ್ಕಳ, ಎರಡನೇ ಕಾವಿಯಲ್ಲಿ ಇನ್ನೊಂದು ಕಂಬಿಯನ್ನು ಮೊದಲನೇ ಕಾವಿನಲ್ಲಿ ಮಾಡಿದ ಹಾಗೆ ಮಾಡಬೇಕು. ನಂತರ ಮೂರನೇ ಕಾವಿನಲ್ಲಿ ಎರಡೂ ಕಂಬಿಗಳನ್ನು "X" ಆಕಾರದಲ್ಲಿಟ್ಟು ಅವುಗಳು ಸಂಧುವ ಜಾಗದಲ್ಲಿ ಪಾಗರಿಯಿಂದ ರಂಧ್ರ ಮಾಡಬೇಕು. ಆ ರಂಧ್ರದಲ್ಲಿ ಮೊಳೆಯನ್ನು ಒಡೆದು ಪೋಣಿಸಬೇಕು. ನಂತರ ಕೊನೆಯಲ್ಲಿ ನೀರುಣಿಸಬೇಕು. ಹೀಗೆ ಬೆಸುಗೆ ಇಕ್ಕಳ, ಕೊಂಡಿ ಇಕ್ಕಳ, ಡೊಪ್ಪ ಇಕ್ಕಳವನ್ನು ತಯಾರಿಸಬಹುದು.

ಬಕ್ಕಸ ಕೋಲು: ನಾಲ್ಕು ಮಿ.ಮೀ. ದಪ್ಪ ಮತ್ತು ೬೦ ರಿಂದ ೭೦ ಸೆಂ.ಮೀ. ಉದ್ದ ಉಳ್ಳ ತಂತಿಯಿಂದ ಮಾಡಲಾಗುವುದು. ಒಲೆಯಲ್ಲಿ ಹಾಕಿ ಕಾಸಬೇಕು. ಒಂದು ತುದಿಯನ್ನು ಹಿಡಿಯನ್ನಾಗಿ ಮಾಡಬೇಕು. ಮತ್ತೊಂದು ತುದಿಯನ್ನು ಚೂಪಾಗಿ ಮಾಡಿಕೊಳ್ಳಬೇಕು.

ತಾಂಡಾಸ: ಒಂದು ಇಂಚು ಅಗಲ ಮತ್ತು ೬೦ರಿಂದ ೭೦ ಸೆಂ.ಮೀ. ಉದ್ಧದ ಹಾಗೂ ೨ ಮಿ.ಮೀ. ದಪ್ಪದ ಪ್ಲೇಟನ್ನು ತೆಗೆದುಕೊಂಡು ಸುತ್ತಿಗೆಯಿಂದ ಬಾಗಿಸಿದರೆ ತಾಂಡಾಸವಾಗುತ್ತದೆ.

ಶ್ರಮ ಮತ್ತು ಆರ್ಥಿಕ ಜೀವನ

ಕಬ್ಬಿಣದ ಬಳಕೆಯು ಕ್ರಿ.ಪೂ. ೨೦೦೦ ರಲ್ಲಿ ನಡೆಯುತ್ತಿತ್ತು ಎಂದು ತಿಳಿದಿದ್ದೇವೆ. ಹಲವಾರು ವಿದ್ವಾಂಸರು ಪತ್ತೆ ಹಚ್ಚಿದ ಪುರಾವೆಗಳಿಂದ ಕಬ್ಬಿಣದ ಬಳಕೆ ಮತ್ತು ಉತ್ಪಾದನೆಯನ್ನು ಗುರುತಿಸಲಾಗಿದೆ. ಪೂರ್ವಪ್ರಾಚೀನ ಕಾಲದಲ್ಲಿ ಕಬ್ಬಿಣದ ಬಳಕೆ ಇತ್ತು ಎಂದಾದರೆ ಕಬ್ಬಿಣವನ್ನು ಉತ್ಪಾದಿಸುವ ಯಾವುದಾದರೂ ಒಂದು ಜನಾಂಗ ಇರಲೇಬೇಕು ಎಂದೆನಿಸುತ್ತದೆ. ಅಂತಹ ಜನಾಂಗದಲ್ಲಿ ವಿಶ್ವಕರ್ಮ ಸಮುದಾಯದವರು ಕಬ್ಬಿಣದ ಉತ್ಪಾದನೆಯನ್ನು ಮೂಲ ವೃತ್ತಿಯನ್ನು ಮಾಡಿಕೊಂಡಿದ್ದರು ಎಂದು ಇತಿಹಾಸಗಳಿಂದ ತಿಳಿಯುತ್ತೇವೆ. ಕಾಲಕ್ರಮೇಣ ಈ ವೃತ್ತಿಯು ಹಲವು ಇತರೆ ಸಮುದಾಯಗಳ ಮೂಲವೃತ್ತಿಯಾಗಿ ಆವರಿಸಿತು. ಈ ದಿಶೆಯಲ್ಲಿ ಬಯಲುಗಮ್ಮಾರ, ಘಿಸಾಡಿ, ಮುಸ್ಲಿಂ, ಬೇಡನಾಯಕ, ಹರಿಜನ(ಆದಿದ್ರಾವಿಡ), ಲಂಬಾಣಿ(ಬಂಜಾರ) ಮತ್ತು ಗೊಲ್ಲ(ಯಾದವ) ಸಮುದಾಯಗಳು ಸೇರಿವೆ. ಈ ನಿಟ್ಟಿನಲ್ಲಿ ಒಟ್ಟಾರೆಯಾಗಿ ಕುಲುಮೆ ವೃತ್ತಿಯನ್ನು ನಡೆಸುತ್ತಿರುವ ಎಲ್ಲ ಸಮುದಾಯಗಳ ಕಮ್ಮಾರರ ಶ್ರಮ ಮತ್ತು ಆರ್ಥಿಕ ಜೀವನವನ್ನು ಕುರಿತು ಹಲವಾರು ಏಳು ಬೀಳುಗಳನ್ನು ಕಾಣಬಹುದು. ಈ ದಿಸೆಯಲ್ಲಿ ಹೊಸಪೇಟೆ ತಾಲೂಕಿನ್ಯಾದಂತ ಕಬ್ಬಿಣ ಕುಲುಮೆಯನ್ನು ನಡೆಸುತ್ತಿರುವ ಕಮ್ಮಾರರ ಶ್ರಮ ಮತ್ತು ಆರ್ಥಿಕ ಜೀವನವನ್ನು ಅರ್ಥೈಸಬಹುದು.

ಮೊಟ್ಟ ಮೊದಲಿಗೆ ಕಬ್ಬಿಣದ ವೃತ್ತಿಯನ್ನು ಹೊಸಪೇಟೆ ತಾಲೂಕಿನಲ್ಲಿ ವಿಶ್ವಕರ್ಮ ಸಮುದಾಯದವರು ನಡೆಸುತ್ತಿದ್ದರು ಎನ್ನಲಾಗಿದೆ. ಈ ಸಮುದಾಯವು ಕ್ರಿ.ಪೂ. ೪ನೇ ಶತಮಾನದಲ್ಲಿ ತಯಾರಿಸುತ್ತಿದ್ದುದಾಗಿ ವ್ಯಕ್ತವಾಗುತ್ತದೆ. ಕಾರಣ ಪಕ್ಕದ ಸಂಡೂರಿನಲ್ಲಿ ಕ್ರಿ.ಶ.೪ನೇ ಶತಮಾನದಲ್ಲಿ ತಯಾರಿಸಿದ ಕಬ್ಬಿಣದ ಉಪಕರಣಗಳು ಹೆಸರುವಾಸಿಯಾಗಿವೆ. ಹಾಗಾಗಿ ಸಂಡೂರು ಮತ್ತು ಹೊಸಪೇಟೆ ಬೆಟ್ಟ-ಗುಡ್ಡಗಳಲ್ಲಿ ಕಬ್ಬಿಣದ ಅದಿರು ಹೇರಳವಾಗಿ ದೊರೆಯುತ್ತಿತ್ತು ಮತ್ತು ಇಂದಿಗೂ ಸಿಗುತ್ತಲೇ ಇವೆ. ಹಾಗೇಯೆ ಕೆ.ಗೊಲ್ಲರಹಳ್ಳಿಯಲ್ಲಿ ಕ್ರಿ.ಶ.೧೪ ರಿಂದ ೧೭ನೇ ಶತಮಾನದ ಪೂರ್ವದಲ್ಲಿ ನಡೆದ ಕಬ್ಬಿಣದ ಉತ್ಪಾದನೆಯಿಂದ ದೊಡ್ಡ ದಿಬ್ಬವೇ ಉಂಟಾಗಿದೆ.[೩೬] ಇದು ಕಮ್ಮಾರ ಶ್ರಮಗಳ ಕುರಿತು ಪ್ರಶಂಸನೀಯ ವಿಚಾರವಾಗಿದೆ.

ಮಾನವನ ನಾಗರಿಕತೆಯ ವಿಕಾಸದಲ್ಲಿ ಕಬ್ಬಿಣವು ತುಂಬ ಮಹತ್ವ ಮತ್ತು ಜನಪ್ರಿಯತೆಯನ್ನು ಪಡೆದಿದೆ. ಈ ಲೋಹವು ಪ್ರತಿಯೊಬ್ಬರಿಗೂ ತಮ್ಮ ದಿನನಿತ್ಯದ ಬದುಕಿನಲ್ಲಿ ಅವಶ್ಯವಾಗಿದೆ.

ಅಂತೆಯೇ ರಾಜರಿಗೆ ಯುದ್ಧೋಪಕರಣಗಳಿಗೆ ಅವಶ್ಯಕವಾಗಿತ್ತು. ಹಾಗಾಗಿ ಅಂದು ಹೆಚ್ಚಿನ ಕೂಲಿ ನೀಡಿ ಕಮ್ಮಾರರಿಂದ ಬೇಕಾದ ವಸ್ತುಗಳನ್ನು ತಯಾರಿಸಿಕೊಳ್ಳುತ್ತಿದ್ದರು. "ವಿಜಯನಗರದ ಅರಸರು ಅರಬ್ ದೇಶಕ್ಕೆ ಕಬ್ಬಿಣವನ್ನು ರಫ್ತು ಮಾಡಿ, ಬದಲಿಗೆ ಕುದುರೆಗಳನ್ನು ಆಮದಾಗಿ ಪಡೆದುಕೊಳ್ಳುತ್ತಿದ್ದರು" ಎಂಬುದಾಗಿ ಕೃಷ್ಣದೇವರಾಯನ ಆಳ್ವಿಕೆಯ ಕಾಲದಲ್ಲಿ ಬಂದಿದ್ದ ಪ್ರವಾಸಿಗ ಬಾರ್ಬೋಸ್ ಹೇಳಿದ್ದಾನೆ. ಹಾಗಾಗಿ ಈ ಲೋಹವು ಮಹತ್ವದ್ದಾಗಿತ್ತು ಮತ್ತು ಅಂದು ಕಮ್ಮಾರರಿಗೆ ತುಂಬಾ ಬೇಡಿಕೆ ಮತ್ತು ಉತ್ತಮ ಕೂಲಿ ದೊರಕುತ್ತಿತ್ತು ಎಂದು ಗ್ರಹಿಸಬಹುದು.[೩೭] ಹೀಗೆ ಕಮ್ಮಾರರು ತಮ್ಮ ವೃತ್ತಿಯನ್ನು ಮುಂದುವರೆಸಿಕೊಂಡು ಬರುತ್ತಿದ್ದರು. ಬ್ರಿಟಿಷರ ಆಗಮನದಿಂದ ದೇಶದಲ್ಲಿ ಹಲವಾರು ಬದಲಾವಣೆಗಳು ಕಾಣತೊಡಗಿತು. ಮೂಲ ಸೌಕರ್ಯ ಮತ್ತು ರೈಲು ಯೋಜನೆಗಳು ಜನಪ್ರಿಯವಾಗತೊಡಗಿದವು. ಈ ದಿಶೆಯಲ್ಲಿ ಯುರೋಪ್‌ಗಳಿಂದ ಪರಿಚಯವಾದ ಕೆಲವು ಬೃಹತ್ ಕೈಗಾರಿಕೆಗಳು ನಮ್ಮ ದೇಶದಲ್ಲಿ ಪಾದಾರ್ಪಣೆ ಮಾಡಿದವು, ಈ ಬೃಹತ್ ಕೈಗಾರಿಕೆಗಳ ಆಗಮನದಿಂದ ಎಷ್ಟೋ ಕಮ್ಮಾರರು ಕುಲುಮೆ ವೃತ್ತಿಯನ್ನು ಅವಲಂಬಿಸಿ ಬದುಕುತ್ತಿದ್ದವರು ಕೆಲಸಗಳಿಲ್ಲದೆ, ಜೀವನಕ್ಕಾಗಿ ಇನ್ನಿತರ ಕೆಲಸ ಗಳನ್ನು ಹುಡುಕುವ ಅನಿವಾರ್ಯ ಸ್ಥಿತಿ ತಲೆದೋರಿತು, ಕಬ್ಬಿಣದಂತಹ ಲೋಹಗಳನ್ನು ಉತ್ಪಾದಿಸುವ ಕೈಗಳು ಬೃಹತ್ ಕೈಗಾರಿಕೆಗಳ ಕಾರ್ಯ ವಿಧಾನಗಳಿಂದ ಆತಂಕಕ್ಕೋಳಗಾದರು. ಕಾರಣ ತಮ್ಮಿಂದಲೇ ಪಡೆದ ಕಬ್ಬಿಣ ತಯಾರಿಕಾ ತಂತ್ರಗಾರಿಕೆಯನ್ನು ಕೈಗಾರಿಕೆಗಳಿಗೆ ಅಳವಡಿಸಿ, ಹೆಚ್ಚಿನ ಕಬ್ಬಿಣವನ್ನು ಉತ್ಪಾದಿಸಲಾಯಿತು. ಮುಂದೆ ಕಮ್ಮಾರರು ಕೈಗಾರಿಕೆಗಳಿಗೆ ಪೈಪೋಟಿ ಎದುರಿಸದೆ, ಕೈಗಾರಿಕೆಗಳಿಂದ ಕಬ್ಬಿಣವನ್ನು ಪಡೆದು, ಚಿಕ್ಕ–ಪುಟ್ಟ ಕೃಷಿ ಮತ್ತು ಗೃಹಬಳಕೆಯ ವಸ್ತುಗಳನ್ನು ತಯಾರಿಸತೊಡಗಿದರು.

ಪ್ರಾರಂಭದಲ್ಲಿ ಕಮ್ಮಾರರು ಕೃಷಿಗೆ ಸಂಬಂಧಿಸಿದ ವಸ್ತುಗಳನ್ನು ಹೆಚ್ಚಾಗಿ ತಯಾರಿಸುತ್ತಿದ್ದರು. ಆರ್ಥಿಕ ಸ್ಥಿತಿಯು ಉತ್ತಮವಾಗಿತ್ತು. ಶ್ರಮಕ್ಕೆ ತಕ್ಕ ಕೂಲಿ ಸಿಗುತ್ತಿತ್ತು. ಆಲೆಮನೆ(ಬೆಲ್ಲ ತಯಾರಿಕೆ)ಗೆ ಅವಶ್ಯವಾದ ಕೊಪ್ಪರಿಕೆ, ಬಾನಿ, ಕಬ್ಬು ನುರಿಸುವ ಯಂತ್ರಗಳನ್ನು ತಯಾರಿಸುತ್ತಿದ್ದುದಾಗಿ ಎಡ್ವರ್ಡ್ ಥರ್ಸ್ಟನ್ ತಮ್ಮ ಲೇಖನದಲ್ಲಿ ತಿಳಿಸಿದ್ದಾರೆ.[೩೮] ಈಗ ಈ ಕೆಲಸಗಳು ಕೈಗಾರಿಕೆಗಳು ಮಾಡುತ್ತಿರುವುದರಿಂದ ಈ ಕೆಲಸಗಳು ಕೈ ತಪ್ಪಿವೆ.

ಕೃಷಿಗೆ ಸಂಬಂಧಿಸಿದ ವಸ್ತುಗಳನ್ನು ತಯಾರಿಸುತ್ತಿರುವುದನ್ನು ಇಂದು ಕಾಣುತ್ತೇವೆ. ಆಧುನಕ ಟಯರ್ ಬಂಡಿಗಳು ಬಂದಿರುವುದರಿಂದ ಬಂಡಿಗಾಲಿಯ ಅಚ್ಚು, ಇರುಸಿನ ಕೆಲಸಗಳು ಕೈ ತಪ್ಪಿ ಹೋಗಿವೆ. ಕಾರಣ ಕಮ್ಮಾರರಿಗೆ ಜ್ಞಾನದ ಕೊರತೆಯಿದ್ದು ನುರಿತ ಆಧುನಿಕ ತಂತ್ರಗಾರಿಕೆ ಇಲ್ಲದಾಗಿದೆ. ಹಾಗಾಗಿ ಇಂದು ಹಲವಾರು ಸಮುದಾಯಗಳು ಕಬ್ಬಿಣ ಕುಲುಮೆ ವೃತ್ತಿಯನ್ನು ಬಿಟ್ಟು ಬಡಿಗೆ ಕೆಲಸವನ್ನು ನಂಬಿಕೊಂಡಿವೆ. ಇಂತಹ ಕೆಲವು ಸಮುದಾಯಗಳು ಕಬ್ಬಿಣದ ಜೊತೆಗೆ ಬಡಿಗೆ ಕೆಲಸಗಳೆರಡನ್ನು ಮಾಡಿ ತಮ್ಮ ಆರ್ಥಿಕ ಜೀವನವನ್ನು ಸರಿದೂಗಿಸಲು ಹೆಣಗಾಡುತ್ತಿವೆ.

ಹೊಸಪೇಟೆ ತಾಲೂಕಿನಲ್ಲಿರುವ ಚಿಲಕನಹಟ್ಟಿಯ ಕಮ್ಮಾರ ವೆಂಕಟೇಶ ಆಚಾರ್ಯರವರ ಕುಟುಂಬವು ಕುಲುಮೆ ಜೊತೆಗೆ ಬಡಿಗೆ ವೃತ್ತಿಯನ್ನು ಅವಲಂಬಿಸಿರುವುದನ್ನು ಕಾಣುತ್ತೇವೆ.

ಹೊಸಪೇಟೆಯಲ್ಲಿನ ಮುಸ್ಲಿಂ ಸಮುದಾಯದ ಮೆಹಬೂಬ ಭಾಷಾರವರು ಕುಲುಮೆ ಜೊತೆಗೆ ಚಿಕ್ಕಪುಟ್ಟ ವೆಲ್ಡಿಂಗ್ ಕೆಲಸವನ್ನು ನಡೆಸುತ್ತಿದ್ದಾರೆ. ನಾಗೇನಹಳ್ಳಿಯ ಕಮ್ಮಾರ ಮಹೇಶ ಆಚಾರ್ಯರವರು ಕುಲುಮೆಯಲ್ಲಿ ಬಡಿಗೆ ಕೆಲಸವನ್ನು ಮಾಡುತ್ತಿದ್ದಾರೆ. ಇಂದು ಎಲ್ಲ ಸಮುದಾಯದ ಕಮ್ಮಾರರು ಕೆಲ ಅಂಗಡಿಗಳಿಗೆ ಕೃಷಿಗೆ ಸಂಬಂಧಿಸಿದ ಚಿಕ್ಕಪುಟ್ಟ ವಸ್ತುಗಳನ್ನು ಮುಂಗಡವಾಗಿ ಮಾಡಿಕೊಡುವ ಪದ್ಧತಿಯನ್ನು ನೆಚ್ಚಿಕೊಂಡಿರುವುದನ್ನು ಕಾಣುತ್ತೇವೆ.

ಆಧುನಿಕ ಕೈಗಾರಿಕರಣದಿಂದ ಹಲವಾರು ಕುಲುಮೆಗಳು ಸ್ಥಗಿತಗೊಂಡಿರುವುದನ್ನು ಕಾಣಬಹುದು. ಮರಿಯಮ್ಮನಳ್ಳಿಯ ೪ನೇ ವಾರ್ಡ್‌ನ ಕಾಳಮ್ಮನ ಗುಡಿ ಹತ್ತಿರವಿರುವ ಕಮ್ಮಾರ ದೇವಕಪ್ಪ ಆಚಾರ್ಯ ಅವರ ಕುಲುಮೆಯು ಹಿಂದಿನ ೧೫ ವರ್ಷಗಳಿಂದ ಸ್ಥಗಿತಗೊಂಡಿದೆ. ಕಮ್ಮಾರ ಕಾಳಪ್ಪ ಆಚಾರ್ಯರವರ ಕುಲುಮೆಯು ಹಿಂದಿನ ೧೩ ವರ್ಷಗಳಿಂದ ಕೆಲಸವಿಲ್ಲದೆ ಆರ್ಥಿಕ ಸಂಕಷ್ಟವನ್ನು ಎದುರಿಸದೇ ನಿಂತುಹೋಗಿದೆ. ೧ನೇ ವಾರ್ಡ್‌ನ ಸರಕಾರಿ ಪ್ರೌಢಶಾಲೆ ಹತ್ತಿರದ ಕಮ್ಮಾರ ದೊಡ್ಡ ಸೋಮಣ್ಣ ಆಚಾರ್ಯರವರ ಕುಲುಮೆಯು ಹಿಂದಿನ ೧೦ ವರ್ಷದಿಂದ ನಿಂತಿದೆ. ಹಾಗೆಯೇ ಕಮ್ಮಾರ ಬಸಪ್ಪ ಆಚಾರ್ಯ ಮತ್ತು ಕಮ್ಮಾರ ಗೋಣೆಪ್ಪ ಆಚಾರ್ಯರ ಕುಲುಮೆಗಳು ಕ್ರಮವಾಗಿ ೧೦ ವರ್ಷ ಹಾಗೂ ೬ ವರ್ಷದಿಂದ ಸ್ಥಗಿತಗೊಂಡಿರುವುದು ತಿಳಿದುಬಂದಿದೆ.

ಪಾಪಿನಾಯಕನಹಳ್ಳಿಯಲ್ಲಿರುವ ಕಮ್ಮಾರ ಕಾಡಪ್ಪ ಆಚಾರ್ಯರವರ ಕುಲುಮೆಯು ೮ ವರ್ಷದಿಂದ ನಿಂತಿದ್ದರೆ, ಕಮ್ಮಾರ ದೊಡ್ಡಪ್ಪ ಆಚಾರ್ಯರ ಕುಲುಮೆ ೩೦ ವರ್ಷದಿಂದ ನಿಂತುಕೊಂಡಿದೆ. ಕಮ್ಮಾರ ಆಚಾರ್ಯರಪ್ಪ ರವರದು ಹಿಂದಿನ ೪೦ ವರ್ಷದಿಂದ ನಿಂತುಹೋಗಿದೆ. ಶಿವಪ್ಪ ಆಚಾರ್ಯರ ಕುಲುಮೆಯು ೫೦ ವರ್ಷದಿಂದ ನಿಂತಿದೆ. ಶರಣಪ್ಪ ಆಚಾರ್ಯರ ಕುಲುಮೆ ೫೦ ವರ್ಷಗಳಿಂದ ಸ್ಥಗಿತಗೊಂಡಿದೆ. ಹಾಗೇಯೆ ಕಮ್ಮಾರ ನಾಗೇಂದ್ರ ಮತ್ತು ಭೀಮಪ್ಪ ಆಚಾರ್ಯರ ಕುಲುಮೆಯು ೮ ವರ್ಷಗಳಿಂದ ನಿಲ್ಲಿಸಿ ಹೊಸಪೇಟೆಯಲ್ಲಿ ಬಡಿಗೆ ಕೆಲಸಕ್ಕೆ ಹೋಗುತ್ತಿರುವುದು ತಿಳಿದುಬಂದಿದೆ. ಸ್ಥಗಿತಗೊಂಡ ಕುಲುಮೆಗಳ ನೆಲೆಗಳು ಬೆಟ್ಟ-ಗುಡ್ಡದ ಹತ್ತಿರ ಇರುವ ಸ್ಥಳದಲ್ಲಿರುವುದು ವಿಶೇಷವಾಗಿದೆ.

ಕುಲುಮೆಯನ್ನು ನಡೆಸುತ್ತಿರುವ ಸಮುದಾಯಗಳು ತುಂಬ ಶ್ರಮಜೀವಿಯಾಗಿದ್ದಾರೆ. ಹಿಂದೆ ಈಡಿ ದಿನ ಕುಲುಮೆಯಲ್ಲಿ ಕೆಲಸ ಮಾಡಬೇಕಿತ್ತು. ಇಂದು ಇಡಿ ದಿನ ಹೊಲದಲ್ಲಿ ದುಡಿದು ಮಧ್ಯಾಹ್ನ ಹೊತ್ತು ಕುಲುಮೆ ಕೆಲಸವನ್ನು ಮಾಡುತ್ತಿರುವುದು ಕಂಡುಬಂದಿದೆ. ತಮ್ಮ ಆರ್ಥಿಕ ಭದ್ರತೆಯನ್ನು ನೀಗಿಸಲು ಎರಡೂ ಕಡೆ ಶ್ರಮವನ್ನು ಹಾಕುವುದು ಅನಿವಾರ್ಯವಾಗಿದೆ. ಈ ವೃತ್ತಿಯು ಶ್ರಮದಾಯಕವಾಗಿದ್ದು ಕಮ್ಮಾರರು ಕೆಲವೆಡೆ ಸಂಜೆ ಹೊತ್ತು ಕಡ್ಡಾಯವಾಗಿ ಕುಡಿಯುತ್ತಾರೆ. ಹಾಗಾಗಿ ಇವರುಗಳ ಆರ್ಥಿಕ ಪರಿಸ್ಥಿತಿ ಕ್ಷೀಣಿಸುತ್ತಿದೆ. ಇದರ ನಡುವೆಯೂ ಎಲ್ಲ ಸಮುದಾಯಗಳಲ್ಲಿ ಸ್ವಲ್ಪ ಜಾಗೃತರಾಗಿ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುತ್ತಿದ್ದಾರೆ. ತೀರ ಕಡಿಮೆ ಸಂಖ್ಯೆಯಲ್ಲಿ ಶಿಕ್ಷಣವನ್ನು ಪಡೆದು ಕೆಲ ಸರ್ಕಾರಿ, ಅರೆ ಸರ್ಕಾರಿ ಮತ್ತು ಖಾಸಗಿ ಹುದ್ದೆಗಳನ್ನು ಪಡೆದಿರುವುದನ್ನು

ಕಾಣುತ್ತೇವೆ. ಆದಾಗ್ಯೂ ಕುಲುಮೆ ವೃತ್ತಿ ಸಮುದಾಯಗಳು ಕೈಗಾರಿಕರಣದಿಂದ ನಷ್ಟವನ್ನು ಅನುಭವಿಸುತ್ತಿದ್ದಾರೆ. ದುಡಿಯುವ ಕೈಗಳಿಗೆ ಕೆಲಸವಿಲ್ಲದೆ, ಶ್ರಮಕ್ಕೆ ತಕ್ಕ ಫಲವಿಲ್ಲದೆ, ವೃತ್ತಿಯನ್ನು ಬಿಡದೆ ಇದ್ದುದರಲ್ಲೇ ಜೀವನ ಸಾಗಿಸುತ್ತಿದ್ದಾರೆ. ಈ ಸಮುದಾಯಗಳ ಆರ್ಥಿಕ ಪರಿಸ್ಥಿತಿಯು ಶೋಚನೀಯವಾಗಿದೆ. ಈ ಸ್ಥಿತಿ ತಾಲೂಕಿನಲ್ಲಿರುವ ಕುಲುಮೆ ವೃತ್ತಿಯನ್ನು ನೆಚ್ಚಿಕೊಂಡಿರುವ ಎಲ್ಲ ಸಮುದಾಯಗಳದ್ದಾಗಿದೆ ಎಂದು ಹೇಳಬಹುದು.

ಅಡಿಟಿಪ್ಪಣಿಗಳು

೧. ಮಹದೇವ ಸಿ., ಸುಬ್ಬಣ್ಣ ರೈ ಮತ್ತು ಮಾಧವ ಪೆರಾಜೆ, ಹೊಸಪೇಟೆ ತಾಲೂಕು ದರ್ಶನ, ಪು.೭

೨. ಅದೇ, ಪು.೩

೩. ವಾಸುದೇವ ಬಡಿಗೇರ, ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ ಭಾಗ–೧, ಪು.೪

೪. ವಾಸುದೇವ ಬಡಿಗೇರ, ಪೂರ್ವೋಕ್ತ, ಪು.೪

೫. http://en.wikipedis.org/wiki/Iron

೬. ನಾಗೇಶರಾವ್ ಕೆ., ಮತ್ತು ಅನಂತರಾಮು ಟಿ.ಆರ್., ಪ್ರಾಚೀನ ಭಾರತದಲ್ಲಿ ಲೋಹ ತಂತ್ರಜ್ಞಾನ, ಪು.೧೯

೭. ಅದೇ, ಪು.೪೮–೪೯

೮. ಅದೇ, ಪು.೫೦

೯. ಅದೇ, ಪು.೫೦

೧೦. ಅದೇ, ಪು.೫೧–೫೨

೧೧. ಅದೇ, ಪು.೫೪

೧೨. ಕುಮಾರ್ ಬಿ.ಆರ್., ಕರ್ನಾಟಕದ ಮುದ್ದೆ ಕಂಬಾರರು, ಪು.೪೨

೧೩. ನಾಗೇಶ್ ರಾವ್ ಕೆ., ಮತ್ತು ಆನಂತರಾಮು ಟಿ.ಆರ್., ಪೂರ್ವೋಕ್ತ, ಪು.೫೦–೫೧

೧೪. ಅದೇ, ಪು.೪೨–೪೩

೧೫. ಕುಮಾರ್ ಬಿ.ಆರ್., ಪೂರ್ವೋಕ್ತ, ಪು.೧೬

೧೬. ಅದೇ, ಪು.೧೬

೧೭. ಅದೇ, ಪು.೨೦

೧೮. ಅದೇ, ಪು.೨೧

೧೯. ಅದೇ, ಪು.೨೪

೨೦. ಅದೇ, ಪು.೨೫

೨೧. ಬಸವರಾಜ. ಎಸ್. ಹಿರೇಮಠ ಮತ್ತು ಅಂಜಲಿ ಸಾಳೊಂಕಿ, ಘಿನಾಡಿ, ಪು.೯

೨೨. ಬಸವರಾಜ. ಎಸ್. ಹಿರೇಮಠ ಮತ್ತು ಅಂಜಲಿ ಸಾಳೊಂಕಿ, ಘಿನಾಡಿ, ಪೂರ್ವೋಕ್ತ, ಪು.೯–೧೧

೨೩. ಅದೇ, ಪು.೯–೧೦

೨೪. ಅದೇ, ಪು.೯–೧೦

೨೫. ಸಯ್ಯದ್ ಅಬುಲ್ ಆಲಾ ಮೌದಾದಿ, ಇಸ್ಲಾಂ ಧರ್ಮ, ಪು.೭

೨೬. ಸೈಯ್ಯದ್ ಅಬುಲ್ ಅಲಾ ಮೌದೂದಿ, ಕುತಬಾತ್ ಇಸ್ಲಾಂನ ಬುನಾದಿಗಳು, ಪು.೨೧

27. http/wikipedia.org/wiki/lohar

೨೮. ಕೃಷ್ಣಮೂರ್ತಿ ಹನೂರು, ಮ್ಯಾಸಬೇಡರ ಸಂಸ್ಕೃತಿ, ಪು.೪೭

೨೯. ಅರ್ಜುನ ಗೊಳಸಂಗಿ, ದಲಿತ ಎಂದರೆ ಯಾರು? ದಲಿತರ ಬದುಕು ಮತ್ತು ಸಂಸ್ಕೃತಿ, ಪು.೧೨

೩೦. ಅದೇ, ಪು.೧೧೨

೩೧. ಖಂಡೋಬ.ಪಿ.ಕೆ., ಕರ್ನಾಟಕದ ಲಂಬಾಣಿಗಳು ಒಂದು ಸಾಂಸ್ಕೃತಿಕ ಅಧ್ಯಯನ, ಪು.೨೦

೩೨. ಅದೇ, ಪು.೨೦

೩೩. ಅದೇ, ಪು.೨೦

೩೪. ಶಂಕರನಾರಾಯಣ ತೀ.ನಂ., ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು, ಪು.೨೧

೩೫. ಬಸವರಾಜ ಎಸ್. ಹಿರೇಮಠ ಮತ್ತು ಅಂಜಲಿ ಸಾಳುಂಕಿ, ಪೂರ್ವೋಕ್ತ, ಪು.೯೫

೩೬. ವಾಸುದೇವ ಬಡಿಗೇರ, ಪೂರ್ವೋಕ್ತ, ಪು.೧೪

೩೭. ಕುಮಾರ ಬಿ.ಆರ್., ಪೂರ್ವೋಕ್ತ, ಪು.೧೪೪

೩೮. ಅದೇ, ಪು.೧೪೪

ಅಧ್ಯಾಯ ೪

ಕುಲುಮೆ ಸಮುದಾಯದ ಆಚರಣೆಗಳು ಮತ್ತು ನಂಬಿಕೆಗಳು

೪.೧. ಆಚರಣೆಗಳು

೪.೨. ನಂಬಿಕೆಗಳು

ಅಧ್ಯಾಯ ನಾಲ್ಕು

ಕುಲುಮೆ ಸಮುದಾಯದ ನಂಬಿಕೆಗಳು ಮತ್ತು ಆಚರಣೆಗಳು

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ನಂಬಿಕೆ ಮತ್ತು ಆಚರಣೆಗಳು ಎಂಬ ಅಧ್ಯಾಯವು ಕೇವಲ ಒಂದು ವ್ಯಕ್ತಿ ಇಲ್ಲವೆ ಸಮುದಾಯಕ್ಕೆ ಸೀಮಿತಗೊಳ್ಳದೆ ಇಡೀ ಕುಲುಮೆ ವೃತ್ತಿಗಳನ್ನು ನಡೆಸುತ್ತಿರುವ ಎಲ್ಲ ಸಮುದಾಯಗಳ ಕುರಿತಾಗಿದೆ. ಆ ಸಮುದಾಯಗಳು ತಮ್ಮ ವೃತ್ತಿಗೆ ಹೊಂದಿ ಕೊಂಡಂತೆ ತಳೆದಿರುವ ಹಲವಾರು ನಂಬಿಕೆ ಮತ್ತು ಆಚರಣೆಗಳನ್ನು ಚರ್ಚಿಸಲಾಗುತ್ತವೆ. ಯಾವುದೇ ಒಂದು ವ್ಯಕ್ತಿಯ ಇಲ್ಲವೆ ಸಮುದಾಯದ ಕುರಿತ ನಂಬಿಕೆಗಳು ಹುಟ್ಟುವುದು ಮತ್ತು ಆಚರಣೆಗಳು ನಡೆಯುವುದು ಆಕಸ್ಮಿಕವೇ ಸರಿ. ಆದರೂ ಅಂತಹ ನಂಬಿಕೆ ಮತ್ತು ಆಚರಣೆಗಳು ಪ್ರತಿಯೊಬ್ಬ ವ್ಯಕ್ತಿ ಇಲ್ಲವೆ ಸಮುದಾಯದಲ್ಲಿ ತಳಉರಿರುವುದು ಸತ್ಯ. ನಂಬಿಕೆ ಮತ್ತು ಆಚರಣೆಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಎಲ್ಲಿ ನಂಬಿಕೆಗಳಿರುತ್ತವೆಯೋ ಅಲ್ಲಿ ಆಚರಣೆಗಳು ಇದ್ದಿರುತ್ತವೆ. ಎಲ್ಲಿ ನಂಬಿಕೆಗಳಿರುವುದಿಲ್ಲವೋ ಅಂತಹ ಕಡೆ ಆಚರಣೆಗಳು ಸಹ ಇರುವುದಿಲ್ಲ ಎಂಬುದು ಸುಸ್ಪಷ್ಟ. ಹಾಗಾಗಿ ನಂಬಿಕೆ ಬಿಡಿಸಲಾಗದ ಗಂಟಾದರೆ, ಆಚರಣೆಯು ಕೊನೆಯಾಗದ ನಂಟು ಎಂದು ಹೇಳಬಹುದು. ನಂಬಿಕೆಯು ವ್ಯಕ್ತಿ–ವ್ಯಕ್ತಿ ಅಥವಾ ವ್ಯಕ್ತಿ–ಸಮುದಾಯದ ಮನಸ್ಸುಗಳಿಗೆ ಸಂಬಂಧಿಸಿದರೆ ಆಚರಣೆಯು ವ್ಯಕ್ತಿ ಇಲ್ಲವೆ ವೃತ್ತಿ ದೈವಗಳಿಗೆ ಸಂಬಂಧಿಸಿದುದಾಗಿದೆ. ಹಾಗಾಗಿ ಪ್ರತಿಯೊಬ್ಬ ವ್ಯಕ್ತಿ ಇಲ್ಲವೆ ಸಮುದಾಯಗಳಲ್ಲಿ ನಂಬಿಕೆಗಳ ಜೊತೆಗೆ ಆಚರಣೆಗಳನ್ನು ನೋಡುತ್ತೇವೆ. ಈ ದಿಶೆಯಲ್ಲಿ ಹೊಸಪೇಟೆ ತಾಲೂಕಿನ ಕುಲುಮೆ ವೃತ್ತಿಯನ್ನು ನಡೆಸುತ್ತಿರುವ ವಿಶ್ವಕರ್ಮ, ಬಯಲುಗಮ್ಮಾರ, ಘಿಸಾಡಿ, ಮುಸ್ಲಿಂ, ಬೇಡನಾಯಕ, ಹರಿಜನ, ಲಂಬಾಣಿ ಮತ್ತು ಗೊಲ್ಲ ಸಮುದಾಯಗಳು ವೃತ್ತಿ ಬದುಕಿಗೆ ಹೊಂದಿಕೊಂಡಂತೆ ಹೊಂದಿರುವ ಹತ್ತು ಹಲವಾರು ನಂಬಿಕೆ ಮತ್ತು ಆಚರಣೆಗಳನ್ನು ಕಾಣಬಹುದಾಗಿದೆ.

೪.೧. ಆಚರಣೆಗಳು

ಯಾವುದೇ ಒಂದು ಸಮುದಾಯವು ತನ್ನ ಸಂಸ್ಕೃತಿಯನ್ನು ಇಲ್ಲವೆ ಸಂಸ್ಕೃತಿಯ ಯಾವುದೊ ಒಂದು ಉತ್ತಮವಾದ ವಿಷಯವನ್ನು ಅಥವಾ ತಮ್ಮ ಕುಲದೈವ ಇಲ್ಲವೆ ಕುಲವೃತ್ತಿಯ ಹಿರಿತನವನ್ನು ಭದ್ರಪಡಿಸಲು, ಪ್ರಚುರ ಪಡಿಸಲು, ಉನ್ನತ ನಾಗರಿಕತೆಗೆ ಸೇರಿಸಲು, ನಮ್ಮ ಸಮುದಾಯ ಪ್ರಾಚೀನ ಕಾಲದ್ದು ಅಂತ ಹೇಳಿಕೊಳ್ಳಲು ಸದಾ ಯಾವುದಾದರೂ ವಿಶಿಷ್ಟವಾದ ಆಚರಣೆಗಳನ್ನು ನಡೆಸಿಕೊಂಡು ಬಂದಿರುವುದು ಸರ್ವವ್ಯಾಪಿಯಾಗಿದೆ. ಆಚರಣೆಯು ಕೇವಲ ಒಬ್ಬ ವ್ಯಕ್ತಿ ಅಥವಾ ಒಂದು ಜನಾಂಗಕ್ಕೆ ಸೀಮಿತವಾಗದೆ, ಪ್ರತಿಯೊಂದು ಸಮುದಾಯದ ಒಡಲಿನಲ್ಲಿ ಜನಿಸಿದ ಆಚರಣೆಗಳಾಗಿರುತ್ತವೆ. ಆಚರಣೆಗಳನ್ನು ಜೀವನಾವರ್ತನ ಮತ್ತು ಧಾರ್ಮಿಕ ಆಚರಣೆಗಳು ಎಂದು ವಿಂಗಡಿಸಬಹುದು. ಜೀವನಾವರ್ತನ ಆಚರಣೆಗಳು ಮಾನವನ ಜೀವನದ ಹುಟ್ಟು ಮತ್ತು ಸಾವುಗಳ ಮಧ್ಯೆ ಬರುವಂತವು ಹಾಗೇಯೆ ಧಾರ್ಮಿಕ ಆಚರಣೆಗಳು ಒಬ್ಬ ವ್ಯಕ್ತಿ ಇಲ್ಲವೆ ಆಯಾ ಸಮುದಾಯ ತಳೆದಿರುವ, ಪೂಜಿಸುವ ಆಚಾರ-ವಿಚಾರ, ನಂಬುವ ಕುಲದೈವ, ಇಲ್ಲವೆ ವೃತ್ತಿದೈವಗಳ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿರುವ ಆಚರಣೆಗಳಾಗಿವೆ. ಹಾಗಾಗಿ ಆಯಾ ಸಮುದಾಯಗಳು ತಮ್ಮ ಸಮುದಾಯದ ವಿಶಿಷ್ಟ ಆಚರಣೆಗಳನ್ನು ತಮ್ಮ ಸಂಸ್ಕೃತಿಗನುಗುಣವಾಗಿ ನಡೆಸುತ್ತಲೇ ಬರುತ್ತಿರುವುದನ್ನು ಕಾಣುತ್ತೇವೆ. ಅಂತಹ ಆಚರಣೆಗಳು ತಮ್ಮ ಸಮುದಾಯದ ಒಂದು ವಿಶಿಷ್ಟ ವ್ಯಕ್ತಿ ಇಲ್ಲವೆ ಸಮುದಾಯ ಅಥವಾ ತಾವು ನಡೆಸುತ್ತಿರುವ ವೃತ್ತಿ ಕುರಿತು ಇರುತ್ತವೆ. ಈ ದಿಕ್ಕಿನಲ್ಲಿ ಕುಲುಮೆ ವೃತ್ತಿ ಇಲ್ಲವೆ ಕಬ್ಬಿಣದ ವಸ್ತು ಮತ್ತು ಉಪಕರಣಗಳ ಕುರಿತು ಆಚರಣೆಯನ್ನು ಹೊಂದಿರುವ ಹೊಸಪೇಟೆ ತಾಲೂಕಿನ ಕುಲುಮೆ ವೃತ್ತಿ ನಡೆಸುತ್ತಿರುವ ಕೆಲ ಸಮುದಾಯಗಳಲ್ಲಿ ಕಾಣುತ್ತೇವೆ.

ಆಚರಣೆಗಳು : ವಿಶ್ವಕರ್ಮ ಸಮುದಾಯವು ವೃತ್ತಿ ಮೂಲ ಸಮುದಾಯಗಳಲ್ಲಿ ಒಂದಾಗಿದ್ದು ಕುಲುಮೆ ವೃತ್ತಿಯಲ್ಲಿ ಈ ಸಮುದಾಯಕ್ಕೆ ಅಗ್ರಸ್ಥಾನವಿದೆ. ಈ ಸಮುದಾಯದ ಕುಲವೃತ್ತಿಯಾದ ಕುಲುಮೆಗಳಲ್ಲಿ ಬಳಕೆಯಾಗಿರುವ ಸಾಮಗ್ರಿಗಳಾದ ಅಡಿಗಲ್ಲು, ತಿದಿ, ಚಮ್ಮಟಿಗೆ, ಇಕ್ಕಳ, ಮತ್ತಿತ್ತರ ವಸ್ತುಗಳು ಅವರಿಗೆ ಪೂಜ್ಯನೀಯವಾಗಿರುತ್ತವೆ. ಹಾಗಾಗಿ ಅಂತಹ ಸಾಮಗ್ರಿಗಳ ಕುರಿತು ಇರುವ ಹಲವಾರು ಆಚರಣೆಗಳು ತಮ್ಮ ಸಮುದಾಯದಲ್ಲಿವೆ. ಈ ಸಮುದಾಯದ ಕುಲುಮೆ ವೃತ್ತಿಯಲ್ಲಿ ಬರುವ ಉಪಕರಣ ಮತ್ತು ಸಲಕರಣೆಗಳ ಬಗೆಗೆ ಕುರಿತ ಹಲವಾರು, ಕಥೆ, ಐತಿಹ್ಯ ನಂಬಿಕೆ ಮತ್ತು ಆಚರಣೆಗಳಿವೆ. ಈ ಸಮುದಾಯದವರು ಕುಲುಮೆ ವೃತ್ತಿಯನ್ನು ಸ್ತ್ರೀದೈವ ಕಾಳಿಯನ್ನು ಹೋಲಿಸುತ್ತಾರೆ. ಈ ಸಮುದಾಯದವರು ಬಳಸುವ ಸಲಕರಣೆಗಳ ಕುರಿತು ಕಥೆಗಳವೆ. "ತಾವು ಶಿವನ ವಂಶಸ್ಥರಾಗಿದ್ದು, ಮೂಲತಃ ಶಿವನೇ ಕಮ್ಮಾರನಾಗಿದ್ದನು. ಅವನು ತನ್ನ ಬಲತೊಡೆಯನ್ನು ಅಡಿಗಲ್ಲನ್ನಾಗಿ ಮಾಡಿಕೊಂಡಿದ್ದ. ಹಾಗೆಯೇ ಎಡಗೈಯನ್ನು ಇಕ್ಕಳವಾಗಿಸಿಕೊಂಡು ಹೆಣೆದು ಇತರ ಪಾಂಚಾಲರಿಗೆ ಬೇಕಾದ ಉಪಕರಣಗಳನ್ನು ತಯಾರಿಸಿಕೊಡುತ್ತಿದ್ದ, ಭೂಮಿ ಊಳಲು ಬೇಕಾದ ಮಡಿಕೆ, ಕುಂಟೆಗಳನ್ನು ರೈತನಗೆ ಒದಗಿಸುತ್ತಿದ್ದ" ಎನ್ನುವ ಪೌರಾಣಿಕ ಹಿನ್ನೆಲೆಯ ಐತಿಹ್ಯ ಮತ್ತು ಶಿವನ ತ್ರಿಶೂಲವೇ ಇಕ್ಕಳ, ಡಮರುಗುವೇ ಸುತ್ತಿಗೆ, ಹೊಟ್ಟೆಯೇ ತಿದಿ, ಅವನ ಮೂರನೆಯ ಕಣ್ಣೇ

ಬೆಂಕಿ ಎನ್ನುವಂತಹ ಕಥೆ ಇದೆ. ಶಿವನ ರೂಪವಾಗಿ ಭರಮಪ್ಪನಿದ್ದರೆ ಪಾರ್ವತಿಯಾಗಿ ಕಾಳಿ ಇದ್ದಾಳೆ. ಆ ಎರಡೂ ದೈವಗಳ ಹಿನ್ನೆಲೆಯಲ್ಲಿಯೇ ಮತ್ತು ಇವರ ವೃತ್ತಿಗೆ ಹೊಂದಿಕೊಂಡಂತೆ ಸಲಕರಣೆಗಳ ಕುರಿತು ಆಚರಣೆಗಳು ಬಳಕೆಯಲ್ಲಿವೆ ಎಂದು ಹೇಳಬಹುದು.[೧] ಹಾಗಾಗಿ ಈ ಸಮುದಾಯದಲ್ಲಿ ಕಾಳಿಯೇ ಮೂಲ ಮತ್ತು ಆರಾಧ್ಯದೈವವಾಗಿರುವುದರಿಂದ ಇವಳಿಗೆ ಕುರಿತು ಹಲವಾರು ಆಚರಣೆಗಳು ಪ್ರಚಲಿತದಲ್ಲಿವೆ. ಮತ್ತು ಪ್ರತಿಯೊಂದು ಕುಲುಮೆಯಲ್ಲಿ ಕಾಳಮ್ಮ ದೇವಿಯನ್ನು ಸ್ಥಾಪಿಸಿರುತ್ತಾರೆ. ಒಂದು ವೇಳೆ ಸ್ಥಾಪಿಸಿರದಿದ್ದರೆ. ಕುಲುಮೆಯನ್ನು ಕಾಳಿ ಎಂತಲೂ ಮತ್ತು ಅಡಿಗಲ್ಲನ್ನು ಶಿವ ಎಂತಲೂ, ಕಮಟೇಶ್ವರ ಎಂತಲೂ ಪೂಜಿಸುವ ಪರಿಪಾಠವನ್ನು ಹೊಂದಿದ್ದಾರೆ. ಸಾಮಾನ್ಯವಾಗಿ ವಿಶ್ವಕರ್ಮದವರು ಕುಲುಮೆಗೆ ಅವಶ್ಯವಾದ ಸಾಮಗ್ರಿಗಳನ್ನು ತಾವೇ ತಯಾರಿಸಿ ಕೊಳ್ಳುತ್ತಿದ್ದರು. ಇತ್ತೀಚಿಗೆ ಅಡಿಗಲ್ಲಿನಂತಹ ಸಲಕರಣೆಗಳನ್ನು ಮಾರುಕಟ್ಟೆಯಲ್ಲಿ ಕೊಂಡುತರುತ್ತಿದ್ದಾರೆ. ಅಂತಹ ಅಡಿಗಲ್ಲನ್ನು ಶುದ್ಧೀಕರಿಸಿಕೊಳ್ಳುವ ಆಚರಣೆಯನ್ನು ಕಾಣತ್ತೇವೆ. ಕುಲುಮೆಗೆ ಅವಶ್ಯವಾದ ಸಾಮಗ್ರಿಗಳನ್ನು ತಯಾರಿಸಲು ಕಬ್ಬಿಣಕ್ಕೆ ಮೊದಲು ಕುಲುಮೆಯ ವಿಭೂತಿ ಹಚ್ಚಿ ಪೂಜಿಸಿದ ನಂತರವೇ ಆ ಕಬ್ಬಿಣದಿಂದ ಬೇಕಾದ ಉಪಕರಣವನ್ನು ತಯಾರಿಸುವ ಆಚರಣೆ ಕಂಡುಬರುತ್ತದೆ. ಮಾರುಕಟ್ಟೆಯಲ್ಲಿ ಕೊಂಡುತಂದ ಉಪಕರಣಗಳನ್ನು ತುಂಬಿದ ಕೊಡದ ನೀರಿನಿಂದ ತೊಳೆದು, ಕುಲುಮೆ ಮುಂಭಾಗಕ್ಕೆ ಇಟ್ಟು, ಕುಲುಮೆ ಬೂದಿಯನ್ನು ವಿಭೂತಿಯಿಂತೆ ಹಚ್ಚಿ, ಕುಂಕುಮ, ಹೂವು ಹಾಕಿ ಪೂಜಿಸುತ್ತಾರೆ. ಪೂಜೆ ಮಾಡದಿದ್ದಲ್ಲಿ ಸಾಮಗ್ರಿಗಳು ಕೆಲಸದ ಮಧ್ಯೆ ಕೈಕೊಡುತ್ತವೆ ಎಂದು ಭಾವಿಸುತ್ತಾರೆ. ಪ್ರತಿದಿನ ಕುಲುಮೆ ಕೆಲಸ ಪ್ರಾರಂಭಿಸುವಾಗ ಸಾಮಗ್ರಿಗಳನ್ನು ತೊಳೆದು ಪೂಜೆ ಮಾಡಿಯೇ ಮುಂದಿನ ಕೆಲಸ ನಡೆಯುವುದು. ಕುಲುಮೆಯಲ್ಲಿ ಮಂಗಳವಾರ ಮತ್ತು ಶುಕ್ರವಾರ ದಿನದಂದು ವಿಶೇಷ ಪೂಜೆ ಮಾಡುತ್ತಾರೆ. ಪೂಜಿಸದಿದ್ದಲ್ಲಿ ಕಾಳಿ ದೈವವು ಸಿಟ್ಟಾಗುತ್ತಾಳೆ ಎನ್ನುವ ಭಯವಿದೆ. ಹಾಗೇಯೆ ನವರಾತ್ರಿ ಮತ್ತು ಶ್ರಾವಣ ಮಾಸಗಳಲ್ಲಿ ಕುಲುಮೆ ಮತ್ತು ಸಾಮಗ್ರಿಗಳನ್ನು ಪೂಜಿಸಿಬೇಕೆನ್ನುವ ಸಾಂಪ್ರದಾಯವನ್ನು ಹೊಂದಿದ್ದಾರೆ. ಪ್ರಮುಖವಾಗಿ ನವರಾತ್ರಿಯ ದಿನಗಳಲ್ಲಿ ಕುಲುಮೆಗೆ ಮತ್ತು ಸಾಮಗ್ರಿಗಳಿಗೆ ವಿಶೇಷ ಪೂಜೆಯನ್ನು ಮಾಡುತ್ತಾರೆ. ಇನ್ನು ಆಯುಧ ಪೂಜೆ ಬಂದಿತೆಂದರೆ ಸಾಕು, ಇಡೀ ಸಮುದಾಯವೇ ಪೂಜೆ-ಪುನಸ್ಕಾರಗಳಲ್ಲಿ ತಲ್ಲೀನರಾಗಿರುವುದನ್ನು ಕಾಣುತ್ತೇವೆ. ಆಯುಧ ಪೂಜೆ ದಿನದಂದು ವಿಶೇಷವಾಗಿ ಸಾಮಗ್ರಿಗಳಿಗೆ ತುಂಬಿದ ಕೊಡದ ನೀರಿನಂದ ತೊಳೆಯಲಾಗುತ್ತದೆ. ಕುಲುಮೆಗೆ ಆಕಳ ಸಗಣಿಯಿಂದ ಸಾರಿಸಿ, ಕುಲುಮೆಯ ಗೋಡೆಗೆ ಕೆಮ್ಮಣ್ಣನ್ನು ಹಚ್ಚುತ್ತಾರೆ. ಕುಲುಮೆಯ ಮುಂಭಾಗಕ್ಕೆ ಮತ್ತು ಆಡಿಗಲ್ಲಿನ ಅಕ್ಕ ಪಕ್ಕದಲ್ಲಿ ಇಕ್ಕಳಗಳು, ಬಕ್ಕಸಗೋಲು, ಸುತ್ತಿಗೆ, ಚಮ್ಮಟಿಗೆ, ಗುದ್ದಿ, ಪಾಗರಿ, ಹಾರಿ, ಚಾನ, ತಾಂಡಾಸ, ಅರ ಮುಂತಾದ ಸಾಮಗ್ರಿಗಳನ್ನು ಒಂದರ ಪಕ್ಕ ಒಂದರಂತೆ ಹೊಂದಿಸಿ ಜೋಡಿಸ ಲಾಗುತ್ತದೆ. ಕುಲುಮೆ ಬೂದಿಯನ್ನು ಈ ಸಾಮಗ್ರಿಗಳಿಗೆ ವಿಭೂತಿಯಂತೆ ಹಚ್ಚಲಾಗುತ್ತದೆ. ಅಂದೇ ಎರಡು ಜೋಡಿಕೋಳಿಗಳನ್ನು (ಹ್ಯಾಟಿ ಮತ್ತು ಹುಂಜ) ಬಲಿ ನೀಡಿ ಅವುಗಳ ರಕ್ತವನ್ನು ಅಡಿಗಲ್ಲು ಮತ್ತು ಎಲ್ಲ ಸಾಮಗ್ರಿಗಳ ಮೇಲೆ ಹಾಗೂ ಕುಲುಮೆಗೆ ಚಿಮುಕಿಸಲಾಗುತ್ತದೆ. ಶ್ರಾವಣ ಮಾಸದಲ್ಲಿ ಕೂಡ ಮಹತ್ವದ ಪೂಜೆ ಮಾಡುವುದನ್ನು ಕಾಣಬಹುದು. ಶ್ರಾವಣ ಮಾಸದ ಮೂರನೆಯ

ಬುದವಾರ ತಮ್ಮ ತಮ್ಮ ಊರುಗಳಿಂದ ಕಬ್ಬಿಣದ ಅದಿರಿನ ಅಂಶವಿರುವ ಕಲ್ಲನ್ನು ತರಲು ಬೆಟ್ಟ-ಗುಡ್ಡಗಳಿಗೆ ಹೋಗುವುದು ಮತ್ತು ಶ್ರಾವಣದ ಮೂರನೆಯ ಶುಕ್ರವಾರದಂದು ಕಬ್ಬಿಣದ ಕಲ್ಲನ್ನು ಹೊಂದಿರುವ ಬೆಟ್ಟಗುಡ್ಡಗಳಿಗೆ ಪೂಜಿಸಿ, ಅಂದಿನಿಂದ ಕಲ್ಲುಗಳನ್ನು ತರಲು ಪ್ರಾರಂಭಸುತ್ತಿದ್ದರು. ಹೀಗೆ ಮಾಡುವುದರಿಂದ ಪ್ರಯಶಃ ಉತ್ತಮವಾದ ಕಬ್ಬಿಣದ ಅಂಶವಿರುವ ಅದಿರಿನ ಕಲ್ಲುಗಳು ದೊರೆಯುತ್ತವೆ ಎಂಬ ಭಾವನೆಯಿರಬೇಕು ಎಂದೆನಸುತ್ತದೆ. ಬೇಸಿಗೆ ಬರುವವರೆಗೂ ಕಲ್ಲುಗಳನ್ನು ಹಗೆವುಗಳಲ್ಲಿ ಸಂಗ್ರಹಿಸಿ ಮಳೆಗಾಲದ ನಂತರ ಬೇಸಿಗೆ ದಿನಗಳಲ್ಲಿ ಕಬ್ಬಿಣವನ್ನು ಕರಗಿಸುವ ವೃತ್ತಿಗೆ ಇಳಿಯುತ್ತಿದ್ದರು. ಇಂದು ಕಲ್ಲನ್ನು ತರುವ ಕೆಲಸ ಸ್ಥಗಿತಗೊಂಡು ಅದನ್ನು ನೆನೆದು ಆಚರಿಸುವ ಪೂಜೆ ಮಾತ್ರ ನಡೆಯುತ್ತಿದೆ.

ವಿಶ್ವಕರ್ಮ ಸಮುದಾಯ ಕಮ್ಮಾರರಿಗೆ ಇನ್ನೊಂದು ಮಹತ್ವದ ಆಚರಣೆ ಎಂದರೆ ಗೌರಿ ಹುಣ್ಣಿಮೆ. ಈ ಹುಣ್ಣಿಮೆಯ ಮಂಗಳವಾರ ಅಥವಾ ಶುಕ್ರವಾರದಂದು ಕುಲುಮೆಯನ್ನು ಆಕಳ ಸಗಣಿಯಿಂದ ಸಾರಿಸಿ, ಹೊಸ ಸೀರೆ ಉಡಿಸಿ, ತನ್ನಟ್ಟು, ಚಿಗಳಿ, ಅಕ್ಕಿ, ಬೇಳೆ, ಫಲ ತಾಂಬೂಲಾದಿ ಗಳನ್ನು ಕುಲುಮೆಗೆ ಉಡಿ ತುಂಬಿ ಪೂಜಿಸುವ ಆಚರಣೆಯು ಸಾಮಾನ್ಯವಾಗಿದೆ. ಕಾರಣ ಕುಲುಮೆ ಯನ್ನು ಕಾಳಿಯೆಂದೂ, ಸ್ತ್ರೀದೈವವೆಂತಲೂ ಭಾವಿಸಿರುವುದನ್ನು ಈ ಆಚರಣೆಯಿಂದ ತಿಳಿದುಬರುತ್ತದೆ.

ಈ ಸಮುದಾಯವವರು ತಮ್ಮ ಕುಲುಮೆಯನ್ನು ಕಾಳಿ ಎಂದು ಭಾವಿಸಿ, ಹಲವಾರು ಆಚರಣೆಗಳನ್ನು ನಡೆಸುತ್ತಿರುವುದನ್ನು ಕಾಣುತ್ತೇವೆ. ಪ್ರತಿಯೊಂದು ಕಮ್ಮಾರ ಕುಲುಮೆಯಲ್ಲಿ ಕಾಳಿದೈವ ಮತ್ತು ಭರಮಪ್ಪ ದೈವಗಳಿರುವುದನ್ನು ಕಾಣುತ್ತೇವೆ. ಹಾಗೆಯೇ ಕಮ್ಮಾರರು ಹೆಚ್ಚಾಗಿ ನೆಲೆಸಿರುವ ಊರುಗಳಲ್ಲಿ ಮತ್ತು ಓಣಿಗಳಲ್ಲಿ ಸ್ವತಃ ಕಾಳಮ್ಮ ದೇವಸ್ಥಾನವನ್ನು ನಿರ್ಮಿಸಲಾಗಿದೆ. ಈ ದೇವತೆಗಳ ಬಗೆಗೆ ಇರುವ ಪೂಜ್ಯನೀಯ ಭಾವನೆಯಿಂದ ವರ್ಷವೆಲ್ಲ ಜಾತ್ರೆ, ಹಬ್ಬ ಮತ್ತು ಆಚರಣೆಗಳನ್ನು ನಡೆಸುತ್ತಿದ್ದಾರೆ. ಇವಳ ಹೆಸರಿನಲ್ಲಿ 'ಕಾಳಿಯ ಜಾತ್ರೆ', 'ಕಾಳಿ ಗುಳೆ ಹೋಗುವುದು', 'ಭೀಮನಗಂಡಿ ಜಾತ್ರೆ' ಇತ್ಯಾದಿಗಳು ನಡೆಯುತ್ತವೆ. ಹೊಸಪೇಟೆಯ ಕೆ.ಗೊಲ್ಲರಹಳ್ಳಿ, ಚಿಲಕನಹಟ್ಟಿ ಮತ್ತು ಕಮಲಾಪುರ ಗಳಲ್ಲಿ ಕಾಳಮ್ಮ ದೇವಸ್ಥಾನವನ್ನು ಸ್ಥಾಪಿಸಲಾಗಿದೆ. ಹಾಗೇಯೆ ಇವರ ಸಮುದಾಯ ವಾಸಿಸುವ ಸ್ಥಳಗಳಲ್ಲಿ ಕಾಳಮ್ಮ ಪ್ರತಿರೂಪವಾಗಿ ವಿವಿಧ ಹೆಸರಿನ ಸ್ತ್ರೀ ದೈವದ ಆಚರಣೆಗಳು ನಡೆಯುವುದನ್ನು ಕಾಣುತ್ತವೆ. ಉದಾ: ಸಿರಸಂಗಿ ಕಾಳಮ್ಮ, ಹುಲಿಕಟ್ಟೆ ಗುಳೇದ ಲಕ್ಕಮ್ಮ ಆಗಿವೆ.

ಸ್ತ್ರೀದೈವಗಳಂತೆ ಪುರುಷ ದೈವಗಳನ್ನು ಪೂಜಿಸುವುದು ಇವರ ಸಾಂಪ್ರದಾಯವಾಗಿದೆ. ಅಡಿಗಲ್ಲಿನ ಶಿವನ ರೂಪವಾಗಿ ಭರಮಪ್ಪನನ್ನು ಪೂಜಿಸುತ್ತಾರೆ. ಕಮಟೇಶ್ವರ ಎಂತಲೂ ಕರೆಯುತ್ತಾರೆ. ತಿಂತಣಿ ಮೌನೇಶ್ವರ ಆಚರಣೆಯನ್ನು ನಡೆಸಲಾಗುತ್ತದೆ. ಹೀಗೆ ವಿಶ್ವಕರ್ಮ ಸಮುದಾಯದಲ್ಲಿ ಕುಲುಮೆ ವೃತ್ತಿ ಮತ್ತು ಕಬ್ಬಿಣ ಸಾಮಗ್ರಿಗಳ ಕುರಿತು ಹತ್ತು ಹಲವಾರು ಆಚರಣೆಗಳನ್ನು ಇಟ್ಟುಕೊಂಡಿರುವುದನ್ನು ಕಾಣಬಹುದು. ಈ ಆಚರಣೆಗಳನ್ನು ಹಿರೇಮನೆ ಮತ್ತು ಚಿಕ್ಕಮನೆ ಪಂಗಡಗಳೆರಡರಲ್ಲಿಯೂ ಕಾಣುತ್ತೇವೆ. ಎರಡು ಪಂಗಡದವರು ಕಾಳಮ್ಮನನ್ನು ಪೂಜ್ಯನೀಯವಾಗಿ ಆಚರಿಸುತ್ತಾರೆ. ಕಾಳಿ ಮತ್ತು ಭರಮಪ್ಪ ಎರಡು ಪಂಗಡದವರ ದೈವಗಳಾಗಿದ್ದಾರೆ. ಒಟ್ಟರೆಯಾಗಿ ವಿಶ್ವಕರ್ಮ ಸಮುದಾಯ

ಕಮ್ಮಾರರು ಸ್ತ್ರೀದೈವ ಕಾಳಿಯನ್ನು ತಮ್ಮ ವೃತ್ತಿಯ ಮೂಲ ಆರಾಧ್ಯದೈವವೆಂದು ವರ್ಷವಿಡಿ ಪೂಜ್ಯನೀಯ ದೃಷ್ಟಿಯಿಂದ ಆಚರಿಸುವುದನ್ನು ಕಾಣುತ್ತೇವೆ.

ಬಯಲುಗಮ್ಮಾರ ಸಮುದಾಯವು ಅಲೆಮಾರಿ ಸಮುದಾಯಗಳಲ್ಲಿ ಒಂದಾಗಿದ್ದು, ವಿಶ್ವಕರ್ಮ ಸಮುದಾಯಗಳಲ್ಲಿ ಒಂದಾಗಿದೆ. ಇವರ ಆಚರಣೆಗಳು ಮುದ್ದೆಕಂಬಾರರ ಆಚರಣೆಗೆ ಬಹು ಹತ್ತಿರವಾಗಿವೆ. ಆದಾಗ್ಯೂ ಇವರ ಬೆಡಗುಗಳು ಭಿನ್ನವಾಗಿವೆ. ಬಯಲುಗಮ್ಮಾರರು ಕುಲುಮೆ ವೃತ್ತಿಯನ್ನು ಬಯಲುಪ್ರದೇಶದಲ್ಲಿ ತಮ್ಮ ಡೇರಿಗಳನ್ನು ನಿರ್ಮಿಸಿ ಅದರಲ್ಲಿ ಕುಲುಮೆಗಳನ್ನು ನಡೆಸುತ್ತಾರೆ. ಈ ಸಮುದಾಯದವರು ಕೆಲವು ಕಡೆ ನೆಲೆನಿಂತು ವೃತ್ತಿಯನ್ನು ಮುಂದುವರಿಸುತ್ತಿದ್ದಾರೆ. ತಮ್ಮ ಕುಲುಮೆಯಲ್ಲಿ ಕುಲುಮೆ ಒಲೆ, ಗೋಡೆ, ಅಡಿಗಲ್ಲು, ಚಮ್ಮಟಿಗೆ ಮತ್ತು ಇಕ್ಕಳ ಮತ್ತಿತರ ಸಾಮಗ್ರಿಗಳನ್ನು ಹೊಂದಿರುತ್ತಾರೆ. ಇವರುಗಳು ಕುಲುಮೆಯನ್ನು ಕಾಳಿ ಎಂದು ತಿಳಿದು ಪ್ರತಿ ದಿನ ಪೂಜೆ ಮಾಡದೇ ಕಾಯಕವನ್ನು ಪ್ರಾರಂಭಿಸುವುದಿಲ್ಲ. ಅಡಿಗಲ್ಲನ್ನು ಕಮಟೇಶ್ವರ ಎಂದು ತಿಳಿಯುತ್ತಾರೆ. ಇವರುಗಳ ನಂಬಿಕೆ ಮತ್ತು ಆಚರಣೆಗಳು ವಿಶ್ವರ್ಮ ಸಮುದಾಯದ ಹಿರೇಮನೆ ಪಂಗಡದವರಿಗೆ ಹೋಲಿಕೆಯಾಗುವುದರಿಂದ ಇವರುಗಳು ಸಹ ಕುಲುಮೆ ವೃತ್ತಿಯನ್ನು ಅತ್ಯಂತ ಪೂಜ್ಯನೀಯವಾಗಿ ಆಚರಿಸುವುದನ್ನು ಕಾಣಬಹುದು. ದಸರಾ ಹಬ್ಬದಲ್ಲಿ ವಿಜೃಂಭಣೆಯಿಂದ ಕಾಳಿದೈವವನ್ನು ಆಚರಿಸುತ್ತಾರೆ. ತಮ್ಮ ಕುಲುಮೆಯ ಎಲ್ಲ ಸಾಮಗ್ರಿಗಳನ್ನು ಜೋಡಿಸಿ, ವಿಶ್ವಕರ್ಮ ಸಮುದಾಯದ ಕಮ್ಮಾರರ ರೀತಿಯಲ್ಲಿ ಆಚರಿಸುವುದನ್ನು ಗಮನಿಸಬಹುದು.

ಘಿಸಾಡಿ ಸಮುದಾಯವು ಕೂಡ ಒಂದು ಅಲೆಮಾರಿ ಜನಾಂಗವಾಗಿದ್ದು, ಪ್ರತಿಯೊಂದು ಸಮುದಾಯದ ವೃತ್ತಿಗೆ ಸಂಬಂಧಿಸಿದ ಆಚರಣೆಗಳಿದ್ದಂತೆ ಈ ಸಮುದಾಯಕ್ಕೆ ತನ್ನದೇ ಆದ ಆಚರಣೆಗಳಿವೆ. ಈ ಸಮುದಾಯವು ಪೂರ್ವದಲ್ಲಿ ಅರಸರ ಆಳ್ವಿಕೆಯಲ್ಲಿ ರಾಜಾಶ್ರಯ ಪಡೆದವರು. ಹಾಗಾಗಿ ಇವರಲ್ಲಿ ತಮ್ಮ ಸಮುದಾಯ ಇಲ್ಲವೆ ತಮ್ಮ ಮೂಲವೃತ್ತಿಯ ಕುರಿತು ಬಲವಾದ ಆಚರಣೆಯನ್ನು ನಡೆಸುತ್ತಿರಬೇಕು ಎಂದು ಇಳಿಯುತ್ತದೆ. ಈ ಸಮುದಾಯವು ಕೂಡ ಕುಲುಮೆಯನ್ನು ಕಾಳಿ ಎಂದು ಭಾವಿಸುತ್ತಾರೆ. ಕಾಳಮ್ಮ ದೈವವನ್ನು ಪೂಜಿಸುವ ಪರಿಪಾಠವನ್ನು ಹೊಂದಿದ್ದಾರೆ. ಇವರು ಮಂಗಳವಾರ ಮತ್ತು ಶುಕ್ರವಾರ ದಿನದಂದು ತಮ್ಮ ಕುಲುಮೆಯನ್ನು ಶುಚಿಗೊಳಿಸಿ ಕಾಳಿಯ ರೂಪಕವಾಗಿ ಪೂಜೆ ಮಾಡಲಾಗುತ್ತದೆ. ಕುಲುಮೆಯ ಸಾಮಗ್ರಿಗಳನ್ನು ಕಾಲಿನಂದ ದಾಟುವುದಿಲ್ಲ. ದಾಟಿದರೆ ಕಾಳಿಗೆ ಅಪಚಾರ ಎಸಗಿದಂತೆ ಎಂದು ಭಾವಿಸುತ್ತಾರೆ. ಇವರು ದಸರಾ ಹಬ್ಬದಲ್ಲಿ ವಿಶೇಷವಾಗಿ ಕುಲುಮೆಯ ಸಾಮಗ್ರಿಗಳನ್ನು ಇಟ್ಟು ಕಾಳಿ ದೈವದ ಆಚರಣೆಗಳನ್ನು ನಡೆಸಲಾಗುತ್ತದೆ. ಇದಲ್ಲದೆ ಕಾಳಮ್ಮ ದೇವಿಯ ಅಕ್ಕ-ತಂಗಿಯರೆಂದು ತಿಳಿದಿರುವ ಯಲ್ಲಮ್ಮ, ಭಾಗಮ್ಮ, ದುರುಗಮ್ಮ, ದ್ಯಾಮವ್ವ, ಹುಲಿಗೆಮ್ಮ ಮುಂತಾದ ಸ್ತ್ರೀದೈವವನ್ನು ಪೂಜಿಸುತ್ತಾರೆ. ಹಾಗೆಯೇ ಪುರುಷ ದೈವವಾಗಿ ಜಿಜೋರಿ ಖಂಡೋಬಾನನ್ನು ನೆನೆದು ಆಚರಿಸುತ್ತಾರೆ. ವಿಶ್ವಕರ್ಮ ಸಮುದಾಯದ ಕಮ್ಮಾರರು ಆಚರಿಸುವ ಮತ್ತು ಪೂಜಿಸುವ ದೈವಗಳನ್ನು ನಂಬುತ್ತಾರೆ. ಅಲ್ಲದೆ ಇಸ್ಲಾಂ ಧರ್ಮದ ದೈವವನ್ನು ಪೂಜಿನೀಯವಾಗಿ ಕಾಣುತ್ತಾರೆ.

ಮುಸ್ಲಿಂ ಸಮುದಾಯದಲ್ಲಿ ಕೂಡ ತಮ್ಮ ವೃತ್ತಿಗೆ ಸಂಬಂಧಿಸಿದ ಹಲವಾರು ಆಚರಣೆಗಳನ್ನು ಕಾಣಬಹುದು. ಈ ಸಮುದಾಯದವರು ತಮ್ಮ ವೃತ್ತಿಗೆ ಸಂಬಂಧಿಸಿದ ಹಲವಾರು ನಂಬಿಕೆ ಮತ್ತು ಆಚರಣೆಗಳನ್ನು ಕಮ್ಮಾರರು ಹೊಂದಿರುವುದನ್ನು ಕಾಣುತ್ತೇವೆ. ಈ ಸಮುದಾಯ ಕಮ್ಮಾರರನ್ನು ಲೋಹಾರ ಎಂದು ಕರೆಯುತ್ತಾರೆ. ಇವರುಗಳು ಕುಲುಮೆ ವೃತ್ತಿಯನ್ನು ಪೂಜ್ಯನೀಯ ದೃಷ್ಟಿಯಿಂದ ನೋಡುತ್ತಾರೆ. ಈ ವೃತ್ತಿಯ ಕುರಿತು ಹೇಳುವ ಒಂದು ಕಥೆಯು ಇವರಲ್ಲಿ ಬಳಕೆಯಿದೆ. ಸುಮಾರು ೧೦೦೦ ವರ್ಷಗಳ ಹಿಂದೆ ಈ ಸಮುದಾಯದ ಲೋಹಾರ ವೃತ್ತಿ ಗುರುಗಳಾದ ಪ್ರವಾದಿ ದಾವೂದಲೆ ಸಲಾಂ ಅವರು ಕೈಯಿಂದಲೇ ಹಸಿ ಕಬ್ಬಿಣವನ್ನು ಎಳೆದು ಬೇಕಾದ ಆಕಾರಕ್ಕೆ ತರುತ್ತಿದ್ದರು ಎಂದು ಪೌರಾಣಿಕ ಹಿನ್ನೆಲೆ ಇದೆ. ಕ್ರಿಪೂ. ಇಲ್ಲವೆ ಕ್ರಿ.ಶ. ೫೧ರಲ್ಲಿ ಲೋಹಾರ ಸಮುದಾಯದ ಧರ್ಮಗುರುಗಳು ಪ್ರಿಯಕಾರವಾದ ವೃತ್ತಿ ಎಂದು ಹೇಳಿದ್ದಾರೆ ಎಂದು ವಕ್ತೃಗಳು ತಿಳಿಸುತ್ತಾರೆ. ಹಾಗಾಗಿ ಮುಸ್ಲಿಂ ಕಮ್ಮಾರರಿಗೆ ಈ ವೃತ್ತಿಯ ಕುರಿತು ತಳೆದಿರುವ ಗಾಢವಾದ ಭಾವನೆಯಿಂದ ತಿಳಿಯುತ್ತದೆ. ಹಾಗೇಯೆ ಲೋಹಾರ ಸಮುದಾಯದಲ್ಲಿ ಈ ವೃತ್ತಿಯ ಕುರಿತು ಒಂದು ಗಾದೆಮಾತು ಬಳಕೆಯಲ್ಲಿರುವುದನ್ನು ಕಾಣುತ್ತೇವೆ. 'ಸೌ ಸುನಾರ್ ಏಕ್ ಲೋಹಾರ್' ಎಂದೂ, ಇವೆಲ್ಲವು ಕಮ್ಮಾರರಿಗೆ ತಮ್ಮ ಕುಲುಮೆ ಕೆಲಸ ಕುರಿತು ಇರುವ ಮತ್ತು ಪೂಜ್ಯನೀಯ ಭಾವನೆಯನ್ನು ತಿಳಿಸುತ್ತದೆ. ಇಂದಿಗೂ ಕಮ್ಮಾರರು ತಮ್ಮ ಕುಲುಮೆ ಸಾಮಗ್ರಿಗಳನ್ನು ಹಬ್ಬ ಹರಿದಿನಗಳಲ್ಲಿ ಪೂಜಿಸುವುದನ್ನು ಕಾಣುತ್ತೇವೆ. ದಸರಾ ಹಬ್ಬದಲ್ಲಿ ಕುಲುಮೆ ಮತ್ತು ಸಾಮಗ್ರಿಗಳನ್ನು ವಿಶೇಷವಾಗಿ ಆಚರಿಸಲಾಗುತ್ತದೆ. ಇವರು ತಮ್ಮ ದೈವಗಳಲ್ಲದೆ ಕಾಳಮ್ಮ ದೇವಿಯನ್ನು ಪೂಜಿಸುತ್ತಾರೆ. ಒಟ್ಟಾರೆಯಾಗಿ ಕುಲುಮೆ ವೃತ್ತಿ ಕುರಿತು ಹಲವಾರು ಆಚರಣೆಗಳನ್ನು ನಡೆಸುವುದನ್ನು ಗಮನಸಬಹುದು.

ಬೇಡನಾಯಕ, ಹರಿಜನ, ಲಂಬಾಣಿ ಮತ್ತು ಗೊಲ್ಲ ಸಮುದಾಯಗಳು ಕುಲುಮೆ ವೃತ್ತಿಗೆ ಸಂಬಂಧಿಸಿದಂತೆ ಅಂತಹ ವಿಶೇಷ ಆಚರಣೆಗಳನ್ನು ನಡೆಸದಿದ್ದರೂ ಸಹ ಮಂಗಳವಾರ ಮತ್ತು ಶುಕ್ರವಾರದಂದು ಪೂಜೆ ಮಾಡುತ್ತಾರೆ. ಕಾಳಮ್ಮ ದೇವತೆಯನ್ನು ಕುಲುಮೆಯ ಸ್ವರೂಪವೆಂದು ಪೂಜಿಸುವರು. ವಿಶೇಷವಾಗಿ ದಸರಾ ಹಬ್ಬದಂದು ವಿಶ್ವಕರ್ಮ ಸಮುದಾಯದ ಕಮ್ಮಾರರು ಆಚರಿಸುವ ರೀತಿಯಲ್ಲೇ ಆಚರಣೆಯನ್ನು ಮಾಡುವರು.

ಕುಲುಮೆ ಮತ್ತು ಕುಲುಮೆಯಲ್ಲಿನ ವಸ್ತುಗಳನ್ನು ಉತ್ಪಾದಿಸಲು ಅವಶ್ಯಕವಾದ ಸಲಕರಣೆಗಳ ಕುರಿತು ಹೊಸಪೇಟೆ ತಾಲೂಕಿನ ಕುಲುಮೆ ಸಮುದಾಯಗಳಲ್ಲಿ ಹಲವು ಆಚರಣೆಗಳಿರುವುದು ಸುಸ್ಪಷ್ಟ. ಹಾಗಾಗಿ ಎಲ್ಲ ಸಮುದಾಯಗಳು ಆಚರಿಸುತ್ತಲೇ ಬರುತ್ತಿರುವುದು ಸಹಜವಾಗಿದೆ. ತಮ್ಮ ಬದುಕಿನಲ್ಲಿ ಅಡಚಣೆ ಇದ್ದಾಗಲೂ ಸಹ, ತಮ್ಮ ಕುಲುಮೆ ವೃತ್ತಿಗೆ ಕುರಿತು ಇರುವ ಆಚರಣೆಯನ್ನು ಆಚರಿಸುತ್ತಲೇ ಇದ್ದಾರೆ ಎಂಬುದು ಸತ್ಯ.

೪.೨. ನಂಬಿಕೆಗಳು

ಯಾವುದೇ ಒಂದು ಸಮುದಾಯ ತನ್ನ ಸಮುದಾಯದ ಕುರಿತಾಗಲಿ, ಇನ್ನಾವುದೇ ವಿಷಯಗಳ ಕುರಿತ ವಿಶೇಷತೆಯನ್ನಾಗಲಿ ಅಥವಾ ಧರ್ಮದ ಪವಿತ್ರತೆಯನ್ನಾಗಲಿ, ಇಲ್ಲವೆ ಒಟ್ಟಾರೆ ಸಮುದಾಯದ ಸರ್ವತೋಮುಖ ಬೆಳವಣಿಗೆಯ ಭಾಗವಾಗಿ, ತಾವು ಬಳುವಳಿಯಾಗಿ ಪಡೆದ ಕೆಲವು ನಂಬಿಕೆಗಳನ್ನು ಇಟ್ಟುಕೊಳ್ಳುವುದು ಸರ್ವೆ ಸಾಮಾನ್ಯ. ಅಂತಹ ನಂಬಿಕೆಗಳನ್ನು ಇಟ್ಟುಕೊಳ್ಳುವುದರಿಂದ ತಮ್ಮ ಅಂತರಾಳದ ಭಾವನೆಗಳಿಗೆ ನೆಮ್ಮದಿ ಸಿಗುತ್ತದೆ. ಯಾವುದೇ ಒಬ್ಬ ಮನುಷ್ಯನು ತನ್ನ ಬದುಕಿನಲ್ಲಿ ನಂಬಿಕೆಯಿಲ್ಲದೆ ಬಾಳಲಾರ. ನಂಬಿಕೆಯೇ ಜೀವನವಾಗಿದೆ. ತಾವು ಮಾಡುವ ಕೆಲಸದಲ್ಲಾಗಲಿ, ಆಶಿಸುವ ಭಾವನೆಯಲ್ಲಾಗಲಿ, ತಿಳಿಸುವ ವಿಷಯಗಳಲ್ಲಾಗಲಿ, ಕಲಿಯುವ ವಿಷಯಗಳಲ್ಲಾಗಲಿ, ನಡೆಸುವ ಸಂಸಾರದಲ್ಲಾಗಲಿ, ಒಟ್ಟಾರೆಯಾಗಿ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ಭೌದ್ಧಿಕ ವೃತ್ತಿಜೀವನದ ಬದುಕಿನಲ್ಲಿ ನಂಬಿಕೆಗಳಿಲ್ಲದೆ ಏನನ್ನು ಸಾಧಿಸಲಾರ. ನಂಬಿಕೆಗಳಲ್ಲಿ ವೈಯಕ್ತಿಕ ಮತ್ತು ಸಾಮೂಹಿಕ ನಂಬಿಕೆಗಳು ಇರುವುದು ಕಂಡು ಬರುತ್ತದೆ. ಯಾವುದೇ ಒಂದು ಸಮುದಾಯವು ಅದರದೆ ಆದ ನಂಬಿಕೆ ಮತ್ತು ನಿಷೇಧಗಳಿರುವುದನ್ನು ಕಾಣಬಹುದು. ನಂಬಿಕೆಯು ಒಬ್ಬ ವ್ಯಕ್ತಿ ಅಥವಾ ಇಡೀ ಸಮುದಾಯಕ್ಕೆ ಇರಬಹುದು. ಈ ದಿಶೆಯಲ್ಲಿ ಕಬ್ಬಿಣ ಕುಲುಮೆಯು ಒಂದು ವೃತ್ತಿಯಾಗಿದ್ದು, ಈ ವೃತ್ತಿಯನ್ನು ಹಲವಾರು ವಿಭಿನ್ನ ಸಮುದಾಯಗಳು ನಡೆಸುತ್ತಿರುವುದನ್ನು ಕಾಣುತ್ತೇವೆ. ತಾವು ನಡೆಸುತ್ತಿರುವ ಕಬ್ಬಿಣ ಕುಲುಮೆಯಲ್ಲಿ, ಕಬ್ಬಿಣಕ್ಕೆ ಸಂಬಂಧಿಸಿದಂತೆ ಆಯಾ ಸಮುದಾಯಗಳು ಹೊಂದಿರುವ ಅಥವಾ ತಳೆದಿರುವರುವ ಹಲವಾರು ನಂಬಿಕೆಗಳಿವೆ. ಅವರ ವೃತ್ತಿಗೆ ಹೊಂದಿಕೊಂಡಂತೆ ಇರುವ ನಂಬಿಕೆಗಳು ಅವರ ವೃತ್ತಿ ಜೀವನದ ಬದುಕಿನಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತವೆ. ಎನ್ನುವುದು ಸತ್ಯ. ಕಬ್ಬಿಣ ವೃತ್ತಿಗೆ ಹೊಂದಿಕೊಂಡಂತೆ ಕುಲುಮೆಗಳನ್ನು ನಡೆಸುತ್ತಿರುವ ವಿಶ್ವಕರ್ಮ, ಬಯಲುಗಮ್ಮಾರ, ಘಿಸಾಡಿ, ಮುಸ್ಲಿಂ, ಬೇಡನಾಯಕ, ಹರಿಜನ, ಲಂಬಾಣಿ, (ಬಂಜಾರ) ಮತ್ತು ಗೊಲ್ಲ (ಯಾದವ) ಸಮುದಾಯಗಳನ್ನು ತಾಲೂಕಿನಲ್ಲಿ ಕಾಣುತ್ತೇವೆ. ಈ ಸಮುದಾಯಗಳು ತಾವು ನಡೆಸುತ್ತಿರುವ ಕುಲುಮೆಯಲ್ಲಿನ ಕಬ್ಬಿಣದ ಉಪಕರಣ ಮತ್ತು ವಸ್ತುಗಳು ಹಾಗೂ ತನ್ನ ವೃತ್ತಿಗೆ ಹೊಂದಿಕೊಂಡಂತೆ ಪೂಜಿಸುವ, ಆರಾಧಿಸುವ ದೈವಗಳ ಕುರಿತು ಹಲವಾರು ನಂಬಿಕೆಗಳನ್ನು ಇಟ್ಟುಕೊಂಡಿವೆ. ವೃತ್ತಿಯ ಕುರಿತು ಹೊಂದಿರುವ ನಂಬಿಕೆಯ ಹಿನ್ನೆಲೆಯನ್ನು ಕಟ್ಟಿಕೊಂಡ ಪ್ರತಿಯೊಂದು ಸಮುದಾಯ ವೈವಿಧ್ಯಪೂರ್ಣ ಸಾಂಸ್ಕೃತಿಕ ಸಿರಿವಂತಿಕೆಯನ್ನು ಗಳಿಸಿರುತ್ತವೆ.

ನಂಬಿಕೆ

ವಿಶ್ವಕರ್ಮ ಸಮುದಾಯದ ಶಿವಸ್ವರೂಪಿಯಾದ ವಿಶ್ವಕರ್ಮನು ಭೂಮಿಯ ಮೇಲೆ ಮೊದಲು ಹುಟ್ಟಿ ಇಡೀ ಜಗತ್ತನ್ನು ಸೃಷ್ಟಿಸಿ ನಂತರ ಮನುಷ್ಯರನ್ನು ಸೃಷ್ಟಿಸಿ ಅವರ ವಾಸಕ್ಕೆ ಅವಶ್ಯವಾದ ಮನೆ, ಕೃಷಿಗೆ ಬೇಕಾದ ಉಪಕರಣಗಳು ಮುಂತಾದವುಗಳನ್ನು ಸೃಷ್ಟಿಸಿ ಕೊಡುತ್ತಾನೆ. ವಿಶ್ವಕರ್ಮನು ಐದು ಮುಖವುಳ್ಳವನಾಗಿದ್ದು, ಐದು ಮುಖಗಳು ಪಾಂಚಾಲರ ಒಂದೊಂದು ಸಮುದಾಯಗಳ ಪ್ರತೀಕವಾಗಿವೆ. ಮನು, ಮಯ, ತ್ವಷ್ಟ, ಶಿಲ್ಪಿ, ದೈವಜ್ಞರ ಮುಖಗಳನ್ನು ಹೊತ್ತು ಜನಿಸಿದ

ವಿಶ್ವಕರ್ಮನು ಒಂದೊಂದು ಮುಖಕ್ಕೂ ಒಂದೊಂದು ವೃತ್ತಿಯನ್ನು ವಹಿಸುತ್ತಾನೆ. ಮನು ಲೋಹದ ಕೆಲಸ, ಮಯ ಬಡಿಗೆ ಕೆಲಸ ತ್ವಷ್ಟಿ ಕಂಚಿನ ಕೆಲಸ, ಶಿಲ್ಪಿ ಕಲ್ಲಿನ ಕೆಲಸವನ್ನು ನಿರ್ವಹಿಸುವಂತೆ ನಿರ್ದೇಶಿಸುತ್ತಾನಂತೆ ಕಂಡು ಬರುತ್ತದೆ.[೨] ವಿಶ್ವಕರ್ಮ ಸಮುದಾಯದಲ್ಲಿ ಕಾಳಿಯೇ ತಮ್ಮ ಮೂಲದೈವ, ತಾವು ಪಾರ್ವತಿಯ ಸ್ವರೂಪಳಾದ ಕಾಳಿಯ ಮಕ್ಕಳು, ಕಬ್ಬಿಣ ತಮ್ಮ ದೈವ, ಕಬ್ಬಿಣವೇ ಕಾಳಿ, ಸೃಷ್ಟಿ ಕಾರ್ಯದ ಪೂರ್ವದಲ್ಲಿ ಕಾಳಿಯ ಕೈವಾಡ ಇರದಿದ್ದಲ್ಲಿ ಏನು ಸಾಗದು ಎಂಬ ನಂಬಿಕೆಗಳಿವೆ ಎಂದು ತಿಳಿಸುತ್ತಾರೆ.

ವಿಶ್ವಕರ್ಮ ಕುಲುಮೆಗಳಲ್ಲಿ, ಕುಲುಮೆಯ ಮುಖ ಯಾವಾಗಲೂ ಉತ್ತರ ದಿಕ್ಕಿಗೆ ಇರಬೇಕು, ಕುಲುಮೆ ಊರ ಹೊರಭಾಗದ ಬಯಲಿನಲ್ಲಿರಬೇಕು ಮತ್ತು ಎಷ್ಟೇ ಚಿಕ್ಕ ಊರಾದರೂ ಕುಲುಮೆಗಳನ್ನು ಒಂದರ ಪಕ್ಕ ಒಂದು ನಿರ್ಮಿಸಿಕೊಳ್ಳುವುದು ನಂಬಿಕೆಯಾಗಿದೆ. ವಿಶ್ವಕರ್ಮ ಕಮ್ಮಾರರು ಸಾಮಾನ್ಯವಾಗಿ ಊರ ಹೊರಭಾಗದಲ್ಲಿ ತಮ್ಮ ಪೂರ್ವಜರ ಕುಲುಮೆಗಳಿದ್ದ ಸ್ಥಳಗಳಲ್ಲಿಯೇ ಕುಲುಮೆಯನ್ನು ನಿರ್ಮಿಸುವರು. ಇವರ ಕುಲುಮೆಗಳು ಯಾವಾಗಲೂ ಉತ್ತರ ದಿಕ್ಕಿನ ಕಡೆ ಮುಖ ಮಾಡಿರುತ್ತವೆ. ಅವರ ಕಾಳಿ ದೇವಾಲಯಗಳು ಸಹ ಉತ್ತರ ದಿಕ್ಕಿನ ಕಡೆ ಮುಖ ಮಾಡಿರುವುದನ್ನು ಕಾಣುತ್ತೇವೆ. ಕುಲುಮೆ ಮತ್ತು ಕಬ್ಬಿಣವನ್ನು ಕಾಳಮ್ಮ ದೈವ ಎಂದು ಭಾವಿಸುತ್ತಾರೆ. ಕಮ್ಮಾರರು ಕುಲುಮೆಯ ಎಡಭಾಗದಲ್ಲಿ ಇಕ್ಕಳ ಮತ್ತು ಬಕ್ಕಸಗೋಲುಗಳನ್ನು ಇರಿಸಿಕೊಂಡಿರುತ್ತಾರೆ. ಮುದ್ದೆ ಕಮ್ಮಾರರು ದಕ್ಷಿಣ ದಿಕ್ಕಿಗೆ ಬಾಗಿಲು ಮಾಡಿ ಮನೆ ಕಟ್ಟಿರುವುದಿಲ್ಲ. ಕಾರಣ ಕಾಳಿ ಉತ್ತರದಿಕ್ಕಿನಲ್ಲಿದ್ದು, ಎದುರುಗಡೆ ಇರುವ ಯಾರನ್ನು ಉಳಿಸುವುದಿಲ್ಲ ಎಂಬ ನಂಬಿಕೆ.

ವಿಶ್ವಕರ್ಮ ಕಮ್ಮಾರರ ದೃಷ್ಟಿಯಲ್ಲಿ ಕಬ್ಬಿಣ ಲೋಹವು ಪ್ರಮುಖವಾಗಿದ್ದು, ಕಂಬಾರರಿಗೆ ಸ್ವೀಕಾರಾರ್ಹವಾಗಿರುತ್ತದೆ. ಆದರೆ ಜನಸಾಮಾನ್ಯರ ದೃಷ್ಟಿಯಲ್ಲಿ ಈ ಲೋಹವು ಕೀಳು ಲೋಹವಾಗಿದೆ. ಹಿಂದೆ ಕಬ್ಬಿಣದ ಕುರಿತು ಒಂದು ರೀತಿಯ ತಿರಸ್ಕೃತವಾದ ಭಾವನೆಯಿದ್ದ ಮನುಷ್ಯ, ಇನ್ನೊಂದು ರೀತಿಯಲ್ಲಿ ಎಲ್ಲ ಸಂಸ್ಕೃತಿಯಲ್ಲೂ ಜನರ ಜೀವನ ವಿಧಾನದ ಗತಿಯನ್ನು ಬದಲಿಸಿದ್ದು ಸುಸ್ಪಷ್ಟ. ಹಾಗೆಯೇ ಕಬ್ಬಿಣವು, ಭೂತ, ಪ್ರೇತಗಳನ್ನು ಓಡಿಸಲು ಬಳಸುವ ಲೋಹ ಎನ್ನುವ ನಂಬಿಕೆ ಇಟ್ಟುಕೊಂಡಿದ್ದರು. ಆದರೆ ಕಂಬಾರರು ಲೋಹವನ್ನು ಎಂದಿಗೂ ಭಿಕ್ಷೆ ಕೊಡಲಾರರು. ಭಿಕ್ಷೆ ಕೊಟ್ಟರೆ ತಮ್ಮ ಮನೆಯ ಲಕ್ಷ್ಮಿ ಹೊರಟು ಹೋಗುತ್ತಾಳೆ ಎನ್ನುವ ನಂಬಿಕೆ ಇದೆ.

ಕಮ್ಮಾರರು ಶ್ರಾವಣ ಮಾಸದಿಂದ ಕಬ್ಬಿಣದ ಅದಿರುಗಳನ್ನು ಬೆಟ್ಟ-ಗುಡ್ಡಗಳಿಂದ ತರಲು ಪ್ರಾರಂಭಿಸುತ್ತಾರೆ. ಶ್ರಾವಣದ ಮೂರನೆಯ ಬುಧವಾರ ಕಬ್ಬಿಣದ ಅದಿರು ತರಲಿಕ್ಕೆ ಹೊರಟರೆ, ಶ್ರಾವಣದ ಮೂರನೆಯ ವಾರದಂದು ಅದಿರನ್ನು ಒಡಲಲ್ಲಿ ತರುವುದು ನಂಬಿಕೆಯಾಗಿದೆ.

ಕುಲುಮೆಗೆ ಬೇಕಾದ ಮುಖ್ಯವಾದ ಸಾಮಗ್ರಿಗಳಲ್ಲಿ ತಿದಿ, ಕುಲುಮೆ, ಅಡಿಗಲ್ಲು, ಚಮ್ಮಟಿಗೆ ಮತ್ತು ಬಕ್ಕಸಕೋಲುಗಳಾಗಿವೆ. ಕಮ್ಮಾರರು ತಿದಿ ಎಂದರೆ ಕಾಳಿಯ ವಾಹನವಾದ ಸಿಂಹವಾಗಿದೆ. ಕುಲುಮೆಯನ್ನು ಕಾಳಿ ಎಂದೂ, ಅಡಿಗಲ್ಲು ಶಿವನ ಪ್ರತಿರೂಪವಾದ ಕಮ್ಮಟೇಶ್ವರ(ಭರಮಪ್ಪ)ವು

ಕಾಳಿಯ ದೇವತೆಯ ಪತಿಯೆಂದು ತಿಳಿದರೆ, ಸುತ್ತಿಗೆಯು ಶಿವನ ಡಮರುಗ ಎನ್ನುವ ಭಾವನೆ ಇದೆ. ಬಕ್ಕಸಗೋಲು ಕಾಳಿಯ ತ್ರಿಶೂಲ ಇದ್ದಂತೆ, ಇಕ್ಕಳವು ಶಿವನ ತ್ರಿಶೂಲ ಎಂಬ ನಂಬಿಕೆಯಾಗಿದೆ.

ಕಮ್ಮಾರರು ಇತ್ತೀಚಿನ ಆಧುನಕ ದಿನಮಾನಗಳಲ್ಲಿ ಕುಲುಮೆಯಲ್ಲಿ ಬಳಸುವ ಚಮ್ಮಟಿಗೆ ಮತ್ತು ಅಡಿಗಲ್ಲು ನಂತಹ ಸಾಮಗ್ರಿಗಳನ್ನು ಸಿದ್ಧವಾದ ಮಾರುಕಟ್ಟೆಯಲ್ಲಿ ಕೊಂಡುತಂದರೂ, ಅಂತಹ ಸಾಮಗ್ರಿಗಳನ್ನು ತುಂಬಿದ ಕೊಡದ ನೀರಿನಿಂದ ತೊಳೆದು, ಕುಲುಮೆಯ ಮುಂಭಾಗದಲ್ಲಿಟ್ಟು, ಕುಲುಮೆಯ ಬೂದಿಯನ್ನು ವಿಭೂತಿಯಂತೆ ಹಚ್ಚಿ, ಪೂವು, ಕುಂಕುಮವಿಟ್ಟು ಕಾಯಿ ಒಡೆದು, ಪೂಜಿಸಿದ ತರುವಾಯವೇ ಆ ಸಾಮಗ್ರಿಗಳು ಬಳಸುವುದಕ್ಕೆ ಯೋಗ್ಯವಾದವು ಎಂಬ ನಂಬಿಕೆ ಇದೆ.

ಸಾಮಾನ್ಯವಾಗಿ ಕಮ್ಮಾರರು ಕುಲುಮೆಗೆ ಬೇಕಾದ ಬಹುಮುಖ್ಯವಾದ ಸಾಮಗ್ರಿಗಳಲ್ಲಿ ಅಡಿಗಲ್ಲು ಒಂದಾಗಿದೆ. ಅಡಿಗಲ್ಲನ್ನು ಹಿಂದೆ ಪೂರ್ವಜರು ತಾವೇ ತಯಾರಿಸುತ್ತಿದ್ದರು. ಹಾಗೇಯೆ ಇಂದು ಕೂಡ ಹೆಚ್ಚಾಗಿ ತಾವೇ ತಯಾರಿಸುವುದನ್ನು ಕಾಣುತ್ತೇವೆ. ಅಡಿಗಲ್ಲು ತಯಾರಿಕೆಯಲ್ಲಿ ಹಿಂದೆ ಬಳಸಿರುವ ಕೆಲ ದೊಡ್ಡ ಇಕ್ಕಳಗಳನ್ನು ಬಳಸಿಯೂ ತಯಾರಿಸಲಾಗುತ್ತದೆ. ತಯಾರಿಸುವಾಗ ಕಮ್ಮಾರರಿಗೆ ಸಹಜವಾಗಿ ತಮ್ಮ ಸಂಬಂಧಿಗಳನ್ನೊ ಇಲ್ಲವೆ ತಮ್ಮ ವೃತ್ತಿ ಬಾಂಧವರನ್ನೋ ಸಹಾಯಕ್ಕಾಗಿ ಕರೆಯುವುದುಂಟು. ತಿದಿಯೊತ್ತಲು ಒಬ್ಬರನ್ನು ನೇಮಿಸಿಕೊಳ್ಳಲಾಗುತ್ತದೆ. ಆದರೆ ಅಡಿಗಲ್ಲು ತಯಾರಿಸುವಾಗ ಗಂಡಸರು ಮಾತ್ರ ಕುಲುಮೆಯಲ್ಲಿ ಇರಬೇಕು, ಸ್ತ್ರೀಯರಿಗೆ ಸಂಪೂರ್ಣವಾಗಿ ಅವಕಾಶವಿಲ್ಲ. ಕಾರಣ ಸ್ತ್ರೀಯರು ಎದುರಿಗಿದ್ದರೆ ಅಡಿಗಲ್ಲು ತಯಾರಿಸಲು ಸಾಧ್ಯವಾಗುವುದಿಲ್ಲ ಎಂಬ ಭಾವನೆ ಅವರಲ್ಲಿದೆ. ಹಾಗೇಯೆ ಮೈಲಿಗೆ ಮುಟ್ಟಾದ ಯಾವ ಸ್ತ್ರೀಯೂ ಕುಲುಮೆಯೊಳಗೆ ಬಂದರೆ ಅಡಿಗಲ್ಲು ಕೆಡುತ್ತದೆ ಎಂಬ ಭಾವನೆ ಕೂಡ ಇದೆ. ಆ ಕಾರಣಕ್ಕಾಗಿ ಕಮ್ಮಾರರು ಅಡಿಗಲ್ಲು ತಯಾರಿಸುವಾಗ ಸ್ತ್ರೀಯರು ಕುಲುಮೆಯೊಳಗೆ ಬರದಂತೆ ಜಾಗೃತಿ ವಹಿಸುತ್ತಾರೆ.

ಕಮ್ಮಾರರು ಸಾಮಾನ್ಯವಾಗಿ ಕಬ್ಬಿಣ ತಯಾರಿಕೆ ಮತ್ತು ಸಾಮಗ್ರಿಗಳ ತಯಾರಿಕೆಯಲ್ಲಿ ಬಳಸಲ್ಪಡುವ ಸಲಕರಣೆಗಳನ್ನು ಎಲ್ಲೆಂದರಲ್ಲಿ ಇಡುವುದಿಲ್ಲ. ಸಲಕರಣೆಗಳನ್ನು ಇಡುವುದಕ್ಕಾಗಿ ಕುಲುಮೆಯಲ್ಲಿ ಕೆಲವು ವಿಶೇಷ ಸ್ಥಳ ಮಾಡಲಾಗಿರುತ್ತದೆ. ಅದು ಕುಲುಮೆಯ ಒಲೆಯ ಪಕ್ಕದ ಭಾಗ ಮತ್ತು ಅಡಿಗಲ್ಲಿನ ಪಕ್ಕದ ಸ್ಥಳವಾಗಿದೆ. ಸಲಕರಣೆಗಳನ್ನು ದಾಟಿದರೆ ಸ್ವತಃ ಕಾಳಿಯನ್ನೇ ದಾಟಿದಂತಾಗುತ್ತದೆ. ಕಾಳಿಯನ್ನು ದಾಟಿದರೆ ಸಿಟ್ಟಾಗಿ, ತಮ್ಮ ಕೆಲಸ ನಂತು ಹೋಗಿ ಉಪವಾಸ ಕೂಡಬೇಕಾಗುತ್ತದೆ ಎಂಬ ದೃಢವಾದ ನಂಬಿಕೆಯಿದೆ.

ಸಾಮಾನ್ಯವಾಗಿ ಕುಲುಮೆ ಕೆಲಸ ಮುಗಿದ ನಂತರ ಕೆಲ ಸಲಕರಣೆಗಳನ್ನು ಮನೆಗೆ ಒಯ್ಯುವ ರೂಢಿ ಇದೆ. ಅಂತಹ ಸಲಕರಣೆಗಳನ್ನು ಇಡಲು ಮನೆಯಲ್ಲಿ ಒಂದು ವಿಶೇಷ ಸ್ಥಳವನ್ನು ಮಾಡಿ ಕೊಂಡಿರುತ್ತಾರೆ. ಆ ಸ್ಥಳವನ್ನು ತಮ್ಮ ದೇವರ ಕೋಣೆ ಎನ್ನುವಷ್ಟು ಪೂಜ್ಯ ಭಾವನೆ ಇದೆ. ಸಾಮಾನ್ಯವಾಗಿ ಮನೆಯ ಹೊರಭಾಗದ ಬಲಮೂಲೆಯಲ್ಲಿ ಸಲಕರಣೆ ಇಡುವ ನಂಬಿಕೆ ಇದೆ.

ಮುದ್ದೆ ಕಮ್ಮಾರರು ಹೊರಗಡೆ ಇಡದೆ ಮನೆಯ ದೇವರ ಕೋಣೆಯಲ್ಲಿ ಸಲಕರಣೆಗಳನ್ನು ಇಡುತ್ತಾರೆ. ಮಕ್ಕಳು ಹೋಗದ ಹಾಗೆ ಜಾಗೃತಿಯನ್ನು ವಹಿಸುತ್ತಾರೆ.

ಕುಲುಮೆಯ ತಿದಿ ಒತ್ತುವವನು ಮೈಲಿಗೆಯಾಗಿ ಬಂದು ತಿದಿಯೊತ್ತಿದರೆ ತಿದಿಯು ಕೆಟ್ಟು ಹೋಗುತ್ತದೆ. ತಿದಿಯ ಹೊಟ್ಟೆ ಒಡೆಯುತ್ತದೆ. ಅಂದರೆ ತಿದಿ ಚರ್ಮ ಹರಿಯುತ್ತದೆ ಇನ್ನುವ ನಂಬಿಕೆ ಇದೆ. ಕಾಳಿಯ ವಾಹನವಾದ ಸಿಂಹ ಸ್ವರೂಪದ ತಿದಿಯು ಮೈಲಿಗೆಯಾಗಿ ತನ್ನನ್ನು ಮುಟ್ಟಿದವರನ್ನು ಸಂಹರಿಸದೇ ಬಿಡಲಾರಳು ಎಂಬ ನಂಬಿಕೆಯಿದೆ. ಹಾಗೇಯೆ ಅಡಿಗಲ್ಲಿನ ಮೇಲೆ ಯಾರೂ ಕೂಡುವುದಿಲ್ಲ ಹಾಗೂ ಕೂಡಲೂಬಾರದು. ಒಂದು ವೇಳೆ ಕುಳಿತರೆ ಅದು ಕಮ್ಮಟೇಶ್ವರ (ಭರಮಪ್ಪನನ್ನು ಅಪಚಾರ ಮಾಡಿದಂತೆ ಭಾಸವಾಗುತ್ತದೆ. ಕುಲುಮೆಯವರ ಮನೆ ಉದ್ಧಾರವಾಗುವುದಿಲ್ಲ ಮತ್ತು ತಯಾರಿಸಬೇಕಾದ ವಸ್ತುಗಳನ್ನು ಅಡಿಗಲ್ಲಿನ ಮೇಲಿಟ್ಟು ಹೊಡೆದಾಗ ಮಾಯವಾಗುತ್ತವೆ. ಅಡಿಗಲ್ಲು ಭೂಮಿಯೊಳಗೆ ಹೋಗುತ್ತದೆ ಮತ್ತು ಕುಲುಮೆ ನಡೆಸುವವನಿಗೆ ಅಪಘಾತ ಸಂಭಂವಿಸುತ್ತದೆ ಎನ್ನುವ ನಂಬಿಕೆಯಿದೆ. ಕುಲುಮೆಯಲ್ಲಿ ಬಳಸುವ ಸಲಕರಣೆಗಳಾದ ಚಮ್ಮಟಿಗೆ, ಸುತ್ತಿಗೆ, ಇಕ್ಕಳ, ಬಕ್ಕಸಕೋಲು, ಚಾನ, ಗುದ್ದಿ, ಪಾಗರಿ, ಹಾರಿ ಇತ್ಯಾದಿಗಳಿಗೂ ಸಹ ಅಪಚಾರ ಎಸಗಬಾರದು ಎಂಬ ನಂಬಿಕೆ ಇದೆ.

ಕಮ್ಮಾರರು ವೃತ್ತಿಗೆ ಸಂಬಂಧಿಸಿದ ಯಾವುದೇ ಉಪಕರಣಗಳನ್ನು ಹುಣ್ಣಿಮೆ ಮತ್ತು ಅಮವಾಸ್ಯೆ ದಿನದಂದು ತಯಾರಿಸುವುದಿಲ್ಲ. ಕೆಲ ಮಾಟ ಮಂತ್ರಗಳಿಗೆ ಬಳಸುವ ಆಯುಧಗಳನ್ನು ಮಾತ್ರ ಇಂತಹ ದಿನಗಳಲ್ಲಿ ತಯಾರಿಸುವರು. ಒಂದು ವೇಳೆ ವೃತ್ತಿಗೆ ಸಂಬಂಧಿಸಿದ ಉಪಕರಣಗಳನ್ನು ತಯಾರಿಸಿದರೆ, ಬಳಸುವಂತಹ ವ್ಯಕ್ತಿಗೆ ಆ ಉಪಕರಣಗಳು ಕೇಡನ್ನುಂಟು ಮಾಡುತ್ತವೆ ಹಾಗಾಗಿ ಅಂದು ವೃತ್ತಿ ಸಂಬಂಧಿ ಉಪಕರಣಗಳ ತಯಾರಿಕೆಗೆ ನಿಷೇಧವಿದೆ.

ಕಮ್ಮಾರ ಕುಟುಂಬದಲ್ಲಿ ಹೊಸದಾಗಿ ಮದುವೆಯಾದ ಮಧು ಮಕ್ಕಳು ತಿಂಗಳವರೆಗೂ ಉಪಕರಣಗಳನ್ನು ಮುಟ್ಟಕೂಡದು. ಹಾಗೇಯೆ ಮಕ್ಕಳಾಗದ ಸ್ತ್ರೀಯರು ಕುಲುಮೆಯಲ್ಲಿನ ಉಪಕರಣ ಗಳನ್ನು ಮೂರು ಸುತ್ತ ತಿರುಗಿ ನಂತರ ಆ ಕಡೆ ನೋಡದೇ ಹೋದರೆ ಅವರಿಗೆ ಮಕ್ಕಳು ಆಗುವುತ್ತವೆ ಎನ್ನುವ ಬಲವಾದ ನಂಬಿಕೆಯಿದೆ. ಮಗುವು ಎಚ್ಚರ ತಪ್ಪಿದಾಗ ಕಬ್ಬಿಣದ ಸಣ್ಣ ಮೊಳೆಯಿಂದ ಚಿಟಿಕೆ ಹಾಕುವುದು. ಮಕ್ಕಳು ಬಿದ್ದಲ್ಲಿ ಕಬ್ಬಿಣದ ವಸ್ತುಗಳಿಂದ ಬಿದ್ದ ಜಾಗದಲ್ಲಿ ಮೂರು ಸಲ ನಿವಾಳಿಸಲಾಗುತ್ತದೆ. ಪ್ರತಿಯೊಂದು ಸ್ತ್ರೀಯು, ವಿಧವೆ–ಸ್ತ್ರೀಯರು, ಗಂಡಸು ಮತ್ತು ಮಕ್ಕಳು ಕಬ್ಬಿಣದ ಬಳೆಯನ್ನು ಕೈಯಲ್ಲಿ ಹಾಕಿಕೊಳ್ಳಬೇಕು. ಕಾರಣ ಕಬ್ಬಿಣದ ಬಳೆಯು ರಕ್ಷಣೆ ಮಾಡುತ್ತದೆ ಎಂಬ ನಂಬಿಕೆ. ವಿಷಜಂತುವಾದ ಚೇಳು ಕಡಿದಾಗ ಕೆಲವರು ಕಬ್ಬಿಣದ ಮೊಳೆ ಇಲ್ಲವೆ ಕುಡುಗೋಲಿನಿಂದ ಕಡಿದ ವ್ಯಕ್ತಿಯ ಕೈಗೆ ಮೂರು ಬಾರಿ ನಿವಾಳಿಸಿ ಮಂತ್ರಿಸುವುದನ್ನು ಕಾಣುತ್ತೇವೆ. ಚಪ್ಪೆ ರೋಗವಾದ ಜಾಗಕ್ಕೆ ಕಬ್ಬಿಣದ ಸಲಾಕೆಯನ್ನು ಕಾಸಿ ಬರೆ ಎಳೆದರೆ ವಾಸಿಯಾಗುತ್ತದೆ.

ಕಂಬಾರರು ಹೆಚ್ಚಾಗಿ ಮಾಂತ್ರಿಕ ಶಕ್ತಿಯನ್ನು ನಂಬುವರು. ಹಾಗಾಗಿ ಜ್ವರ ಅಥವಾ ಏನಾದರೂ ರೋಗರುಜಿನಗಳನ್ನು ಪಾರು ಮಾಡಲು ಪರಸರದಲ್ಲಿನ ದೊರಕುವ ಕೆಲ ಸಸ್ಯಗಳು, ಲೋಹಗಳು

ಮತ್ತು ಭಸ್ಮವನ್ನು ಬಳಸುವ ಹಾಗೂ ಕಬ್ಬಿಣದಿಂದ ನಿವಾಳಿಸುವ ಸಹಜ ಕ್ರಿಯೆಯಾಗಿದೆ. ಆಡು, ದನ, ಕುರಿ ಮತ್ತು ಮೇಕೆಗಳು ಸರಿಯಾಗಿ ಮೇವು ತಿನ್ನದಿದ್ದರೆ ಕಬ್ಬಿಣ ಕಡಿಸುತ್ತಾರೆ.

ಕಬ್ಬಿಣದಿಂದ ಮಾಡಿದ ಲಾಳ ಮತ್ತು ಮೊಳೆಗಳನ್ನು ಮದುವೆ ಸಂದರ್ಭದಲ್ಲಿ ಹೊಸ್ತಿಲಿಗೆ ಹೊಡೆದರೆ ಒಳ್ಳೆಯದಾಗುತ್ತದೆ ಮತ್ತು ಕಬ್ಬಿಣವನ್ನು ಹೊಂದಿದ ಬಾಗಿಲನ್ನು ತುಳಿಯಬಾರದು. ತುಳಿದರೆ ಅದು ಕಾಳಿಯನ್ನು ತುಳಿದಂತೆ ಎನ್ನುವ ನಂಬಿಕೆಯಿದೆ.

ಕಮ್ಮಾರ ಪರಿವಾರದ ಬಾಣಂತಿಯರ ತಲೆ ಭಾಗಕ್ಕೆ ಕಬ್ಬಿಣದ ಕುಡಗೋಲು ಇಡುತ್ತಾರೆ. ಕಬ್ಬಿಣದ ವಸ್ತು ಇದ್ದರೆ ಅದು ಕಾಳಿ ಸ್ವರೂಪವಾಗಿದ್ದು, ಯಾವುದೇ ಭೂತ-ಪ್ರೇತಗಳು ಹತ್ತಿರ ಬರಲಾರವು ಎಂದು ನಂಬುತ್ತಾರೆ. ಬಾಣಂತಿಯರು ಗಂಗೆ ಪೂಜೆ ಮಾಡಲು ಹೋಗುವ ಮುಂಚೆಯೆ ಕಬ್ಬಿಣದ ಚಾಕೂವನ್ನು ಇಟ್ಟು ಬಾಣಂತಿಗೆ ನೀರು ಹಾಕಿ ಸ್ನಾನ ಮಾಡಿಸುವ ನಂಬಿಕೆಯಿದೆ. ಋತುಮತಿಯಾದ ಹೆಣ್ಣಿನ ಪಕ್ಕದಲ್ಲಿ ಕಬ್ಬಿಣದ ಕುಡುಗೋಲು ಇಟ್ಟರೆ, ಕಾಳಿ ಅವಳನ್ನು ರಕ್ಷಿಸುತ್ತಾಳೆ ಎಂಬ ನಂಬಿಕೆಯಿದೆ.

ಕಮ್ಮಾರ ಜನಾಂಗದಲ್ಲಿ ಭೂತಪ್ಪ ಮತ್ತು ಚೌಡಿಯರನ್ನು ಪೂಜಿಸುವುದಕ್ಕೆ ಕಬ್ಬಿಣದ ಮೊಳೆಯನ್ನು ಹೊಡೆಯುತ್ತಾರೆ. ಕಬ್ಬಿಣದ ವಸ್ತುವನ್ನು ಅರ್ಪಿಸಿದರೆ ಸಂತೃಪ್ತಿರಾಗುತ್ತಾರೆ ಎನ್ನುವ ನಂಬಿಕೆಯಿದೆ. ಸಾಮಾನ್ಯವಾಗಿ ಬಿರುಗಾಳಿ ಬೀಸಿ ಬಂದು ತಮ್ಮ ಕುಲುಮೆಗೆ ಅನಾಹುತವಾದಾಗ ಕಬ್ಬಿಣದ ಉಪಕರಣಗಳನ್ನು ಬಿರುಗಾಳಿ ಬರುವ ದಿಕ್ಕಿಗೆ ಹಿಡಿದು 'ಈ ಕಡೆ ಬಂದ್ರೆ ನಿನ್ನ ಸುಮ್ನೆ ಬಿಡಾದಿಲ್ಲ, ಆ ಕಡೆ ಹೋಗು' ಎಂದು ಹೇಳುತ್ತಾರೆ. ಆಗ ಬಿರುಗಾಳಿ ಹೆದರಿ ನಿಲ್ಲುತ್ತದೆ ಎಂಬ ನಂಬಿಕೆ ಅವರಲ್ಲಿದೆ.

ಹೀಗೆ ಕಮ್ಮಾರರು ಕಬ್ಬಿಣದ ಮತ್ತು ವೃತ್ತಿ ಕುರಿತು ಹಲವಾರು ನಂಬಿಕೆಗಳನ್ನು ತಳೆದಿರುವರು. ಈ ನಂಬಿಕೆಗಳನ್ನು ಹಿರೇಮನೆ ಪಂಗಡದವರು ಹೆಚ್ಚಾಗಿ ಹೊಂದಿರುವುದನ್ನು ಕಾಣುತ್ತೇವೆ. ಅದೇ ರೀತಿ ಚಿಕ್ಕಮನೆ ಪಂಗಡದವರು ಕೂಡ ಇವೇ ನಂಬಿಕೆಗಳನ್ನು ಹೊಂದಿರುವುದನ್ನು ಕಾಣಬಹುದು. ಹೀಗೆ ಕಬ್ಬಿಣದ ಕುಲುಮೆಯ ವೃತ್ತಿ ಕುರಿತು ವಿಶ್ವಕರ್ಮ ಸಮುದಾಯದವರು ಹಲವಾರು ನಂಬಿಕೆ ಗಳನ್ನು ತಮ್ಮ ನಿತ್ಯ ವೃತ್ತಿ ಬದುಕಿನ ಜೀವನದಲ್ಲಿ ಹೊಂದಿರುವುದನ್ನು ಕಾಣುತ್ತೇವೆ.

ಬಯಲುಗಮ್ಮಾರ ಸಮುದಾಯಗಳು ಹೆಚ್ಚಾಗಿ ಉತ್ತರ ಕರ್ನಾಟಕದಲ್ಲಿ ಕಂಡು ಬರುತ್ತಾರೆ. ಈ ಸಮುದಾಯದ ಕುಟುಂಬಗಳು ಹೊಸಪೇಟೆ ತಾಲೂಕಿನ್ಯಾದಂತ ಹೆಚ್ಚಾಗಿ ಕಂಡು ಬರುವುದಿಲ್ಲ. ಕಂಪ್ಲಿಯಲ್ಲಿ ಎರಡು ಕುಟುಂಬಗಳಿವೆ. ಮತ್ತೊಂದು ನಂ.೧೦ ಮುದ್ಲಾಪುರದಲ್ಲಿದೆ. ಇವುಗಳು ಮೂಲತಃ ಉತ್ತರ ಕರ್ನಾಟಕದಿಂದ ವಲಸೆ ಬಂದು ನೆಲೆಯನ್ನು ಕಂಡುಕೊಂಡಿದ್ದಾರೆ. ಈ ಸಮುದಾಯದವರು ಮುದ್ದೆಕುಂಬಾರರಿಗೆ ತೀರ ಹತ್ತಿರವಾಗಿ ಕಂಡುಬರುತ್ತಾರೆ. ಆದರೂ ಎರಡೂ ಸಮುದಾಯದ ಪಂಗಡಗಳು ಬೇರೆಯಾಗಿವೆ. ಈ ಸಮುದಾಯದ ನಂಬಿಕೆಗಳು ವಿಶ್ವಕರ್ಮ ಸಮುದಾಯದ ಮುದ್ದೆಕುಂಬಾರರಿಗೆ ಹೋಲುತ್ತವೆ. ಆದರೆ ಬಯಲುಗಮ್ಮಾರ ಜನರಿಗೆ ತಮ್ಮ

ವೃತ್ತಿಗೆ ಸಂಬಂಧಿಸಿದ ನಂಬಿಕೆಗಳ ಕುರಿತು ಹೆಚ್ಚು ಮುತುವರ್ಜಿ ವಹಿಸದಂತೆ ಕಾಣುತ್ತದೆ. ಕಾರಣ ಇವರುಗಳು ಒಂದುಕಡೆ ನೆಲೆ ನಿಲ್ಲದೆ ವಲಸೆ ಹೋಗುತ್ತಲೇ ಇರುತ್ತಾರೆ. ಮತ್ತೊಂದು ಆರ್ಥಿಕ ಪರಿಸ್ಥಿತಿಯ ಒತ್ತಡಕ್ಕೆ ಮಣಿದು, ತಮ್ಮ ವೃತ್ತಿಯ ಕುರಿತು ಇರುವ ನಂಬಿಕೆಗಳನ್ನು ಮರೆತಿರುವ ಹಾಗೇ ಭಾಸವಾಗುತ್ತದೆ. ಈ ಸಮಾಜದ ಜನರು ಕೂಡ ವಿಶ್ವಕರ್ಮ ಸಮಾಜದ ಚಿಕ್ಕಮನೆ ಮತ್ತು ಹಿರೇಮನೆ ಪಂಗಡದವರು ಇಟ್ಟುಕೊಂಡಿರುವ ನಂಬಿಕೆಗಳನ್ನು ನೆಚ್ಚಿದ್ದಾರೆ. ಕುಲುಮೆಯನ್ನು ಕಾಳಿ ಎಂದು ಭಾವಿಸುತ್ತಾರೆ. ವಿಶ್ವಕರ್ಮ ಸಮುದಾಯ ತಾಳಿರುವ ನಂಬಿಕೆಗಳು ಈ ಸಮುದಾಯದ ನಂಬಿಕೆಗಳಾಗಿವೆ. ಕಾರಣ ಬಯಲುಗಮ್ಮಾರ ಸಮುದಾಯವು ವಿಶ್ವಕರ್ಮ ಸಮುದಾಯಗಳಲ್ಲಿ ಒಂದಾಗಿದೆ. ಹಾಗಾಗಿ ಬಯಲುಗಮ್ಮಾರ ಸಮುದಾಯ ವೃತ್ತಿಗೆ ಸಂಬಂಧಿಸಿದ ನಂಬಿಕೆಗಳು ವಿಶ್ವಕರ್ಮ ಸಮುದಾಯ ನಂಬಿಕೆಗಳಿಗೆ ಹೋಲುತ್ತವೆ ಎಂದು ಹೇಳಬಹುದು.

ಘಿಸಾಡಿ ಸಮುದಾಯವು ಒಂದು ಅಲೆಮಾರಿ ಸಮುದಾಯವಾಗಿದೆ. ಈ ಸಮುದಾಯಗಳು ಸ್ಥಳಿಯರ ಕಣ್ಣಿಗೆ ವಿಶ್ವಕರ್ಮರಂತೆ ಕಾಣುವುದನ್ನು ಗಮನಿಸಬಹುದು. ಮತ್ತು ಇವರುಗಳ ಮೂಲವೃತ್ತಿಯೂ ಕುಲುಮೆ ಕಬ್ಬಿಣ ತಯಾರಿಕೆಯಾಗಿದೆ. ಇವರು ಅಲೆಮಾರಿಗಳಾಗಿ ಜೀವನ ನಡೆಸುತ್ತ ಒಂದು ಕಡೆ ನಿಂತು ನೆಲೆಯನ್ನು ಕಂಡುಕೊಂಡಿದ್ದಾರೆ. ಇನ್ನು ಕೆಲವು ಘಿಸಾಡಿ ಪರಿವಾರಗಳು ಮೂಲತಃ ರಾಜಸ್ಥಾನದವರಾಗಿದ್ದು, ಕಾಲಕ್ರಮೇಣ ಆರ್ಥಿಕ ಸಂಕಷ್ಟಕ್ಕೆ ತಲೆಯೊಡ್ಡಿ, ಮಹಾರಾಷ್ಟ್ರ ಮೂಲಕ ಕರ್ನಾಟಕದಲ್ಲಿ ನೆಲೆ ನಂತಿರುವುದನ್ನು ಕಾಣುತ್ತೇವೆ.

ಈ ದಿಶೆಯಲ್ಲಿ ಹೊಸಪೇಟೆ ತಾಲೂಕಿನಲ್ಲಿರುವ ಘಿಸಾಡಿ ಸಮುದಾಯಗಳ ಕುಲುಮೆ ವೃತ್ತಿಗೆ ಹೊಂದಿಕೊಂಡಂತೆ ಇಟ್ಟಿರುವ ಹಲವಾರು ನಂಬಿಕೆಗಳಿವೆ. ಈ ಸಮುದಾಯದ ಕುಲದೇವತೆಯು ಕಾಳಮ್ಮವಾಗಿದೆ. ಪುರಾತನ ಕಾಲದಲ್ಲಿ ಬುಡಕಟ್ಟಿನ ಜನರು ಸೂರ್ಯ ಮುಳುಗಿದ ಕೂಡಲೆ ಭಯಂಕರ ಕತ್ತಲು ಆವರಿಸುತ್ತದೆ. ಕತ್ತಲು ಕಂಡು ಹೆದರಿ ಕಾಳರಾತ್ರಿಯನ್ನು ಓಡಿಸಲು ಕಾಳಮ್ಮನನ್ನು ಸೃಷ್ಟಿ ಮಾಡಿದ್ದಾರೆ ಎನ್ನುವ ಜಾನಪದ ಕಥೆ ಇದೆ.[೩] ಈ ಸಮುದಾಯದವರು ಕಾಳಮ್ಮ ದೈವದಲ್ಲಿ ತುಂಬಾ ನಂಬಿಕೆಯನ್ನು ಇಟ್ಟು ಕೊಂಡಿರುವುದನ್ನು ಕಾಣುತ್ತೇವೆ. ಇವರು ಕೂಡ ತಮ್ಮ ಕುಲುಮೆ ಬೇಕಾದ ಅವಶ್ಯ ಸಾಮಗ್ರಿಗಳಾದ ಒಲೆ, ಅಡಿಗಲ್ಲು ಮತ್ತು ಇಕ್ಕಳದ ಕುರಿತು ಕಥೆಗಳಿವೆ. ವಿಶ್ವಕರ್ಮ ಸಮುದಾಯದ ಕುಲುಮೆಯಲ್ಲಿ, ಕುಲುಮೆ ಕೆಲಸ ಮಾಡುವಾಗ ಸ್ವತಃ ಕಾಳಮ್ಮ ದೇವಿಯೇ ಒಲೆಯಿಂದ ಪ್ರತ್ಯಕ್ಷವಾದಳು. ಆ ಕಾರಣಕ್ಕಾಗಿ ಕುಲುಮೆ ಕೆಲಸವು ಕಾಳಿಗೆ ಸಮವಾಗಿದೆ. ಅವಳನ್ನು ಚೆನ್ನಾಗಿ ನೋಡಿಕೊಳ್ಳಬೇಕೆಂದು ಒಲೆ ಮಾಡಿದ ಗೋಡೆ ಕಟ್ಟಿಸಿ ಕಾಳಮ್ಮ ದೇವಿ ಎಂದು ಪೂಜಿಸುವ ಬಲವಾದ ನಂಬಿಕೆಯಿದೆ. “ಕಮ್ಮಾರಿಕೆ ಕೆಲಸದಲ್ಲಿ ಒಂದು ಚೀಲ ಇದ್ದಿಲು ಸುಟ್ಟರು ಕೇವಲ ಒಂದು ಹಿಡಿಕೆ ಬೂದಿ ಬೀಳುವುದು ಎಂಬ ಕಲ್ಪನೆ ಇದ್ದು ಇದು ಮಹಾಕಾಳಿಯ ಶಾಪ” ಎಂಬ ನಂಬಿಕೆಯನ್ನು ಹೊಂದಿದ್ದಾರೆ.

ಅಡಿಗಲ್ಲಿಗೆ ಸಂಬಂಧಿಸಿದಂತೆ, ಸುಮಾರು ೧೦೦೦ ವರ್ಷಗಳ ಪೂರ್ವದಲ್ಲಿ ಬಂಡಿಯಲ್ಲಿರುವ ಅಚ್ಚನ್ನು ತೆಗೆದು ಕಾಸಿ, ಬಡಿದು ಅಡಿಗಲ್ಲು ತಯಾರಿಸಿದರು. ಅಡಿಗಲ್ಲನ್ನು ದೇವರೆಂದು ನಂಬಿದ್ದಾರೆ.

ಅಡಿಗಲ್ಲು ಚೆನ್ನಾಗಿದ್ದರೆ ತಯಾರಾಗುವ ವಸ್ತುವು ಉತ್ತಮವಾಗಿರುತ್ತದೆ ಎಂದು ಭಾವಿಸುತ್ತಾರೆ. ಹಾಗೇಯೆ ಸುಮಾರು ೧೦೦೦ ವರ್ಷಗಳ ಪೂರ್ವದಲ್ಲಿ ಯಾರೋ ಒಬ್ಬರು ಕೆಲಸ ಮೂಗಿದ ನಂತರ ಕುಳಿತಿದ್ದರು. ಪಕ್ಕದಲ್ಲಿ ಕತ್ತರಿ ಆಕಾರದಲ್ಲಿ ಕೂತಿರುವ ನಾಯಿಯನ್ನು ಕಂಡರು. ತಕ್ಷಣ ಎರಡು ಕಬ್ಬಿಣದ ಕಂಬಿಗಳನ್ನು ತೆಗೆದುಕೊಂಡು ನಾಯಿ ಕುಳಿತಿರುವ ಆಕಾರದಲ್ಲಿ ಜೋಡಿಸಿದ. ಎರಡು ಕಂಬಿ ಸೇರುವ ಸ್ಥಳದಲ್ಲಿ ರಂಧ್ರಮಾಡಿ ಮೊಳೆ ಹೊಡೆದು ಜೋಡಿಸಿದಾಗ ಇಕ್ಕಳ ತಯಾರಾಯಿತು ಎನ್ನುವ ಬಲವಾದ ನಂಬಿಕೆಯಾಗಿದೆ. ಇಂದಿಗೂ ಈ ಸಮುದಾಯದಲ್ಲಿ ನಾಯಿಗೆ ಪೂಜ್ಯನೀಯವಾಗಿ ಗೌರವಿಸುವುದನ್ನು ಕಾಣುತ್ತೇವೆ. ಹಾಗಾಗಿ ಇಂದಿಗೂ ನಾಯಿಯನ್ನು ಹೊಡೆಯುವುದಿಲ್ಲ. ನಾಯಿಯು ಇಕ್ಕಳ ರೂಪದಲ್ಲಿ ತಮಗೆ ತುತ್ತು ಗಂಜಿ ನೀಡಿದೆ ಎಂದು ಭಾವಿಸುತ್ತಾರೆ. ಇದಲ್ಲದೆ ಕುಲುಮೆಯಲ್ಲಿ ಚಪ್ಪಲಿ ಹಾಕಿ ಬಂದರೆ ಯಾರಿಗೂ ಅವಕಾಶವಿಲ್ಲ. ಕುಲುಮೆ ಉಪಕರಣಗಳಿಗೆ ಸಂಬಂಧಿಸಿದಂತೆ ಇವರು ವಿಶ್ವಕರ್ಮ ಸಮುದಾಯದ ನಂಬಿಕೆಗಳಿಗೆ ಹೋಲಿಕೆಯಾಗುವುದನ್ನು ಕಾಣುತ್ತೇವೆ. ಈ ಸಮುದಾಯದವರು ತಮ್ಮ ಮೂಲದೈವ ಕಾಳಮ್ಮ ಜೊತೆಗೆ ಅಂಬಾಭವಾನ, ಯಲ್ಲಮ್ಮ ಭಾಗೆಮ್ಮಾ ದ್ಯಾಮಮ್ಮ, ದುರುಗಮ್ಮರನ್ನು ನಂಬುತ್ತಾರೆ. ಪುರುಷ ದೈವಗಳಾದ ಜಿಜೋರಿ ಖಂಡೋಬಾ, ಆಂಜನೆಯ, ಘಿಸಾಡಿ ಬಾಬಾ, ವೆಂಕಟೇಶ್ವರ, ತಿಂತಿಣಿ ಮೌನೇಶ್ವರ, ನರಸಿಂಹಸ್ವಾಮಿ, ಮಲ್ಲಯ್ಯ, ರಾಜಾ ಬಕ್ಸಾರ್‌ಗಳನ್ನು ಪೂಜ್ಯ ಭಾವನೆಯಿಂದ ಕಾಣುತ್ತಾರೆ. ಅದಲ್ಲದೆ ಇಸ್ಲಾಂ ದೈವಗಳಲ್ಲಿ ಸಹ ನಂಬಿಕೆಯನ್ನು ಇಟ್ಟಿರುವುದನ್ನು ಕಾಣುತ್ತೇವೆ. ಹೀಗೆ ಘಿಸಾಡಿ ಸಮುದಾಯದವರು ವೃತ್ತಿ ಕುರಿತು ನಂಬಿಕೆಗಳನ್ನು ತಳೆದಿದ್ದಾರೆ ಎಂದು ಹೇಳಬಹುದು.

ಬೇಡನಾಯಕ, ಹರಿಜನ ಆದಿ ದ್ರಾವಿಡ, ಲಂಬಾಣಿ, ಬಂಜಾರ ಮತ್ತು ಗೋಲ್ಲ ಸಮುದಾಯಗಳಲ್ಲಿ ಹಲವಾರು ನಂಬಿಕೆಗಳಿವೆ. ಆದರೆ ಕುಲುಮೆ ವೃತ್ತಿ ಮತ್ತು ಕಬ್ಬಿಣದ ವಸ್ತುಗಳ ಕುರಿತು ಅಂತಹ ಯಾವುದೇ ನಂಬಿಕೆಗಳು ಕಂಡುಬರುವುದಿಲ್ಲ. ಈ ಸಮುದಾಯಗಳು ಬಹುಶಃ ವಿಶ್ವಕರ್ಮ ಸಮುದಾಯದವರು ಪೂಜಿಸುವ ಕಾಳಿದೇವಿಯನ್ನು ನಂಬುತ್ತಾರೆ. ಕುಲುಮೆ ಕಾಳಮ್ಮ ಎಂದು ನಂಬಿರುವುದನ್ನು ಕಾಣುತ್ತೇವೆ. ಈ ಸಮುದಾಯಗಳು ಮೂಲತಃ ಕುಲುಮೆ ವೃತ್ತಿಯಿಂದ ಬಂದಿರದೆ, ಆರ್ಥಿಕ ಸ್ಥಿತಿಯನ್ನು ಸರಿದುಗಿಸಲು ಈ ವೃತ್ತಿಗೆ ಇಳಿದಿರುವುದು ಕಂಡುಬರುತ್ತದೆ. ಹಾಗಾಗಿ ಇವರಲ್ಲಿ ಕುಲುಮೆ ವೃತ್ತಿಗೆ ಹೊಂದಿಕೊಂಡಂತೆ ನಂಬಿಕೆಗಳ ಕುರಿತು ಹೆಚ್ಚು ತಿಳಿದಿಲ್ಲ. ಒಟ್ಟಾಗಿ ಕುಲುಮೆ ಎಂದರೆ ಕಾಳಮ್ಮ ಎಂದು ನಂಬುತ್ತಾರೆ.

ಹೀಗೆ ಈ ಎಲ್ಲ ಸಮುದಾಯಗಳಲ್ಲಿ ಕುಲುಮೆ ಮತ್ತು ಕುಲುಮೆಯಲ್ಲಿ ವಸ್ತುಗಳನ್ನು ಉತ್ಪಾದಿಸಲು ಅವಶ್ಯಕವಾದ ಸಲಕರಣೆಗಳ ಕುರಿತು ಹಲವಾರು ನಂಬಿಕೆಗಳು ಇರುವುದು ನಿಜ. ಇಂದು ಕಮ್ಮಾರರು ಆಧುನಿಕ ಕೈಗಾರಿಕರಣದಿಂದ ಕೆಲಸವಿಲ್ಲದೆ ಆದಾಯವಿಲ್ಲದೆ ಸಂಕಷ್ಟಕ್ಕೆ ಸಿಲುಕಿದ್ದಾರೆ. ಹಾಗೇ ಸಿಲುಕಿದರೂ ಕುಲುಮೆ ಮತ್ತು ಕುಲುಮೆಯ ಉಪಕರಣಗಳ ಕುರಿತು ಇರುವ ನಂಬಿಕೆ ಕಡಿಮೆಯಾಗಿಲ್ಲ. ಕಾರಣ ತಮ್ಮ ವೃತ್ತಿಯ ಕುರಿತು ಇರುವ ಪೂಜ್ಯನೀಯ ಭಾವನೆ ಮತ್ತು ಅಚಲವಾದ ನಂಬಿಕೆ ಎನ್ನಬಹುದು.

ಅಡಿಟಿಪ್ಪಣಿಗಳು

೧. ಬಿ.ಆರ್.ಕುಮಾರ, ಕರ್ನಾಟಕದ ಮುದ್ದೆ ಕಂಬಾರರು, ಪು.೧೫೩-೧೫೪

೨. ಅದೇ, ಪು.೩೦

೩. ಬಸವರಾಜ. ಎಸ್. ಹಿರೇಮಠ ಮತ್ತು ಅಂಜಲಿ ಸಾಳೊಂಕಿ, ಪೂರ್ವೋಕ್ತ, ಪು.೬೬

೪. ಅದೇ, ೧೯-೨೦

ಅಧ್ಯಾಯ ೫

ಸಮಾರೋಪ

ಅಧ್ಯಾಯ ಐದು

ಸಮಾರೋಪ

ಪ್ರಾಗಿತಿಹಾಸಿಕ ಕಾಲದಿಂದ ಹಿಡಿದು ಬೃಹತ್ ಶಿಲಾಯುಗದ ಕಾಲದ ಮಾನವನ ನಾಗರಿಕ ಸಂಸ್ಕೃತಿಯ ವಿಕಾಸದಲ್ಲಿ ಲೋಹಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಲೋಹಗಳಾದ ತಾಮ್ರ, ಚಿನ್ನ, ಬೆಳ್ಳಿ, ಸೀಸ, ತವರ, ಕಂಚು, ಹಿತ್ತಾಳೆ ಮತ್ತು ಕಬ್ಬಿಣವು ಮಾನವನ ನಿತ್ಯ ಬದುಕಿನಲ್ಲಿ ಜೊತೆ ಜೊತೆಯಾಗಿ ಬಂದಿರುವುದನ್ನು ಕಾಣುತ್ತೇವೆ. ಈ ಎಲ್ಲ ಲೋಹಗಳಲ್ಲಿ ಕಬ್ಬಿಣ ಲೋಹವು ಪ್ರಮುಖವಾಗಿದೆ. ಈ ಲೋಹಗಳು ಪ್ರಾಚೀನ ಕಾಲದಿಂದ ಆಯಾ ಹೆಸರುಗಳಿಂದಲೇ ಚಿರಪರಿಚಿತ ವಾಗಿರುವುದು ಅವುಗಳ ಲಕ್ಷಣ ಮತ್ತು ಪ್ರಭಾವವನ್ನು ತಿಳಿಸುತ್ತವೆ. ಉದಾಹರಣೆಗೆ ತಾಮ್ರಯುಗ, ಕಾಂಸಯುಗ ಮತ್ತು ಕಬ್ಬಿಣಯುಗವನ್ನು ಹೆಸರಿಸುತ್ತೇವೆ. ಲೋಹ ಸಂಸ್ಕೃತಿಯ ಪ್ರಭಾವವು ವಿಶ್ವದ ಎಲ್ಲ ದೇಶಗಳಲ್ಲಿ ಇರುವಂತೆ ಭಾರತದಲ್ಲಿಯೂ ಸಹ ಇದೆ. ಕಬ್ಬಿಣ ಲೋಹವು ದೇಶದ ಮೇಲೆ ಅಗಾದವಾದ ಪರಿಣಾಮವನ್ನು ಬೀರಿರುವುದನ್ನು ಅಲ್ಲಗಳೆಯುವಂತಿಲ್ಲ. ಕರ್ನಾಟಕ ರಾಜ್ಯವು ಕೂಡ ಇದಕ್ಕೆ ಹೊರತಾಗಿಲ್ಲ. ಪ್ರಾಚೀನ ಕಾಲದಿಂದ ಹಿಡಿದು ಇಂದಿನ ಆಧುನಿಕ ಕಾಲದ ನಾಗರಿಕತೆಯ ಬೆಳವಣಿಗೆಯ ಹಂತದಲ್ಲಿ ಉಳಿದಿರುವ ಹಲವಾರು ಲೋಹಗಳ ನೆಲೆಗಳು ಮತ್ತು ಅವಶೇಷಗಳು ನಮ್ಮ ರಾಜ್ಯದ ಹಲವಾರು ಭಾಗಗಳಲ್ಲಿ ಇರುವುದನ್ನು ಕಾಣುತ್ತೇವೆ. ಈ ನೆಲೆಗಳ ಮತ್ತು ಅವಶೇಷಗಳ ಆಧಾರವನ್ನು ಬಳಸಿ ಸಂಶೋಧನೆ ಮಾಡಿ ಕಣ್ಮರೆಯಾದ ಪ್ರಾಗಿತಿಹಾಸಕಾಲದ ನಾಗರಿಕತೆಯ ಬೆಳವಣಿಗೆಯಲ್ಲಿ ಬಳಕೆಯಾದ ಹಲವಾರು ಲೋಹಗಳ ಸಂಸ್ಕೃತಿಯನ್ನು ಮೆಲುಕು ಹಾಕಬಹುದಾಗಿದೆ. ಈ ದಿಸೆಯಲ್ಲಿ ಹೊಸಪೇಟೆ ತಾಲೂಕಿನ ಕಬ್ಬಿಣದ ಲೋಹದ ಕುಲುಮೆಗಳು ಒಂದಾಗಿದ್ದು ಈ ಪರಿಸರದಲ್ಲಿ ಹಲವಾರು ಕಬ್ಬಿಣದ ನೆಲೆಗಳಿವೆ. ಈ ನೆಲೆಗಳಲ್ಲಿ ನಡೆಯುತ್ತಿರುವ ಕುಲುಮೆ ವೃತ್ತಿಯನ್ನು ಪ್ರಾಗಿತಿಹಾಸಿಕ ಕಾಲದಿಂದಲೂ ನಡೆದುಬಂದ ಕಬ್ಬಿಣದ ಉತ್ಪಾದನೆಗೆ ಹೋಲಿಸಿ ನೋಡಬಹುದು.

ಲೋಹಗಳು ಪ್ರಾಗಿತಿಹಾಸ ಕಾಲದಲ್ಲಿ ಬಳಕೆಯಾದ ಉಲ್ಲೇಖವನ್ನು ಕ್ರಿ.ಪೂ. ೧೫೦೦ ರಿಂದ ೧೦೦೦ರ ನಡವಿನ ವೇದವು ತಿಳಿಸುತ್ತದೆ. ಕ್ರಿ.ಪೂ. ೧೦೦೦ ರಿಂದ ೬೦೦ರಲ್ಲಿನ ರಚಿತವಾದ ಬ್ರಾಹ್ಮಣ, ಅರಣ್ಯಕ ಮತ್ತು ಉಪನಷತ್ತುಗಳಲ್ಲಿ ತಾಮ್ರ, ಚಿನ್ನ ಮತ್ತು ಕಬ್ಬಿಣದ ಕುರಿತಾದ ಹೆಸರಿನ ಪ್ರಯೋಗವನ್ನು ತಿಳಿಯುತ್ತೇವೆ. ಮತ್ತು ಕ್ರಿ.ಪೂ. ೪ನೇ ಶತಮಾನದಿಂದ ಕಿ.ಶ. ೪ನೇ ಶತಮಾನದಲ್ಲಿ ರಚಿತವಾದ ಚರಕ ಮತ್ತು ಸುಶ್ರುತ ಸಂಹಿತೆ ಹಾಗೂ ಕೌಟಿಲ್ಯನ ಅರ್ಥಶಾಸ್ತ್ರಗಳು ಲೋಹಗಳ ಕುರಿತ ವಿವರವಾಗಿ ತಿಳಿಸುತ್ತಲ್ಲದೆ ಕಬ್ಬಿಣ ಲೋಹವನ್ನು ವಿಪುಲವಾಗಿ ಬಳಕೆಯಾದುದರ ಕುರಿತು ತಿಳಿಸುತ್ತವೆ. ಕ್ರಿ.ಶ. ೫ನೇ ಶತಮಾನದಲ್ಲಿ ಲೋಹ ವಿಜ್ಞಾನದ ಅದ ಪ್ರಗತಿಯನ್ನು ಕಾಣುತ್ತೇವೆ. ಇದೇ ವೇಳೆಯಲ್ಲಿನ ದೆಹಲಿಯ ಕಬ್ಬಿಣದ ಸ್ಥಂಭ ನಿರ್ಮಾಣವು ಮತ್ತಷ್ಟು ಪುಷ್ಟಿ ನೀಡುತ್ತದೆ. ಹೊಸಪೇಟೆ ಪರಿಸರದಲ್ಲಿ ಚಿನ್ನದ ಬಳಕೆಯುನ್ನು ವಿಜಯನಗರ ಕಾಲದಲ್ಲಿ ಹೆಚ್ಚಾಗಿ ಕಾಣುತ್ತೇವೆ. ತಾಮ್ರದಿಂದ ಮಾಡಿದ ಮಣಿಗಳು, ತಾಮ್ರದ ಬಳೆ ಮತ್ತು ಉಂಗುರವನ್ನು ಕಪ್ಪಗಲ್ಲು, ಸಂಗನಕಲ್ಲು ಮತ್ತು ತೆಕ್ಕಲಕೋಟೆಯ ಉತ್ಖನನಗಳಲ್ಲಿ ಕಂಡುಬಂದಿವೆ. ಕಂಚು ಲೋಹದಿಂದ ಮಾಡಿದ ಚಪ್ಪಟೆ ಕೊಡಲಿ ಕೃಷ್ಣ ನದಿ ಪ್ರದೇಶದಲ್ಲಿ ಕಂಡಿವೆ. ಈ ಪರಿಸರದಲ್ಲಿ ತಾಮ್ರ, ಚಿನ್ನ, ಬೆಳ್ಳಿ, ಸೀಸ, ತವರ, ಕಂಚು ಮತ್ತು ಹಿತ್ತಾಳೆ ಲೋಹಗಳ ಕುರುಹುಗಳು ಹೆಚ್ಚಾಗಿ ದೊರಕದಿದ್ದರೂ ನೆರೆಯ ಪ್ರದೇಶಗಳಲ್ಲಿ ದೊರೆತ ಆಧಾರಗಳನ್ನು ಬಳಸಿ, ಈ ಪರಿಸರವನ್ನು ಸಂಶೋದಿಸಲು ಹೆಚ್ಚಿನ ಅವಕಾಶಗಳು ಇವೇ ಎಂದು ಹೇಳಬಹುದು.

ನಮ್ಮ ದೇಶದಲ್ಲಿ ಕಬ್ಬಿಣ ಉತ್ಪಾದನೆಯ ಕ್ರಿ.ಪೂ ೧೮೦೦ರಿಂದಲೆ ನಡೆಯುತ್ತಿತ್ತು ಎಂಬುದನ್ನು ಪುರಾತತ್ವ ಶಾಸ್ತ್ರಜ್ಞರ ಉತ್ಖನನದ ವರದಿಗಳಿಂದ ತಿಳಿಯುತ್ತೇವೆ. ಪುರಾತನ ನೆಲೆಗಳಾದ ಬ್ರಹ್ಮಗಿರಿ, ಚಂದ್ರವಳ್ಳಿ, ಟಿ.ನರಸೀಪುರ, ಹಳ್ಳೂರು ಮತ್ತು ಬಳ್ಳಾರಿಯ ಕಪ್ಪಗಲ್ಲು, ಸಂಗನಕಲ್ಲು, ತೆಕ್ಕಲಕೋಟೆಯಲ್ಲಿ ನಡೆದ ಉತ್ಖನನದಿಂದ ಬಂದ ವರದಿಯನ್ನು ಆಧರಸಿ ಕರ್ನಾಟಕದಲ್ಲಿ ಕಬ್ಬಿಣ ಬಳಕೆಯ ಕಾಲವನ್ನು ಕ್ರಿ.ಪೂ ೧೮೦೦ ರಿಂದ ೩೦೦ ಎಂದು ತಿಳಿಯುತ್ತೇವೆ. ಹೀರೆಬೆಣಕಲ್ಲಿನ ಕಲ್ಗೋರಿಯಲ್ಲಿ ದೂರೆತ ಕಬ್ಬಿಣದ ಉಪಕರಣ, ಆನೆಗುಂದಿಯ ಕಬ್ಬಿಣದ ಕಿಟ್ಟದ ದಿಬ್ಬ ಮತ್ತು ಕ್ರಿ.ಶ ೪ನೇ ಶತಮಾನದಲ್ಲಿ ಸಂಡೂರಿನಲ್ಲಿ ಉತ್ಪಾದಿಸುತ್ತಿದ್ದ ಕಬ್ಬಿಣ ಹಾಗೂ ಕ್ರಿ.ಶ ೧೪ ರಿಂದ ೧೬ನೇ ಶತಮಾನದ ಪೂರ್ವದಲ್ಲಿ ಕೆ.ಗೊಲ್ಲರಹಳ್ಳಿ, ಚಿಲಕನಹಟ್ಟಿ ಮತ್ತು ಕಮಲಾಪುರದಲ್ಲಿ ನಡೆದ ಕಬ್ಬಿಣದ ಉತ್ಪಾದನೆಯು ಮತ್ತಷ್ಟು ಪುಷ್ಟಿ ನೀಡುತ್ತವೆ. ಹಾಗೂ ಇಂದಿಗೂ ಹೊಸಪೇಟೆಯ ತಾಲೂಕಿನಾದ್ಯಾಂತ ೮೦ಕ್ಕೂ ಹೆಚ್ಚಿನ ಕುಲುಮೆಗಳು ಮತ್ತು ಕಬ್ಬಿಣ ಅದಿರು ದೊರೆಯುವ ಅಂಚಿನ ಪ್ರದೇಶಗಳಾದ ಪಾಪಿನಾಯಕನ ಹಳ್ಳಿ, ಕೆ.ಗೊಲ್ಲರಹಳ್ಳಿ, ಮರಿಯಮ್ಮನಹಳ್ಳಿ ಮತ್ತು ವ್ಯಾಸನಕೇರಿಯಲ್ಲಿ ಸ್ಥಗಿತಗೊಂಡ ಕುಲುಮೆಗಳನ್ನು ನೋಡಿದರೆ ಈ ಪ್ರದೇಶವು ಹೇರಳವಾಗಿ ಕಬ್ಬಿಣವನ್ನು ಉತ್ಪಾದಿಸಲಾಗುತ್ತಿತ್ತು ಎಂದು ತಿಳಿಯುತ್ತದೆ. ಈ ಆಧಾರಗಳನ್ನು ಬಳಸಿ ಹೆಚ್ಚಿನ ಸಂಶೋಧನೆ ಮಾಡಿ ಕಬ್ಬಿಣದ ಕಾಲವನ್ನು ಇನ್ನು ಪ್ರಾಚೀನಕ್ಕೆ ತೆಗೆದುಕೊಳ್ಳುವ ಹಲವಾರು ಅವಕಾಶಗಳಿವೆ ಎಂದು ಹೇಳಬಹುದು.

ಹೊಸಪೇಟೆ ಪರಿಸರವು ಕಬ್ಬಿಣ ಕುಲುಮೆಗಳಿಗೆ ಸೂಕ್ತವಾದ ಸ್ಥಳವಾಗಿದ್ದು, ಈ ಪ್ರದೇಶಗಳಲ್ಲಿಯ ಬೆಟ್ಟ-ಗುಡ್ಡಗಳು ಹೇರಳವಾಗಿ ಕಬ್ಬಿಣ ಅದಿರುಗಳನ್ನು ಒದಗಿಸುತ್ತವೆ. ಹೆಮಟೈಟ್ ಮತ್ತು ಮ್ಯಾಂಗನಸ್ ಇಲ್ಲಿನ ಪ್ರಮುಖ ಅದಿರಾಗಿವೆ. ಪ್ರಾಚೀನ ಜನರು ಬೆಟ್ಟಗುಡ್ಡಗಳಿಂದ ತಂದ ಅದಿರನ್ನು ಬಳಸಿ ಕಬ್ಬಿಣ ತಯಾರಿಸುವ ವಿಧಾನವು ಆ ಜನರ ಕೌಶಲ್ಯತೆಯನ್ನು ಬಿಂಬಿಸುತ್ತದೆ. ಕುಲುಮೆಗಳು ತಾಮ್ರ ಶಿಲಾಯುಗ ದಲ್ಲಿ ಬೆಳಕಿಗೆ ಬಂದು ಹಂತಹಂತವಾಗಿ ಚಿಕ್ಕಪುಟ್ಟ ಮಾರ್ಪಾಡು ಹೊಂದುತ್ತ ಬೃಹದಾಕಾರದ ಕುಲುಮೆಗಳನ್ನು ಕಾಣುತ್ತೇವೆ. ಕುಲುಮೆಯಲ್ಲಿ ತಿದಿಗಳನ್ನು ಬಳಸಿ ಕಬ್ಬಿಣ ಪಡೆಯುವುದರ ಕುರಿತು ತಿಳಿಯುತ್ತೇವೆ. ತಿದಿಗಳ ಬಳಕೆಯಿಂದ ಹೆಚ್ಚಿನ ಶಾಖವನ್ನು ಪಡೆಯುವುದಲ್ಲದೆ ಕಬ್ಬಿಣವನ್ನು ಕರಗಿಸುವ ಸಾಮರ್ಥ್ಯವು ವೃದ್ಧಿಯಾಗುತ್ತದೆ. ಕುಲುಮೆಯಲ್ಲಿ ಪದರ ಪದರಾಗಿ ಇದ್ದಿಲು, ಬೆಣಚುಕಲ್ಲು, ಸುಣ್ಣದಕಲ್ಲು ಮತ್ತು ಕಬ್ಬಿಣದ ಅದಿರನ್ನು ಹಾಕಿ ಶಾಖ ಉಣಿಸುತ್ತಿದ್ದರೆ ಕಬ್ಬಿಣದ ಅದಿರು ಕರಗಿ ಇಂಗಾಲಿಕರಣಗೊಂಡು ಶುದ್ಧ ಕಬ್ಬಿಣವನ್ನು ಪಡೆಯಬಹುದು ಎಂದು ತಿಳಿಯುತ್ತೇವೆ. ನಂತರ ಬಂದ ಕಬ್ಬಿಣದಿಂದ ಬೇಕಾದ ಪರಿಕರಗಳನ್ನು ಮಾಡಿಕೊಳ್ಳುತ್ತಿದ್ದರು. ಹಿಂದೇ ಕೇವಲ ಕೃಷಿ ಮತ್ತು ಬೇಟೆಗೆ ಅವಶ್ಯವಾದ ಪರಿಕರಗಳನ್ನು ತಯಾರಿಸುತ್ತಿದುದ್ದಾಗಿ ತಿಳಿಯುತ್ತೇವೆ.

ಕಬ್ಬಿಣ ಉತ್ಪಾದನೆಯನ್ನು ಪ್ರಾಚೀನ ಕಾಲದಲ್ಲಿ ಹೆದ್ದಿದಿಗಳು, ಅಡಿಗಲ್ಲು ಮತ್ತು ಹೆಗ್ಗಿಕ್ಕಳ ಸಹಾಯದಿಂದ ತಯಾರಿಸುತ್ತಿದ್ದರು. ಇಂದಿನ ಕುಲುಮೆಯಲ್ಲಿ ಇವೇ ಸಾಮಾಗ್ರಿಗಳ ಜೊತೆ ಇನ್ನಿತರ ಉಪಕರಣಗಳನ್ನು ಬಳಸಿ ಕೇವಲ ಕಬ್ಬಿಣದ ಪರಿಕರಗಳನ್ನು ತಯಾರಿಸಿ, ಕೃಷಿ ಮತ್ತು ಗೃಹಬಳಕೆಯಲ್ಲಿ ಬಳಸುವುದನ್ನು ಕಾಣುತ್ತೇವೆ. ತಾಲೂಕಿನ ಗಾದಿಗನೂರು ಮತ್ತು ಹೊಸಪೇಟೆಯ ಎಂ.ಜೆ. ನಗರದಲ್ಲಿ ಮಾತ್ರ ತಿದಿಯನ್ನು ಬಳಕೆ ಮಾಡುತ್ತಿರುವುದನ್ನು ಕಾಣುತ್ತೇವೆ. ಉಳಿದ ಕುಲುಮೆಗಳಲ್ಲಿ ಆಧುನಕ ಬ್ಲೋವರ್ ಬಳಸಿ ಪರಿಕರಗಳನ್ನು ತಯಾರಿಸುತ್ತಿರುವುದನ್ನು ನೋಡಬಹುದು.

ಕಬ್ಬಿಣ ಪರಿಕರಗಳ ಉತ್ಪಾದನೆಯಲ್ಲಿ ಹೊಸಪೇಟೆ ತಾಲೂಕಿನಾದ್ಯಾಂತ ಇರುವ ವಿಶ್ವಕರ್ಮ, ಬಯಲುಗಮ್ಮಾರರು, ಘಿಸಾಡಿ, ಮುಸ್ಲಿಂ, ಬೇಡನಾಯಕ, ಹರಿಜನ(ಆದಿ ದ್ರಾವಿಡ), ಬಂಜಾರ (ಲಂಬಾಣಿ) ಮತ್ತು ಗೊಲ್ಲ(ಯಾದವ) ಕಮ್ಮಾರ ಸಮುದಾಯದವರು ತೊಡಗಿರುವುದನ್ನು ಕಾಣುತ್ತೇವೆ. ಈ ಸಮುದಾಯಗಳ ಸುಮಾರು ಲಂಕ್ಕೂ ಹೆಚ್ಚಿನ ಕುಲುಮೆಗಳು ಕುಲುಮೆಗಳು ತಾಲೂಕಿನಾದ್ಯಾಂತ ಹರಡಿಕೊಂಡಿರುವುದನ್ನು ಕಾಣುತ್ತೇವೆ. ವಿಶ್ವಕರ್ಮ ಕಮ್ಮಾರರು ವಿಜಯನಗರ ಕಾಲದ ಪೂರ್ವದಿಂದಲೂ ಕುಲುಮೆ ವೃತ್ತಿಯನ್ನು ನಡೆಸುತ್ತಿದ್ದರೆ, ಬಯಲುಗಮ್ಮಾರ ಮತ್ತು ಮುಸ್ಲಿಂ ಕಮ್ಮಾರರು ಕೂಡ ಸುಮಾರು ೨೦೦ ವರ್ಷಗಳ ಪುರಾತನದಿಂದಲೂ ನಡೆಸುತ್ತಿದ್ದಾರೆ. ಘಿಸಾಡಿ ಕಮ್ಮಾರರು ಸುಮಾರು ೬೦ ವರ್ಷಗಳಿಂದ ಮತ್ತು ಉಳಿದ ಸಮುದಾಯಗಳಾದ ಬೇಡ ನಾಯಕ, ಹರಿಜನ, ಲಂಬಾಣಿ ಮತ್ತು ಗೊಲ್ಲರು ಇತ್ತೀಚಿನ ಐದಾರು ದಶಕಗಳಿಂದ ನಡೆಸುತ್ತಿರುವುದು ಸ್ಪಷ್ಟವಾಗುತ್ತದೆ.

ವಿಶ್ವಕರ್ಮ ಸಮುದಾಯದ ಹಿರೇಮನೆ ಪಂಗಡದ ಕುಲುಮೆಗಳು ಊರ ಹೊರವಲಯದಲ್ಲಿ ಇಲ್ಲವೆ ಊರಿನ ಹತ್ತಿರ ಗುಡಿಸಲು ಅಥವಾ ಚಪ್ಪರದ ನೆರಳಿನಲ್ಲಿ ನಡೆಯುತ್ತವೆ. ಚಿಕ್ಕಮನೆ ಪಂಗಡದ ಕುಲುಮೆಗಳು ಮನೆಗೆ ಅಂಟಿಕೊಂಡು ಸುವ್ಯವಸ್ಥೆಯಿಂದಲೂ ಕೂಡಿರುವುದನ್ನು ಕಾಣುತ್ತೇವೆ.

ಹಿರೇಮನೆಯವರ ಕುಲುಮೆಗಳು ಯಾವಾಗಲೂ ಉತ್ತರ ದಿಕ್ಕಿಗೆ ಮುಖ ಮಾಡಿರುತ್ತವೆ. ಅದರೆ ಚಿಕ್ಕಮನೆಯವರ ಮತ್ತು ಇನ್ನುಳಿದ ಸಮುದಾಯದ ಕುಲುಮೆಗಳಲ್ಲಿ ಅಂತಹ ಕಟ್ಟುಪಾಡುಗಳನ್ನು ಕಾಣುವುದಿಲ್ಲ. ಹಿರೇಮನೆಯವರ ಕುಲುಮೆಗಳು ಯಾವಾಗಲೂ ಒಂದರ ಪಕ್ಕ ಒಂದರಂತೆ ನಿರ್ಮಿಸಿದರೆ ಉಳಿದ ಸಮುದಾಯಗಳಲ್ಲಿ ಕಂಡುಬರುವುದಿಲ್ಲ. ವಿಶ್ವಕರ್ಮ ಕಮ್ಮಾರರು ಕುಲುಮೆ ಮತ್ತು ಕಬ್ಬಿಣವನ್ನು ಕಾಳಿ, ಕಾಳಮ್ಮ ಎಂತಲೂ ಅಡಿಗಲ್ಲನ್ನು ಕಮಟೇಶ್ವರ, ಭರಮಪ್ಪ ಎಂದು ಹೇಳಿಕೊಳ್ಳುವ ಬಲವಾದ ನಂಬಿಕೆಯನ್ನು ಕಾಣುತ್ತೇವೆ. ಅದರೆ ಉಳಿದ ಸಮುದಾಯದಲ್ಲಿ ಅಂತಹ ಬಲವಾದ ನಂಬಿಕೆಯಿಲ್ಲದಿದ್ದರೂ ಕಾಳಮ್ಮನನ್ನು ನೆನೆಯುವುದನ್ನು ಕಾಣುತ್ತೇವೆ. ವಿಶ್ವಕರ್ಮ ಕಮ್ಮಾರರು ಕುಲುಮೆಯ ಪ್ರತಿಯೊಂದು ಸಾಮಗ್ರಿಗಳನ್ನು ಒಂದೊಂದು ದೇವರಿಗೆ ಹೋಲಿಕೆ ಮಾಡುವುದನ್ನು ನೋಡುತ್ತೇವೆ. ಅದರೆ ಉಳಿದ ಇತರೆ ಸಮುದಾಯದವರಲ್ಲಿ ಈ ಹೋಲಿಕೆ ಕಡಿಮೆಯಿದೆ. ಮುಸ್ಲಿಂ ಸಮುದಾಯದ ಕಬ್ಬಿಣ ವೃತ್ತಿಯು ತಮ್ಮ ಗುರುಗಳಿಗೆ ಅಚ್ಚುಮೆಚ್ಚಿನ ವೃತ್ತಿಯಾಗಿತ್ತು ಎಂದು ಹೇಳುವ ಬಲವಾದ ನಂಬಿಕೆಯನ್ನು ಕಾಣುತ್ತೇವೆ.

ಎಲ್ಲ ಸಮುದಾಯದ ಕುಲುಮೆಗಳಲ್ಲಿ ಪರಿಕರಗಳನ್ನು ತಯಾರಿಸುತ್ತಿರುವುದು ಕಂಡುಬರುತ್ತಿದ್ದು ಅಂತಹ ಪರಿಕರಗಳನ್ನು ತಯಾರಿಸುವ ವಿಧಾನಗಳು ಒಂದೇ ರೀತಿಯಾಗಿರುವುದು ಸ್ಪಷ್ಟವಾಗುತ್ತದೆ. ಈ ಸಮುದಾಯಗಳು ಆಧುನಕ ಕೈಗಾರಿಕರಣದಿಂದ ಪೈಪೋಟಿಯನ್ನು ಎದುರುಸುತ್ತಿದ್ದು, ವೃತ್ತಿಯನ್ನು ನಿಲ್ಲಿಸುವ ಪ್ರಸಂಗ ಒದಗಿದ್ದರು ಕೂಡ ವಂಶಪಾರಂಪರಿಕ ವೃತ್ತಿಯನ್ನು ಬಿಡದೆ ಕಷ್ಟದ ಮಧ್ಯೆಯೂ ಮುನ್ನಡೆಸಿಕೊಂಡು ಹೋಗುತ್ತಿರುವುದನ್ನು ಕಾಣುತ್ತೇವೆ. ಈ ಸಮುದಾಯಗಳ ಮೂಲ ವೃತ್ತಿಯು ಕುಲುಮೆ ಕೆಲಸವಾಗಿದ್ದು ಇವರಲ್ಲಿ ಸುಮಾರು ಶೇ.೮೫ ಭಾಗದ ಜನರು ಅನರಕ್ಷರಸ್ತರಾಗಿರುವುದನ್ನು ಕಾಣಬಹುದು. ಇತ್ತೀಚಿನ ಕೆಲ ವರ್ಷಗಳಲ್ಲಿ ಶಿಕ್ಷಣಕ್ಕೆ ಒತ್ತು ಕೊಡುತ್ತಿರುವುದನ್ನು ಕಾಣುತ್ತೇವೆ.

ಕುಲುಮೆ ವೃತ್ತಿಯನ್ನು ನಡೆಸುತ್ತಿರುವ ಹಲವಾರು ಸಮುದಾಯಗಳು ತಮ್ಮ ವೃತ್ತಿಗೆ ಸಂಬಂಧಸಿದ ಮತ್ತು ಪರಿಕರಗಳಿಗೆ ಹೊಂದಿಕೊಂಡಂತೆ ಹಲವಾರು ಆಚರಣೆಗಳು ಮತ್ತು ನಂಬಿಕೆಗಳನ್ನು ಕಂಡು ಕೊಳ್ಳುತ್ತಾರೆ. ವಿಶ್ವಕರ್ಮ ಸಮುದಾಯದಲ್ಲಿ ಕಾಳಿ ಮತ್ತು ಭರಮಪ್ಪವನ್ನು ಕುರಿತು ಆಚರಣೆಗಳು ಮಹತ್ವ ಪಡೆದಿವೆ. ಇದರಂತೆ ಎಲ್ಲ ಸಮುದಾಯಗಳು ಕೂಡ ಕಾಳಿಯನ್ನು ಪೂಜಿಸುತ್ತಾರೆ. ಕಾರಣ ಕಾಳಿಯನ್ನು ಕುಲುಮೆಯ ಒಲೆಯ ಬೆಂಕಿಗೆ ಹೋಲಿಸಿದರೆ ಅಡಿಗಲ್ಲನ್ನು ಭರಮಪ್ಪನನ್ನು ಹೋಲಿಸುವ ನಂಬಿಕೆ ಮತ್ತು ಪೂಜಿಸುವ ಆಚರಣೆಗಳು ಎಲ್ಲ ಕುಲುಮೆ ಸಮುದಾಯಗಳಲ್ಲಿರುವುದು ಸ್ಪಷ್ಟವಾಗುತ್ತದೆ. ಇದಲ್ಲದೇ ಘಿಸಾಡಿಗಳು ಇಸ್ಲಾಂ ದೇವರನ್ನು ನೆನೆಯುವುದು ಕಾಣಬಹುದು.

ಕೊನೆಯಲ್ಲಿ ಹೊಸಪೇಟೆ ಪರಿಸರದ ಕುಲುಮೆಗಳಿಗೆ ಸಂಬಂಧಿಸಿದಂತೆ ಮಹತ್ವದ ಅಂಶಗಳನ್ನು ತುಲನಾತ್ಮಕವಾಗಿ ಉತ್ತರವನ್ನು ಕಂಡುಕೊಂಡು ಪ್ರಯತ್ನಮಾಡಲಾಗಿದೆ. ಹಾಗೇಯೆ ಅಧ್ಯಯನಕ್ಕೆ ಪೂರಕವಾದ ಅನುಬಂಧಗಳಲ್ಲಿ ನಕ್ಷೆ, ಛಾಯಾಚಿತ್ರ ಮತ್ತು ಅಧ್ಯಯನದ ಕ್ಷೇತ್ರಕಾರ್ಯ ಕೈಗೊಂಡಾಗ ಸಂದರ್ಶಿಸಿದ ಪ್ರಮುಖ ವ್ಯಕ್ತಿಗಳ ವಿವರವನ್ನು ತಿಳಿಸಲಾಗಿದೆ. ಹಾಗೂ ಈ ಅಧ್ಯಯನಕ್ಕೆ ಪೂರಕವಾದ ಪರಾಮರ್ಶನ ಗ್ರಂಥಗಳನ್ನು ಕೊಡಲಾಗಿದೆ.

ಹೊಸಪೇಟೆ ಪರಿಸರದ ಕಬ್ಬಿಣದ ಕುಲುಮೆಗಳು ಎಂಬ ಅಧ್ಯಯನದಲ್ಲಿ ಹೊಸಪೇಟೆ ತಾಲೂಕಿನಾದ್ಯಾಂತ ಕುಲುಮೆ ವೃತ್ತಿಯನ್ನು ನಡೆಸುತ್ತಿರುವ ಎಲ್ಲ ಸಮುದಾಯಗಳ ಕುಲುಮೆಗಳ ಕುರಿತ ಪ್ರಾಚೀನತೆ, ಶೈಲಿ, ಗುಣ ಲಕ್ಷಣ, ರೂಪರೇಷೆ, ಸ್ವರೂಪ, ರಚನೆ ಮತ್ತು ವಿನ್ಯಾಸ, ವಂಶಾವಳಿ, ಬಳಸುವ ಸಾಮಾಗ್ರಿಗಳು, ಪರಿಕರಗಳು, ತಯಾರಿಸುವ ವಿಧಾನಗಳು ಶ್ರಮ ಮತ್ತು ಆರ್ಥಿಕ ಜೀವನವನ್ನು ಒಟ್ಟಾರೆಯಾಗಿ ಪುರಾತತ್ವ ಹಿನ್ನಲೆಯಲ್ಲಿ ಅಧ್ಯಯನ ನಡೆಸಲಾಗಿದ್ದು, ಈ ಸಮುದಾಯಗಳಲ್ಲಿ ಕಬ್ಬಿಣದ ಉತ್ಪಾದನೆ ಮತ್ತು ಬಳಕೆಯೂ ಹೇಗೆ ನಡೆಯುತ್ತಿತ್ತು ಎಂದು ಸಂಶೋಧಿಸುವ ಚಿಕ್ಕ ಪ್ರಯತ್ನವೇ ಈ ಪ್ರಬಂಧವಾಗಿದೆ.

ಅನುಬಂಧಗಳು

* ೧. ವಿಶ್ವಕರ್ಮ ಹೀರೆಮನೆ ಸಮುದಾಯದ ಕಲುಮೆಗಳ ವಿವರ
  ವಿಶ್ವಕರ್ಮ ಹೀರೆಮನೆ ಸಮುದಾಯದ ಕುಲುಮೆ ಮಾಲಿಕರ ವಂಶಾವಳಿ
  ವಿಶ್ವಕರ್ಮ ಚಿಕ್ಕಮನೆ ಸಮುದಾಯದ ಕುಲುಮೆ ಮಾಲಿಕರ ವಂಶಾವಳಿ
* ೨. ಬಯಲುಗಮ್ಮಾರ ಸಮುದಾಯದ ಕಲುಮೆಗಳ ವಿವರ
  ಬಯಲುಗಮ್ಮಾರ ಸಮುದಾಯದ ಕುಲುಮೆ ಮಾಲಿಕರ ವಂಶಾವಳಿ
* ೩. ಘಿಸಾಡಿ ಸಮುದಾಯದ ಕಲುಮೆಗಳ ವಿವರ
  ಘಿಸಾಡಿ ಸಮುದಾಯದ ಕಲುಮೆ ಮಾಲಿಕರ ವಂಶಾವಳಿ
* ೪. ಮುಸ್ಲಿಂ ಸಮುದಾಯದ ಕುಲುಮೆಗಳ ವಿವರ
  ಮುಸ್ಲಿಂ ಸಮುದಾಯದ ಕುಲುಮೆ ಮಾಲಿಕರ ವಂಶಾವಳಿ
* ೫. ಬೇಡನಾಯಕ ಸಮುದಾಯದ ಕುಲುಮೆಗಳ ವಿವರ
  ಬೇಡನಾಯಕ ಸಮುದಾಯದ ಕುಲುಮೆ ಮಾಲಿಕರ ವಂಶಾವಳಿ
* ೬. ಹರಿಜನ ಸಮುದಾಯದ ಕುಲುಮೆಗಳ ವಿವರ
  ಹರಿಜನ ಸಮುದಾಯದ ಕುಲುಮೆ ಮಾಲಿಕರ ವಂಶಾವಳಿ
* ೭. ಲಂಬಾಣಿ (ಬಂಜಾರ) ಸಮುದಾಯದ ಕುಲುಮೆಗಳ ವಿವರ
  ಲಂಬಾಣಿ ಸಮುದಾಯದ ಕುಲುಮೆ ಮಾಲಿಕರ ವಂಶಾವಳಿ
* ೮. ಗೊಲ್ಲ ಸಮುದಾಯದ ಕುಲುಮೆಗಳ ವಿವರ
  ಗೊಲ್ಲ ಸಮುದಾಯದ ಕುಲುಮೆ ಮಾಲಿಕರ ವಂಶಾವಳಿ

* ಗ್ರಂಥಋಣ

* ವಕ್ತೃಮಾಹಿತಿ ವಿವರ

* ರೇಖಾ ಮತ್ತು ಛಾಯಾಚಿತ್ರಗಳು

ಅನುಬಂಧ – ೧

ವಿಶ್ವಕರ್ಮ ಹೀರೆಮನೆ ಸಮುದಾಯದ ಕಲುಮೆಗಳ ವಿವರ

	ಕುಲುಮೆ –೧	ಕುಲುಮೆ–೨	ಕುಲುಮೆ–೩
ಹೆಸರು	ಗೊಲ್ಲರ ಹಳ್ಳಿ ಕಮ್ಮಾರ ಗಾಂಝು ಸೋಮಣ್ಣ ಕುಲುಮೆ	ಗೊಲ್ಲರ ಹಳ್ಳಿ ಕಮ್ಮಾರ ಗಾಂಝು ಮೌನೇಶ್ ಕುಲುಮೆ	ಗೊಲ್ಲರ ಹಳ್ಳಿ ಕಮ್ಮಾರ ಗಾಂಝು ಚಂದ್ರಪ್ಪ ಕುಲುಮೆ
ಮಾಲಿಕರು	ಕಮ್ಮಾರ ಗಾಂಝು ಸೋಮಣ್ಣ ಆಚಾರ್ಯ	ಕಮ್ಮಾರ ಗಾಂಝು ಮೌನೇಶ್ ಆಚಾರ್ಯ	ಕಮ್ಮಾರ ಗಾಂಝು ಚಂದ್ರಪ್ಪ ಆಚಾರ್ಯ
ಜಾತಿ	ಪಾಂಚಾಲ, ವಿಶ್ವ ಕರ್ಮ, ಕಂಬಾರ, ಮುದ್ದೆ ಕಂಬಾರ	ಪಾಂಚಾಲ, ವಿಶ್ವ ಕರ್ಮ, ಕಂಬಾರ, ಮುದ್ದೆ ಕಂಬಾರ	ಪಾಂಚಾಲ, ವಿಶ್ವ ಕರ್ಮ, ಕಂಬಾರ, ಮುದ್ದೆ ಕಂಬಾರ
ಸ್ಥಳ	ಚಪ್ಪರದಲ್ಲಿ, ಗೊಲ್ಲರ ಹಳ್ಳಿ, ಮರಿಯಮ್ಮನಹಳ್ಳಿ ಹೋಬಳಿ, ಹೊಸಪೇಟೆ	ಚಪ್ಪರದಲ್ಲಿ, ಗೊಲ್ಲರ ಹಳ್ಳಿ, ಮರಿಯಮ್ಮನಹಳ್ಳಿ ಹೋಬಳಿ, ಹೊಸಪೇಟೆ	ಚಪ್ಪರದಲ್ಲಿ, ಗೊಲ್ಲರ ಹಳ್ಳಿ, ಮರಿಯಮ್ಮನಹಳ್ಳಿ ಹೋಬಳಿ, ಹೊಸಪೇಟೆ
ಪ್ರಾಚೀನತೆ	ವಿಜಯನಗರ ಕಾಲದಿಂದಲೂ	ವಿಜಯನಗರ ಕಾಲದಿಂದಲೂ	ವಿಜಯನಗರ ಕಾಲದಿಂದಲೂ
ಅಳತೆ	20 ಅಡಿ ಉದ್ದ/ 15 ಅಡಿ ಅಗಲ	20 ಅಡಿ ಉದ್ದ/ 25 ಅಡಿ ಅಗಲ	10 ಅಡಿ ಉದ್ದ/ 15 ಅಡಿ ಅಗಲ
ದಿಕ್ಕು	ಉತ್ತರ	ಉತ್ತರ	ಉತ್ತರ
ಒಲೆ ದಿಕ್ಕು	ಉತ್ತರ	ಉತ್ತರ	ಉತ್ತರ
ಬ್ಲೋವರ್	10 ಇಂಚು	12 ಇಂಚು	10 ಇಂಚು
ಒಲೆಗಡ್ಡೆ	30 ಸೆಂ.ಮೀ ಉದ್ದ/40 ಸೆಂ.ಮೀ ಅಗಲ/25 ಸೆಂ.ಮೀ ದಪ್ಪ (ಕಚ್ಚಾ)	40 ಸೆಂ.ಮೀ ಉದ್ದ/60 ಸೆಂ.ಮೀ ಅಗಲ/30 ಸೆಂ.ಮೀ ದಪ್ಪ (ಕಚ್ಚಾ)	35 ಸೆಂ.ಮೀ ಉದ್ದ/60 ಸೆಂ.ಮೀ ಅಗಲ/20 ಸೆಂ.ಮೀ ದಪ್ಪ (ಕಚ್ಚಾ)
ಅಡಿಗಲ್ಲು	60 ಸೆಂ.ಮೀ ಉದ್ದ/45 ಸೆಂ.ಮೀ ಅಗಲ/30 ಸೆಂ.ಮೀ ದಪ್ಪ (ಕಚ್ಚಾ)	60 ಸೆಂ.ಮೀ ಉದ್ದ/45 ಸೆಂ.ಮೀ ಅಗಲ/30 ಸೆಂ.ಮೀ ದಪ್ಪ (ಕಚ್ಚಾ)	60 ಸೆಂ.ಮೀ ಉದ್ದ/45 ಸೆಂ.ಮೀ ಅಗಲ/30 ಸೆಂ.ಮೀ ದಪ್ಪ (ಕಚ್ಚಾ)
ಚಮ್ಮಟಿಗೆ	10, 8, 2 ಪೌಂಡ್(1 ಪೌಂಡ್=0.454 ಕೆ.ಜಿ)	12, 10, 8, 2, ಪೌಂಡ್	12, 10, 8, 2, ಪೌಂಡ್
ಇಕ್ಕಳ	32, 34, 36, 42, 44 ಸೆಂ.ಮೀ,	30, 32, 34, 40, 42 ಸೆಂ.ಮೀ,	30, 32, 34, 40, 45 ಸೆಂ.ಮೀ,
ಮೂಲ ಸ್ಥಳ	ಗೊಲ್ಲರ ಹಳ್ಳಿ, ಹೊಸಪೇಟೆ (ತಾ)	ಗೊಲ್ಲರ ಹಳ್ಳಿ, ಹೊಸಪೇಟೆ (ತಾ)	ಗೊಲ್ಲರ ಹಳ್ಳಿ, ಹೊಸಪೇಟೆ (ತಾ)

ವಿಶ್ವಕರ್ಮ ಹೀರೆಮನೆ ಸಮುದಾಯದ ಕುಲುಮೆ ಮಾಲಿಕರ ವಂಶಾವಳಿ

ಕುಲುಮೆ–೧

ಕಮ್ಮಾರ ಗಾಂಧೀ ಭರಮಪ್ಪ ಆಚಾರ್ಯ

↓

ಭರಮಪ್ಪ | ಬ್ರಹ್ಮಪ್ಪ | ಚಂದ್ರಪ್ಪ | **ಸೋಮಣ್ಣ (ಮಾಲಿಕ)** | ಜೆ.ಬಿ.ನಾಗರಾಜ

ಕುಲುಮೆ–೨

ಕಮ್ಮಾರ ಗಾಂಧೀ ಭರಮಪ್ಪ ಆಚಾರ್ಯ

↓

ಭರಮಪ್ಪ | ಬ್ರಹ್ಮಪ್ಪ | ಚಂದ್ರಪ್ಪ | ಸೋಮಣ್ಣಮಾಲಿಕ | ಜೆ.ಬಿ.ನಾಗರಾಜ

ಭರಮಪ್ಪ ↓

ಜ್ಯೋತಿ | ಸಾವಿತ್ರಿ | **ಮೌನೇಶ (ಮಾಲಿಕ)** | ಕಾಳಶ್ರಿ | ಶ್ರೀಕಾಂತ್

ಕುಲುಮೆ–೩

ಕಮ್ಮಾರ ಗಾಂಧೀ ಭರಮಪ್ಪ ಆಚಾರ್ಯ

↓

ಭರಮಪ್ಪ | ಬ್ರಹ್ಮಪ್ಪ | **ಚಂದ್ರಪ್ಪ (ಮಾಲಿಕ)** | ಸೋಮಣ್ಣಮಾಲಿಕ | ಜೆ.ಬಿ.ನಾಗರಾಜ

	ಕುಲುಮೆ –೪	ಕುಲುಮೆ–೫	ಕುಲುಮೆ–೬
ಹೆಸರು	ವ್ಯಾಸನಕೇರೆ ಕಮ್ಮಾರ ಕಾಳಶ್ರಪ್ಪ ಕುಲುಮೆ	ಚಿಲಕನ ಹಟ್ಟಿ ಕಮ್ಮಾರ ಪಂಪಾಪತಿ ಕುಲುಮೆ	ಸಿಂಧಿಗಿರಿ ಕಮ್ಮಾರ ಸತ್ಯನಾರಾಯಣ ಕುಲುಮೆ
ಮಾಲಿಕರು	ಕಮ್ಮಾರ ವ್ಯಾಸನಕೇರೆ ಕಮ್ಮಾರ ಕಾಳಶ್ರಪ್ಪ ಆಚಾರ್ಯ	ಕಮ್ಮಾರ ಕಮ್ಮಾರ ಪಂಪಾಪತಿ ಆಚಾರ್ಯ	ಕಮ್ಮಾರ ಸಿಂಧಿಗಿರಿ ಕಮ್ಮಾರ ಸತ್ಯನಾರಾಯಣ ಆಚಾರ್ಯ
ಜಾತಿ	ಪಾಂಚಾಲ, ವಿಶ್ವ ಕರ್ಮ, ಕಂಬಾರ, ಮುದ್ದೆ ಕಂಬಾರ	ಪಾಂಚಾಲ, ವಿಶ್ವ ಕರ್ಮ, ಕಂಬಾರ, ಮುದ್ದೆ ಕಂಬಾರ	ಪಾಂಚಾಲ, ವಿಶ್ವ ಕರ್ಮ, ಕಂಬಾರ, ಮುದ್ದೆ ಕಂಬಾರ
ಸ್ಥಳ	ಚಪ್ಪರದಲ್ಲಿ, ಗೊಲ್ಲರ ಹಳ್ಳಿ ಮರಿಯಮ್ಮನಹಳ್ಳಿ ಹೋಬಳಿ, ಹೊಸಪೇಟೆ	ಚಪ್ಪರದಲ್ಲಿ, 2ನೇ ವಾರ್ಡ, ಕಾಳಮ್ಮ ಚಿಲಕನ ಹಟ್ಟಿ, ಮರಿಯಮ್ಮನಹಳ್ಳಿ ಹೋಬಳಿ, ಹೊಸಪೇಟೆ	ಚಪ್ಪರದಲ್ಲಿ, 2ನೇ ವಾರ್ಡ, ಕಾಳಮ್ಮ ದೇವಸ್ಥಾನ ಪಕ್ಕ, ಚಿಲಕನ ಹಟ್ಟಿ, ಮರಿಯಮ್ಮನಹಳ್ಳಿ ಹೋಬಳಿ, ಹೊಸಪೇಟೆ
ಪ್ರಾಚೀನತೆ	ವಿಜಯನಗರ ಕಾಲದಿಂದಲೂ	ವಿಜಯನಗರ ಕಾಲದಿಂದಲೂ	ವಿಜಯನಗರ ಕಾಲದಿಂದಲೂ
ಅಳತೆ	20 ಅಡಿ ಉದ್ದ/ 15 ಅಡಿ ಅಗಲ	10 ಅಡಿ ಉದ್ದ/ 10 ಅಡಿ ಅಗಲ	15 ಅಡಿ ಉದ್ದ/ 20 ಅಡಿ ಅಗಲ
ದಿಕ್ಕು	ಪೂರ್ವ	ದಕ್ಷಿಣ	ಉತ್ತರ
ಒಲೆ ದಿಕ್ಕು	ದಕ್ಷಿಣ	ದಕ್ಷಿಣ	ಉತ್ತರ
ಬ್ಲೋವರ್	12 ಇಂಚು	10 ಇಂಚು	10 ಇಂಚು
ಒಲೆಗಡ್ಡೆ	30 ಸೆಂ.ಮೀ ಉದ್ದ/40 ಸೆಂ.ಮೀ ಅಗಲ/20 ಸೆಂ.ಮೀ ದಪ್ಪ (ಕಚ್ಚಾ)	20 ಸೆಂ.ಮೀ ಉದ್ದ/35 ಸೆಂ.ಮೀ ಅಗಲ/20 ಸೆಂ.ಮೀ ದಪ್ಪ (ಕಚ್ಚಾ)	30 ಸೆಂ.ಮೀ ಉದ್ದ/46 ಸೆಂ.ಮೀ ಅಗಲ/10 ಸೆಂ.ಮೀ ದಪ್ಪ (ಕಚ್ಚಾ)
ಅಡಿಗಲ್ಲು	60 ಸೆಂ.ಮೀ ಉದ್ದ/45 ಸೆಂ.ಮೀ ಅಗಲ/30 ಸೆಂ.ಮೀ ದಪ್ಪ (ಕಚ್ಚಾ)	20 ಸೆಂ.ಮೀ ಉದ್ದ/16 ಸೆಂ.ಮೀ ಅಗಲ/13 ಸೆಂ.ಮೀ ದಪ್ಪ (ಕಚ್ಚಾ)	23 ಸೆಂ.ಮೀ ಉದ್ದ/16 ಸೆಂ.ಮೀ ಅಗಲ/13 ಸೆಂ.ಮೀ ದಪ್ಪ (ಕಚ್ಚಾ)
ಚಮ್ಮಟಿಗೆ	12, 10, 8, 2, ಪೌಂಡ್	12, 10, 8, 2, ಪೌಂಡ್	12, 10, 8, 2, ಪೌಂಡ್
ಇಕ್ಕಳ	30, 32, 36, 43 ಸೆಂ.ಮೀ,	30, 32, 34, 40, 45 ಸೆಂ.ಮೀ,	30, 32, 34, 40, 45 ಸೆಂ.ಮೀ,
ಜಗ್ಗುಂಡಿ	***	***	106 ಸೆಂ.ಮೀ (2 ಇವೆ)
ಭರ್ಚಿ	***	***	152 ಸೆಂ.ಮೀ
ಮೂಲ ಸ್ಥಳ	ವ್ಯಾಸನಕೇರೆ, ಹೊಸಪೇಟೆ (ತಾ)	ಗೊಲ್ಲರ ಹಳ್ಳಿ, ಹೊಸಪೇಟೆ (ತಾ)	ಸಿಂಧಿಗಿರಿ

ಕುಲುಮೆ-೪

ವ್ಯಾಸನಕೇರೆ ಕೆಂಚಪ್ಪ ಆಚಾರ್ಯ

- ಮಲ್ಲಪ್ಪ
  - ಸಾಂಭಪ್ಪ
  - ಕಾಳಶ್ರಪ್ಪ
  - ಕೆಂಚಪ್ಪ (ಮಾಲಿಕ)

ಕುಲುಮೆ-೫

ಕಮ್ಮಾರ ಕೊನೆರಪ್ಪ ಆಚಾರ್ಯ

- ಹನುಮಂತಪ್ಪ
- ಗಂಗಮ್ಮ
- ಕಾಳಮ್ಮ
- ಮಹದೇವಮ್ಮ
- ಗುಡ್ಡಮ್ಮ
- ಹನುಮಂತಮ್ಮ
- ತಿಮ್ಮಪ್ಪ
- ಗೌರಮ್ಮ
- ಸೋಮಣ್ಣ
- ಗೋವಿಂದಪ್ಪ
  - ಕಾಳಮ್ಮ
  - ಪಂಪಾಪತಿ (ಮಾಲಿಕ)
  - ನಾಗಮ್ಮ
  - ಕೊನೆರಪ್ಪ
  - ಅನಂತಮ್ಮ
  - ಚಂದ್ರಮ್ಮ
  - ಭರಮಪ್ಪ

ಕುಲುಮೆ-೬

ಕಮ್ಮಾರ ಗಿರಿಯಪ್ಪ ಆಚಾರ್ಯ

- ಸಿಂಧಿಗಿರಿ ತಿಮ್ಮಪ್ಪ
  - ಹನುಮಜ್ಜ
  - ಮಾರ್ಗದಪ್ಪ
    - ಷಣ್ಮುಖಪ್ಪ
    - ಗೋವಿಂದಪ್ಪ
      - ಕೃಷ್ಣಮೂರ್ತಿಯಪ್ಪ
      - ಸತ್ಯನಾರಾಯಣ (ಮಾಲಿಕ)
      - ಪಾರ್ವತಮ್ಮ

	ಕುಲುಮೆ -೭	ಕುಲುಮೆ-೮	ಕುಲುಮೆ-೯
ಹೆಸರು	ಚಿಲಕನ ಹಟ್ಟಿ ಮುದ್ದೆ ಕಂಬಾರ ವೆಂಕಟೇಶ್ ಕುಲುಮೆ	ಚಿಲಕನ ಹಟ್ಟಿ ಬಡಿಗೇರ ವೆಂಕಟೇಶ್ ಕುಲುಮೆ	ಚಿಲಕನ ಹಟ್ಟಿ ಕಮ್ಮಾರ ಹನುಮಗೌಡ ಕುಲುಮೆ
ಮಾಲಿಕರು	ಮುದ್ದೆ ಕಂಬಾರ ವೆಂಕಟೇಶ್ ಆಚಾರ್ಯ	ಕಮ್ಮಾರ ಬಡಿಗೇರ ವೆಂಕಟೇಶ್ ಆಚಾರ್ಯ	ಕಮ್ಮಾರ ಹನುಮಗೌಡ ಆಚಾರ್ಯ
ಜಾತಿ	ಪಾಂಚಾಲ, ವಿಶ್ವ ಕರ್ಮ, ಕಂಬಾರ, ಮುದ್ದೆ ಕಂಬಾರ	ಪಾಂಚಾಲ, ವಿಶ್ವ ಕರ್ಮ, ಕಂಬಾರ, ಮುದ್ದೆ ಕಂಬಾರ	ಪಾಂಚಾಲ, ವಿಶ್ವ ಕರ್ಮ, ಕಂಬಾರ, ಮುದ್ದೆ ಕಂಬಾರ
ಸ್ಥಳ	ಚಪ್ಪರದಲ್ಲಿ, 2ನೇ ವಾರ್ಡ, ಕಾಳಮ್ಮ ದೇವಸ್ಥಾನ ಪಕ್ಕ, ಚಿಲಕನ ಹಟ್ಟಿ, ಮರಿಯಮ್ಮನಹಳ್ಳಿ ಹೋಬಳಿ, ಹೊಸಪೇಟೆ	ಮನೆ ಮುಂದೆ ಬಯಲಿನಲ್ಲಿ, 2ನೇ ವಾರ್ಡ, ಚಿಲಕನ ಹಟ್ಟಿ, ಮರಿಯಮ್ಮನಹಳ್ಳಿ ಹೋಬಳಿ, ಹೊಸಪೇಟೆ	ಮನೆ ಮುಂದೆ ಬಯಲಿನಲ್ಲಿ, 2ನೇ ವಾರ್ಡ, ಚಿಲಕನ ಹಟ್ಟಿ, ಮರಿಯಮ್ಮನಹಳ್ಳಿ ಹೋಬಳಿ, ಹೊಸಪೇಟೆ
ಪ್ರಾಚೀನತೆ	ವಿಜಯನಗರ ಕಾಲದಿಂದಲೂ	ವಿಜಯನಗರ ಕಾಲದಿಂದಲೂ	ವಿಜಯನಗರ ಕಾಲದಿಂದಲೂ
ಅಳತೆ	10 ಅಡಿ ಉದ್ದ/ 10 ಅಡಿ ಅಗಲ	6 ಅಡಿ ಉದ್ದ/ 6 ಅಡಿ ಅಗಲ	6 ಅಡಿ ಉದ್ದ/ 6 ಅಡಿ ಅಗಲ
ದಿಕ್ಕು	ದಕ್ಷಿಣ	ಪೂರ್ವ	ಉತ್ತರ
ಒಲೆ ದಿಕ್ಕು	ಪೂರ್ವ	ಪೂರ್ವ	ಪೂರ್ವ
ಬ್ಲೋವರ್	12 ಇಂಚು	12 ಇಂಚು	12 ಇಂಚು
ಒಲೆಗಡ್ಡೆ	25 ಸೆಂ.ಮೀ ಉದ್ದ/40 ಸೆಂ.ಮೀ ಅಗಲ/20 ಸೆಂ.ಮೀ ದಪ್ಪ (ಕಚ್ಚಾ)	20 ಸೆಂ.ಮೀ ಉದ್ದ/40 ಸೆಂ.ಮೀ ಅಗಲ/20 ಸೆಂ.ಮೀ ದಪ್ಪ (ಕಚ್ಚಾ)	20 ಸೆಂ.ಮೀ ಉದ್ದ/40 ಸೆಂ.ಮೀ ಅಗಲ/20 ಸೆಂ.ಮೀ ದಪ್ಪ (ಕಚ್ಚಾ)
ಅಡಿಗಲ್ಲು	44 ಸೆಂ.ಮೀ ಉದ್ದ/25 ಸೆಂ.ಮೀ ಅಗಲ/13 ಸೆಂ.ಮೀ ದಪ್ಪ (ಕಚ್ಚಾ)	18 ಸೆಂ.ಮೀ ಉದ್ದ/10 ಸೆಂ.ಮೀ ಅಗಲ/10 ಸೆಂ.ಮೀ ದಪ್ಪ (ಕಚ್ಚಾ)	18 ಸೆಂ.ಮೀ ಉದ್ದ/13 ಸೆಂ.ಮೀ ಅಗಲ/13 ಸೆಂ.ಮೀ ದಪ್ಪ (ಕಚ್ಚಾ)
ಚಮ್ಮಟಿಗೆ	12, 10, 8, 2, ಪೌಂಡ್	12, 10, 6, 2, ಪೌಂಡ್	12, 10, 6, 2, ಪೌಂಡ್
ಇಕ್ಕಳ	30, 32, 36, 40, 44 ಸೆಂ.ಮೀ,	30, 32, 34, 40 ಸೆಂ.ಮೀ,	30, 32, 36, 44, 46 ಸೆಂ.ಮೀ,
ಹೆಗ್ಗಿಕ್ಕಳ	8 ಅಡಿ	****	****
ಮೂಲ ಸ್ಥಳ	ಚಿಲಕನ ಹಟ್ಟಿ, ಹೊಸಪೇಟೆ (ತಾ)	ಚಿಲಕನ ಹಟ್ಟಿ, ಹೊಸಪೇಟೆ (ತಾ)	ಚಿಲಕನ ಹಟ್ಟಿ, ಹೊಸಪೇಟೆ (ತಾ)

ಕುಲಮೆ-೭

ಕಮ್ಮಾರ —— ಆಚಾರ್ಯ

ಮುದ್ದೆ ಸೋಮಪ್ಪ — ಮುದ್ದೆ ಹನುಮಂತಪ್ಪ

ದುರುಗಪ್ಪ | ಭೀಮಪ್ಪ | ಹನುಮಂತಪ್ಪ | ಕಾಳಮ್ಮ | ಸಣ್ಣಕಾಳಮ್ಮ

ಮುದ್ದೆ ವೆಂಕಟೇಶ (ಮಾಲಿಕ) | ಶ್ರೀನಿವಾಸ | ಶಂಕ್ರಮ್ಮ

ಕುಲಮೆ-೮

ಕಮ್ಮಾರ ಬಡಿಗೇರ —— ಆಚಾರ್ಯ

ದೊಡ್ಡಯಂಕಪ್ಪ | ಸಣ್ಣಯಂಕಪ್ಪ

ಯಂಕಮ್ಮ | ಮಾರ್ಗದಪ್ಪ | ಗೋವಿಂದಪ್ಪ | ಯಂಕಪ್ಪ | ಗಿರಿಯಮ್ಮ | ಸಾವಿತ್ರಮ್ಮ | ಕಾಳಮ್ಮ

ಕಾಳಪ್ಪ | ಬಡಿಗೇರ ವೆಂಕಟೇಶ (ಮಾಲಿಕ) | ಸತ್ಯಪ್ಪ | ಯಂಕಮ್ಮ

ಕುಲಮೆ-೯

ಕಮ್ಮಾರ —— ಆಚಾರ್ಯ

ಗೋವಿಂದಗೌಡ | ಷಣ್ಮುಖಗೌಡ

ಕೃಷ್ಣಮೂರ್ತಿಯಪ್ಪ | ಸತ್ಯನಾರಾಯಣ | ಪಾರ್ವತಮ್ಮ

ಹನುಮಂತಗೌಡ (ಮಾಲಿಕ) | ಕುಮಾರ | ತಿಮ್ಮಪ್ಪ | ಗೌರಮ್ಮ | ಜ್ಯೋತಿ | ನೇತ್ರಾ | ಕವಿತ

	ಕುಲುಮೆ -೧೦	ಕುಲುಮೆ-೧೧	ಕುಲುಮೆ-೧೨
ಹೆಸರು	ಚಿಲಕನ ಹಟ್ಟಿ ಕಮ್ಮಾರ ಬುಲ್ಡರ್ ಹನುಮಂತಪ್ಪ ಕುಲುಮೆ	ವ್ಯಾಸನಕೇರೆ ಕಮ್ಮಾರ ಕರಿಯಪ್ಪ ಕುಲುಮೆ	ಮಲಪಮಗುಡಿ ಬಡಿಗೇರ ರಾಮಪ್ಪ ಕುಲುಮೆ
ಮಾಲಿಕರು	ಕಮ್ಮಾರ ಬುಲ್ಡರ್ ಹನುಮಂತಪ್ಪ ಆಚಾರ್ಯ	ಕಮ್ಮಾರ ಕರಿಯಪ್ಪ ಆಚಾರ್ಯ	ಕಮ್ಮಾರ ರಾಮಪ್ಪ ಆಚಾರ್ಯ
ಜಾತಿ	ಪಾಂಚಾಲ, ವಿಶ್ವ ಕರ್ಮ, ಕಂಬಾರ, ಮುದ್ದೆ ಕಂಬಾರ	ಪಾಂಚಾಲ, ವಿಶ್ವ ಕರ್ಮ, ಕಂಬಾರ, ಮುದ್ದೆ ಕಂಬಾರ	ಪಾಂಚಾಲ, ವಿಶ್ವ ಕರ್ಮ, ಕಂಬಾರ, ಬಡಿಗೇರ
ಸ್ಥಳ	ಮನೆ ಮುಂದೆ ಬಯಲಿನಲ್ಲಿ, 2ನೇ ವಾರ್ಡ, ಚಿಲಕನ ಹಟ್ಟಿ, ಮರಿಯಮ್ಮನಹಳ್ಳಿ ಹೋಬಳಿ, ಹೊಸಪೇಟೆ	ಚಪ್ಪರದಲ್ಲಿ, ಕೊಡ್ಲಿಗಿ ರಸ್ತೆ, ಮರಿಯಮ್ಮನಹಳ್ಳಿ ಹೊಸಪೇಟೆ	ಚಪ್ಪರದಲ್ಲಿ, 1ನೇ ವಾರ್ಡ, ಸಹಕಾರಿ ಬ್ಯಾಂಕ ಹತ್ತಿರ, ಮಲಪನಗುಡಿ, ಹೊಸಪೇಟೆ
ಪ್ರಾಚೀನತೆ	ಸುಮಾರು 30 ವರ್ಷ	ಸುಮಾರು 150 ವರ್ಷ	ಸುಮಾರು 90 ವರ್ಷ
ಅಳತೆ	6 ಅಡಿ ಉದ್ಧ/ 6 ಅಡಿ ಅಗಲ	14 ಅಡಿ ಉದ್ಧ/ 20 ಅಡಿ ಅಗಲ	10 ಅಡಿ ಉದ್ಧ/ 18 ಅಡಿ ಅಗಲ
ದಿಕ್ಕು	ಉತ್ತರ	ಉತ್ತರ	ಉತ್ತರ
ಒಲೆ ದಿಕ್ಕು	ಉತ್ತರ	ಉತ್ತರ	ಉತ್ತರ
ಬ್ಲೋವರ್	10 ಇಂಚು	12 ಇಂಚು	12 ಇಂಚು
ಒಲೆಗಡ್ಡೆ	20 ಸೆಂ.ಮೀ ಉದ್ಧ/30 ಸೆಂ.ಮೀ ಅಗಲ/18 ಸೆಂ.ಮೀ ದಪ್ಪ (ಕಚ್ಚಾ)	60 ಸೆಂ.ಮೀ ಉದ್ಧ/182 ಸೆಂ.ಮೀ ಅಗಲ/121 ಸೆಂ.ಮೀ ದಪ್ಪ (ಕಚ್ಚಾ)	91 ಸೆಂ.ಮೀ ಉದ್ಧ/76 ಸೆಂ.ಮೀ ಅಗಲ/ ಸೆಂ.ಮೀ ದಪ್ಪ (ಕಚ್ಚಾ)
ಅಡಿಗಲ್ಲು	20 ಸೆಂ.ಮೀ ಉದ್ಧ/13 ಸೆಂ.ಮೀ ಅಗಲ/13 ಸೆಂ.ಮೀ ದಪ್ಪ (ಕಚ್ಚಾ)	90 ಸೆಂ.ಮೀ ಉದ್ಧ/20 ಸೆಂ.ಮೀ ಅಗಲ/20 ಸೆಂ.ಮೀ ದಪ್ಪ (ಕಚ್ಚಾ)	90 ಸೆಂ.ಮೀ ಉದ್ಧ/20 ಸೆಂ.ಮೀ ಅಗಲ/20 ಸೆಂ.ಮೀ ದಪ್ಪ (ಕಚ್ಚಾ)
ಚಮ್ಮಟಿಗೆ	12, 10, 6, 2, ಪೌಂಡ್	10, 8, 2, ಪೌಂಡ್	10, 8, 2, ಪೌಂಡ್
ಇಕ್ಕಳ	30, 34, 36, 44 ಸೆಂ.ಮೀ,	33, 36, 38, 44 ಸೆಂ.ಮೀ,	30, 36, 38, 43 ಸೆಂ.ಮೀ,
ಮೂಲ ಸ್ಥಳ	ಚಿಲಕನ ಹಟ್ಟಿ, ಹೊಸಪೇಟೆ (ತಾ)	ವ್ಯಾಸನಕೇರೆ, ಹೊಸಪೇಟೆ (ತಾ)	ಮಲಪಮಗುಡಿ, ಹೊಸಪೇಟೆ (ತಾ)

ಕುಲುಮೆ–೧೦

ಕಮ್ಮಾರ —— ಆಚಾರ್ಯ

- ಬುಲ್ಡೆರ್ ಹನುಮಂತಪ್ಪ
  - ಕಾಳಪ್ಪ
    - ಬಸಮ್ಮ
    - ಸೊಟ್ಟಹನುಮಂತಪ್ಪ
    - ಬುಲ್ಡೆರ್‌ಹನುಮಂತಪ್ಪ (ಮಾಲಿಕ)
    - ಪರಶುರಾಮ
    - ಕಾಳಮ್ಮ
- ಈರಪ್ಪ
- ಕುಂಟಪ್ಪ
- ಸೊಟ್ಟಪ್ಪ

ಕುಲುಮೆ–೧೧

ಕಮ್ಮಾರ ಕರಿಯಪ್ಪ ಆಚಾರ್ಯ

- ಕೆಂಚಪ್ಪ
  - ದೊಡ್ಡಪಂಪಣ್ಣ
  - ಮಲ್ಲಪ್ಪ
  - ಕಾಳಮ್ಮ
  - ಸಣ್ಣಸೋಮಣ್ಣ
  - ಭರಮಪ್ಪ
    - ಕರಿಯಪ್ಪ (ಮಾಲಿಕ)

ಕುಲುಮೆ–೧೨

ಕಮ್ಮಾರ ರಾಮಪ್ಪ ಆಚಾರ್ಯ

- ಸೋಮಣ್ಣ
  - ರಾಮಪ್ಪ (ಮಾಲಿಕ)
  - ಚಿದಾನಂದ
- ಪಂಪಣ್ಣ
- ಕಾಳಮ್ಮ
- ಜಾನಕಿ

	ಕುಲುಮೆ -೧೩	ಕುಲುಮೆ-೧೪	ಕುಲುಮೆ-೧೫
ಹೆಸರು	ಮಲಪಮಗುಡಿ ಬಡಿಗೇರ ಚಿದಾನಂದಪ್ಪ ಕುಲುಮೆ	ಕಮಲಾಪುರ ಕಮ್ಮಾರ ಕಾಳಶ್ರಪ್ಪ ಕುಲುಮೆ	ಕಮಲಾಪುರ ಕಮ್ಮಾರ ಶ್ರೀನಿವಾಸ ಕುಲುಮೆ
ಮಾಲಿಕರು	ಕಮ್ಮಾರ ಚಿದಾನಂದಪ್ಪ ಆಚಾರ್ಯ	ಕಮ್ಮಾರ ಕಾಳಶ್ರಪ್ಪ ಆಚಾರ್ಯ	ಕಮ್ಮಾರ ಶ್ರೀನಿವಾಸ ಆಚಾರ್ಯ
ಜಾತಿ	ಪಾಂಚಾಲ, ವಿಶ್ವ ಕರ್ಮ, ಕಂಬಾರ, ಬಡಿಗೇರ	ಪಾಂಚಾಲ, ವಿಶ್ವ ಕರ್ಮ, ಕಂಬಾರ, ಮುದ್ದೆ ಕಂಬಾರ	ಪಾಂಚಾಲ, ವಿಶ್ವ ಕರ್ಮ, ಕಂಬಾರ, ಮುದ್ದೆ ಕಂಬಾರ
ಸ್ಥಳ	ಚಪ್ಪರದಲ್ಲಿ, 1ನೇ ವಾರ್ಡ, ಕರೆಕಟ್ಟಿ, ಮಲಪನಗುಡಿ, ಹೊಸಪೇಟೆ	ಚಪ್ಪರದಲ್ಲಿ, 14 ನೇ ವಾರ್ಡ, ಕಮ್ಮಾರ ದಿನ್ನಿ, ಕಮಲಾಪುರ, ಹೊಸಪೇಟೆ	ಚಪ್ಪರದಲ್ಲಿ, 14 ನೇ ವಾರ್ಡ, ಕಮ್ಮಾರ ದಿನ್ನಿ, ಕಮಲಾಪುರ, ಹೊಸಪೇಟೆ
ಪ್ರಾಚೀನತೆ	ಸುಮಾರು 40 ವರ್ಷ	ವಿಜಯನಗರ ಕಾಲದಿಂದಲು	ವಿಜಯನಗರ ಕಾಲದಿಂದಲು
ಅಳತೆ	15 ಅಡಿ ಉದ್ಧ/ 15 ಅಡಿ ಅಗಲ	20 ಅಡಿ ಉದ್ಧ/20 ಅಡಿ ಅಗಲ	20 ಅಡಿ ಉದ್ಧ/15 ಅಡಿ ಅಗಲ
ದಿಕ್ಕು	ಉತ್ತರ	ಉತ್ತರ	ಉತ್ತರ
ಒಲೆ ದಿಕ್ಕು	ಉತ್ತರ	ಉತ್ತರ	ಉತ್ತರ
ಬ್ಲೋವರ್	12 ಇಂಚು	12 ಇಂಚು	12 ಇಂಚು
ಒಲೆಗಡ್ಡೆ	76 ಸೆಂ.ಮೀ ಉದ್ಧ/91 ಸೆಂ.ಮೀ ಅಗಲ/30 ಸೆಂ.ಮೀ ದಪ್ಪ (ಕಚ್ಚಾ)	66 ಸೆಂ.ಮೀ ಉದ್ಧ/85 ಸೆಂ.ಮೀ ಅಗಲ/25 ಸೆಂ.ಮೀ ದಪ್ಪ (ಕಚ್ಚಾ)	56 ಸೆಂ.ಮೀ ಉದ್ಧ/75 ಸೆಂ.ಮೀ ಅಗಲ/25 ಸೆಂ.ಮೀ ದಪ್ಪ (ಕಚ್ಚಾ)
ಅಡಿಗಲ್ಲು	20 ಸೆಂ.ಮೀ ಉದ್ಧ/22 ಸೆಂ.ಮೀ ಅಗಲ/20 ಸೆಂ.ಮೀ ದಪ್ಪ (ಕಚ್ಚಾ)	30 ಸೆಂ.ಮೀ ಉದ್ಧ/20 ಸೆಂ.ಮೀ ಅಗಲ/18 ಸೆಂ.ಮೀ ದಪ್ಪ (ಕಚ್ಚಾ)	30 ಸೆಂ.ಮೀ ಉದ್ಧ/20 ಸೆಂ.ಮೀ ಅಗಲ/16 ಸೆಂ.ಮೀ ದಪ್ಪ (ಕಚ್ಚಾ)
ಚಮ್ಮಟಿಗೆ	10, 8, 2, ಪೌಂಡ್	12, 10, 8, 2, ಪೌಂಡ್	10, 8, 2, ಪೌಂಡ್
ಇಕ್ಕಳ	33, 36, 38, 43 ಸೆಂ.ಮೀ,	33, 36, 38, 43 ಸೆಂ.ಮೀ,	33, 36, 38 ಸೆಂ.ಮೀ,
ಹೆಗ್ಗಿಕ್ಕಳ	***	91 ಸೆಂ.ಮೀ	***
ಕೊಂಡಿಇಕ್ಕಳ	***	66 ಸೆಂ.ಮೀ	***
ಬೆಸುಗೆಇಕ್ಕಳ	***	66 ಸೆಂ.ಮೀ	***
ಮೂಲ ಸ್ಥಳ	ಮಲಪಮಗುಡಿ, ಹೊಸಪೇಟೆ (ತಾ)	ಕಮಲಾಪುರ, ಹೊಸಪೇಟೆ (ತಾ)	ಕಮಲಾಪುರ, ಹೊಸಪೇಟೆ (ತಾ)

ಕುಲಮೆ-೧೩

ಕಮ್ಮಾರ ರಾಮಪ್ಪ ಆಚಾರ್ಯ

- ಸೋಮಣ್ಣ
  - ರಾಮಪ್ಪ
- ಪಂಪಣ್ಣ
  - ಚಿದಾನಂದ (ಮಾಲಿಕ)
- ಕಾಳಮ್ಮ
- ಜಾನಕಿ

ಕುಲಮೆ-೧೪

ಕಮ್ಮಾರ ____ ಆಚಾರ್ಯ

- ಕಮ್ಮಾರ ಹನುಮಂತಪ್ಪ
  - ಗುಂಡಪ್ಪ
    - ಕಾಳಶ್ರಪ್ಪ (ಮಾಲಿಕ)
    - ಹನುಮಂತಪ್ಪ
  - ಸರಸ್ವತಿ
    - ಪಂಪಾಪತಿ
- ಸುಬ್ಬಣ್ಣ
  - ಕಾಳಪ್ಪ
    - ಭರಮಪ್ಪ
    - ಷಣ್ಮುಖಪ್ಪ

ಕುಲಮೆ-೧೫

ಕಮ್ಮಾರ ____ ಆಚಾರ್ಯ

- ಯಲ್ಲಪ್ಪ
  - ಶ್ರೀನವಾಸ (ಮಾಲಿಕ)
- ಮಾನಪ್ಪ
  - ಸತ್ಯನಾರಾಯಣ
- ವಿರೂಪಾಕ್ಷಪ್ಪ
  - ಗಣೇಶ್
- ಯಂಕಣ್ಣ
  - ಆಂಜನ
- ಕ್ಯಾದಿಗಪ್ಪ
  - ಲಲಿತಮ್ಮ
- ಕೃಷ್ಣಮೂರ್ತಿ
  - ಸುಧಾಕ್ಷಮ್ಮ

	ಕುಲುಮೆ -೧೬	ಕುಲುಮೆ-೧೭	ಕುಲುಮೆ-೧೮
ಹೆಸರು	ಕಮಲಾಪುರ ಕಮ್ಮಾರ ಬಾಗೇನಳಪ್ಪ ಕುಲುಮೆ	ಕಮಲಾಪುರ ಕಮ್ಮಾರ ಈಶ್ವರಪ್ಪ ಕುಲುಮೆ	ಕಮಲಾಪುರ ಕಮ್ಮಾರ ಹೇಮಣ್ಣ ಕುಲುಮೆ
ಮಾಲೀಕರು	ಕಮ್ಮಾರ ತಿಪ್ಪೇಸ್ವಾಮಿ ಆಚಾರ್ಯ	ಕಮ್ಮಾರ ಈಶ್ವರಪ್ಪ ಆಚಾರ್ಯ	ಕಮ್ಮಾರ ಹೇಮಣ್ಣ ಆಚಾರ್ಯ
ಜಾತಿ	ಪಾಂಚಾಲ, ವಿಶ್ವ ಕರ್ಮ, ಕಂಬಾರ, ಮುದ್ದೆ ಕಂಬಾರ	ಪಾಂಚಾಲ, ವಿಶ್ವ ಕರ್ಮ, ಕಂಬಾರ, ಮುದ್ದೆ ಕಂಬಾರ	ಪಾಂಚಾಲ, ವಿಶ್ವ ಕರ್ಮ, ಕಂಬಾರ, ಮುದ್ದೆ ಕಂಬಾರ
ಸ್ಥಳ	ಚಪ್ಪರದಲ್ಲಿ, 14 ನೇ ವಾರ್ಡ, ಕಮ್ಮಾರ ದಿನ್ನಿ, ಕಮಲಾಪುರ, ಹೊಸಪೇಟೆ	ಚಪ್ಪರದಲ್ಲಿ, ಕನ್ನಡ ವಿಶ್ವ ವಿದ್ಯಾಲಯ ರಸ್ತೆ, ಕಮಲಾಪುರ, ಹೊಸಪೇಟೆ	ಚಪ್ಪರದಲ್ಲಿ, ಕನ್ನಡ ವಿಶ್ವ ವಿದ್ಯಾಲಯ ರಸ್ತೆ, ಕಮಲಾಪುರ, ಹೊಸಪೇಟೆ
ಪ್ರಾಚೀನತೆ	ವಿಜಯನಗರ ಕಾಲದಿಂದಲು	ವಿಜಯನಗರ ಕಾಲದಿಂದಲು	ವಿಜಯನಗರ ಕಾಲದಿಂದಲು
ಅಳತೆ	10 ಅಡಿ ಉದ್ಧ/15 ಅಡಿ ಅಗಲ	6 ಅಡಿ ಉದ್ಧ/6 ಅಡಿ ಅಗಲ	6 ಅಡಿ ಉದ್ಧ/6 ಅಡಿ ಅಗಲ
ದಿಕ್ಕು	ಉತ್ತರ	ಉತ್ತರ	ಉತ್ತರ
ಬ್ಲೋವರ್	12 ಇಂಚು	12 ಇಂಚು	12 ಇಂಚು
ಒಲೆಗಡ್ಡೆ	76 ಸೆಂ.ಮೀ ಉದ್ಧ/91 ಸೆಂ.ಮೀ ಅಗಲ/25 ಸೆಂ.ಮೀ ದಪ್ಪ (ಕಚ್ಚಾ)	76 ಸೆಂ.ಮೀ ಉದ್ಧ/91 ಸೆಂ.ಮೀ ಅಗಲ/25 ಸೆಂ.ಮೀ ದಪ್ಪ (ಕಚ್ಚಾ)	60 ಸೆಂ.ಮೀ ಉದ್ಧ/76 ಸೆಂ.ಮೀ ಅಗಲ/25 ಸೆಂ.ಮೀ ದಪ್ಪ (ಕಚ್ಚಾ)
ಅಡಿಗಲ್ಲು	45 ಸೆಂ.ಮೀ ಉದ್ಧ/20 ಸೆಂ.ಮೀ ಅಗಲ/18 ಸೆಂ.ಮೀ ದಪ್ಪ (ಕಚ್ಚಾ)	55 ಸೆಂ.ಮೀ ಉದ್ಧ/45 ಸೆಂ.ಮೀ ಅಗಲ/15 ಸೆಂ.ಮೀ ದಪ್ಪ (ಕಚ್ಚಾ)	35 ಸೆಂ.ಮೀ ಉದ್ಧ/25 ಸೆಂ.ಮೀ ಅಗಲ/15 ಸೆಂ.ಮೀ ದಪ್ಪ (ಕಚ್ಚಾ)
ಚಮ್ಮಟಿಗೆ	12, 10, 8, 2, ಪೌಂಡ್	10, 8, 2, ಪೌಂಡ್	10, 8, 2, ಪೌಂಡ್
ಇಕ್ಕಳ	30, 36, 38, 43 ಸೆಂ.ಮೀ,	30, 36, 38, 42 ಸೆಂ.ಮೀ,	30, 36, 34, 40 ಸೆಂ.ಮೀ,
ಮೂಲ ಸ್ಥಳ	ಕಮಲಾಪುರ, ಹೊಸಪೇಟೆ (ತಾ)	ಕಮಲಾಪುರ, ಹೊಸಪೇಟೆ (ತಾ)	ಕಮಲಾಪುರ, ಹೊಸಪೇಟೆ (ತಾ)

ಕುಲುಮೆ-೧೬

ಕಮ್ಮಾರ ಭರಮಪ್ಪ ಆಚಾರ್ಯ

↓

ಭಾಗೆನಳಪ್ಪ | ಹನುಮಂತಪ್ಪ

ಕಾಳಮ್ಮ | ಗುರ್ರಮ್ಮ | ಭರಮಲಿಂಗಪ್ಪ | ತೀಪ್ಪೆಸ್ವಾಮಿ (ಮಾಲಿಕ) | ರುದ್ರಪ್ಪ

ಕುಲುಮೆ-೧೭

ಕಮ್ಮಾರ ______ ಆಚಾರ್ಯ

↓

ಕಾಳಶ್ರಪ್ಪ | ಅಜ್ಜಪ್ಪ | ಭರಮಯ್ಯ | ಗುರ್ರಪ್ಪ

ಈಶ್ವರಪ್ಪ(ಮಾಲಿಕ) | ಹೇಮಣ್ಣ | ಗುಂಡಪ್ಪ | ಚಂದ್ರಪ್ಪ | ಭರಮಪ್ಪ | ಅಂಬಣ್ಣ | ಓಂಕಾರಮ್ಮ | ಕಾಳಮ್ಮ

ಕುಲುಮೆ-೧೮

ಕಮ್ಮಾರ ______ ಆಚಾರ್ಯ

↓

ಕಾಳಶ್ರಪ್ಪ | ಅಜ್ಜಪ್ಪ | ಭರಮಯ್ಯ | ಗುರ್ರಪ್ಪ

ಈಶ್ವರಪ್ಪ | ಹೇಮಣ್ಣ (ಮಾಲಿಕ) | ಗುಂಡಪ್ಪ | ಚಂದ್ರಪ್ಪ | ಭರಮಪ್ಪ | ಅಂಬಣ್ಣ | ಓಂಕಾರಮ್ಮ | ಕಾಳಮ್ಮ

	ಕುಲುಮೆ -೧೯	ಕುಲುಮೆ-೨೦	ಕುಲುಮೆ-೨೧
ಹೆಸರು	ಕಮಲಾಪುರ ಕಮ್ಮಾರ ಈಶ್ವರಪ್ಪ ಕುಲುಮೆ	ನಲ್ಲಾಪುರ ಕಮ್ಮಾರ ರಘುವೀರಪ್ಪ ಕುಲುಮೆ	ವ್ಯಾಸನಕೇರೆ ಕಮ್ಮಾರ ಯಂಕಪ್ಪ ಕುಲುಮೆ
ಮಾಲಿಕರು	ಕಮ್ಮಾರ ಈಶ್ವರಪ್ಪ ಆಚಾರ್ಯ	ಕಮ್ಮಾರ ರಘುವೀರಪ್ಪ ಆಚಾರ್ಯ	ಕಮ್ಮಾರ ಯಂಕಪ್ಪ ಆಚಾರ್ಯ
ಜಾತಿ	ಪಾಂಚಾಲ, ವಿಶ್ವ ಕರ್ಮ, ಕಂಬಾರ, ಮುದ್ದೆ ಕಂಬಾರ	ಪಾಂಚಾಲ, ವಿಶ್ವ ಕರ್ಮ, ಕಂಬಾರ, ಮುದ್ದೆ ಕಂಬಾರ	ಪಾಂಚಾಲ, ವಿಶ್ವ ಕರ್ಮ, ಕಂಬಾರ, ಮುದ್ದೆ ಕಂಬಾರ
ಸ್ಥಳ	ಬಯಲಿನಲ್ಲಿ, 2ನೇ ವಾರ್ಡ, ಶೀತಾರಾಮ ತಾಂಡ, ಕಮಲಾಪುರ ಹೋಬಳಿ, ಹೊಸಪೇಟೆ	ಚಪ್ಪರದಲ್ಲಿ, ಮಲ್ಲೇಶ್ವರ ದೇವಸ್ಥಾನ ಹತ್ತಿರ, ನಲ್ಲಾಪುರ, ಕಮಲಾಪುರ ಹೋಬಳಿ, ಹೊಸಪೇಟೆ	ಚಪ್ಪರದಲ್ಲಿ, ಕೊಡ್ಲಿಗಿ ರಸ್ತೆ, ಮರಿಯಮ್ಮನಹಳ್ಳಿ ಹೊಸಪೇಟೆ
ಪ್ರಾಚೀನತೆ	40 ವರ್ಷ	150 ವರ್ಷ	ಸುಮಾರು 150 ವರ್ಷ
ಅಳತೆ	6 ಅಡಿ ಉದ್ದ/6 ಅಡಿ ಅಗಲ	6 ಅಡಿ ಉದ್ದ/8 ಅಡಿ ಅಗಲ	22 ಅಡಿ ಉದ್ದ/ 18 ಅಡಿ ಅಗಲ
ದಿಕ್ಕು	ಉತ್ತರ	ದಕ್ಷಿಣ	ದಕ್ಷಿಣ
ಒಲೆ ದಿಕ್ಕು	ಉತ್ತರ	ಪೂರ್ವ	ಪೂರ್ವ
ಬ್ಲೋವರ್	12 ಇಂಚು	12 ಇಂಚು	12 ಇಂಚು
ಒಲೆಗಡ್ಡೆ	76 ಸೆಂ.ಮೀ ಉದ್ದ/91 ಸೆಂ.ಮೀ ಅಗಲ/25 ಸೆಂ.ಮೀ ದಪ್ಪ (ಕಚ್ಚಾ)	83 ಸೆಂ.ಮೀ ಉದ್ದ/60 ಸೆಂ.ಮೀ ಅಗಲ/25 ಸೆಂ.ಮೀ ದಪ್ಪ (ಕಚ್ಚಾ)	60 ಸೆಂ.ಮೀ ಉದ್ದ/182 ಸೆಂ.ಮೀ ಅಗಲ/121 ಸೆಂ.ಮೀ ದಪ್ಪ (ಕಚ್ಚಾ)
ಅಡಿಗಲ್ಲು	55 ಸೆಂ.ಮೀ ಉದ್ದ/45 ಸೆಂ.ಮೀ ಅಗಲ/15 ಸೆಂ.ಮೀ ದಪ್ಪ (ಕಚ್ಚಾ)	55 ಸೆಂ.ಮೀ ಉದ್ದ/10 ಸೆಂ.ಮೀ ಅಗಲ/10 ಸೆಂ.ಮೀ ದಪ್ಪ (ಕಚ್ಚಾ)	90 ಸೆಂ.ಮೀ ಉದ್ದ/20 ಸೆಂ.ಮೀ ಅಗಲ/20 ಸೆಂ.ಮೀ ದಪ್ಪ (ಕಚ್ಚಾ)
ಚಮ್ಮಟಿಗೆ	10, 8, 2, ಪೌಂಡ್	10, 8, 2, ಪೌಂಡ್	10, 8, 2, ಪೌಂಡ್
ಇಕ್ಕಳ	30, 36, 38, 42 ಸೆಂ.ಮೀ,	30, 36, 38 ಸೆಂ.ಮೀ,	33, 36, 38, 44 ಸೆಂ.ಮೀ,
ಮೂಲ ಸ್ಥಳ	ಕಮಲಾಪುರ, ಹೊಸಪೇಟೆ (ತಾ)	ಕೆ.ಕಲ್ಲಹಳ್ಳಿ, ಹರಪನ ಹಳ್ಳಿ (ತಾ)	ವ್ಯಾಸನಕೇರೆ, ಹೊಸಪೇಟೆ (ತಾ)

ಕುಲುಮೆ–೧೯

ಕಮ್ಮಾರ ——— ಆಚಾರ್ಯ

- ಕಾಳಶ್ರಪ್ಪ
- **ಅಜ್ಜಪ್ಪ**
- ಭರಮಯ್ಯ
- ಗುರ‍್ರಪ್ಪ

ಈಶ್ವರಪ್ಪ (ಮಾಲಿಕ) ಹೇಮಣ್ಣ ಗುಂಡಪ್ಪ ಚಂದ್ರಪ್ಪ ಭರಮಪ್ಪ ಅಂಬಣ್ಣ ಓಂಕಾರಮ್ಮ ಕಾಳಮ್ಮ

ಕುಲುಮೆ–೨೦

ಕಮ್ಮಾರ ರಾಮಜ್ಜ ಆಚಾರ್ಯ

- **ಹನುಮಂತಪ್ಪ**
- ಕನಕಪ್ಪ
- ಪದ್ಮಮ್ಮ
- ಗೊತ್ತಿಲ್ಲ

ಸುಲಕ್ಷಮ್ಮ ರಘುವೀರಪ್ಪ (ಮಾಲಿಕ) ಸುಶಿಲಮ್ಮ ಕಮಲಮ್ಮ ರಾಮಕ್ಕ ಹನುಮಕ್ಕ ಗೌರಮ್ಮ ಕಾಳಮ್ಮ

ಕುಲುಮೆ–೨೧

ಕಮ್ಮಾರ ವ್ಯಾಸನಕೇರೆ ಹನುಮಂತಪ್ಪ ಆಚಾರ್ಯ


- ನಾಗಪ್ಪ
- **ಕಾಳಪ್ಪ**

ಬಸಪ್ಪ ಭರಮಪ್ಪ ಹನುಮಂತಪ್ಪ ಸೋಮಪ್ಪ ಯಂಕಪ್ಪ (ಮಾಲಿಕ) ಸಣ್ಣಸೋಮಪ್ಪ ಯಂಕಮ್ಮ ಅಕ್ಕಮ್ಮ ಹನುಮಕ್ಕ

ಕುಲುಮೆ-೨೨

ಹೆಸರು	ಕಮಲಾಪುರ ಕಮ್ಮಾರ ವಿಶ್ವನಾಥ ಕುಲುಮೆ
ಮಾಲಿಕರು	ಕಮ್ಮಾರ ವಿಶ್ವನಾಥ ಆಚಾರ್ಯ
ಜಾತಿ	ಪಾಂಚಾಲ, ವಿಶ್ವ ಕರ್ಮ, ಕಂಬಾರ, ಮುದ್ದೆ ಕಂಬಾರ
ಸ್ಥಳ	ಚಪ್ಪರದಲ್ಲಿ, 14 ನೇ ವಾರ್ಡ, ಕಮ್ಮಾರ ದಿನ್ನಿ, ಕಮಲಾಪುರ, ಹೊಸಪೇಟೆ
ಪ್ರಾಚೀನತೆ	ವಿಜಯನಗರ ಕಾಲದಿಂದಲು
ಅಳತೆ	15 ಅಡಿ ಉದ್ದ/15 ಅಡಿ ಅಗಲ
ದಿಕ್ಕು	ಪೂರ್ವ
ಓಲೆ ದಿಕ್ಕು	ಉತ್ತರ
ಬ್ಲೋವರ್	12 ಇಂಚು
ಓಲೆಗಡ್ಡೆ	66 ಸೆಂ.ಮೀ ಉದ್ದ/85 ಸೆಂ.ಮೀ ಅಗಲ/25 ಸೆಂ.ಮೀ ದಪ್ಪ (ಕಚ್ಚಾ)
ಅಡಿಗಲ್ಲು	30 ಸೆಂ.ಮೀ ಉದ್ದ/20 ಸೆಂ.ಮೀ ಅಗಲ/18 ಸೆಂ.ಮೀ ದಪ್ಪ (ಕಚ್ಚಾ)
ಚಮ್ಮಟಿಗೆ	12, 10, 8, 2, ಪೌಂಡ್
ಇಕ್ಕಳ	33, 36, 38, 43 ಸೆಂ.ಮೀ,
ಮೂಲ ಸ್ಥಳ	ಕಮಲಾಪುರ, ಹೊಸಪೇಟೆ (ತಾ)

ಕುಲುಮೆ-೨೨



ವಿಶ್ವಕರ್ಮ ಚಿಕ್ಕ ಮನೆ ಸಮುದಾಯದ ಕಲುಮೆಗಳ ವಿವರ

	ಕುಲುಮೆ -೧	ಕುಲುಮೆ-೨	ಕುಲುಮೆ-೩
ಹೆಸರು	ವಡ್ಡರಹಳ್ಳಿ ಕಮ್ಮಾರ ಈರಯ್ಯ ಕುಲುಮೆ	ಪಾಪಿನಾಯಕನ ಹಳ್ಳಿ ಕಮ್ಮಾರ ಪಂಪಣ್ಣ ಕುಲುಮೆ	ಪಾಪಿನಾಯಕನ ಹಳ್ಳಿ ಕಮ್ಮಾರ ಯಂಕಪ್ಪ ಕುಲುಮೆ
ಮಾಲಿಕರು	ಕಮ್ಮಾರ ಈರಯ್ಯ ಆಚಾರ್ಯ	ಕಮ್ಮಾರ ಪಂಪಣ್ಣ ಆಚಾರ್ಯ	ಕಮ್ಮಾರ ಯಂಕಪ್ಪ ಆಚಾರ್ಯ
ಜಾತಿ	ಪಾಂಚಾಲ, ವಿಶ್ವ ಕರ್ಮ, ಕಂಬಾರ	ಪಾಂಚಾಲ, ವಿಶ್ವ ಕರ್ಮ, ಕಂಬಾರ	ಪಾಂಚಾಲ, ವಿಶ್ವ ಕರ್ಮ, ಕಂಬಾರ
ಸ್ಥಳ	ಬಯಲಿನಲ್ಲಿ, ವಡ್ಡರಹಳ್ಳಿ ಕಮ್ಮಾರ ಕಮಲಾಪುರ ಹೋಬಳಿ, ಹೊಸಪೇಟೆ	ಗುಡಿಸಲಿನಲ್ಲಿ, ಬಳ್ಳಾರಿ ರ್ತೆ, ಪಾಪಿನಾಯಕನ ಹಳ್ಳಿ, ಕಮಲಾಪುರ ಹೋಬಳಿ, ಹೊಸಪೇಟೆ	ಮನೆ ಮುಂದೆ ಬಯಲಿನಲ್ಲಿ, ಬಳ್ಳಾರಿ ರ್ತೆ, ಪಾಪಿನಾಯಕನ ಹಳ್ಳಿ, ಕಮಲಾಪುರ ಹೋಬಳಿ, ಹೊಸಪೇಟೆ
ಪ್ರಾಚೀನತೆ	200 ವರ್ಷ	40 ವರ್ಷ	ವಿಜಯನಗರ ಕಾಲದಿಂದಲು
ಅಳತೆ	6 ಅಡಿ ಉದ್ಧ/6 ಅಡಿ ಅಗಲ	6 ಅಡಿ ಉದ್ಧ/6 ಅಡಿ ಅಗಲ	6 ಅಡಿ ಉದ್ಧ/6 ಅಡಿ ಅಗಲ
ದಿಕ್ಕು	ಪೂರ್ವ	ಪೂರ್ವ	ಪೂರ್ವ
ಒಲೆ ದಿಕ್ಕು	ಪೂರ್ವ	ಪೂರ್ವ	ಪೂರ್ವ
ಬ್ಲೋವರ್	10 ಇಂಚು	10 ಇಂಚು	10 ಇಂಚು
ಒಲೆಗಡ್ಡೆ	50 ಸೆಂ.ಮೀ ಉದ್ಧ/60 ಸೆಂ.ಮೀ ಅಗಲ/20 ಸೆಂ.ಮೀ ದಪ್ಪ (ಕಚ್ಚಾ)	76 ಸೆಂ.ಮೀ ಉದ್ಧ/61 ಸೆಂ.ಮೀ ಅಗಲ/13 ಸೆಂ.ಮೀ ದಪ್ಪ (ಕಚ್ಚಾ)	66 ಸೆಂ.ಮೀ ಉದ್ಧ/55 ಸೆಂ.ಮೀ ಅಗಲ/13 ಸೆಂ.ಮೀ ದಪ್ಪ (ಕಚ್ಚಾ)
ಅಡಿಗಲ್ಲು	30 ಸೆಂ.ಮೀ ಉದ್ಧ/20 ಸೆಂ.ಮೀ ಅಗಲ/15 ಸೆಂ.ಮೀ ದಪ್ಪ (ಕಚ್ಚಾ)	28 ಸೆಂ.ಮೀ ಉದ್ಧ/ 10ಸೆಂ.ಮೀ ಅಗಲ/10 ಸೆಂ.ಮೀ ದಪ್ಪ (ಕಚ್ಚಾ)	26 ಸೆಂ.ಮೀ ಉದ್ಧ/ 12ಸೆಂ.ಮೀ ಅಗಲ/10 ಸೆಂ.ಮೀ ದಪ್ಪ (ಕಚ್ಚಾ)
ಚಮ್ಮಟಿಗೆ	10, 8, 2, ಪೌಂಡ್	10, 8, 2, ಪೌಂಡ್	10, 8, 2, ಪೌಂಡ್
ಇಕ್ಕಳ	30, 36, 38 ಸೆಂ.ಮೀ,	30, 36, 38, 40 ಸೆಂ.ಮೀ,	32, 34, 38, 42 ಸೆಂ.ಮೀ,
ಮೂಲ ಸ್ಥಳ	ಪಾಪಿನಾಯಕನ ಹಳ್ಳಿ, ಹೊಸಪೇಟೆ (ತಾ)	ಪಾಪಿನಾಯಕನ ಹಳ್ಳಿ, ಹೊಸಪೇಟೆ (ತಾ)	ಪಾಪಿನಾಯಕನ ಹಳ್ಳಿ, ಹೊಸಪೇಟೆ (ತಾ)

ವಿಶ್ವಕರ್ಮ ಚಿಕ್ಕಮನೆ ಸಮುದಾಯದ ಕುಲುಮೆ ಮಾಲಿಕರ ವಂಶಾವಳಿ

ಕುಲುಮೆ–೧

ಕಮ್ಮಾರ ಬಸಮ್ಮ ಆಚಾರ್ಯ

- **ಗುರ್ರಯ್ಯ**
  - ಈರಯ್ಯ (ಮಾಲಿಕ)
  - ಚಿಲಿಪಿ
  - ಈಶ
  - ಹನುಮಂತ
  - ಭಾಗ್ಯಮ್ಮ
  - ಕಸೂರಮ್ಮ
- ಗಂಗಣ್ಣ
- ಹಂಪಮ್ಮ
- ದೇವಿ

ಕುಲುಮೆ–೨

ಕಮ್ಮಾರ ಶಿವಪ್ಪ ಆಚಾರ್ಯ

- **ಬ್ರಹ್ಮ**
  - ಪಂಪಣ್ಣ (ಮಾಲಿಕ)
  - ಕಾಡಪ್ಪ
  - ಲಕ್ಷ್ಮಿದೇವಿ
  - ಕಾಳಮ್ಮ
  - ಶಿರಸಿಂಗಿಯಮ್ಮ
  - ಸಮಾಜಮ್ಮ
  - ಹಂಪಮ್ಮ
  - ದೊಡ್ಡಕಾಳಮ್ಮ
  - ಕಾಡಳಮ್ಮ
- ಶಿವಪ್ಪ
- ಸಾಣೆಪ್ಪ
- ಬಸಮ್ಮ

ಕುಲುಮೆ–೩

ಕಮ್ಮಾರ ಕಾಡಪ್ಪ ಆಚಾರ್ಯ

- ಯಂಕಪ್ಪ (ಮಾಲಿಕ)
- ಹನುಮಂತಪ್ಪ
- ಕಾಳಮ್ಮ
- ರತ್ನಮ್ಮ

ಕುಲುಮೆ -೪	ಕುಲುಮೆ-೫	ಕುಲುಮೆ-೬

ಹೆಸರು	ಗುಂಡ್ಲಬೈಲುವದ್ಧಿಗೇರೆ ಕಮ್ಮಾರ ಶಂಕ್ರಪ್ಪ ಕುಲುಮೆ	ಕಾಕುಬಾಳು ಬಡಿಗೇರ ರುದ್ರಪ್ಪ ಕುಲುಮೆ	ಬೈಲುವದ್ಧಿಗೇರೆ ಕಮ್ಮಾರ ಈಶಪ್ಪ ಕುಲುಮೆ
ಮಾಲಿಕರು	ಕಮ್ಮಾರ ಶಂಕ್ರಪ್ಪ ಆಚಾರ್ಯ	ಬಡಿಗೇರ ರುದ್ರಪ್ಪ ಆಚಾರ್ಯ	ಕಮ್ಮಾರ ಈಶಪ್ಪ ಆಚಾರ್ಯ
ಜಾತಿ	ಪಾಂಚಾಲ, ವಿಶ್ವ ಕರ್ಮ, ಕಂಬಾರ	ಪಾಂಚಾಲ, ವಿಶ್ವ ಕರ್ಮ, ಕಂಬಾರ	ಪಾಂಚಾಲ, ವಿಶ್ವ ಕರ್ಮ, ಕಂಬಾರ
ಸ್ಥಳ	ಬಯಲಿಲನಲ್ಲಿ, ಗುಂಡ್ಲಬೈಲುವದ್ಧಿಗೇರೆ, ಕಮಲಾಪುರ ಹೋಬಳಿ, ಹೊಸಪೇಟೆ	ಚಪ್ಪರದಲ್ಲಿ, ಕಾಕುಬಾಳು, ಕಮಲಾಪುರ ಹೋಬಳಿ, ಹೊಸಪೇಟೆ	ಗುಡಿಸಲಿನಲ್ಲಿ, Iನೇ ವಾರ್ಡ, ಜನತಾ ಕಾಲೋನಿ, ಬೈಲುವದ್ಧಿಗೇರೆ, ಕಮಲಾಪುರ ಹೋಬಳಿ, ಹೊಸಪೇಟೆ
ಪ್ರಾಚೀನತೆ	40 ವರ್ಷ	10 ವರ್ಷ	200 ವರ್ಷ
ಅಳತೆ	4 ಅಡಿ ಉದ್ದ/ 4 ಅಡಿ ಅಗಲ	10 ಅಡಿ ಉದ್ದ/ 10 ಅಡಿ ಅಗಲ	15 ಅಡಿ ಉದ್ದ/ 25 ಅಡಿ ಅಗಲ
ದಿಕ್ಕು	ಉತ್ತರ	ಉತ್ತರ	ಉತ್ತರ
ಒಲೆ ದಿಕ್ಕು	ಉತ್ತರ	ಉತ್ತರ	ಉತ್ತರ
ಬ್ಲೋವರ್	10 ಇಂಚು	10 ಇಂಚು	14 ಇಂಚು
ಒಲೆಗಡ್ಡೆ	45 ಸೆಂ.ಮೀ ಉದ್ಧ/60 ಸೆಂ.ಮೀ ಅಗಲ/20 ಸೆಂ.ಮೀ ದಪ್ಪ (ಕಚ್ಚಾ)	65 ಸೆಂ.ಮೀ ಉದ್ಧ/40 ಸೆಂ.ಮೀ ಅಗಲ/25 ಸೆಂ.ಮೀ ದಪ್ಪ (ಕಚ್ಚಾ)	65 ಸೆಂ.ಮೀ ಉದ್ಧ/40 ಸೆಂ.ಮೀ ಅಗಲ/25 ಸೆಂ.ಮೀ ದಪ್ಪ (ಕಚ್ಚಾ)
ಅಡಿಗಲ್ಲು	35 ಸೆಂ.ಮೀ ಉದ್ಧ/24 ಸೆಂ.ಮೀ ಅಗಲ/15 ಸೆಂ.ಮೀ ದಪ್ಪ (ಕಚ್ಚಾ)	25 ಸೆಂ.ಮೀ ಉದ್ಧ/20 ಸೆಂ.ಮೀ ಅಗಲ/15 ಸೆಂ.ಮೀ ದಪ್ಪ (ಕಚ್ಚಾ)	25 ಸೆಂ.ಮೀ ಉದ್ಧ/20 ಸೆಂ.ಮೀ ಅಗಲ/15 ಸೆಂ.ಮೀ ದಪ್ಪ (ಕಚ್ಚಾ)
ಚಮ್ಮಟಿಗೆ	10, 8, 2, ಪೌಂಡ್	10, 8, 2, ಪೌಂಡ್	12, 10, 8, 2, ಪೌಂಡ್
ಇಕ್ಕಳ	30, 36, 38, 40 ಸೆಂ.ಮೀ,	32, 36, 38, 42 ಸೆಂ.ಮೀ,	32, 34, 38, 42 ಸೆಂ.ಮೀ,
ಮೂಲ ಸ್ಥಳ	ಹಗರಿಬೊಮ್ಮನ ಹಳ್ಳಿ (ತಾ)	ಕಾಕುಬಾಳು, ಹೊಸಪೇಟೆ (ತಾ)	ಬೈಲುವದ್ಧಿಗೇರೆ, ಹೊಸಪೇಟೆ (ತಾ)

ಕುಲುಮೆ-೪

ಕಮ್ಮಾರ ಕಾಳಮ್ಮ ಆಚಾರ್ಯ

↓

- ಶಂಕ್ರಪ್ಪ (ಮಾಲಿಕ)
- ಜಕಣಚಾರಿ
- ವಿಶಾಲಮ್ಮ

ಕುಲುಮೆ-೫

ಕಮ್ಮಾರ ಕಾಳಪ್ಪ ಆಚಾರ್ಯ

↓

- ಪ್ರಮೀಳಮ್ಮ
- ಈರಪಮ್ಮ
- ವೀರಭದ್ರ
- ಕಾಳಮ್ಮ
- ರುದ್ರಪ್ಪ (ಮಾಲಿಕ)
- ಶ್ರೀಮತಮ್ಮ
- ಶಿರಸಿಂಗಿಯಮ್ಮ
- ಶಾರದಮ್ಮ
- ಮೌನೇಶ

ಕುಲುಮೆ-೬

ಕಮ್ಮಾರ ಷಣ್ಮುಖಪ್ಪ ಆಚಾರ್ಯ

↓

ವೀರಭದ್ರಪ್ಪ

↓

- ಈಶಪ್ಪ (ಮಾಲಿಕ)
- ಯಂಕಪ್ಪ
- ಚಿದಾನಂದ
- ಅಂಬಮ್ಮ

ಕುಲುಮೆ -೭ | ಕುಲುಮೆ-೮ | ಕುಲುಮೆ-೯

	ಕುಲುಮೆ -೭	ಕುಲುಮೆ-೮	ಕುಲುಮೆ-೯
ಹೆಸರು	ಬೈಲುವದ್ದಿಗೇರೆ ಕಮ್ಮಾರ ಚಿದಾನಂದಪ್ಪ ಕುಲುಮೆ	ಗಾದಿಗನೂರು ಕಮ್ಮಾರ ಮೌನೇಶ್ ಕುಲುಮೆ	ಗಾದಿಗನೂರು ಕಮ್ಮಾರ ಜಕಣಚಾರಿ ಕುಲುಮೆ
ಮಾಲಿಕರು	ಕಮ್ಮಾರ ಚಿದಾನಂದಪ್ಪ ಆಚಾರ್ಯ	ಕಮ್ಮಾರ ಮೌನೇಶ್ ಆಚಾರ್ಯ	ಕಮ್ಮಾರ ಜಕಣಚಾರಿ ಆಚಾರ್ಯ
ಜಾತಿ	ಪಾಂಚಾಲ, ವಿಶ್ವ ಕರ್ಮ, ಕಂಬಾರ	ಪಾಂಚಾಲ, ವಿಶ್ವ ಕರ್ಮ, ಕಂಬಾರ	ಪಾಂಚಾಲ, ವಿಶ್ವ ಕರ್ಮ, ಕಂಬಾರ
ಸ್ಥಳ	ಚಪ್ಪರದಲ್ಲಿ, 1ನೇ ವಾರ್ಡ, ಜನತಾ ಕಾಲೋನಿ, ಬೈಲುವದ್ದಿಗೇರೆ, ಕಮಲಾಪುರ ಹೋಬಳಿ, ಹೊಸಪೇಟೆ	ಗುಡಿಸಲಿನಲ್ಲಿ, ದ್ಯಾವಮ್ಮ ಗುಡಿ ಹತ್ತಿರ, ಗಾದಿಗನೂರು, ಕಮಲಾಪುರ ಹೋಬಳಿ, ಹೊಸಪೇಟೆ	ಮನೆಯೊಳಗೆ, 1ನೇ ವಾರ್ಡ, ಬಡಿಗೇರ ಓಣಿ ಗಾದಿಗನೂರು, ಕಮಲಾಪುರ ಹೋಬಳಿ, ಹೊಸಪೇಟೆ
ಪ್ರಾಚೀನತೆ	200 ವರ್ಷ	200 ವರ್ಷ	120 ವರ್ಷ
ಅಳತೆ	15 ಅಡಿ ಉದ್ದ/ 20 ಅಡಿ ಅಗಲ	20 ಅಡಿ ಉದ್ದ/ 15 ಅಡಿ ಅಗಲ	9 ಅಡಿ ಉದ್ದ/ 20 ಅಡಿ ಅಗಲ
ದಿಕ್ಕು	ಉತ್ತರ	ದಕ್ಷಿಣ	ಪೂರ್ವ
ಒಲೆ ದಿಕ್ಕು	ಉತ್ತರ	ದಕ್ಷಿಣ	ಪೂರ್ವ
ಬ್ಲೋವರ್	12 ಇಂಚು	***	***
ತಿದಿ	***	ಆಕಳು ದು ಜೋಡು ತಿದಿ, 3.5 ಅಡಿ ಉದ್ದ/2.5 ಅಡಿ ಅಗಲ	ಆಕಳು ದು ಜೋಡು ತಿದಿ, 3.5 ಅಡಿ ಉದ್ದ/2.5 ಅಡಿ ಅಗಲ
ಒಲೆಗಡ್ಡೆ	40 ಸೆಂ.ಮೀ ಉದ್ದ/55 ಸೆಂ.ಮೀ ಅಗಲ/15 ಸೆಂ.ಮೀ ದಪ್ಪ (ಕಚ್ಚಾ)	121 ಸೆಂ.ಮೀ ಉದ್ದ/106 ಸೆಂ.ಮೀ ಅಗಲ/60 ಸೆಂ.ಮೀ ದಪ್ಪ (ಕಚ್ಚಾ)	91 ಸೆಂ.ಮೀ ಉದ್ದ/132 ಸೆಂ.ಮೀ ಅಗಲ/15 ಸೆಂ.ಮೀ ದಪ್ಪ (ಕಚ್ಚಾ)
ಅಡಿಗಲ್ಲು	40 ಸೆಂ.ಮೀ ಉದ್ದ/24 ಸೆಂ.ಮೀ ಅಗಲ/15 ಸೆಂ.ಮೀ ದಪ್ಪ (ಕಚ್ಚಾ)	91 ಸೆಂ.ಮೀ ಉದ್ದ/20 ಸೆಂ.ಮೀ ಅಗಲ/15 ಸೆಂ.ಮೀ ದಪ್ಪ (ಕಚ್ಚಾ)	40 ಸೆಂ.ಮೀ ಉದ್ದ/18 ಸೆಂ.ಮೀ ಅಗಲ/8 ಸೆಂ.ಮೀ ದಪ್ಪ (ಕಚ್ಚಾ)
ಚಮ್ಮಟಿಗೆ	12, 10, 8, 2, ಪೌಂಡ್	12, 10, 8, 2, ಪೌಂಡ್	10, 8, 2, ಪೌಂಡ್
ಇಕ್ಕಳ	30, 36, 38 ಸೆಂ.ಮೀ,	32, 36, 38, 42 ಸೆಂ.ಮೀ,	32, 36, 37, 42 ಸೆಂ.ಮೀ,
ಮೂಲ ಸ್ಥಳ	ಬೈಲುವದ್ದಿಗೇರೆ, ಹೊಸಪೇಟೆ (ತಾ)	ಚಿತ್ತವಾಡ್ಗಿ, ಹೊಸಪೇಟೆ (ತಾ)	ಚಿತ್ತವಾಡ್ಗಿ, ಹೊಸಪೇಟೆ (ತಾ)

ಕುಲುಮೆ-೭

ಕಮ್ಮಾರ ಷಣ್ಮುಖಪ್ಪ ಆಚಾರ್ಯ
↓
ವೀರಭದ್ರಪ್ಪ
↓
- ಈಶಪ್ಪ
- ಯಂಕಪ್ಪ
- ಚಿದಾನಂದ (ಮಾಲಿಕ)
- ಅಂಬಮ್ಮ

ಕುಲುಮೆ-೮

ಕಮ್ಮಾರ ಎಚ್ಚರಪ್ಪ ಆಚಾರ್ಯ
↓
ಶರಭಣ್ಣ
↓
ವೀರಭದ್ರಪ್ಪ ಗೌರಮ್ಮ
↓
- ಮಾನಪ್ಪ
- ಯಮನಪ್ಪ
- ಕಾಡಪ್ಪ
- ಮಾರುದ್ರಪ್ಪ
- ಜಕಣಚಾರಿ
- ಅನ್ನಪೂರ್ಣಮ್ಮ
- ಸಾವಿತ್ರಮ್ಮ
- ಕಾಳಮ್ಮ
  - ↓ ದುಗ್ಗಮ್ಮ
    - ಬಸವರಾಜ
    - ಮೌನೇಶ (ಮಾಲಿಕ)
    - ಬ್ರಹ್ಮ
    - ಚಿದಾಂಬರ
    - ಮೇಘನಾಥ
    - ಮಲ್ಲಮ್ಮ
    - ಈಶ್ವರಮ್ಮ
    - ಮಂಜುಳ
- ಶಿರಸಿಂಗಿಯಮ್ಮ
  - ↓ ಚೆನ್ನಮ್ಮ

ಕುಲುಮೆ-೯

ಕಮ್ಮಾರ ಎಚ್ಚರಪ್ಪ ಆಚಾರ್ಯ
↓
ಶರಭಣ್ಣ
↓
- ವೀರಭದ್ರಪ್ಪ
- ಗೌರಮ್ಮ

ವೀರಭದ್ರಪ್ಪ ↓
- ಮಾನಪ್ಪ
- ಯಮನಪ್ಪ
- ಕಾಡಪ್ಪ
- ಮಾರುದ್ರಪ್ಪ
- ಜಕಣಚಾರಿ (ಮಾಲಿಕ)
- ಅನ್ನಪೂರ್ಣಮ್ಮ
- ಸಾವಿತ್ರಮ್ಮ

	ಕುಲುಮೆ -೧೦	ಕುಲುಮೆ-೧೧	ಕುಲುಮೆ-೧೨
ಹೆಸರು	ಗಾದಿಗನೂರು ಕಮ್ಮಾರ ಭೀಮೇಶ್ ಕುಲುಮೆ	ದೇವಲಾಪುರ ಬಡಿಗೇರ ಭೀಮಪ್ಪ ಕುಲುಮೆ	ಉಪ್ಪಾರಹಳ್ಳಿ ಬಡಿಗೇರ ಶಂಕ್ರಪ್ಪ ಕುಲುಮೆ
ಮಾಲಿಕರು	ಕಮ್ಮಾರ ಭೀಮೇಶ್ ಆಚಾರ್ಯ	ಬಡಿಗೇರ ಭೀಮಪ್ಪ ಆಚಾರ್ಯ	ಬಡಿಗೇರ ಶಂಕ್ರಪ್ಪ ಆಚಾರ್ಯ
ಜಾತಿ	ಪಾಂಚಾಲ, ವಿಶ್ವ ಕರ್ಮ, ಕಂಬಾರ	ಪಾಂಚಾಲ, ವಿಶ್ವ ಕರ್ಮ, ಕಂಬಾರ	ಪಾಂಚಾಲ, ವಿಶ್ವ ಕರ್ಮ, ಕಂಬಾರ
